ಗುರುವಾರ, ಮಾರ್ಚ್ 21, 2024 | ₹ 7.00
www.prajavani.net
prajavani.net prajavani prajavani prajavani

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

**ದೇಗುಲಕ್ಕೆ ಭೇಟಿ**
ಬಾಲಿವುಡ್ ನಟಿ ಪ್ರಿಯಾಂಕಾ ಚೋಪ್ರಾ ಅವರು ಪತಿ ನಿಕ್ ಜೋನಾಸ್ ಮತ್ತು ಮಗಳ ಜತೆ ಬುಧವಾರ ಅಯೋಧ್ಯೆಯ ರಾಮ ಮಂದಿರಕ್ಕೆ ಭೇಟಿ ನೀಡಿದರು

Own Galaxy AI at ₹ 5417/month*

Zero down payment | 24 months no cost EMI#

Up to ₹ 17000 upgrade bonus** | Samsung Upgrade | HDFC BANK | BAJAJ FINSERV | Samsung Finance+™

samsung.com

Please dispose of e-waste and plastic waste responsibly. Customers can WhatsApp on 1800 5 7267864 for information on e-waste/plastic pick up.

Image simulated for representational purposes, actual may vary. S Pen embedded in Galaxy S24 Ultra. Circle to Search results may vary depending on visual matches. Google is a trademark of Google LLC. Compatible devices and internet connection required. Works on compatible apps and surfaces. Results may vary depending on visual matches. Users may need to update Android to the latest version. Product functionality may be dependent on your app and device settings. Some functions may not be compatible with certain apps. Availability of the service varies by country and language. Accuracy of results is not guaranteed. *T&C apply. EMI computed on zero down payment, 24 months no cost EMI on the price of ₹ 129999 for 1 Unit of Galaxy S24 Ultra 12GB | 256GB. Final price at sole discretion of dealer. #Eligibility for EMI at the sole discretion of the financiers including those listed on Samsung Finance+ (Financier T&C applies). Samsung disclaims any liabilities with the same. **Upgrade bonus offer as per Samsung Upgrade program, provided by brand/dealer at their sole discretion upon exchange of select devices. Upgrade bonus varies model wise and EMI offer taken by the customer. Up to ₹ 17000 upgrade bonus is applicable only upon exchange of select Galaxy S Series devices and where customer does not avail the 24 months no cost EMI offer. In case of exchange of any other devices and/or other EMI offers taken by customer, the upgrade bonus may vary. Reach out to dealer for more information. Offers may be revised or withdrawn without prior notice. All third party logos/brands are trademarks/registered trademarks of the respective brand/company. Samsung promotes responsible use of Artificial Intelligence (AI) features.

Scan and experience Galaxy AI

Or WhatsApp "Hi" to 9870 494949 to buy at Samsung Exclusive Store

Cheil-19654/24

SAMSUNG

# Galaxy S24 | S24+

## Circle it, find it




## Own Galaxy AI at ₹ 3334/month*

Zero down payment | 24 months no cost EMI#

Up to ₹ 17000 upgrade bonus** | Samsung Upgrade | HDFC BANK | BAJAJ FINSERV | Samsung Finance+™

samsung.com

Please dispose of e-waste and plastic waste responsibly. Customers can WhatsApp on 1800 5 7267864 for information on e-waste/plastic pick up.

Image simulated for representational purposes, actual may vary. Circle to Search results may vary depending on visual matches. Google is a trademark of Google LLC. Compatible devices and internet connection required. Works on compatible apps and surfaces. Results may vary depending on visual matches. Users may need to update Android to the latest version. Product functionality may be dependent on your app and device settings. Some functions may not be compatible with certain apps. Availability of the service varies by country and language. Accuracy of results is not guaranteed. T&C apply. *EMI computed on zero down payment, 24 months no cost EMI on the price of ₹ 79999 for1 Unit of Galaxy S24 8GB | 256GB. Final price at sole discretion of dealer. #Eligibility for EMI at the sole discretion of the financiers including those listed on Samsung Finance+ (Financier T&C applies).**Upgrade bonus offer as per Samsung Upgrade program, provided by brand/dealer at their sole discretion upon exchange of select devices. Upgrade bonus varies model wise and EMI offer taken by the customer. Up to ₹ 17000 upgrade bonus applicable on Galaxy S24+ and up to ₹ 10000 upgrade bonus applicable on Galaxy S24 only when 24 months no cost EMI offer is not availed. If 24 months no cost EMI offer is availed, then upgrade bonus shall be up to ₹ 9000 on Galaxy S24+ and up to ₹ 5000 on Galaxy S24. Reach out to dealer for more information. Offers may be revised or withdrawn without prior notice. All third party logos/brands are trademarks/registered trademarks of the respective brand/company. Samsung promotes responsible use of Artificial Intelligence (AI) features.

Scan and experience Galaxy AI

Or WhatsApp "Hi" to 9870 494949 to buy at Samsung Exclusive Store

Cheil-19654/24

ಗುರುವಾರ, ಮಾರ್ಚ್ 21, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 81 | ಪುಟ 16

www.prajavani.net

prajavani.net prajavani prajavani prajavani

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

**ಸ್ಪರ್ಧಾವಾಣಿ**
ಕೇಂದ್ರ ಸಶಸ್ತ್ರ ಪೊಲೀಸ್ ಪಡೆಯ ವಿವಿಧ ವಿಭಾಗಗಳಲ್ಲಿ ಉದ್ಯೋಗಾವಕಾಶ

**ಆಳ-ಅಗಲ**
ನವೋದ್ಯಮ ಭಾರತ ಸರ್ಕಾರದ ಲೆಕ್ಕ ಏನು, ಎತ್ತ...

4-ಜಿ ವಿನಾಯ್ತಿಗೆ ಲಗಾಮು 7

**ಸಿಜೆಐ ಕೈಬಿಟ್ಟದ್ದಕ್ಕೆ ಕೇಂದ್ರ ಸಮರ್ಥನೆ** 13

| ಸೆನ್ಸೆಕ್ಸ್ | ನಿಫ್ಟಿ | ₹/$ |
|---|---|---|
| 72,101 ▲ | 21,839 ▲ | 83.19 ▼ |

**ಒಳ ಪುಟಗಳು**

ನವೋದ್ಯಮ: ಭಾರತಕ್ಕೆ 3ನೇ ಸ್ಥಾನ 12

ಎಸ್ಸೆಸ್ಸೆಲ್ಸಿ ಮೌಲ್ಯಮಾಪನ ಬಹಿಷ್ಕಾರಕ್ಕೆ ರುಪ್ಸ ನಿರ್ಧಾರ 5


**ಚಿನಕುರಳಿ**

ಪ್ರಕಾಶ್ ಶೆಟ್ಟಿ

ಬಿಜೆಪಿಗೆ ಐದು, ಕಾಂಗ್ರೆಸ್ ನಾಲ್ಕು ಕ್ಷೇತ್ರಗಳಲ್ಲಿ ತಲೆನೋವು: ಉಳಿದೆಡೆ ಬಹುತೇಕ ಅಂತಿಮ

# ಬಿಡದ ಪಟ್ಟು, ಟಿಕೆಟ್ ಕಗ್ಗಂಟು

ಪ್ರಜಾವಾಣಿ ವಾರ್ತೆ

ನವದೆಹಲಿ: ಟಿಕೆಟ್ ಆಕಾಂಕ್ಷಿಗಳ ಬಿಗಿ ಪಟ್ಟು ಹಾಗೂ ಬಣ ರಾಜಕಾರಣದ ಮೇಲಾಟದಿಂದಾಗಿ ಕರ್ನಾಟಕದ ನಾಲ್ಕು ಕ್ಷೇತ್ರಗಳಿಗೆ ಹುರಿಯಾಳುಗಳ ಹೆಸರನ್ನು ಅಂತಿಮಗೊಳಿಸಲು ಕಾಂಗ್ರೆಸ್ ನಾಯಕರಿಗೆ ಬುಧವಾರವೂ ಸಾಧ್ಯವಾಗಲಿಲ್ಲ. ಐದು ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡುವುದು ಕಮಲ ಪಾಳಯಕ್ಕೆ ತಲೆನೋವಾಗಿದೆ.

ನಾಲ್ಕು ಕ್ಷೇತ್ರಗಳ ಕಗ್ಗಂಟನ್ನು ಬಗೆಹರಿಸುವ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ರಾಷ್ಟ್ರ ರಾಜಧಾನಿಯಲ್ಲಿ ಬುಧವಾರ ಸಭೆ ನಡೆಸಿದರು. ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರು ರಾಜಧಾನಿಯಲ್ಲಿ ಇಲ್ಲದ ಕಾರಣ ಆಯ್ಕೆ ಸಮಿತಿ ಸಭೆ ನಡೆಸಲು ಸಾಧ್ಯವಾಗಲಿಲ್ಲ. ಹೀಗಾಗಿ, ಕೇಂದ್ರ ಚುನಾವಣಾ ಸಮಿತಿ ಸಭೆಯಲ್ಲಿ ಕರ್ನಾಟಕದ ವಿಚಾರ ಚರ್ಚೆಗೆ ಬರಲಿಲ್ಲ. ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿ ಅವರು ಬುಧವಾರ ರಾತ್ರಿ ಬೆಂಗಳೂರಿಗೆ ಮರಳಿದರು. ಸುರ್ಜೇವಾಲಾ ನೇತೃತ್ವದಲ್ಲಿ ಬೆಂಗಳೂರಿನಲ್ಲಿ ಸಭೆ ನಡೆಸಿ ಈ ಕ್ಷೇತ್ರಗಳ ಅಭ್ಯರ್ಥಿಗಳ ಹೆಸರನ್ನು ಅಂತಿಮಗೊಳಿಸಲಾಗುತ್ತದೆ.

7ನೇ ಪುಟ ನೋಡಿ

### ಬಗೆಹರಿಯದ 'ಕೈ' ಕ್ಷೇತ್ರಗಳು

1. ಚಾಮರಾಜನಗರ: ಸುನೀಲ್ ಬೋಸ್ ಮತ್ತು ನಂಜುಂಡಸ್ವಾಮಿ
2. ಕೋಲಾರ: ಎಲ್. ಹನುಮಂತಯ್ಯ ಮತ್ತು ಮುನಿಯಪ್ಪ ಕುಟುಂಬ
3. ಚಿಕ್ಕಬಳ್ಳಾಪುರ: ಎನ್. ಎಚ್. ಶಿವಶಂಕರ ರೆಡ್ಡಿ ಮತ್ತು ರಕ್ಷ ರಾಮಯ್ಯ
4. ಬಳ್ಳಾರಿ: ಸೌಪರ್ಣಿಕಾ (ಚೈತನ್ಯ) ತುಕಾರಾಂ ಮತ್ತು ವಿ.ಎಸ್. ಉಗ್ರಪ್ಪ

### 'ಕಮಲ' ಕ್ಷೇತ್ರಗಳು

1. ಉತ್ತರ ಕನ್ನಡ: ವಿಶ್ವೇಶ್ವರ ಹೆಗಡೆ ಕಾಗೇರಿ ಅಥವಾ ಈಡಿಗ ಸಮುದಾಯದವರು
2. ಬೆಳಗಾವಿ: ಜಗದೀಶ ಶೆಟ್ಟರ್ ಮತ್ತು ಸ್ಥಳೀಯ ಅಭ್ಯರ್ಥಿ
3. ಚಿಕ್ಕಬಳ್ಳಾಪುರ: ಡಾ. ಕೆ. ಸುಧಾಕರ್ ಮತ್ತು ಅಲೋಕ್ ವಿಶ್ವನಾಥ್ ಅಥವಾ ಎಸ್.ಆರ್. ವಿಶ್ವನಾಥ್
4. ಚಿತ್ರದುರ್ಗ: ಗೋವಿಂದ ಕಾರಜೋಳ ಮತ್ತು ಶಾಸಕ ಚಂದ್ರಪ್ಪ ಪುತ್ರ ರಘುನಂದನ್
5. ರಾಯಚೂರು: ರಾಜಾ ಅಮರೇಶ್ವರ ನಾಯಕ ಮತ್ತು ಬಿ.ವಿ. ನಾಯಕ

**17 ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರನ್ನು ಅಂತಿಮಗೊಳಿಸಲಾಗಿದೆ. ನಾಲ್ಕು ಕ್ಷೇತ್ರಗಳ ಬಗ್ಗೆ ಇನ್ನಷ್ಟು ಚರ್ಚೆ ನಡೆಯಬೇಕಿದೆ. ಸ್ಥಳೀಯ ನಾಯಕರನ್ನು ಗುರುವಾರ ಕರೆಯಿಸಿ ಸಮಾಲೋಚನೆ ನಡೆಸುತ್ತೇವೆ**

**ಡಿ.ಕೆ. ಶಿವಕುಮಾರ್,** ಕೆಪಿಸಿಸಿ ಅಧ್ಯಕ್ಷ

**ಲೋಕಸಭಾ ಚುನಾವಣೆಗೆ ಕರ್ನಾಟಕದ ಉಳಿದ ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರು ಅಂತಿಮಗೊಳಿಸಲು ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ಇದೇ 22ರಂದು ಕೇಂದ್ರ ಚುನಾವಣಾ ಸಮಿತಿ ಸಭೆ ನಡೆಯಲಿದೆ**

**ಬಿ.ವೈ.ವಿಜಯೇಂದ್ರ,** ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

## ಮುನಿಯಪ್ಪ- ರಮೇಶ್ ಕುಮಾರ್ ಬಣದ ಭಿನ್ನಮತ ತೀವ್ರ

ಕಳೆದ ಕೆಲವು ಸಮಯದಿಂದ ಬೂದಿ ಮುಚ್ಚಿದ ಕೆಂಡದಂತಿದ್ದ ಕೋಲಾರ ಜಿಲ್ಲಾ ಕಾಂಗ್ರೆಸ್‌ನ ಭಿನ್ನಮತ ಮತ್ತಷ್ಟು ತೀವ್ರಗೊಂಡಿದೆ. ಮೂರು-ನಾಲ್ಕು ದಿನಗಳಿಂದ ರಾಜಧಾನಿಯಲ್ಲಿ ಬೀಡು ಬಿಟ್ಟಿರುವ ಕಾಂಗ್ರೆಸ್‌ನ ಎರಡು ಬಣಗಳ ನಾಯಕರು ಟಿಕೆಟ್ ಕೊಡಿಸಲು- ಟಿಕೆಟ್ ತಪ್ಪಿಸಲು ಕಸರತ್ತು ನಡೆಸಿದರು.

ಆಹಾರ ಸಚಿವ ಕೆ.ಎಚ್.ಮುನಿಯಪ್ಪ ಅಥವಾ ಕುಟುಂಬ ಸದಸ್ಯರಿಗೆ ಯಾವುದೇ ಕಾರಣಕ್ಕೆ ಅವಕಾಶ ನೀಡಬಾರದು ಎಂದು ಉನ್ನತ ಶಿಕ್ಷಣ ಸಚಿವ ಎಂ.ಸಿ.ಸುಧಾಕರ್, ಮಾಜಿ ಸಚಿವ ಕೆ.ಆರ್.ರಮೇಶ್ ಕುಮಾರ್, ಶಾಸಕರಾದ ಕೊತ್ತೂರು ಮಂಜುನಾಥ್ ಹಾಗೂ ಕೆ.ವೈ. ನಂಜೇಗೌಡ ಪಟ್ಟು ಹಿಡಿದಿದ್ದಾರೆ. ಡಿ.ಕೆ. ಶಿವಕುಮಾರ್ ಅವರನ್ನು ಭೇಟಿ ಮಾಡಿದ ಈ ಬಣದ ನಾಯಕರು, ರಾಜ್ಯಸಭಾ ಮಾಜಿ ಸದಸ್ಯ ಡಾ.ಎಲ್.ಹನುಮಂತಯ್ಯ ಅವರಿಗೆ ಟಿಕೆಟ್ ಕೊಡಬೇಕು ಎಂದು ಆಗ್ರಹಿಸಿದರು. ಮುನಿಯಪ್ಪ ಕುಟುಂಬಕ್ಕೆ ಮಣೆ ಹಾಕಿದರೆ 2019ರ ಚುನಾವಣೆಯ ಫಲಿತಾಂಶ ಮರುಕಳಿಸಲಿದೆ ಎಂದೂ ಎಚ್ಚರಿಸಿದರು. ಈ ಬಗ್ಗೆ ಹೈಕಮಾಂಡ್ ಜತೆಗೆ ಚರ್ಚಿಸುವುದಾಗಿ ಶಿವಕುಮಾರ್ ಭರವಸೆ ನೀಡಿದರು. ಅದರ ಬೆನ್ನಲ್ಲೇ, ಮುನಿಯಪ್ಪ ಅವರು ಜಿಲ್ಲಾ ಮುಖಂಡರ ದಂಡಿನ ಸಮೇತ ಬಂದು ಶಿವಕುಮಾರ್ ಅವರಿಗೆ ಮನವಿ ಸಲ್ಲಿಸಿದರು. ಈ ಸಲ ಕುಟುಂಬಕ್ಕೆ ಅವಕಾಶ ನೀಡಬೇಕು. ಗೆಲ್ಲಿಸಿಕೊಂಡು ಬರುವ ಹೊಣೆ ನನ್ನದು ಎಂದು ವಾಗ್ದಾನ ಮಾಡಿದರು. ಈ ನಡುವೆ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಹಿರಿಯ ನಾಯಕರನ್ನು ಭೇಟಿ ಮಾಡಿ ಲಾಬಿ ನಡೆಸಿದರು. ಮುನಿಯಪ್ಪ ಕುಟುಂಬ ಹಾಗೂ ಹನುಮಂತಯ್ಯ ಅವರ ಹೆಸರುಗಳನ್ನು ಬದಿಗಿಟ್ಟು ಹೊಸಬರಿಗೆ ಅವಕಾಶ ನೀಡಿದರೆ ಹೇಗೆ ಎಂಬ ಚರ್ಚೆಗಳು ನಡೆದಿವೆ.

# 'ಜಾಮೀನು ಹಕ್ಕು ನಿರಾಕರಣೆ ತಪ್ಪು'

## ಇ.ಡಿ.ನಡೆಗೆ ಸುಪ್ರೀಂ ಕೋರ್ಟ್ ಆಕ್ಷೇಪ

ನವದೆಹಲಿ (ಪಿಟಿಐ): ವಿಚಾರಣೆಗೆ ಗುರಿಪಡಿಸದೆ ಇದ್ದರೂ ಆರೋಪಿಯನ್ನು ವಶದಲ್ಲಿ ಇರಿಸಿಕೊಳ್ಳುವುದು ಬಂಧನಕ್ಕೆ ಸಮ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಹಣದ ಅಕ್ರಮ ವರ್ಗಾವಣೆ ಪ್ರಕರಣಗಳಲ್ಲಿ ಪೂರಕ ದೋಷಾರೋಪ ಪಟ್ಟಿಯನ್ನು ಸಲ್ಲಿಸುವ ಮೂಲಕ ಜಾರಿ ನಿರ್ದೇಶನಾಲಯವು (ಇ.ಡಿ) ಆರೋಪಿಗಳು ಜಾಮೀನು ಪಡೆಯುವ ಹಕ್ಕನ್ನು ಕಸಿಯುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದೆ.

ಜಾರ್ಖಂಡ್‌ನಲ್ಲಿ ನಡೆದಿದೆ ಎನ್ನಲಾದ ಅಕ್ರಮ ಗಣಿಗಾರಿಕೆಗೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಇ.ಡಿ. ಅಧಿಕಾರಿಗಳು ನಾಲ್ಕು ಬಾರಿ ಪೂರಕ ದೋಷಾರೋಪ ಪಟ್ಟಿ ಸಲ್ಲಿಸಿದ್ದಕ್ಕೆ ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಮತ್ತು ದೀಪಾಂಕರ್ ದತ್ತ ಅವರು ಇದ್ದ ವಿಭಾಗೀಯ ಪೀಠವು ಆಕ್ಷೇಪ ವ್ಯಕ್ತಪಡಿಸಿತು.

ತನಿಖಾ ಸಂಸ್ಥೆಗಳು ಕಾಲಮಿತಿಯಲ್ಲಿ ದೋಷಾರೋಪ ಪಟ್ಟಿ ಸಲ್ಲಿಸಲು ವಿಫಲವಾದ ಕಾರಣಕ್ಕೆ ಜಾಮೀನು ಕೋರಿ ಪ್ರೇಮ್ ಪ್ರಕಾಶ್ ಎಂಬ ಆರೋಪಿ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಪೀಠವು ನಡೆಸಿತು. ಪ್ರಕಾಶ್ ಅವರು ಜಾರ್ಖಂಡ್‌ನ ಮಾಜಿ ಮುಖ್ಯಮಂತ್ರಿ ಹೇಮಂತ್ ಸೋರೇನ್ ಅವರ ಆಪ್ತ ಎನ್ನಲಾಗಿದೆ.

ಪ್ರಕಾಶ್ ಅವರನ್ನು 2022ರ ಆಗಸ್ಟ್‌ನಲ್ಲಿ ಬಂಧಿಸಲಾಗಿದೆ. ಅವರ ಮನೆಯಲ್ಲಿ ಶೋಧ ನಡೆಸಿದಾಗ ಎ.ಕೆ-47 ಬಂದೂಕುಗಳು, ಸಜೀವ ಗುಂಡುಗಳು ದೊರೆತಿವೆ ಎನ್ನಲಾಗಿದೆ. ಹಣದ ಅಕ್ರಮ ವರ್ಗಾವಣೆ ಆರೋಪದ ಅಡಿಯಲ್ಲಿ ಹಾಗೂ ಶಸ್ತ್ರಾಸ್ತ್ರ ಕಾಯ್ದೆಯ ಅಡಿಯಲ್ಲಿ ಅವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

13ನೇ ಪುಟ ನೋಡಿ

ಗುರುವಾರದ ಉಷ್ಣಾಂಶ 34° ಗರಿಷ್ಠ 21° ಕನಿಷ್ಠ

ಹವಾಮಾನ ಮುನ್ಸೂಚನೆ
ನಗರದಲ್ಲಿ ಭಾಗಶಃ ಮೋಡ ಕವಿದ ವಾತಾವರಣ ಇರಲಿದೆ

ತಾಪಮಾನ: ಶುಕ್ರವಾರ 34° 21° | ಶನಿವಾರ 34° 22° | ಭಾನುವಾರ 35° 22°

## ವಿದ್ಯುತ್ ಆಘಾತ: ಕಾರ್ಮಿಕ ಸಾವು

ನೆಲಮಂಗಲ: ಪಟ್ಟಣದ ಸದಾಶಿವನಗರದಲ್ಲಿ ನಿರ್ಮಾಣ ಹಂತದ ಕಟ್ಟಡವೊಂದರಲ್ಲಿ ಕಬ್ಬಿಣದ ಕೆಲಸ ಮಾಡುತ್ತಿದ್ದ ವೇಳೆ ಕಬ್ಬಿಣದ ರಾಡ್‌ವೊಂದು ವಿದ್ಯುತ್ ಮಾರ್ಗಕ್ಕೆ ತಗುಲಿ ಕಾರ್ಮಿಕ ಮೃತಪಟ್ಟಿದ್ದಾರೆ.

ತಮಿಳುನಾಡಿನ ಶಂಕರ್ (28) ಮೃತ ಕಾರ್ಮಿಕ. ಮುನ್ನೆಚ್ಚರಿಕೆ ಕೈಗೊಳ್ಳದ ಮನೆ ಮಾಲೀಕ ವಿದ್ಯಾಶ್ರೀ ಪ್ರಕಾಶ್ ಹಾಗೂ ಗುತ್ತಿಗೆದಾರ ಶಂಕರ್ ಎಂಬುವವರನ್ನು ಪೊಲೀಸ್ ವಶಕ್ಕೆ ಪಡೆದುಕೊಂಡಿದ್ದಾರೆ. ನೆಲಮಂಗಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

JOCKEY
FACTORY SECONDS
UPTO 50% OFF*
* T & C apply
· 10 am to 8 pm · Open All Days · Master / Visa Card Accepted
INNERWEAR · LEISUREWEAR · ACTIVEWEAR · KIDSWEAR · SOCKS

**Venues In Bangalore**

**Infantry Road:** Safina Plaza, No.84/85 - 560001
**Kundalahalli Gate:** S K R Convention hall, Thubarahalli, Varthur Main Road, - 66
**HSR Layout:** A.Z Convention Hall, 17/1, Mangammanapalya Main Road, Hosur Road, Bommanahalli, Opp. AL Khaja Restaurant, - 68
**Jayanagar:** Prem Chandra Kalyan Mahal, T.Mariappa Road, 2nd block, (Near Ashoka Pillar), – 11.
**Banshankari:** Sri Hari Kalyana Mantap, 30th Main, B.S.K. 3rd Stage, Near K.I.M.S. Hospital, - 560085
**J .P. Nagar 3rd Phase:** Shilpa KalaMantapa, No.12, 9th Cross, Bannerghatta Road, -76
**Bannerghatta Road:** Billava Bhavana, No. 63, Opp. Meenakshi Temple - 560076
**Rajarajeswari Nagar:** Vasavi Mahal Kalyana Mantapa, Next To Reliance Digital, Ideal Homes I Phase - 98
**Vijay Nagar:** Five O Gallery, 17th Cross, M.C. Road, Near Vijay Nagar Bus Stop - 40
**Mahalaxmipuram:** Sri Vidyaranya Prarthana Mandira, (Sri Avani Sringeri Shankar Mutt), West Of Chord Road, Next ot Anupama English School, - 86
**Malleswaram:** The Canara Union, No. 42, 8th Main, Canara Union Road - 03
**M.S.R. Nagar:** Ramachandra Convention Hall, 8th cross, New BEL Road, Behind Punjab National Bank, Near Mayuri Hotel, - 54
**Hesaraghatta Main Road:** SRI Sai Kalyana Mantapa, No. 36, Near Bangalagunte Bus Stop, Mallasandra, - 57 (This venue is close for 2 days 21.03.24 & 22.03.24 & restarts from 23.03.24 - Saturday)
**Koramangala:** Apoorva International, #35A, Raheja Arcade, Opp Star Box - 95
**Basavanagudi:** Amolak Apparels, #104, Bull Temple Road, Near Ramakrishna Ashram - 19

Org. by: Surya Agency Pvt. Ltd.


SOBHA
PASSION AT WORK

### SOBHA LIMITED

CIN: L45201KA1995PLC018475
**Registered Office:** SOBHA, Sarjapur-Marathahalli Outer Ring Road (ORR) Devarabisanahalli, Bellandur Post, Bangalore - 560103 **Website:** www.sobha.com
**Email:** investors@sobha.com, **Tel:** +91-80-49320000

**POSTAL BALLOT NOTICE AND REMOTE E-VOTING INFORMATION**

Shareholders of the Company are hereby informed that pursuant to the Sections 108, 110 and other applicable provisions, if any, of the Companies Act, 2013 read with Rule 20 and 22 of the Companies (Management and Administration) Rules, 2014 (including any statutory modification(s) and / or re-enactment(s) thereof for the time being in force), guidelines prescribed by the Ministry of Corporate Affairs (**"MCA"**) vide General Circulars nos. 14/2020 dated April 8, 2020, 17/2020 dated April 13, 2020 and 20/2021 dated December 8, 2021, 03/2022 dated May 05, 2022, General Circular No. 11/2022 dated December 28, 2022 and the latest one being General Circular No. 9/2023 dated September 25, 2023 and other relevant circulars and notifications issued by the MCA (**'the MCA Circulars'**), Regulation 44 of the Securities and Exchange Board of India (Listing Obligations and Disclosure Requirements) Regulations, 2015 and any other applicable laws, the Company has dispatched the Postal Ballot Notice on Wednesday, March 20, 2024 through electronic mode only, to those shareholders whose names are recorded in the Register of Members and /or Register of Beneficial Owners maintained by the Depositories as on Friday, March 15, 2024, for seeking approval of the shareholders of the Company by Postal Ballot through remote e-Voting, for the following matters:

| S. No. | Item | Type of Resolution(s) |
|---|---|---|
| 1. | *Adoption of new articles of association in place of existing articles of association of the company* | Special |

The postal ballot notice is available on the website of the Company, www.sobha.com and the stock exchanges where the equity shares of the Company are listed i.e. BSE Limited ("BSE"), www.bseindia.com and National Stock Exchange of India Limited ("NSE") www.nseindia.com

The Company has engaged the services of Link Intime India Private Limited (**"Link Intime"**), to provide remote e-Voting facility for Postal Ballot in order to enable the members to cast their vote electronically. The detailed procedure for e-Voting is enumerated along with the Postal Ballot Notice. The remote e-Voting period will commence **from 9.00 a.m. (IST) on Saturday, March 23, 2024 and ends at 5.00 p.m. (IST) on Sunday, April 21, 2024** The e-Voting module shall be disabled by Link Intime, thereafter.

The communication of assent and dissent of the members would take place only through the remote e-Voting system. The shareholders would have the option to vote only through remote e-Voting and voting through physical ballot papers will not be provided. Only those members whose names are recorded in the Registers of Members of the Company or in the Registers of Beneficial Owners maintained by the Depositories as on the cut-off date i.e., Friday, March 15, 2024 will be entitled to cast their votes as assent or dissent by remote e-Voting. Once the vote on the resolution is cast by the Member, he/she shall not be allowed to change it subsequently.

In case of any queries, you may refer the Frequently Asked Questions ('FAQs') and InstaVote e-Voting manual available at https://instavote.linkintime.co.in, under Help section or send an email to enotices@linkintime.co.in or contact on: - Tel: 022-4918 6000 or write an email to Shri Bijan Kumar Dash, Company Secretary and Compliance officer at investors@sobha.com

The Board of Directors of the Company appointed Mr. Nagendra D Rao (Membership No. 5553, COP No. 7731) Practising Company Secretary as Scrutinizer (the "Scrutinizer") for conducting the Postal Ballot through remote e-Voting process in a fair and transparent manner.

The result of the postal ballot will be announced on or before Tuesday, April 23, 2024. The said results along with the Scrutinizer's Report would be intimated to BSE and NSE and will be uploaded on the Company's website, www.sobha.com

**For Sobha Limited**

**Bijan Kumar Dash**
**Company Secretary & Compliance Officer**

**Place : Bangalore**
**Date : March 20, 2024**

### ಸಾಲಬಾಧೆಯಿಂದ ಆತ್ಮಹತ್ಯೆ ಶಂಕೆ, ಜೆ.ಪಿ.ನಗರ ಮೂರನೇ ಹಂತದಲ್ಲಿ ಘಟನೆ

# ಅವಳಿ ಮಕ್ಕಳ ಸಹಿತ ತಾಯಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೆ.ಪಿ.ನಗರ 3ನೇ ಹಂತದ ಮನೆಯೊಂದರಲ್ಲಿ ಅವಳಿ ಮಕ್ಕಳು ಹಾಗೂ ತಾಯಿ ಪೆಟ್ರೋಲ್ ಸುರಿದುಕೊಂಡು ಆತ್ಮಹತ್ಯೆ ಮಾಡಿಕೊಂಡ ಹೃದಯವಿದ್ರಾವಕ ಘಟನೆ ಬುಧವಾರ ಬೆಳಿಗ್ಗೆ ನಡೆದಿದೆ.

ತಾಯಿ ಸುಕನ್ಯಾ (48), ಅವಳಿ ಮಕ್ಕಳಾದ ನಿಖಿತ್ ಹಾಗೂ ನಿಶ್ಚಿತ್ (28) ಆತ್ಮಹತ್ಯೆ ಮಾಡಿಕೊಂಡವರು.

ಸುಕನ್ಯಾ ಅವರ ಪತಿ ಜಯಾನಂದ್ ಅವರು ದೂರು ನೀಡಿದ್ದು, ಜೆ.ಪಿ. ನಗರ ಠಾಣೆ ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ಪ್ರಾಥಮಿಕ ತನಿಖೆಯಿಂದ ಸಾಲಬಾಧೆ ಹಾಗೂ ಆರೋಗ್ಯ ಸಮಸ್ಯೆಯಿಂದ ಮೂವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಗೊತ್ತಾಗಿದೆ. ವಿಧಿವಿಜ್ಞಾನ ಪ್ರಯೋಗಾಲಯದ ವರದಿ ಹಾಗೂ ಮತ್ತಷ್ಟು ಮಾಹಿತಿ ಸಂಗ್ರಹದ ನಂತರ ಘಟನೆಗೆ ನಿಖರ ಕಾರಣ ತಿಳಿಯಲಿದೆ ಎಂದು ಪೊಲೀಸರು ಹೇಳಿದರು.

ನಿಖಿತ್ ಹಾಗೂ ಸುಕನ್ಯಾ

ನಿಶ್ಚಿತ್

**ಪ್ರಕರಣದ ಸಂಬಂಧ ಜೆ.ಪಿ. ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಘಟನೆಗೆ ಸಾಲಬಾಧೆ ಎಂಬುದು ಪ್ರಾಥಮಿಕ ಮಾಹಿತಿಯಿಂದ ಗೊತ್ತಾಗಿದೆ**

**ಶಿವಪ್ರಕಾಶ್ ದೇವರಾಜ್**
ಡಿಸಿಪಿ, ದಕ್ಷಿಣ ವಿಭಾಗ

'ಉಡುಪಿಯ ಅಂಬಲಪಾಡಿ ಮೂಲದ ಕುಟುಂಬ ನಗರದ ಜೆ.ಪಿ.ನಗರದ ಮೂರನೇ ಹಂತದ ಮನೆಯಲ್ಲಿ ನೆಲೆಸಿತ್ತು. ಸುಕನ್ಯಾ ಅವರ ಪತಿ ಜಯಾನಂದ್ ಅವರು ಜೆ.ಪಿ. ನಗರದಲ್ಲಿ ವುಡನ್ ಡೈ ಮೇಕಿಂಗ್ ಉದ್ಯಮ ನಡೆಸುತ್ತಿದ್ದರು. ಇತ್ತೀಚೆಗೆ ಅದನ್ನು ಮುಚ್ಚಿದ್ದರು. ಪುತ್ರ ನಿಖಿತ್ ಎಂಸಿಎ ವ್ಯಾಸಂಗ ಮಾಡಿದ್ದು, ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ. ನಿಶ್ಚಿತ್ ಕೂಡ ಅನಿಮೇಷನ್ ಸಂಬಂಧಿತ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ. ಸುಕನ್ಯಾ ಅವರು ಮನೆಯಲ್ಲೇ ಮಕ್ಕಳಿಗೆ ಮನೆಪಾಠ ಹೇಳಿಕೊಡುತ್ತಿದ್ದರು. ಇದರಿಂದ ಬಂದ ಹಣದಲ್ಲಿ ಜೀವನ ಸಾಗಿಸುತ್ತಿದ್ದರು' ಎಂದು ಪೊಲೀಸರು ಹೇಳಿದರು.

'ಆರಂಭದಲ್ಲಿ ಉದ್ಯಮವು ಚೆನ್ನಾಗಿಯೇ ನಡೆಯುತ್ತಿತ್ತು. ಕೋವಿಡ್ ಲಾಕ್‌ಡೌನ್ ವೇಳೆ ಭಾರಿ ನಷ್ಟವುಂಟಾಗಿತ್ತು. ಜತೆಗೆ, ಕುಟುಂಬದಲ್ಲಿ ಕೆಲವರಿಗೆ ಆರೋಗ್ಯ ಸಮಸ್ಯೆ ಇತ್ತು. ಇದು ಮತ್ತಷ್ಟು ಸಂಕಷ್ಟ ತಂದೊಡ್ಡಿತ್ತು. ಹೀಗಾಗಿ, ಅಂದಾಜು ₹15 ಲಕ್ಷ ಸಾಲ ಮಾಡಿಕೊಂಡಿದ್ದರು. ಪ್ರತಿ ತಿಂಗಳು ಬಡ್ಡಿ ಪಾವತಿಸುತ್ತಿದ್ದರು. ಸುಕನ್ಯಾ ಅವರೂ ಕೆಲವರಿಂದ ಕೈಸಾಲ ಪಡೆದುಕೊಂಡಿದ್ದರು. ಸಾಲ ಹೆಚ್ಚಾಗಿ ಆರ್ಥಿಕ ಸಂಕಷ್ಟದಿಂದ ಆತ್ಮಹತ್ಯೆ ಮಾಡಿಕೊಂಡಿದ್ದಾರೆ' ಎಂದು ಹೇಳಲಾಗಿದೆ.

ಬುಧವಾರ ಬೆಳಿಗ್ಗೆ 8 ಗಂಟೆ ಸುಮಾರಿಗೆ ಪತಿಗೆ ಹಾಲು, ದಿನಪತ್ರಿಕೆ ಕೊಟ್ಟು ಸುಕನ್ಯಾ ಅವರು ಕೊಠಡಿಯ ಬಾಗಿಲು ಹಾಕಿಕೊಂಡಿದ್ದರು. ಅದೇ ಕೊಠಡಿಯಲ್ಲಿ ಮಕ್ಕಳು ಇದ್ದರು. ಮೂವರೂ ಮೈಮೇಲೆ ಪೆಟ್ರೋಲ್ ಸುರಿದುಕೊಂಡು ಬೆಂಕಿ ಹಚ್ಚಿಕೊಂಡಿದ್ದಾರೆ. ಬೆಂಕಿ ಸುಟ್ಟಾಗ ಜೋರಾಗಿ ಕೂಗಬಾರದು ಎಂದು ಮೂವರೂ ಬಾಯಿಗೆ ಬಟ್ಟೆ ಕಟ್ಟಿಕೊಂಡಿದ್ದರು ಎಂದು ಹೇಳಲಾಗಿದೆ. ಕೆಲವೇ ಕ್ಷಣಗಳಲ್ಲಿ ಸಜೀವ ದಹನವಾಗಿದ್ದಾರೆ.

ಬೆಡ್‌ರೂಮ್‌ನಲ್ಲಿ ದಟ್ಟವಾದ ಹೊಗೆ ಕಾಣಿಸಿಕೊಂಡಿದ್ದು, ಅಕ್ಕಪಕ್ಕದ ನಿವಾಸಿಗಳು ಓಡಿಬಂದು ಬಾಗಿಲು ಒಡೆದು ನೋಡುವಷ್ಟರಲ್ಲಿ ಮೂವರೂ ಮೃತಪಟ್ಟಿದ್ದರು ಎಂದು ಪೊಲೀಸರು ಹೇಳಿದರು.

ಘಟನಾ ಸ್ಥಳದಲ್ಲಿ ಯಾವುದೇ ಡೆತ್‌ನೋಟ್ ಹಾಗೂ ಆತ್ಮಹತ್ಯೆಗೆ ಸಂಬಂಧಿಸಿದಂತೆ ಬೇರೆ ಯಾವುದೇ ಕುರುಹುಗಳು ಪತ್ತೆಯಾಗಿಲ್ಲ ಎಂದು ಪೊಲೀಸರು ಹೇಳಿದರು. ಘಟನಾ ಸ್ಥಳಕ್ಕೆ ದಕ್ಷಿಣ ವಿಭಾಗದ ಪ್ರಭಾರ ಡಿಸಿಪಿ ಶಿವಪ್ರಕಾಶ್ ದೇವರಾಜ್ ಭೇಟಿ ನೀಡಿ ಪರಿಶೀಲಿಸಿದರು.

**ಮನೆಯ ಬಳಿ ಬಂದಿದ್ದ ಸಾಲಗಾರರು:** ಕಳೆದ ಒಂದು ವಾರದಿಂದ ಸಾಲಗಾರರು ಮನೆಯ ಬಳಿ ಬಂದು ಅಸಲು ಹಾಗೂ ಬಡ್ಡಿ ಪಾವತಿಸುವಂತೆ ಪೀಡಿಸುತ್ತಿದ್ದರು ಎನ್ನಲಾಗಿದೆ.

### ಕೈಗೆ ಸುತ್ತಿದ್ದ ಎಲೆಕ್ಟ್ರಿಕ್ ಕೇಬಲ್

ಕೈಗಳಿಗೆ ಎಲೆಕ್ಟ್ರಿಕ್ ಕೇಬಲ್‌ಗಳು ಸುತ್ತಿರುವ ಸ್ಥಿತಿಯಲ್ಲಿ ಮೂವರ ಶವಗಳು ಪತ್ತೆಯಾಗಿವೆ. ಇದು ಅನುಮಾನಕ್ಕೆ ಕಾರಣವಾಗಿದೆ. ಮೃತದೇಹಗಳನ್ನು ಮರಣೋತ್ತರ ಪರೀಕ್ಷೆ ನಡೆಸಿ ಕುಟುಂಬಸ್ಥರಿಗೆ ಹಸ್ತಾಂತರ ಮಾಡಲಾಗಿದೆ. ಮರಣೋತ್ತರ ಪರೀಕ್ಷೆ ವರದಿ ಬಂದ ಮೇಲೆ ಕಾರಣ ಗೊತ್ತಾಗಲಿದೆ ಎಂದು ಪೊಲೀಸರು ಹೇಳಿದರು.

## ಕಿರುಚಿತ್ರೋತ್ಸವ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೈನ್ ವಿಶ್ವ ವಿದ್ಯಾಲಯದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ವತಿಯಿಂದ ಇದೇ 21ರಂದು 'ಜೈನ್ ವಿಶ್ವವಿದ್ಯಾಲಯ ಕಿರುಚಿತ್ರೋತ್ಸವ'ವನ್ನು ಬನಶಂಕರಿಯ 2ನೇ ಹಂತದಲ್ಲಿರುವ ಸುಚಿತ್ರ ಸಿನಿಮಾ ಕಲ್ಚರಲ್ ಅಕಾಡೆಮಿಯಲ್ಲಿ ಹಮ್ಮಿಕೊಳ್ಳಲಾಗಿದೆ.

ತೀರ್ಪುಗಾರರು ಆಯ್ಕೆ ಮಾಡಿದ ಕಿರುಚಿತ್ರಗಳ ಪ್ರದರ್ಶನ ನಡೆಯಲಿದ್ದು, ವೃತ್ತಿಪರ ವಿಭಾಗದಲ್ಲಿ ಉತ್ತಮ ಕಿರುಚಿತ್ರಕ್ಕೆ ಬಹುಮಾನ ನೀಡಲಾಗುವುದು. ವಿದ್ಯಾರ್ಥಿ ವಿಭಾಗದಲ್ಲಿ ಎರಡು ಕಿರುಚಿತ್ರಗಳಿಗೆ ಮೊದಲ ಸ್ಥಾನ ಹಾಗೂ ರನ್ನರ್‌ಅಪ್ ಬಹುಮಾನ ನೀಡಲಾಗುವುದು.

ಚಲನಚಿತ್ರ ನಿರ್ದೇಶಕ ಮಂಜು ಸ್ವರಾಜ್, ನಟ ನವೀನ್ ಶಂಕರ್, ನಟ ಮತ್ತು ನಿರ್ದೇಶಕ ಹರೀಶ್ ರಾಜ್, ಚಲನಚಿತ್ರ ನಿರ್ದೇಶಕಿ ಚಂಪಾ ಪಿ. ಶೆಟ್ಟಿ, ಸಂಕಲನಕಾರ ಬಿ.ಎಸ್. ಕೆಂಪರಾಜು ಈ ಕಿರುಚಲನಚಿತ್ರೋತ್ಸವದಲ್ಲಿ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

## ಮಗು ಕೊಂದು, ಆತ್ಮಹತ್ಯೆಗೆ ಯತ್ನಿಸಿದ ತಾಯಿ

ಬೆಂಗಳೂರು: ಕೌಟುಂಬಿಕ ಕಲಹ ಹಾಗೂ ಆರೋಗ್ಯ ಸಮಸ್ಯೆಯಿಂದ ಬೇಸತ್ತ ಗೃಹಿಣಿಯೊಬ್ಬರು, ಎರಡು ವರ್ಷದ ಮಗಳನ್ನು ಉಸಿರುಗಟ್ಟಿಸಿ ಕೊಲೆ ಮಾಡಿ ತಾನೂ ಆತ್ಮಹತ್ಯೆಗೆ ಯತ್ನಿಸಿದ ಘಟನೆ ಕೆ.ಆರ್.ಪುರಂ ಪೊಲೀಸ್ ಠಾಣಾ ವ್ಯಾಪ್ತಿಯ ಸೀಗೆಹಳ್ಳಿಯಲ್ಲಿ ನಡೆದಿದೆ.

ಶ್ರುತಿಕಾ (2) ಎಂಬ ಮಗು ಮೃತಪಟ್ಟಿದ್ದು, ತಾಯಿ ಚಿನ್ನಾ(24) ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

'ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆಯ ಲಕ್ಷ್ಮೀನಾರಾಯಣ-ಚಿನ್ನಾ ದಂಪತಿ ಮೂರು ತಿಂಗಳ ಹಿಂದೆ ಸೀಗೆಹಳ್ಳಿಗೆ ಬಂದು ಬಾಡಿಗೆ ಮನೆಯಲ್ಲಿ ನೆಲೆಸಿದ್ದರು. ಚಿನ್ನಾ ಅವರಿಗೆ ಆರೋಗ್ಯ ಸಮಸ್ಯೆಯಿತ್ತು. ಮನೆಯಲ್ಲಿ ನಡೆಯುತ್ತಿದ್ದ ಗಲಾಟೆಯಿಂದ ಅವರು ಬೇಸತ್ತಿದ್ದರು ಎನ್ನಲಾಗಿದೆ'

'ಮನೆಯಲ್ಲಿ ಸಣ್ಣಪುಟ್ಟ ವಿಚಾರಕ್ಕೆ ಗಲಾಟೆ ನಡೆದಾಗ ಮಗುವನ್ನು ಸಾಯಿಸಿ ತಾನೂ ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ ಎಂದು ಬೆದರಿಕೆ ಹಾಕುತ್ತಿದ್ದರು. ಪತಿ ಬುದ್ಧಿಮಾತು ಹೇಳುತ್ತಿದ್ದರು. ಆ ಸಂದರ್ಭದಲ್ಲಿ ಸುಮ್ಮನಾಗುತ್ತಿದ್ದರು. ಮಾರ್ಚ್ 17ರಂದು ಪತಿ ಲಕ್ಷ್ಮೀನಾರಾಯಣ ಅವರು ದೇವಸ್ಥಾನಕ್ಕೆ ತೆರಳಿದ್ದ ವೇಳೆ ಈ ಘಟನೆ ನಡೆದಿದೆ. ಮಗುವನ್ನು ಕೊಂದ ಬಳಿಕ ಪತಿಗೆ ಕರೆ ಮಾಡಿ ವಿಚಾರ ತಿಳಿಸಿದ್ದರು. ಅವರು ತಕ್ಷಣವೇ ಪಕ್ಕದ ಮನೆಗೆ ಕರೆ ಮಾಡಿ ಮಾಹಿತಿ ನೀಡಿದ್ದರು. ಅವರು ಬಂದು ನೋಡುವಷ್ಟರಲ್ಲಿ ಮಗು ಮೃತಪಟ್ಟಿತ್ತು' ಎಂದು ಮೂಲಗಳು ಹೇಳಿವೆ.

ಲಕ್ಷ್ಮೀನಾರಾಯಣ ನೀಡಿದ ಹೇಳಿಕೆ ಆಧರಿಸಿ, ಕೆ.ಆರ್.ಪುರಂ ಠಾಣಾ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.


**ರೈಲು ಭೂಮಿ ಅಭಿವೃದ್ಧಿ ಪ್ರಾಧಿಕಾರ**
(ಭಾರತ ಸರ್ಕಾರದ ರೈಲ್ವೆ ಸಚಿವಾಲಯ ಅಡಿಯಲ್ಲಿನ ಒಂದು ಶಾಸನಬದ್ಧ ಪ್ರಾಧಿಕಾರ)
ಯೂನಿಟ್ ನಂ. 702-ಬಿ, 7ನೇ ಮಹಡಿ, ಕನ್ಸರ್ಟ್ಸ್ ಟವರ್-2, ಡಿಎಂಆರ್‌ಸಿ ಬಿಲ್ಡಿಂಗ್, ಅಜ್ಮೇರಿ ಗೇಟ್, ನವದೆಹಲಿ-110002 ಫೋನ್: +91-11-23232854, ಫ್ಯಾಕ್ಸ್: +91-11-23232835

ಇ-ಟೆಂಡರ್ ಮುಖಾಂತರ ಪ್ರಸ್ತಾವಣೆಗೆ ಮನವಿ
(ಆರ್‌ಎಫ್‌ಪಿ ನೋಟಿಸ್ ನಂ. ಆರ್‌ಎಲ್‌ಡಿಎ/2024/ಆರ್‌ಎಫ್‌ಪಿ/ಸಿಡಿ-ಸಿಆರ್‌ಡಿ/17 ದಿನಾಂಕ: 23-02-2024)

ಸದರ್ನ್ ರೈಲ್ವೆಯ ಪಾಲಘಾಟ್ ಡಿವಿಜನ್‌ನಲ್ಲಿನ ಮಂಗಳೂರು ಸೆಂಟ್ರಲ್ ರೈಲ್ವೆಯ 14,950 ಚ.ಮೀ. ರೈಲ್ವೆ ಕಾಲೋನಿಯ ವಾಣಿಜ್ಯ ಅಭಿವೃದ್ಧಿಗಾಗಿ ಮತ್ತು ಮಂಗಳೂರು ಸೆಂಟ್ರಲ್ ರೈಲ್ವೆ ನಿಲ್ದಾಣದ ಸಮೀಪದಲ್ಲಿ ಈಗಾಗಲೇ ಅಸ್ತಿತ್ವದಲ್ಲಿರುವ 17,165 ಚ.ಮೀ. ರೈಲ್ವೆ ಕಾಲೋನಿಯ ಮನರಾಭಿವೃದ್ಧಿಗಾಗಿ, 45 ವರ್ಷಗಳ ಅವಧಿಗೆ ರೈಲ್ವೆ ಜಮೀನು ಭೋಗ್ಯ/ಲೈಸನ್ಸ್ ಮಂಜೂರಾತಿ.

| ನಿವೇಶನದ ವಿವರ | ನಿವೇಶನದ ಅಂದಾಜು ವಿಸ್ತೀರ್ಣ | ರೆಫರೆನ್ಸ್ ಬಿಲ್ಟಪ್ ಏರಿಯಾ | ಬಿಡ್ ಸೆಕ್ಯೂರಿಟಿ | ಮೀಸಲು ಬೆಲೆ |
|---|---|---|---|---|
| ಮಂಗಳೂರು ಸೆಂಟ್ರಲ್ ರೈಲ್ವೆ ಕಾಲೋನಿ, ಮಂಗಳೂರು, ಕರ್ನಾಟಕ | 14,950 Sqm. | 34,385 Sqm. | Rs. 1.00 ಕೋಟಿ | Rs. 27.75 ಕೋಟಿ |

ಬಿಡ್‌ಪೂರ್ವ ಆನ್‌ಲೈನ್ ಮತ್ತು ಆಫ್‌ಲೈನ್ ಸಭೆ: 21ನೇ ಮಾರ್ಚ್, 2024 ರಂದು 11:30 ಗಂಟೆ. (ಬಿಡ್‌ಪೂರ್ವ ಆನ್‌ಲೈನ್ ಸಭೆಯ ವಿವರಗಳನ್ನು ಜಾಯಿಂಟ್ ಜನರಲ್ ಮ್ಯಾನೇಜರ್/ಪಿ/ಎಸ್‌ಬಿಸಿ ಇವರಿಂದ ಪಡೆದುಕೊಳ್ಳುವುದು) ಆನ್‌ಲೈನ್‌ನಲ್ಲಿ ಇ-ಬಿಡ್ ಸಲ್ಲಿಸುವ ಕೊನೆಯ ದಿನಾಂಕ: 24.04.2024 ರಂದು 15:00 ಗಂಟೆವರೆಗೆ. ಯೋಜನೆಯ ಕುರಿತಾದ ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ನಮ್ಮ www.rlda.indianrailways.gov.in ವೆಬ್‌ಸೈಟ್‌ಗೆ ಭೇಟಿ ಕೊಡಿ ಅಥವಾ ಇ-ಪ್ರೊಕ್ಯೂರ್‌ಮೆಂಟ್‌ನ www.tenderwizard.in/RLDA ಪೋರ್ಟಲ್‌ನಲ್ಲಿರುವ ಇ-ಟೆಂಡರ್ ಶೀರ್ಷಿಕೆಯನ್ನು ಪರಿಶೀಲಿಸಿರಿ. ಯಾವುದೇ ಸ್ಪಷ್ಟೀಕರಣಗಳಿಗಾಗಿ, ದಯವಿಟ್ಟು ಇವರನ್ನು ಸಂಪರ್ಕಿಸಿರಿ:-

| | | | |
|---|---|---|---|
| ಜಾ. ಜನರಲ್ ಮ್ಯಾನೇಜರ್/ಪಿ/ಎಸ್‌ಬಿಸಿ M: 99591 87887 jgmpsbc@rlda.railnet.gov.in | ಚೀಫ್ ಪ್ರಾಜೆಕ್ಟ್ ಮ್ಯಾನೇಜರ್/ಎಸ್‌ಬಿಸಿ M: 93615 91387 cpmbangalore@rlda.railnet.gov.in | ಕನ್ಸಲ್ಟಂಟ್/ಆರ್‌ಎಲ್‌ಡಿಎ ಶ್ರೀ. ಪ್ರಗೀಜಾ ಕೆ ಮತ್ತು ಶ್ರೀ. ಮನೋಹರ್ ಎಲ್ ಎ M: 80500 16272, 8105619138 prageeja.k@cbre.com | ಇ-ಬಿಡ್ ವಿಚಾರಣೆಗಳಿಗಾಗಿ ಶ್ರೀ. ಸೂರಜ್ ಸಿಂಗ್ M: 95996 53865 suraj@etenderwizard.com |

ಸೂಚನೆ:- ತಿದ್ದುಪಡಿ ಅಥವಾ ಮಾರ್ಪಾಡು ಉಂಟಾದಲ್ಲಿ, ಅಂತಹುದನ್ನು ಮೇಲ್ಕಂಡ ವೆಬ್‌ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ. ಜಿಎಂಜಿ/ಟೆಂಡರ್, (ಮೊ) 9990114988



**ಸ್ಪಂದನ ಕ್ರೆಡಿಟ್ ಸೌಹಾರ್ದ ಸಹಕಾರ ಸಂಘ ನಿಯಮಿತ**
ನೋಂದಣಿ 37/ಸೌಕಾ/ನೋಂದಣಿ 2297/2010-11
"ಪುಣ್ಯಕೋಟಿ", ನಂ.1587, 3ನೇ ಮುಖ್ಯರಸ್ತೆ, ಚಂದ್ರ ಬಡಾವಣೆ, ಬೆಂಗಳೂರು-560 040
ದೂರವಾಣಿ ಸಂಖ್ಯೆ: 080-23185584, 9538475454, 9980147199.

**ಸ್ಥಿರಾಸ್ತಿ ಹರಾಜು ಪ್ರಕಟಣೆ**

ಸ್ಪಂದನ ಕ್ರೆಡಿಟ್ ಸೌಹಾರ್ದ ಸಹಕಾರ ಸಂಘ ನಿಯಮಿತ, ಬೆಂಗಳೂರು. ಈ ಸಹಕಾರಿಯ ಸುಸ್ತಿದಾರರಾದ **ಶ್ರೀಮತಿ. ಜಯಲಕ್ಷ್ಮಿ ಕೋಂ ಕೃಷ್ಣಮೂರ್ತಿ**. ಇವರಿಂದ ಬಾಕಿಯಿರುವ ಈ ಕೆಳಕಂಡ ಮೊತ್ತಗಳ ವಸೂಲಿ ಬಗ್ಗೆ ಸದರಿಯವರಿಗೆ ಸೇರಿದ ಈ ಕೆಳಗೆ ನಮೂದಿಸಿರುವ ಸ್ಥಿರ ಸ್ವತ್ತುಗಳನ್ನು ವಸೂಲಾತಿ ಅಧಿಕಾರಿಗಳು (ನಿ-441) ಹಾಗೂ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ, ಬೆಂಗಳೂರು ಇವರ ಆದೇಶ ಸಂಖ್ಯೆ ಇಪಿ.ನಂ:ಕ.ರಾ.ಸೌ.ಸಂ.ಸ.ನಿ/ಸ.ಸಂ.ಸ.ನಿ/ವ.ಅ/364/2023-24 ಹಾಗೂ ಇಪಿ.ನಂ:ಕ.ರಾ.ಸೌ.ಸಂ.ಸ.ನಿ/ಸ.ಸಂ.ಸ.ನಿ/ವ.ಅ/365/2023-24, ದಿನಾಂಕ 26.02.2024 ರ ಮೇರೆಗೆ ದಿನಾಂಕ 04.04.2024 ರ ಗುರುವಾರ ದಂದು ಹಗಲು 11.00 ಘಂಟೆಗೆ ಸ್ಥಿರಾಸ್ತಿ ಇರುವ ವಿಳಾಸದಲ್ಲಿ ಮೇಲ್ಕಂಡ ಆದೇಶಗಳಲ್ಲಿ ವಿಧಿಸಿರುವ ಷರತ್ತುಗಳಿಗೊಳಪಟ್ಟು ಬಹಿರಂಗ ಹರಾಜು ಮಾಡಲಾಗುವುದೆಂದು ಈ ಮೂಲಕ ತಿಳಿಸಿದೆ.

ಶ್ರೀಮತಿ ಜಯಲಕ್ಷ್ಮಿ

**ಹರಾಜಿನ ಷರತ್ತುಗಳನ್ನು ಸಹಕಾರಿಯ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.**

| ಸುಸ್ತಿದಾರರ ಹೆಸರು ಮತ್ತು ವಿಳಾಸ | ಸ್ಥಿರಾಸ್ತಿಯ ವಿವರಗಳು | ತೀರ್ಪು ಮೊಬಲಗು (ರೂ.ಗಳಲ್ಲಿ) | ಷರಾ |
|---|---|---|---|
| ಶ್ರೀಮತಿ. ಜಯಲಕ್ಷ್ಮಿ ಕೋಂ ಕೃಷ್ಣಮೂರ್ತಿ #14/1, ವಲ್ಲಭನಗರ, ಸುಬ್ರಮಣ್ಯಪುರ ಕ್ರಾಸ್, ಬೆಂಗಳೂರು-560061. | ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ಹಾಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಒಳಪಟ್ಟಿರುವ ಉತ್ತರಹಳ್ಳಿ ಗ್ರಾಮದ ಮಾಜಿ ಖಾತಾ ನಂಬರು 11/2, ಹಾಲಿ ಖಾತಾ ನಂಬರು 11/2-14/1, ಸ್ವತ್ತಿನ ನಂಬರು 14/1 ಹಾಗೂ ಪೂರ್ವದಿಂದ ಪಶ್ಚಿಮಕ್ಕೆ: 22" ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ:20" ಅಡಿ ಒಟ್ಟು 440 ಚದರ ಅಡಿ ವಿಸ್ತೀರ್ಣವುಳ್ಳ ಮತ್ತು ಈ ಕೆಳಕಂಡ ಚಕ್ಕುಬಂದಿಯುಳ್ಳ ನಿವೇಶನ ಹಾಗೂ ಅದರಲ್ಲಿ ನಿರ್ಮಿಸಿರುವ ವಸತಿ ಗೃಹ ಈ ಹರಾಜು ಪ್ರಕ್ರಿಯೆಗೆ ಸಂಬಂಧಪಟ್ಟದಾಗಿರುತ್ತದೆ. ಚಕ್ಕುಬಂದಿ:- ಪೂರ್ವಕ್ಕೆ : ರಸ್ತೆ ಪಶ್ಚಿಮ : ಬೇರೆಯವರ ಸ್ವತ್ತು, ಉತ್ತರಕ್ಕೆ : ದೇವಸ್ಥಾನದ ಸ್ವತ್ತು, ದಕ್ಷಿಣಕ್ಕೆ : ಸ್ವತ್ತಿನ ನಂಬರು 14. | ರೂ. 20,74,273<br>ರೂ. 11,79,144<br>ಒಟ್ಟು=32,53,417 | ಆದೇಶ<br>ಇಪಿ.ನಂ:ಕ.ರಾ.ಸೌ.ಸಂ.ಸ.ನಿ/ಸ.ಸಂ.ಸ.ನಿ/ವ.ಅ/364/2023-24<br>ಇಪಿ.ನಂ:ಕ.ರಾ.ಸೌ.ಸಂ.ಸ.ನಿ/ಸ.ಸಂ.ಸ.ನಿ/ವ.ಅ/365/2023-24 |

ವಿಶೇಷ ಸೂಚನೆ: ಮೇಲೆ ಹೇಳಿರುವ ತೀರ್ಪು ಮೊಬಲಗು ಹಾಗೂ ದಿನಾಂಕ 28.04.2022 ರಿಂದ ಬಾಕಿಯಿರುವ ಬಡ್ಡಿ ಹಾಗೂ ನ್ಯಾಯಾಲಯದ ವೆಚ್ಚಗಳನ್ನು ಸಹ ಪಾವತಿಸಬೇಕಾಗಿರುತ್ತದೆ.

**ಆಸಕ್ತಿಯುಳ್ಳವರು ಈ ಹರಾಜಿನಲ್ಲಿ ಭಾಗವಹಿಸಬಹುದಾಗಿರುತ್ತದೆ.**

ಸ್ಥಳ: ಬೆಂಗಳೂರು
ದಿನಾಂಕ : 18.03.2024

ಸಹಿ/- ದೀಪು.ಎಸ್.
ಮಾರಾಟಾಧಿಕಾರಿ, ಸ್ಪಂದನ ಕ್ರೆಡಿಟ್ ಸೌಹಾರ್ದ ಸಹಕಾರ ಸಂಘ ನಿಯಮಿತ

**ನೀರಿನದ್ದೇ ತಲೆಬಿಸಿ**

ಬೇಸಿಗೆಯಲ್ಲಿ ನೀರಿನ ಬವಣೆ ತಪ್ಪಿಸಲು ಮನೆಯಲ್ಲಿ ನೀರು ಶೇಖರಿಸಿಡುವುದಕ್ಕಾಗಿ ಮಹಿಳೆಯೊಬ್ಬರು ದೊಡ್ಡ ಡ್ರಮ್ ಖರೀದಿ ಮಾಡುತ್ತಿರುವ ದೃಶ್ಯ ರಾಜಾಜಿನಗರದಲ್ಲಿ ಕಂಡುಬಂತು
–ಪ್ರಜಾವಾಣಿ ಚಿತ್ರ: ಎಂ.ಎಸ್.ಮಂಜುನಾಥ್

## ಆ್ಯಸಿಡ್ ಬಿದ್ದು ಮೂವರಿಗೆ ಗಾಯ

ಪ್ರಜಾವಾಣಿ ವಾರ್ತೆ

ತುಮಕೂರು: ನಗರದ ಹೊರ ವಲಯದ ಗೂಳೂರಿನಲ್ಲಿ ಬುಧವಾರ ಸಂಜೆ ಕುಣಿಗಲ್‌ನಿಂದ ತುಮಕೂರಿಗೆ ಬರುತ್ತಿದ್ದ ಖಾಸಗಿ ಬಸ್‌ನಲ್ಲಿ, ಬಾತ್ ರೂಮ್ ಸ್ವಚ್ಛಗೊಳಿಸಲು ಬಳಸುವ ಆ್ಯಸಿಡ್ ಸಿಡಿದು ಮೂವರು ಮಹಿಳೆಯರು ಗಾಯಗೊಂಡಿದ್ದಾರೆ.

ನಗರದ ಜನತಾ ಕಾಲೊನಿ ನಿವಾಸಿಗಳಾದ ಶಕೀಲಾ ಬಾನು, ನಾಜಿಯಾ ಬಾನು, ತಾಲ್ಲೂಕಿನ ಬಳಗೆರೆ ಗ್ರಾಮದ ರಾಜಲಕ್ಷ್ಮಿ ಎಂಬುವವರಿಗೆ ಆ್ಯಸಿಡ್ ಬಿದ್ದು, ಸಣ್ಣಪುಟ್ಟ ಗಾಯಗಳಾಗಿವೆ.

ಮಹಿಳೆಯರ ಮುಖ, ಕೈ-ಕಾಲುಗಳಿಗೆ ಸುಟ್ಟ ಗಾಯಗಳಾಗಿವೆ. ಜಿಲ್ಲಾ ಆಸ್ಪತ್ರೆಯ ಆವರಣದಲ್ಲಿರುವ ಅಪಘಾತ ಚಿಕಿತ್ಸಾ ಕೇಂದ್ರದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಶಕೀಲಾ ಬಾನು ನೀರಿನ ಬಾಟಲಿಯಲ್ಲಿ ಆ್ಯಸಿಡ್ ತೆಗೆದುಕೊಂಡು ಹೋಗುತ್ತಿದ್ದರು. ಬಸ್ ಹೋಗುವಾಗ ಅದು ಕೆಳಗೆ ಬಿದ್ದು, ಅಕ್ಕಪಕ್ಕದಲ್ಲಿದ್ದ ಮಹಿಳೆಯರ ಮೇಲೆ ಸಿಡಿದಿದೆ.

**ಯಾರಿಗೂ ಹೆಚ್ಚಿನ ಹಾನಿಯಾಗಿಲ್ಲ. ಆ್ಯಸಿಡ್ ತೆಗೆದುಕೊಂಡು ಹೋಗುತ್ತಿದ್ದ ಮಹಿಳೆ ಹೊನ್ನುಡಿಕೆ ಬಳಿಯ ಗುಜರಿ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದರು. ಅಲ್ಲಿಂದ ಆ್ಯಸಿಡ್ ತಂದಿದ್ದಾರೆ. ಮಹಿಳೆಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುವುದು**

**ಕೆ.ವಿ.ಅಶೋಕ್,** ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ

## ಸಂಗೀತ ಕಛೇರಿ 29ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಾಭರಹಿತ ಸಂಸ್ಥೆಯಾದ ಮಿತ್ರ ಕ್ಯಾನ್‌ಕೇರ್ ಫೌಂಡೇಶನ್ ಕ್ಯಾನ್ಸರ್ ಪೀಡಿತ ಮಕ್ಕಳ ಚಿಕಿತ್ಸೆಗೆ ಹಣ ಸಂಗ್ರಹಿಸಲು ಇದೇ 29ರಂದು ಸಂಜೆ 6ರಿಂದ ಚೌಡಯ್ಯ ಸ್ಮಾರಕ ಭವನದಲ್ಲಿ ಹಿಂದೂಸ್ತಾನಿ ಸಂಗೀತ ಕಛೇರಿ ಹಮ್ಮಿಕೊಂಡಿದೆ.

'ಪದ್ಮಭೂಷಣ ಪ್ರಶಸ್ತಿ' ಪುರಸ್ಕೃತ ಪಿಟೀಲು ವಾದಕ ಎಲ್. ಸುಬ್ರಮಣ್ಯಂ ಅವರು ಸಂಗೀತ ಕಛೇರಿ ನಡೆಸಿಕೊಡಲಿದ್ದಾರೆ. ಪಿಟೀಲು ವಾದಕ ಅಂಬಿ ಸುಬ್ರಮಣ್ಯಂ, ಮೃದಂಗ ವಾದಕ ವಿ.ವಿ. ರಮಣಮೂರ್ತಿ, ಘಟ ವಾದಕ ಎನ್. ರಾಧಾಕೃಷ್ಣನ್, ಮೋರ್ಸಿಂಗ್ ವಾದಕ ಜಿ. ಸತ್ಯ ಸಾಯಿ ಹಾಗೂ ಖಂಜಿರಾ ವಾದಕಿ ಬಿ.ಆರ್. ಲತಾ ಸಾಥ್ ನೀಡಲಿದ್ದಾರೆ.

'ಕ್ಯಾನ್ಸರ್‌ನಿಂದ ಬಳಲುತ್ತಿರುವ ಮಕ್ಕಳಿಗೆ ಆರ್ಥಿಕ ನೆರವು ನೀಡುವುದು ನಮ್ಮ ಉದ್ದೇಶವಾಗಿದೆ. ಹಣಕಾಸಿನ ಸಮಸ್ಯೆಯಿಂದ ಸಕಾಲದಲ್ಲಿ ಚಿಕಿತ್ಸೆ ಒದಗಿಸಲು ಕೆಲವರಿಗೆ ಸಾಧ್ಯವಾಗುತ್ತಿಲ್ಲ. ಆರಂಭಿಕ ಹಂತದಲ್ಲಿಯೇ ರೋಗ ನಿರ್ಣಯ ಮಾಡಿ, ಚಿಕಿತ್ಸೆ ಒದಗಿಸಿದಲ್ಲಿ ಕ್ಯಾನ್ಸರ್ ಕಾಯಿಲೆಯನ್ನು ಸುಲಭವಾಗಿ ವಾಸಿ ಮಾಡಬಹುದು. ಪ್ರಾಯೋಜಕತ್ವದಿಂದ ಸಂಗ್ರಹಿಸಲಾದ ನಿಧಿಯನ್ನು ಮಕ್ಕಳ ಚಿಕಿತ್ಸೆಗೆ ಒದಗಿಸಲಾಗುತ್ತದೆ' ಎಂದು ಫೌಂಡೇಶನ್ ಪ್ರಕಟಣೆಯಲ್ಲಿ ತಿಳಿಸಿದೆ.

## 200 ಹಳ್ಳಿಗಳಲ್ಲಿ ಗುಬ್ಬಚ್ಚಿ ಸಂರಕ್ಷಣಾ ಕಾರ್ಯಕ್ರಮ



ಚೆನ್ನೈ (ಪಿಟಿಐ): ಪ್ರಸಕ್ತ ಸಾಲಿನಡಿ ತಮಿಳುನಾಡು, ಕರ್ನಾಟಕ, ಮಹಾರಾಷ್ಟ್ರ ಹಾಗೂ ಆಂಧ್ರಪ್ರದೇಶದ 200 ಹಳ್ಳಿಗಳಿಗೆ ಗುಬ್ಬಚ್ಚಿಗಳ ಸಂರಕ್ಷಣಾ ಕಾರ್ಯಕ್ರಮವನ್ನು ವಿಸ್ತರಿಸಲು ಟಿವಿಎಸ್ ಮೋಟರ್ ಕಂಪನಿಯ ಶ್ರೀನಿವಾಸನ್ ಸರ್ವಿಸಸ್ ಟ್ರಸ್ಟ್ (ಎಸ್‌ಎಸ್‌ಟಿ) ನಿರ್ಧರಿಸಿದೆ.

ಕಳೆದ ವರ್ಷ ಟ್ರಸ್ಟ್‌ನಿಂದ 100 ಗ್ರಾಮಗಳಲ್ಲಿ ಸಂರಕ್ಷಣಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಮಾರ್ಚ್ 20ರಂದು ವಿಶ್ವ ಗುಬ್ಬಚ್ಚಿ ದಿನವಾಗಿದೆ. ಹಾಗಾಗಿ, ಅವುಗಳ ಉಳಿವಿಗಾಗಿ ಈ ಕಾರ್ಯಕ್ರಮವನ್ನು ವಿಸ್ತರಿಸಲಾಗುತ್ತಿದೆ ಎಂದು ತಿಳಿಸಿದೆ. ಸಂರಕ್ಷಣೆ ಸಂಬಂಧ ಗ್ರಾಮಗಳಲ್ಲಿ ಸಮುದಾಯ ಸಭೆಗಳನ್ನು ನಡೆಸಲಾಗುತ್ತದೆ. ಸ್ಥಳೀಯ ಸ್ವಯಂ ಸೇವಕರು ಮತ್ತು ಸಮುದಾಯದ ಸದಸ್ಯರ ಮೂಲಕ ಸಂರಕ್ಷಣೆ ಬಗ್ಗೆ ಜನರಲ್ಲಿ ಅರಿವು ಮೂಡಿಸಲಾಗುವುದು ಎಂದು ಮಾಹಿತಿ ನೀಡಿದೆ.

'ಗುಬ್ಬಿ ಸಂಕುಲ ಉಳಿಸುವಲ್ಲಿ ಸಮುದಾಯದ ಪಾತ್ರ ಹಿರಿದು. ಹಾಗಾಗಿಯೇ, ಗ್ರಾಮೀಣ ಸಮುದಾಯದ ಸಬಲೀಕರಣದ ಮೂಲಕ ದೀರ್ಘಕಾಲೀನ ಸಂರಕ್ಷಣಾ ಕ್ರಮಗಳನ್ನು ಕೈಗೊಳ್ಳಲು ತೀರ್ಮಾನಿಸಲಾಗಿದೆ' ಎಂದು ಟ್ರಸ್ಟ್ ಅಧ್ಯಕ್ಷ ಸ್ವರಣ್ ಸಿಂಗ್ ತಿಳಿಸಿದ್ದಾರೆ.

### ನಗರದಲ್ಲಿ ಇಂದು

**ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ:** ಅತಿಥಿಗಳು: ರಮ್ಯಾ ಶೇಷಾದ್ರಿ, ರೇಖಾ, ತನುಜಾ ವಿ., ಚೂಡಾಮಣಿ, ಪ್ರಿಯಾಂಕಾ ಉಪೇಂದ್ರ, ರತ್ನಪ್ರಭಾ, ಉಮಾ ರೆಡ್ಡಿ, ಸ್ವಪ್ನ ಜಾಧವ್, ಅಧ್ಯಕ್ಷತೆ: ಪ್ರತೀಕ್ಷ ಕೀರ್ತನ್, ಆಯೋಜನೆ ಮತ್ತು ಸ್ಥಳ: ಸೌಂದರ್ಯ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಆ್ಯಂಡ್ ಸೈನ್ಸ್, ಬೆಳಿಗ್ಗೆ 10

ಪ್ರಿಯಾಂಕಾ

**'ಶ್ರೀಕೃಷ್ಣ ಸಂಧಾನ' ಪೌರಾಣಿಕ ನಾಟಕ ಪ್ರದರ್ಶನ:** ಆಯೋಜನೆ: ವಿನಾಯಕ ಕಲಾ ಬಳಗ ಟ್ರಸ್ಟ್, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 10.30

**'ನೀರು ನಿರ್ವಹಣೆ' ಕುರಿತು ಕಾರ್ಯಾಗಾರ:** 'ಜಲ ನಿರ್ವಹಣೆ ಪ್ರಸ್ತುತ ಮತ್ತು ಭವಿಷ್ಯದ ಸವಾಲುಗಳ' ಸಂವಾದ: ಕೆ. ಶ್ರೀಧರ್ ರಾವ್, ಅಜಿತ್ ಹನುಮಕ್ಕನವರ್, ಜೈರಾಜ್ ಕೆ., ಭಾಷಣಕಾರರು: ಬಿ.ಕೆ. ಚಂದ್ರಶೇಖರ್, ಸುರೇಶ್ ಹೆಬ್ಳೀಕರ್, ಎಚ್‌ಎಸ್‌ಎಂ ಪ್ರಕಾಶ್, ಎಂ.ಎಂ. ಸ್ವಾಮಿ, ಎನ್. ಆರ್. ರಮೇಶ್, ಬಿ.ಸಿ. ಪ್ರಭಾಕರ್, ಸಿ.ಎಸ್. ಪಾಟೀಲ್, ನಾಗರಾಜ ಶರ್ಮ, ವಿಶ್ವನಾಥ್, ಕೆ.ಎನ್. ರಾಧಿಕಾ, ಫರೀದುದ್ದೀನ್, ಪ್ರಭಾಕರ್ ಸಂಗೂರಮಠ್, ಎಚ್.ಕೆ. ರಾಮರಾಜು, ಆಯೋಜನೆ: ಪಬ್ಲಿಕ್ ರಿಲೇಷನ್ಸ್ ಕೌನ್ಸಿಲ್ ಆಫ್ ಇಂಡಿಯಾ, ಸ್ಥಳ: ಕೆಎಸ್‌ಎಲ್‌ಟಿಎ, ಕಬ್ಬನ್ ಉದ್ಯಾನ, ಮಧ್ಯಾಹ್ನ 3ರಿಂದ

**ಭಜನ ಸಂಧ್ಯಾ:** ಪ್ರಸ್ತುತಿ: ಬದ್ರಿನಾಥ್ ಧಾಮ್, ಅತಿಥಿಗಳು: ಐ.ಎಸ್. ಪ್ರಸಾದ್, ರಿಚಾ ಖಂಡೇಲವಾಲ್ ಭಟ್, ಆಯೋಜನೆ: ನಾರಾಯಣ ಆರ್ಟ್ ನಿರ್ಭರ್ ಭಾರತ್ ಫೌಂಡೇಷನ್, ಸ್ಥಳ: ವಾಸವಿ ವಿದ್ಯಾನಿಕೇತನ ಕಾಲೇಜಿನ ಸಭಾಂಗಣ, ವಿಶ್ವೇಶ್ವರಪುರ, ಸಂಜೆ 6ರಿಂದ

**ರತಿ-ಮನ್ಮಥರ ಕಲ್ಯಾಣೋತ್ಸವ:** ಆಯೋಜನೆ ಮತ್ತು ಸ್ಥಳ: ಕಾಮಣ್ಣನ ಗುಡಿ ಸೇವಾ ಸಮಿತಿ ಟ್ರಸ್ಟ್, ಅರಳೇಪೇಟೆ (ಕಾಟನ್‌ಪೇಟೆ), ಸಂಜೆ 6.30

**'ಸದೃಢ ಭಾರತಕ್ಕಾಗಿ ಯುವಜನರ ಪಾತ್ರ' ಕುರಿತು ಉಪನ್ಯಾಸ:** ಪೂರ್ಣಿಮಾ ಜೋಗಿ, ಅತಿಥಿ: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘದ ಸಭಾಂಗಣ, ಹೊಂಬೇಗೌಡನಗರ, ಸಂಜೆ 6.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
**nagaradalli_indu@prajavani.co.in**

**ಭರತನಾಟ್ಯ ಪ್ರದರ್ಶನ:** ಪ್ರಸ್ತುತಿ: ಐಕ್ಯಂ ನೃತ್ಯ ಶಾಲೆಯ ವಿದ್ಯಾರ್ಥಿಗಳಿಂದ, ನಿರ್ದೇಶನ: ಅನಘಾ ಪ್ರಕಾಶ್, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಜಯನಗರ 5ನೇ ಬಡಾವಣೆ, ಸಂಜೆ 6.30

**ಡಾ. ಗಿರೀಶ ಕಾರ್ನಾಡರ ರಾಜ್ಯಮಟ್ಟದ ನಾಟಕೋತ್ಸವ:** 'ಯಯಾತಿ' ನಾಟಕ ಪ್ರದರ್ಶನ: ಪ್ರಸ್ತುತಿ: ಪ್ರಸ್ತುತಿ: ರಂಗ ಹೆಜ್ಜೆ, ನಿರ್ದೇಶನ: ರಾಮಮೂರ್ತಿ ಐ.ಟಿ.ಐ, ಸ್ಥಳ: ಕಲಾಗ್ರಾಮ, ಮಲತ್ತಹಳ್ಳಿ, ಸಂಜೆ 7.10

## ಅಲಯನ್ಸ್ ವಿ.ವಿ: ಇಡಿ ಪ್ರಕರಣ ರದ್ದು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಹಣ ದುರ್ಬಳಕೆ ತಡೆ ಕಾಯ್ದೆ (ಪಿಎಂಎಲ್ಎ) ಅಡಿ ಅಲಯನ್ಸ್ ವಿಶ್ವವಿದ್ಯಾಲಯದ ಮಾಜಿ ಕುಲಪತಿ ಮಧುಕರ್ ಜಿ.ಅಂಗೂರ್ ವಿರುದ್ಧ ಜಾರಿ ನಿರ್ದೇಶನಾಲಯ (ಇ–ಡಿ) ದಾಖಲಿಸಿದ್ದ ಪ್ರಕರಣವನ್ನು ಹೈಕೋರ್ಟ್ ರದ್ದುಪಡಿಸಿದೆ.

ಈ ಸಂಬಂಧ ಮಧುಕರ್ ಅಂಗೂರ್ ಅವರು ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಸ್. ವಿಶ್ವಜಿತ್ ಶೆಟ್ಟಿ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಾನ್ಯ ಮಾಡಿದ್ದು, 'ಅಗತ್ಯ ಎನಿಸಿದರೆ ಜಾರಿ ನಿರ್ದೇಶನಾಲಯ ಸುಪ್ರೀಂ ಕೋರ್ಟ್ ಮುಂದೆ ಈ ಸಂಬಂಧ ಮರು ಪರಿಶೀಲನಾ ಅರ್ಜಿ ಸಲ್ಲಿಸಿ ಅರ್ಜಿಯನ್ನು ಪುನಃ ಪರಿಗಣಿಸುವಂತೆ ಕೋರಲು ಸ್ವತಂತ್ರವಿದೆ' ಎಂದು ತಿಳಿಸಿದೆ.

'ಪ್ರಕರಣದ ದಾಖಲೆಗಳನ್ನು ಪರಿಶೀಲಿಸಿದರೆ, ಭಾರತೀಯ ದಂಡ ಸಂಹಿತೆಯ ಕಲಂ 120ಬಿ ಆರೋಪವೊಂದನ್ನು ಹೊರತು-ಪಡಿಸಿದಂತೆ ಇತರೆ ಆರೋಪಗಳು ಪಿಎಂಎಲ್ಎ ಕಾಯ್ದೆಯ ಷೆಡ್ಯೂಲ್ಡ್ ಅಪರಾಧಗಳ ಪಟ್ಟಿಯಲ್ಲಿ ಬರುವುದಿಲ್ಲ' ಎಂಬ ಅಭಿಪ್ರಾಯ-ದೊಂದಿಗೆ ನ್ಯಾಯಪೀಠ ಪ್ರಕರಣ ರದ್ದುಗೊಳಿಸಿದೆ.

### ಕೇಂದ್ರ ರೇಷ್ಮೆ ಮಂಡಳಿ ಜಂಕ್ಷನ್‌ನಲ್ಲಿ ನಿರ್ಮಾಣಗೊಳ್ಳಲಿದೆ ಸ್ವಯಂಚಾಲಿತ ಸ್ಕೈವಾಕ್

# ಮೆಟ್ರೊ ನಿಲ್ದಾಣದಲ್ಲಿ ಟ್ರಾವೆಲೇಟರ್

• ಬಾಲಕೃಷ್ಣ ಪಿ.ಎಚ್.

**ಬೆಂಗಳೂರು:** ಅಂತರರಾಷ್ಟ್ರೀಯ ವಿಮಾನ ನಿಲ್ದಾಣಗಳಲ್ಲಿ ಇರುವಂತೆ ಇದೇ ಮೊದಲ ಬಾರಿಗೆ ಮೆಟ್ರೊ ನಿಲ್ದಾಣಗಳ ನಡುವೆ ಎತ್ತರಿಸಿದ ಸ್ವಯಂಚಾಲಿತ ಪಾದಚಾರಿ ಮಾರ್ಗವನ್ನು(ಸ್ಕೈವಾಕ್ ಟ್ರಾವೆಲೇಟರ್) ನಿರ್ಮಿಸಲಾಗುತ್ತಿದೆ.

ಕೇಂದ್ರ ರೇಷ್ಮೆ ಮಂಡಳಿ (ಸಿಎಸ್‌ಬಿ) ಜಂಕ್ಷನ್‌ನಲ್ಲಿರುವ 'ನಮ್ಮ ಮೆಟ್ರೊ' ಹಳದಿ ಮಾರ್ಗದ ನಿಲ್ದಾಣ ಮತ್ತು ನಿರ್ಮಾಣಗೊಳ್ಳುತ್ತಿರುವ ನೀಲಿ ಮಾರ್ಗದ ನಿಲ್ದಾಣಗಳ ನಡುವೆ ಟ್ರಾವೆಲೇಟರ್ ನಿರ್ಮಿಸಲಾಗುತ್ತಿದೆ. ಈ ಎರಡು ನಿಲ್ದಾಣಗಳ ನಡುವೆ 250 ಮೀಟರ್ ಅಂತರ ಇದೆ. ಒಂದು ನಿಲ್ದಾಣದಿಂದ ಇನ್ನೊಂದು ನಿಲ್ದಾಣಕ್ಕೆ ನಡೆದುಕೊಂಡು ಹೋಗಲು ತುಸು ದೂರವಾಗುವುದರಿಂದ ಸ್ಕೈವಾಕ್ ಟ್ರಾವೆಲೇಟರ್ ಅಳವಡಿಸುವ ಯೋಜನೆಯನ್ನು ಬಿಎಂಆರ್‌ಸಿಎಲ್ ರೂಪಿಸಿದೆ.

ಆರ್.ವಿ. ರಸ್ತೆ–ಬೊಮ್ಮಸಂದ್ರ ನಡುವಿನ ಹಳದಿ ಮಾರ್ಗದಲ್ಲಿ ಮೆಟ್ರೊ ನಿಲ್ದಾಣ ಕಾಮಗಾರಿ ಪೂರ್ಣಗೊಂಡಿದೆ. ರೈಲು ಸಂಚಾರದ ಪರೀಕ್ಷೆಗಳೂ ನಡೆಯುತ್ತಿವೆ. ಈ ವರ್ಷದ ಅಂತ್ಯದ ಒಳಗೆ ರೈಲು ಸಂಚಾರ ಆರಂಭ-ಗೊಳ್ಳಲಿದೆ. ಕಸ್ತೂರಿನಗರದ ರೇಷ್ಮೆ ಮಂಡಳಿಯಿಂದ ದೇವನಹಳ್ಳಿ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಸಂಪರ್ಕಿಸುವ ನೀಲಿ ಮಾರ್ಗದ ಕಾಮಗಾರಿಗಳು ನಡೆಯುತ್ತಿದ್ದು, ಎರಡು ವರ್ಷಗಳ ಒಳಗೆ ಸಂಚಾರಕ್ಕೆ ತೆರೆದುಕೊಳ್ಳಲಿದೆ.

ಎರಡೂ ಮಾರ್ಗಗಳಲ್ಲಿ ಸಂಚಾರ ಶುರುವಾದಾಗ ಟ್ರಾವೆಲೇಟರ್ ಕೂಡ ಆರಂಭಗೊಳ್ಳಲಿದೆ. ಎರಡೂ ನಿಲ್ದಾಣಗಳ ನಡುವಿನ ಪ್ರಮುಖ ಕೊಂಡಿಯಾಗಿ ಸ್ಕೈವಾಕ್ ಟ್ರಾವೆಲೇಟರ್ ಕೆಲಸ ಮಾಡಲಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದರು.



ಕೇಂದ್ರ ರೇಷ್ಮೆ ಮಂಡಳಿ ಜಂಕ್ಷನ್‌ನಲ್ಲಿ ನಿರ್ಮಾಣಗೊಳ್ಳುತ್ತಿರುವ ಸ್ಕೈವಾಕ್ ಟ್ರಾವೆಲೇಟರ್

### ಟ್ರಾವೆಲೇಟರ್ ಪ್ರಸ್ತಾವ

ಮಹಾತ್ಮ ಗಾಂಧಿ ರಸ್ತೆಯಲ್ಲಿ (ಎಂ.ಜಿ. ರೋಡ್) ಮೆಟ್ರೊ ನೇರಳೆ ಮಾರ್ಗದ ನಿಲ್ದಾಣವಿದೆ. ಇಲ್ಲೇ ಕಾಳೇನ ಅಗ್ರಹಾರ–ನಾಗವಾರ ಸಂಪರ್ಕಿಸುವ ಗುಲಾಬಿ ಮಾರ್ಗವು ಹಾದು ಹೋಗುತ್ತಿದ್ದು, ಪಕ್ಕದಲ್ಲಿಯೇ ಗುಲಾಬಿ ಮಾರ್ಗದ ನಿಲ್ದಾಣವು ನಿರ್ಮಾಣಗೊಳ್ಳುತ್ತಿದೆ. ನೇರಳೆ ಮತ್ತು ಗುಲಾಬಿ ಮಾರ್ಗಗಳ ನಿಲ್ದಾಣಗಳ ನಡುವೆ ಟ್ರಾವೆಲೇಟರ್ ನಿರ್ಮಾಣ ಮಾಡಬೇಕು ಎಂಬ ಪ್ರಸ್ತಾವ ಇದೆ. ಅಲ್ಲಿ ಎರಡು ನಿಲ್ದಾಣಗಳ ನಡುವೆ ಭೂಗತ ಪಾದಚಾರಿ ಮಾರ್ಗ ಇರಲಿದೆ.

ಇದೇ ಗುಲಾಬಿ ಮಾರ್ಗದಲ್ಲಿ ನ್ಯೂ ಬಂಬೂಬಜಾರ್ ಮೆಟ್ರೊ ನಿಲ್ದಾಣದಿಂದ ಕಂಟೋನ್ಮೆಂಟ್ ರೈಲು ನಿಲ್ದಾಣದವರೆಗೆ 1 ಕಿ.ಮೀ. ಅಂತರವಿದೆ. ಇಲ್ಲಿ ಟ್ರಾವೆಲೇಟರ್ ನಿರ್ಮಿಸಬೇಕು ಎಂಬ ಪ್ರಸ್ತಾವವೂ ಇದೆ. ಜಾಗದ ಕೊರತೆ ಮತ್ತು ತಾಂತ್ರಿಕ ಕಾರಣಗಳಿಂದ ಟ್ರಾವೆಲೇಟರ್ ಸೌಲಭ್ಯ ಒದಗಿಸುವುದು ಕಷ್ಟವಾಗಬಹುದು. ಪಾದಚಾರಿ ಮೇಲ್ಸೇತುವೆ ನಿರ್ಮಿಸುವ ಯೋಜನೆ ಇದೆ. ಆದರೂ, ಟ್ರಾವೆಲೇಟರ್ ಅಗತ್ಯದ ಕುರಿತು ಬಿಎಂಆರ್‌ಸಿಎಲ್ ಅಧ್ಯಯನ ನಡೆಸಲಿದೆ ಎಂದು ತಾಂತ್ರಿಕ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

**ಏನಿದು ಟ್ರಾವೆಲೇಟರ್?:** ಮಾಲ್‌ಗಳಲ್ಲಿ, ರೈಲು, ಮೆಟ್ರೊ ನಿಲ್ದಾಣಗಳಲ್ಲಿ ಹತ್ತಿ ಇಳಿಯಲು ಎಸ್ಕಲೇಟರ್‌ಗಳಿರುತ್ತವೆ. ಇದೇ ಮಾದರಿಯಲ್ಲಿ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಹೋಗಲು ಸ್ಕೈವಾಕ್ ಟ್ರಾವೆಲೇಟರ್ ನಿರ್ಮಿಸಲಾಗುತ್ತದೆ. ಅದರ ಮೇಲೆ ಪ್ರಯಾಣಿಕರು ನಿಂತುಕೊಂಡರೆ ಸ್ವಯಂ ಚಾಲಿತವಾಗಿ ಮುಂದಕ್ಕೆ ಚಲಿಸುತ್ತದೆ. ವಿಮಾನ ನಿಲ್ದಾಣಗಳಲ್ಲಿ ಅಂತರ ಹೆಚ್ಚಿರುವ ಟರ್ಮಿನಲ್‌ಗಳ ನಡುವೆ ಸ್ಕೈವಾಕ್ ಟ್ರಾವೆಲೇಟರ್ ಅಳವಡಿಸಿರುತ್ತಾರೆ. ಅದೇ ವ್ಯವಸ್ಥೆಯನ್ನು ಮೆಟ್ರೊ ನಿಲ್ದಾಣದಲ್ಲೂ ಅಳವಡಿಸಲಾಗುತ್ತಿದೆ ಎಂದು 'ನಮ್ಮ ಮೆಟ್ರೊ' ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ ಯಶವಂತ್ ಚವಾಣ್ 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

## ಅಸಭ್ಯವಾಗಿ ತುರಿಸಿಕೊಂಡ ಭದ್ರತಾ ಸಿಬ್ಬಂದಿ ಅಮಾನತು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಮೆಟ್ರೊ ನಿಲ್ದಾಣದಲ್ಲಿ ಮಹಿಳೆಯರ ಮುಂದೆ ಅಸಭ್ಯವಾಗಿ ತುರಿಸಿಕೊಂಡ ಆರೋಪದ ಮೇಲೆ ಮೆಟ್ರೊ ಭದ್ರತಾ ಸಿಬ್ಬಂದಿಯನ್ನು ಬಿಎಂಆರ್‌ಸಿಎಲ್ ಅಧಿಕಾರಿಗಳು ಅಮಾನತು ಮಾಡಿದ್ದಾರೆ.

ಜಾಲಹಳ್ಳಿ ಮೆಟ್ರೊ ನಿಲ್ದಾಣದಲ್ಲಿ ಭಾನುವಾರ ಮೆಟ್ರೊ ರೈಲಿಗೆ ಕಾಯುತ್ತಾ ನಿಂತಿದ್ದ ವೇಳೆ ಎದುರಿನ ಪ್ಲಾಟ್‌ಫಾರ್ಮ್‌ನಲ್ಲಿದ್ದ ಭದ್ರತಾ ಸಿಬ್ಬಂದಿ ಅಸಭ್ಯವಾಗಿ ಕೆರೆದುಕೊಂಡಿ-ದ್ದಾರೆ ಎಂದು ಮಹಿಳೆಯೊಬ್ಬರು ದೂರು ನೀಡಿದ್ದರು. ಈ ದೂರಿನ ಆಧಾರದ ಮೇಲೆ ಸಿಬ್ಬಂದಿಯನ್ನು ಅಮಾನತು ಮಾಡಲಾಗಿದೆ. ಪ್ರಕರಣದ ಕುರಿತು ಮುಂದಿನ ತನಿಖೆ ನಡೆಸಲಾಗುವುದು ಎಂದು ಬಿಎಂಆರ್‌ಸಿಎಲ್ ಸಾರ್ವಜನಿಕ ಸಂಪರ್ಕಾಧಿಕಾರಿ ತಿಳಿಸಿದ್ದಾರೆ.

## ನಾಯಂಡಹಳ್ಳಿ: ರೈಲು ತಾತ್ಕಾಲಿಕ ನಿಲುಗಡೆ ಮುಂದುವರಿಕೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಇಲ್ಲಿನ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ನಿಲ್ದಾಣ ಮತ್ತು ಮೈಸೂರು ನಿಲ್ದಾಣಗಳ ನಡುವೆ ಸಂಚರಿಸುವ ಮೆಮು ವಿಶೇಷ ರೈಲುಗಳಿಗೆ ನಾಯಂಡಹಳ್ಳಿಯಲ್ಲಿ ತಾತ್ಕಾಲಿಕ ನಿಲುಗಡೆ ವ್ಯವಸ್ಥೆಯನ್ನು ಆರು ತಿಂಗಳು ಮುಂದುವರಿಸಲು ನೈರುತ್ಯ ರೈಲ್ವೆ ನಿರ್ಧರಿಸಿದೆ.

ಈ ತಾತ್ಕಾಲಿಕ ನಿಲುಗಡೆ ವ್ಯವಸ್ಥೆ ಮಾರ್ಚ್ 21ರಿಂದ ಸೆಪ್ಟೆಂಬರ್ 20ರವರೆಗೆ ಮುಂದುವರಿಯಲಿದೆ.

**ಸಂಚಾರ ಅವಧಿ ವಿಸ್ತರಣೆ:** ಬೆಳಗಾವಿ-ಭದ್ರಾಚಲಂ ರೋಡ್ ವಿಶೇಷ ಎಕ್ಸ್‌ಪ್ರೆಸ್ ರೈಲು ಮಾ.30ರಿಂದ ಏಪ್ರಿಲ್ 30ರವರೆಗೆ, ಭದ್ರಾಚಲಂ ರೋಡ್-ಬೆಳಗಾವಿ ವಿಶೇಷ ಎಕ್ಸ್‌ಪ್ರೆಸ್ ರೈಲು ಸಂಚಾರವನ್ನು ಏಪ್ರಿಲ್ 30ರಿಂದ ಮೇ 1ರವರೆಗೆ ವಿಸ್ತರಿಸಲಾಗಿದೆ.

### ಜಲಮಂಡಳಿಯಿಂದ ನೀರು ಉಳಿಸುವ ಹೊಸ ತಂತ್ರಜ್ಞಾನಗಳ ಅರಿವು

# ಮಳೆ ಸಂಗ್ರಹ: ಪ್ಲಂಬರ್‌ಗಳಿಗೆ ಗುರಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಪ್ರತಿಯೊಬ್ಬರೂ ಆರು ಕಟ್ಟಡಗಳಿಗೆ ಮಳೆ ಸಂಗ್ರಹ ಪದ್ಧತಿ ಅಳವಡಿಸಬೇಕು ಎಂದು ಪ್ಲಂಬರ್‌ಗಳಿಗೆ ಜಲಮಂಡಳಿ ಗುರಿ ನಿಗದಿ ಪಡಿಸಿದೆ.

ಜಲಮಂಡಳಿಯ ನೋಂದಾಯಿತ ಪ್ಲಂಬರ್‌ಗಳಿಗೆ ನೀರು ಉಳಿಸುವ ಹೊಸ ತಂತ್ರಜ್ಞಾನಗಳ ಬಗ್ಗೆ ಕಾರ್ಯಾಗಾರ ನಡೆಸಿದ ಅಧ್ಯಕ್ಷ ಡಾ. ರಾಮ್‌ಪ್ರಸಾತ್ ಮನೋಹರ್, 'ಮಳೆ ನೀರು ಸಂಗ್ರಹ ಹಾಗೂ ಮರುಪೂರಣಕ್ಕೆ ಪ್ಲಂಬರ್‌ಗಳು ಆದ್ಯತೆ ನೀಡಬೇಕು. ನಿಯಮಗಳ ಅನುಸಾರ ಕಟ್ಟಡಗಳಲ್ಲಿ ಅಗತ್ಯ ವ್ಯವಸ್ಥೆ ಮಾಡಿಸಿಕೊಳ್ಳುವಂತೆ ಜನರ ಮನವೊಲಿಸಬೇಕು' ಎಂದು ಹೇಳಿದರು.

'ಅಂತರ್ಜಲ ಕುಸಿತದಿಂದ ನಗರದಲ್ಲಿ ನೀರಿನ ಕೊರತೆ ಉಂಟಾಗಿದೆ. ನೀರಿನ ಸಂರಕ್ಷಣೆ ಹಾಗೂ ಉಳಿತಾಯದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲು ನಮ್ಮೊಂದಿಗೆ ಕೈಜೋಡಿಸಬೇಕು' ಎಂದು ಕರೆ ನೀಡಿದರು.

'ಎರಡು ಕೊಡ ಕುಡಿಯುವ ನೀರಿಗಾಗಿ ನನ್ನ ತಾಯಿ ಪಡುತ್ತಿದ್ದ ಕಷ್ಟ ಇನ್ನೂ ನೆನಪಿದೆ. ನಗರದ ವ್ಯಾಪ್ತಿಯಲ್ಲಿ ಕುಡಿಯುವ ನೀರಿಗೆ ಯಾವುದೇ ಕೊರತೆ ಇಲ್ಲ. ಆದರೆ, ಜನರ ಅಜಾಗರೂಕತೆ ಹಾಗೂ ನಿರ್ಲಕ್ಷ್ಯದಿಂದ ಬಹಳಷ್ಟು ಶುದ್ಧ ನೀರು ಚರಂಡಿ ಪಾಲಾಗುತ್ತಿದೆ. 1,000 ಲೀಟರ್ ನೀರನ್ನು ಬೆಂಗಳೂರಿನ ಮನೆಗಳಿಗೆ ಸರಬರಾಜು ಮಾಡಲು ಜಲಮಂಡಳಿಗೆ ಸುಮಾರು ₹95 ವೆಚ್ಚ-ವಾಗುತ್ತದೆ. ಆದರೆ ನಾವು ರಿಯಾಯಿತಿ ದರವಾದ ₹45ಕ್ಕೆ ಒದಗಿಸುತ್ತಿದ್ದೇವೆ' ಎಂದರು.

'ಜಲಮಂಡಳಿಯ 11 ಸಾವಿರ ಕೊಳವೆಬಾವಿಗಳನ್ನು ಸುಸ್ಥಿಯಲ್ಲಿಡುವುದು ನಮ್ಮ ಪ್ರಮುಖ ಆದ್ಯತೆ. ಕಡಿಮೆ ನೀರು ದೊರೆಯುತ್ತಿರುವ ಕೊಳವೆಬಾವಿ ಹಾಗೂ ಬತ್ತಿ ಹೋಗಿರುವ ಕೊಳವೆಬಾವಿಗಳನ್ನು ಅಂತರ್ಜಲ ಮರುಪೂರಣಕ್ಕೆ ಬಳಸ-ಲಾಗುತ್ತದೆ. ಇದಕ್ಕಾಗಿ ಜಲಮಂಡಳಿಯ ಅಧಿಕಾರಿಗಳು ಆಯಾ ವಲಯಗಳ ಪ್ಲಂಬರ್‌ಗಳನ್ನು ಗುರುತಿಸಿ ಕೆಲಸ ವಹಿಸಬೇಕು' ಎಂದು ಸೂಚನೆ ನೀಡಿದರು.

ಜಯನಗರದ ಸರ್ ಎಂ. ವಿಶ್ವೇಶ್ವರಯ್ಯ ಮಳೆ ನೀರು ಸುಗ್ಗಿ ಕೇಂದ್ರದಲ್ಲಿ ಜಲಮಂಡಳಿ ಬುಧವಾರ ಆಯೋಜಿಸಿದ್ದ ವಿಶೇಷ ತರಬೇತಿ ಕಾರ್ಯಾಗಾರದಲ್ಲಿ ಅಧ್ಯಕ್ಷ ಡಾ. ರಾಮ್‌ಪ್ರಸಾತ್ ಮನೋಹರ್ ಮಾತನಾಡಿದರು

### ಹೋಳಿಹಬ್ಬ: ರೈನ್ ಡ್ಯಾನ್ಸ್‌ಗೆ ನೀರಿಲ್ಲ

'ಹೋಳಿ ಹಬ್ಬದ ಸಂದರ್ಭದಲ್ಲಿ ಮನೋರಂಜನೆಗಾಗಿ ವಾಣಿಜ್ಯ ಉದ್ದೇಶದಿಂದ ಆಯೋಜಿಸುವಂತಹ ರೈನ್ ಡ್ಯಾನ್ಸ್, ಪೂಲ್ ಡ್ಯಾನ್ಸ್‌ಗಳಿಗೆ ಕಾವೇರಿ ನೀರು ಹಾಗೂ ಕೊಳವೆಬಾವಿ ನೀರು ಬಳಸಬಾರದು' ಎಂದು ಜಲಮಂಡಳಿ ಅಧ್ಯಕ್ಷ ಡಾ. ರಾಮ್‌ಪ್ರಸಾತ್ ಮನೋಹರ್ ಸೂಚಿಸಿದ್ದಾರೆ.

'ಹೋಳಿ ಹಬ್ಬ ಸಾಂಸ್ಕೃತಿಕ ಆಚರಣೆಯ ಹಬ್ಬ. ನಾಗರಿಕರು ತಮ್ಮ ಮನೆಗಳಲ್ಲಿ, ವಾಸಸ್ಥಳಗಳಲ್ಲಿ ಆಚರಿಸುವುದಕ್ಕೆ ಯಾವುದೇ ಅಭ್ಯಂತರ ಇಲ್ಲ, ನಿಷೇಧವೂ ಇಲ್ಲ. ಆದರೆ, ವಾಣಿಜ್ಯ ಉದ್ದೇಶಕ್ಕಾಗಿ ರೈನ್ ಡ್ಯಾನ್ಸ್, ಪೂಲ್ ಡ್ಯಾನ್ಸ್ ಆಯೋಜಿಸುವುದು ಸಮಂಜಸವಲ್ಲ' ಎಂದು ಅವರು-ಹೇಳಿದ್ದಾರೆ.

### ಬಿಬಿಎಂಪಿ ಸಿವಿಲ್ ಎಂಜಿನಿಯರ್ ಹುದ್ದೆಗಳ ನೇಮಕ ವಿಳಂಬ

# ಕೆಪಿಎಸ್‌ಸಿಗೆ ಹೈಕೋರ್ಟ್ ನೋಟಿಸ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿನ (ಬಿಬಿಎಂಪಿ) ಸಹಾಯಕ ಸಿವಿಲ್ ಎಂಜಿನಿಯರ್ ಹುದ್ದೆಗಳ ನೇಮಕಾತಿ ವಿಳಂಬದ ಆರೋಪಕ್ಕೆ ಸಂಬಂಧಿಸಿದಂತೆ ಕರ್ನಾಟಕ ಲೋಕಸೇವಾ ಆಯೋಗಕ್ಕೆ (ಕೆಪಿಎಸ್‌ಸಿ) ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ನಗರದಲ್ಲಿನ ಅಕ್ರಮ ಕಟ್ಟಡಗಳನ್ನು ತೆರವುಗೊಳಿಸುವುದಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಹಾಗೂ ಬಿಬಿಎಂಪಿಗೆ ಅಗತ್ಯ ನಿರ್ದೇಶನ ನೀಡುವ ನಿಟ್ಟಿನಲ್ಲಿ ಹೈಕೋರ್ಟ್ ಸ್ವಯಂ ಪ್ರೇರಿತವಾಗಿ ದಾಖಲಿಸಿಕೊಂಡಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಪ್ರಕರಣದ ಅಮಿಕಸ್ ಕ್ಯೂರಿಯೊ (ಕೋರ್ಟ್‌ಗೆ ಸಹಕರಿಸುವ ವಕೀಲ) ಆದ ಹಿರಿಯ ವಕೀಲ ಪ್ರಮೋದ್ ಎನ್. ಕಠಾವಿ, 'ಎಂಜಿನಿಯರ್ ಹುದ್ದೆಗಳನ್ನು ಕಾಲಮಿತಿಯೊಳಗೆ ಭರ್ತಿ ಮಾಡುವಂತೆ ಹೈಕೋರ್ಟ್ ನಿರ್ದೇಶಿಸಿತ್ತು. ಆದರೆ, ಬಿಬಿಎಂಪಿ ನೇಮಕಾತಿ ಮಾಡಿದೆಯೋ ಅಥವಾ ಇಲ್ಲವೋ ಎಂಬುದು ಇನ್ನೂ ತಿಳಿದು ಬಂದಿಲ್ಲ' ಎಂದು ನ್ಯಾಯಪೀಠಕ್ಕೆ ಅರುಹಿದರು.

ಇದಕ್ಕೆ ಬಿಬಿಎಂಪಿ ಪರ ವಕೀಲ ಎಸ್.ಎಚ್. ಪ್ರಶಾಂತ್, '92 ಸಿವಿಲ್ ಎಂಜಿನಿಯರ್ ಹುದ್ದೆಗಳನ್ನು ಭರ್ತಿ ಮಾಡಲು ಕೆಪಿಎಸ್‌ಸಿಗೆ ಬಿಬಿಎಂಪಿ ಕೋರಿಕೆ ಸಲ್ಲಿಸಿದೆ. ನೇಮಕಾತಿಗೆ ಅರ್ಜಿ ಆಹ್ವಾನಿಸಿ ಕೆಪಿಎಸ್‌ಸಿ ಇದೇ 13ರಂದು ಅಧಿಸೂಚನೆಯನ್ನೂ ಹೊರಡಿಸಿದೆ' ಎಂದು ನ್ಯಾಯಪೀಠಕ್ಕೆ ವಿವರಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರು, 'ಎಂಜಿನಿಯರ್ ಹುದ್ದೆಗಳ ನೇಮಕಾತಿ ಮಾಡುವಂತೆ ನಿರ್ದೇಶಿಸಿ ಹೈಕೋರ್ಟ್ 2023ರ ಅಕ್ಟೋಬರ್ 9ರಂದೇ ಖಡಕ್ ಆದೇಶ ನೀಡಿದೆ. ಆದರೆ, ಬಿಬಿಎಂಪಿ ಬಳಿ ಅಧಿಸೂಚನೆ ಇಲ್ಲ ಎಂದು ಹೇಳುತ್ತಿದ್ದೀರಿ. ಅಧಿಸೂಚನೆ ಸೇರಿದಂತೆ ಎಲ್ಲಾ ವಿವರಗಳನ್ನು ಕೋರ್ಟ್‌ಗೆ ಸಲ್ಲಿಸಬೇಕು. ಸಲ್ಲಿಸದೆ ಹೋದರೆ ಕೋರ್ಟ್ ಆದೇಶದ ಮೇಲೆ ಆದೇಶ ಹೊರಡಿಸುತ್ತಾ ಹೋಗುತ್ತಿರುತ್ತದೆ. ಅದರಿಂದ ನ್ಯಾಯಾಲಯದ ಸಮಯ ವ್ಯರ್ಥವಾಗುತ್ತಾ ಹೋಗುತ್ತದೆ' ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಇದಕ್ಕೆ ಉತ್ತರಿಸಿದ ಪ್ರಶಾಂತ್, 'ಹೈಕೋರ್ಟ್ ಆದೇಶ ಹೊರಡಿಸಿದ ಬೆನ್ನಲ್ಲೇ ಕೆಪಿಎಸ್‌ಸಿಗೆ ಬಿಬಿಎಂಪಿ ಮಾಹಿತಿ ನೀಡಿತ್ತು. ಅಂತೆಯೇ ಕೆಪಿಎಸ್‌ಸಿ ಕೂಡ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಿ ಅಧಿಸೂಚನೆ ಹೊರಡಿಸಿದೆ. ನೇಮಕಾತಿ ಪ್ರಕ್ರಿಯೆಯನ್ನು ಇನ್ನೂ ನಡೆಸಬೇಕಿದೆ. ಆದಾಗ್ಯೂ, ಕೆಪಿಎಸ್‌ಸಿ ಈ ಅರ್ಜಿಯಲ್ಲಿ ಪ್ರತಿವಾದಿಯಾಗಿಲ್ಲ. ಹಾಗಾಗಿ, ನಮಗಿರುವ ಮಾಹಿತಿಯನ್ನು ಮಾತ್ರವೇ ನ್ಯಾಯಪೀಠಕ್ಕೆ ವಿವರಿಸಿದ್ದೇನೆ' ಎಂದು ಸಮಜಾಯಿಷಿ ನೀಡಿದರು.

ಇದನ್ನು ಪರಿಗಣಿಸಿದ ನ್ಯಾಯಪೀಠ, 'ಅರ್ಜಿಯಲ್ಲಿ ಕೆಪಿಎಸ್‌ಸಿಯನ್ನೂ ಪ್ರತಿವಾದಿಯಾಗಿ ಮಾಡಿ' ಎಂದು ಆದೇಶಿಸಿ ಕೆಪಿಎಸ್‌ಸಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿತು. ಅಲ್ಲದೆ, ಈ ಹಿಂದೆ ಹೈಕೋರ್ಟ್ ನೀಡಿರುವ ಆದೇಶ ಪಾಲನೆಯ ನಿಟ್ಟಿನಲ್ಲಿ ಕೈಗೊಂಡಿರುವ ಕ್ರಮಗಳ ಕುರಿತು ಸಮಗ್ರ ಮಾಹಿತಿ ನೀಡಬೇಕು' ಎಂದು ಕೆಪಿಎಸ್‌ಸಿಗೆ ನಿರ್ದೇಶಿಸಿ ವಿಚಾರಣೆ ಮುಂದೂಡಿತು.

**ಯಾವ ಆದೇಶ?:** 'ಅಕ್ರಮ ಕಟ್ಟಡಗಳನ್ನು ಗುರುತಿಸಿ ಹಾಗೂ ತೆರವು ಕಾರ್ಯಾಚರಣೆ ಕೈಗೊಳ್ಳಲು ಎಂಜಿನಿಯರ್ ಸೇರಿದಂತೆ ಇತರೆ ಸಿಬ್ಬಂದಿಯ ಅಗತ್ಯವಿದೆ. ಈ ನಿಟ್ಟಿನಲ್ಲಿ 100 ಸಹಾಯಕ ಸಿವಿಲ್ ಎಂಜಿನಿಯರ್ ಹುದ್ದೆಗಳ ಭರ್ತಿ ಮಾಡುವಂತೆ ಕೆಪಿಎಸ್‌ಸಿ ಕಾರ್ಯದರ್ಶಿಗೆ ಪತ್ರ ಬರೆಯಲಾಗಿದೆ' ಎಂಬ ಬಿಬಿಎಂಪಿಯ ವಿವರಣೆಯನ್ನು ನ್ಯಾಯಪೀಠ 2023ರ ಅಕ್ಟೋಬರ್ 9ರಂದು ನಡೆದ ವಿಚಾರಣೆ ಸಂದರ್ಭದಲ್ಲಿ ಗಂಭೀರವಾಗಿ ಪರಿಗಣಿಸಿತ್ತು.

ಈ ವಿವರಣೆಯನ್ನು ಆಧರಿಸಿ, 'ಸಿವಿಲ್ ಎಂಜಿನಿಯರಿಂಗ್ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯನ್ನು ಆರು ತಿಂಗಳಲ್ಲಿ ಪೂರ್ಣಗೊಳಿಸಿ' ಎಂದು ಬಿಬಿಬಿಎಂಪಿ ಹಾಗೂ ಕೆಪಿಎಸ್‌ಸಿಗೆ ನಿರ್ದೇಶಿಸಿತ್ತು.

## 108 ಸಿಬ್ಬಂದಿ: 3 ತಿಂಗಳ ವೇತನ ಪಾವತಿಗೆ ಆಗ್ರಹ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 108 ಆರೋಗ್ಯ ಕವಚ ಯೋಜನೆ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಯ ಮೂರು ತಿಂಗಳ ವೇತನ ಬಿಡುಗಡೆಗೊಳಿಸುವಂತೆ ಸುವರ್ಣ ಕರ್ನಾಟಕ ಆರೋಗ್ಯ ಕವಚ (108) ನೌಕರರ ಸಂಘ ಆಗ್ರಹಿಸಿದೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಬೆಂಗಳೂರು ಜಿಲ್ಲಾ ಘಟಕದ ಅಧ್ಯಕ್ಷ ಶಂಕರ, 'ಆರೋಗ್ಯ ಕವಚ ಯೋಜನೆ ಅಡಿಯಲ್ಲಿ ಕೆಲಸ ಮಾಡುವ ಸಿಬ್ಬಂದಿಗೆ ಕಳೆದ ಮೂರು–ನಾಲ್ಕು ವರ್ಷಗಳಿಂದ ಸಮಯಕ್ಕೆ ಸರಿಯಾಗಿ ವೇತನ ಪಾವತಿಸುತ್ತಿಲ್ಲ. ಇದರಿಂದ ಜೀವನ ನಡೆಸುವುದೇ ದುಸ್ತರವಾಗಿದೆ. ಕೂಡಲೇ ಆರೋಗ್ಯ ಇಲಾಖೆಯ ಸಚಿವರು ಸಭೆ ನಡೆಸಿ ವೇತನ ಬಿಡುಗಡೆ ಕ್ರಮ ಕೈಗೊಳ್ಳಬೇಕು' ಎಂದು ಒತ್ತಾಯಿಸಿದರು.

'ಇತ್ತೀಚೆಗೆ ಆರೋಗ್ಯ ಇಲಾಖೆಯ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ 108 ಸಿಬ್ಬಂದಿಗೆ ತಿಂಗಳಿಗೆ ₹36,008 ಕನಿಷ್ಠ ವೇತನ ನಿಗದಿಪಡಿಸ-ಲಾಗಿತ್ತು. ಅದರಂತೆ ಆರು ತಿಂಗಳ ಕಾಲ ವೇತನವೂ ಪಾವತಿ ಆಗಿದೆ. ನಂತರ ₹6 ಸಾವಿರ ಕಡಿತಗೊಳಿಸಿ, ₹30 ಸಾವಿರ ವೇತನ ಮಾತ್ರ ಪಾವತಿಸಲಾಗುತ್ತಿದೆ' ಎಂದು ದೂರಿದರು.

'ಸರ್ಕಾರ ಮತ್ತು ಜಿ.ವಿ.ಕೆ. ಸಂಸ್ಥೆಯ ಒಪ್ಪಂದದ ಪ್ರಕಾರ ಪ್ರತಿವರ್ಷ ವೇತನ ಪರಿಷ್ಕರಣೆ ಮಾಡಬೇಕು. ಆದರೆ, ಇದುವರೆಗೂ ವೇತನ ಪರಿಷ್ಕರಣೆ ಮಾಡಿಲ್ಲ. 10 ದಿನಗಳೊಳಗೆ ಈ ಬೇಡಿಕೆಗಳನ್ನು ಈಡೇರಿಸಬೇಕು. ಇಲ್ಲದಿದ್ದರೆ ಮುಷ್ಕರ ಹಮ್ಮಿಕೊಳ್ಳಲಾಗುವುದು' ಎಂದು ಎಚ್ಚರಿಕೆ ನೀಡಿದರು.

## 'ಕೆಲಸದ ಒತ್ತಡದಿಂದ ಖಿನ್ನತೆ ಸಾಧ್ಯತೆ'

### ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅಭಿಮತ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಅತಿಯಾದ ಕೆಲಸದ ಒತ್ತಡದಿಂದ ಯುವಜನರು ಖಿನ್ನತೆಯಂತಹ ಸಮಸ್ಯೆಗೆ ಒಳಗಾಗು-ತ್ತಿದ್ದಾರೆ. ದೈಹಿಕ ಆರೋಗ್ಯದ ಜತೆಗೆ ಮಾನಸಿಕ ಆರೋಗ್ಯಕ್ಕೂ ಹೆಚ್ಚಿನ ಆದ್ಯತೆ ನೀಡಬೇಕು' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ತಿಳಿಸಿದರು.

ಬಿಇಎಲ್ ಲೇಔಟ್ ಬಳಿ ನಿರ್ಮಿಸಲಾಗಿರುವ ಸುಕೂನ್ ಮಾನಸಿಕ ಆರೋಗ್ಯ ಕೇಂದ್ರವನ್ನು ನಗರದಲ್ಲಿ ಬುಧವಾರ ಉದ್ಘಾಟಿಸಿ, ಮಾತನಾಡಿದರು. 'ಯುವಜನರಲ್ಲಿ ಮಾನಸಿಕ ಸಮಸ್ಯೆಗಳು ಕಾಣಿಸಿಕೊಳ್ಳುತ್ತಿವೆ. ಇದಕ್ಕೆ ಕೆಲಸದ ಒತ್ತಡ ಪ್ರಮುಖ ಕಾರಣ ಎಂದು ಹೇಳಿದರು.

ಒತ್ತಡದ ಜೀವನದಲ್ಲಿ ಕೆಲವರು ಮಾನಸಿಕವಾಗಿ ತಮ್ಮ ಸ್ಥಿಮಿತ ಕಳೆದುಕೊಳ್ಳುವ ಸಾಧ್ಯತೆಯೂ ಇರುತ್ತದೆ. ಖಿನ್ನತೆಯಿಂದ ಜೀವಕ್ಕೆ ಕುತ್ತು ತಂದುಕೊಳ್ಳುವ ಅಪಾಯವೂ ಇದೆ' ಎಂದು ಅವರು ಕಳವಳ ವ್ಯಕ್ತಪಡಿಸಿದರು.

'ಮಾನಸಿಕ ಆರೋಗ್ಯಕ್ಕೆ ಹೆಚ್ಚಿನ ಆದ್ಯತೆ ನೀಡಲು ಕ್ರಮ ಕೈಗೊಳ್ಳಲಾಗಿದೆ. ನಿಮ್ಹಾನ್ಸ್ ಸಂಸ್ಥೆಯ ಸಹಯೋಗದಲ್ಲಿ ರಾಜ್ಯದ 33 ಸರ್ಕಾರಿ ಆಸ್ಪತ್ರೆಗಳಲ್ಲಿ ಮಿದುಳು ಆರೋಗ್ಯ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ. ಮುಂದಿನ ದಿನಗಳಲ್ಲಿ ನಿಮ್ಹಾನ್ಸ್ ಮಾನಸಿಕ ಆರೋಗ್ಯದ ಹಬ್ ಆಗಿ ಪರಿವರ್ತನೆಗೊಳ್ಳಲಿದೆ' ಎಂದು ಹೇಳಿದರು.

ಮನೋವೈದ್ಯ ಡಾ.ಸತೀಶ್ ರಾಮಯ್ಯ ಅವರು, 'ಮಾನಸಿಕ ಅನಾರೋಗ್ಯ ಸಮಸ್ಯೆಗಳನ್ನು ಗುರುತಿಸಿ, ಗುಣಮಟ್ಟದ ಚಿಕಿತ್ಸೆ ಒದಗಿಸುವ ಉದ್ದೇಶದಿಂದ ನೂತನ ಕೇಂದ್ರವನ್ನು ಆರಂಭಿಸಲಾಗಿದೆ' ಎಂದು ತಿಳಿಸಿದರು.

## ಜಕ್ಕೂರು: ಗ್ರಾಮದೇವರ ವಾರ್ಷಿಕೋತ್ಸವ

ಪ್ರಜಾವಾಣಿ ವಾರ್ತೆ

**ಯಲಹಂಕ:** ಬ್ಯಾಟರಾಯನಪುರ ಕ್ಷೇತ್ರ ವ್ಯಾಪ್ತಿಯ ಜಕ್ಕೂರು ಗ್ರಾಮದಲ್ಲಿ ಗ್ರಾಮೋತ್ಸವ ಸೇವಾ ಸಮಿತಿ ಆಶ್ರಯದಲ್ಲಿ ಸಫಲಮ್ಮ, ಮುನೇಶ್ವರ ಸ್ವಾಮಿ, ಮಹೇಶ್ವರಮ್ಮ ಮತ್ತು ಉಭಯ ಮಾರಮ್ಮ ದೇವರ 22ನೇ ವಾರ್ಷಿಕೋತ್ಸವ ಸಮಾರಂಭ 5 ದಿನ ವಿಜೃಂಭಣೆಯಿಂದ ನೆರವೇರಿತು.

ಗ್ರಾಮದ ಮನೆಗಳಿಂದ ದೇವರಿಗೆ ತಂಬಿಟ್ಟು ಸಮರ್ಪಿಸಲಾಯಿತು. ವಿವಿಧ ಬಗೆಯ ಹೂವುಗಳು ಮತ್ತು ವಿದ್ಯುತ್ ದೀಪಗಳಿಂದ ಅಲಂಕರಿಸಿದ್ದ ಪಲ್ಲಕ್ಕಿಗಳಲ್ಲಿ ದೇವರ ವಿಗ್ರಹಗಳನ್ನು ಕೂರಿಸಿ, ಮಂಗಳವಾರ ಸಂಜೆ 4 ಗಂಟೆಗೆ ಜಕ್ಕೂರು ವೃತ್ತದಿಂದ ಆರಂಭವಾದ ಮೆರವಣಿಗೆಯು ಪ್ರಮುಖ ಬೀದಿಗಳಲ್ಲಿ ಸಂಚರಿಸಿ, ರಾತ್ರಿ 10 ಗಂಟೆಗೆ ಕೊನೆಗೊಂಡಿತು. ಭಕ್ತರು ಹಣ್ಣು, ಕಾಯಿ ಸಮರ್ಪಿಸಿ ದರ್ಶನ ಪಡೆದರು. ಮೆರವಣಿಗೆಯುದ್ದಕ್ಕೂ ತಮಟೆ, ಬ್ಯಾಂಡ್ ತಂಡ ಸೇರಿ ವಿವಿಧ ವಾದ್ಯವೃಂದಗಳ ಪ್ರದರ್ಶನ ಗಮನ ಸೆಳೆಯಿತು. ಬುಧವಾರ ಮಡಿಲಕ್ಕಿ ಕಟ್ಟುವ ಕಾರ್ಯ ನೆರವೇರಿಸಿ ದೇವರುಗಳನ್ನು ಬೀಳ್ಕೊಡುವ ಮೂಲಕ ವಾರ್ಷಿಕೋತ್ಸವಕ್ಕೆ ಸಂಭ್ರಮದ ತೆರೆಬಿದ್ದಿತು.

ಜಕ್ಕೂರು ಗ್ರಾಮದಲ್ಲಿ ಸಫಲಮ್ಮ, ಮುನೇಶ್ವರಸ್ವಾಮಿ, ಮಹೇಶ್ವರಮ್ಮ ಮತ್ತು ಉಭಯ ಮಾರಮ್ಮ ದೇವರ 22ನೇ ವಾರ್ಷಿಕೋತ್ಸವ ನಡೆಯಿತು.

## ನೆರೆ ಮನೆ ದಂಪತಿ ಸರಸದ ಕಿರಿಕಿರಿ!

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಪಕ್ಕದ ಮನೆ ದಂಪತಿ ಮಲಗುವ ಕೋಣೆಯ ಕಿಟಕಿ ತೆರೆದು ಸರಸ ಸಲ್ಲಾಪದಲ್ಲಿ ತೊಡಗುತ್ತಿದ್ದು, ಇದರಿಂದ ತಮಗೆ ತುಂಬಾ ಕಿರಿಕಿರಿಯಾ-ಗುತ್ತಿದೆ' ಎಂಬ ದೂರೊಂದು ಗಿರಿನಗರ ಪೊಲೀಸ್ ಠಾಣೆಯಲ್ಲಿ ದಾಖಲಾಗಿದೆ.

ಆವಲಹಳ್ಳಿ ಬಿಡಿಎ ಲೇಔಟ್‌ನ 44 ವರ್ಷದ ಮಹಿಳೆ ದೂರು ನೀಡಿದ್ದು, ಪೊಲೀಸರು ಎಫ್‌ಐಆರ್ ದಾಖಲು ಮಾಡಿಕೊಂಡಿದ್ದಾರೆ.

**ದೂರಿನಲ್ಲಿ ಏನಿದೆ?:** 'ಪಕ್ಕದ ಮನೆಯ ಎರಡನೇ ಮಹಡಿಯಲ್ಲಿ ದಂಪತಿ ನೆಲೆಸಿದ್ದಾರೆ. ನಮ್ಮ ಮನೆಯ ಎದುರಿಗೇ ಅವರ ಮಲಗುವ ಕೋಣೆಯಿದ್ದು, ಕಿಟಕಿ ತೆರೆದು ಸರಸ ಸಲ್ಲಾಪದಲ್ಲಿ ತೊಡಗಿರುತ್ತಾರೆ. ಕಿಟಕಿ ಹಾಕಿಕೊಳ್ಳುವಂತೆ ದಂಪತಿಯಲ್ಲಿ ಮನವಿ ಮಾಡಿದ್ದೆವು. ಆದರೆ, ಅವರು ನಮ್ಮ ಕುಟುಂಬದ ಸದಸ್ಯರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ, ಅತ್ಯಾಚಾರ ಎಸಗುವ ಹಾಗೂ ಕೊಲೆ ಮಾಡುವ ಬೆದರಿಕೆ ಹಾಕಿದ್ದಾರೆ. ದಂಪತಿಯೊಂದಿಗೆ ಮನೆ ಮಾಲೀಕರೂ ಸೇರಿಕೊಂಡು ಹಲ್ಲೆಗೆ ಯತ್ನಿಸಿದ್ದರು' ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

## ಚಿನ್ನಸ್ವಾಮಿ ಕ್ರೀಡಾಂಗಣಕ್ಕೆ ಸಂಸ್ಕರಿಸಿದ ನೀರು– ಜಲಮಂಡಳಿ ಸಮ್ಮತಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಚಿನ್ನಸ್ವಾಮಿ ಕ್ರೀಡಾಂಗಣಕ್ಕೆ ಸಂಸ್ಕರಿಸಿದ ನೀರು ಒದಗಿಸಲು ಅಗತ್ಯ ಕ್ರಮ ಕೈಗೊಳ್ಳಲಾಗು-ತ್ತದೆ ಎಂದು ಜಲಮಂಡಳಿ ಅಧ್ಯಕ್ಷ ಡಾ. ರಾಮ್‌ಪ್ರಸಾತ್ ಮನೋಹರ್ ತಿಳಿಸಿದರು.

ಮುಂಬರುವ ಐಪಿಎಲ್ ಕ್ರಿಕೆಟ್ ಪಂದ್ಯಾವಳಿಗಳಿಗೆ ಅನುಕೂಲವಾಗುವಂತೆ ಸಂಸ್ಕರಿಸಿದ ನೀರನ್ನು ಚಿನ್ನಸ್ವಾಮಿ ಕ್ರೀಡಾಂಗಣಕ್ಕೆ ಒದಗಿಸಲು ಕೋರಿ ಕೆಎಸ್‌ಸಿಎ ಆಡಳಿತ ಮಂಡಳಿಯ ಪದಾಧಿಕಾರಿಗಳು ಜಲಮಂಡಳಿಯ ಅಧ್ಯಕ್ಷ ರಾಮ್‌ಪ್ರಸಾತ್ ಮನೋಹರ್ ಅವರನ್ನು ಬುಧವಾರ ಭೇಟಿ ಮಾಡಿ ಮನವಿ ಮಾಡಿದರು.

ಪಂದ್ಯಾವಳಿಗಳ ಸಂದರ್ಭದಲ್ಲಿ ಪ್ರತಿನಿತ್ಯ ಸುಮಾರು 75 ಸಾವಿರ ಲೀಟರ್ ನೀರಿನ ಅಗತ್ಯವಿದೆ. ಇದಕ್ಕಾಗಿ ಕಬ್ಬನ್ ಪಾರ್ಕ್ ತ್ಯಾಜ್ಯ ನೀರು ಸಂಸ್ಕರಣ ಘಟಕದಿಂದ ಅಗತ್ಯ ನೀರನ್ನು ದೊರಕಿಸಿ ಕೊಡುವಂತೆ ಪದಾಧಿಕಾರಿಗಳು ಕೇಳಿದರು.

ಇದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿದ ಜಲಮಂಡಳಿ ಅಧ್ಯಕ್ಷರು, 'ಸಂಸ್ಕರಿಸಿದ ನೀರನ್ನು ಬಳಸಲು ಉತ್ತೇಜನ ನೀಡುವ ದೃಷ್ಟಿಯಿಂದ ಹಾಗೂ ಇದರಿಂದ ಕಾವೇರಿ, ಕೊಳವೆಬಾವಿಯ ನೀರು ದುರ್ಬಳಕೆ ಆಗದೆ ಇರುವುದರಿಂದ ಅಗತ್ಯ ಕ್ರಮ ಕೈಗೊಳ್ಳಲಾಗುತ್ತದೆ' ಎಂದು ತಿಳಿಸಿದರು.

ಆಯೋಗದ ಕುರಿತು ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಬೇಸರ

# ಪಾರದರ್ಶಕತೆ ಇಲ್ಲ, ಕೈಗೊಂಬೆಯಾದ ಅಧಿಕಾರಿಗಳು

ಪ್ರಜಾವಾಣಿ ವಾರ್ತೆ

**ರಾಮನಗರ:** 'ನೀತಿ ಸಂಹಿತೆ ಜಾರಿಯಲ್ಲಿದ್ದರೂ ಕಾಂಗ್ರೆಸ್‌ನಿಂದ ರಾಜಾರೋಷವಾಗಿ ಮತದಾರರಿಗೆ ಉಡುಗೊರೆ ಹಾಗೂ ಇನ್ನಿತರ ವಸ್ತುಗಳನ್ನು ಹಂಚಲಾಗುತ್ತಿದೆ. ಅಧಿಕಾರಿಗಳು ಸರ್ಕಾರದ ಕೈಗೊಂಬೆಗಳಾಗಿದ್ದು, ರಾಜ್ಯದಲ್ಲಿ ಪಾರದರ್ಶಕವಾಗಿ ಚುನಾವಣೆ ನಡೆಯುತ್ತಿಲ್ಲ. ಚುನಾವಣಾ ಆಯೋಗದ ಕಾರ್ಯವೈಖರಿಯು ಹಲವು ಪ್ರಶ್ನೆ ಮೂಡಿಸಿದೆ' ಎಂದು ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಬೇಸರ ವ್ಯಕ್ತಪಡಿಸಿದರು.

'ರಾಮನಗರದ ವಿ.ಆರ್.ಎಲ್. ಗೋದಾಮಿನಲ್ಲಿ ಸಂಗ್ರಹಿಸಿಟ್ಟಿದ್ದ ₹14 ಲಕ್ಷ ಮೌಲ್ಯದ 3,700 ಸೀರೆ ಹಾಗೂ ಡ್ರೆಸ್ ಮೆಟೀರಿಯಲ್‌ಗಳನ್ನು ಜೆಡಿಎಸ್–ಬಿಜೆಪಿ ಕಾರ್ಯಕರ್ತರು ಹಿಡಿದು ಕೊಟ್ಟಿದ್ದಾರೆ. ಜಿಲ್ಲಾಡಳಿತ ಮತ್ತು ಪೊಲೀಸ್ ಇಲಾಖೆ ಏನು ಮಾಡುತ್ತಿದೆ? ಅಧಿಕಾರಿಗಳು ಮುನ್ನೆಚ್ಚರಿಕೆ ವಹಿಸಿದ್ದರೆ ಇಂತಹ ಘಟನೆ ಸಂಭವಿಸುತ್ತಿರಲಿಲ್ಲ' ಎಂದು ನಗರದ ಜೆಡಿಎಸ್ ಕಚೇರಿಯಲ್ಲಿ ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಸೂರತ್‌ನಿಂದ ಬಂದಿರುವ ಸೀರೆಗಳನ್ನು ರಾಮನಗರ ಶಾಸಕ ಎಚ್.ಎ. ಇಕ್ಬಾಲ್ ಹುಸೇನ್ ಮಾಲೀಕತ್ವದ ಎನ್.ಎಂ. ಗ್ರಾನೈಟ್ಸ್ ಸಂಸ್ಥೆ ತರಿಸಿದೆ. ಗ್ರಾಮಾಂತರ ಕ್ಷೇತ್ರದಲ್ಲಿ ಕಳೆದ ಇಪ್ಪತ್ತು ದಿನಗಳಿಂದಲೂ ಕಾಂಗ್ರೆಸ್‌ನವರು ಕುಕ್ಕರ್ ಹಂಚಿಕೆಯಲ್ಲಿ ತೊಡಗಿದ್ದಾರೆ. ಇದನ್ನು ಅಧಿಕಾರಿಗಳ ಗಮನಕ್ಕೆ ತಂದರೂ ಪ್ರಯೋಜನವಾಗಿಲ್ಲ. ಈ ಬಗ್ಗೆ ಆಯೋಗಕ್ಕೆ ದೂರು ಸಲ್ಲಿಸಿ, ಪಾರದರ್ಶಕ ಚುನಾವಣೆಗೆ ಒತ್ತಾಯಿಸುತ್ತೇವೆ' ಎಂದರು.

**ಅಧಿಕಾರ ದುರುಪಯೋಗ:** 'ಗ್ರಾಮಾಂತರ ಕ್ಷೇತ್ರದಲ್ಲಿ ಅಧಿಕಾರ ದುರುಪಯೋಗ ದೊಡ್ಡ ಮಟ್ಟದಲ್ಲಿ ನಡೆಯುತ್ತಿದೆ. ಬಿಜೆಪಿ ಮತ್ತು ಜೆಡಿಎಸ್ ಕಾರ್ಯಕರ್ತರ ಮನೆಗೆ ಕಾಂಗ್ರೆಸ್‌ನವರು ರಾತ್ರಿ ಹೋಗಿ ಹಣದ ಆಮಿಷವೊಡ್ಡಿ ಖರೀದಿಸುತ್ತಿದ್ದಾರೆ. ಹೋಗಲು ನಿರಾಕರಿಸಿದವರಿಗೆ ಪ್ರಕರಣ ದಾಖಲಿಸುವ ಬೆದರಿಕೆಯೊಡ್ಡುತ್ತಿದ್ದಾರೆ' ಎಂದು ಆರೋಪಿಸಿದರು.

'ಕುಮಾರಸ್ವಾಮಿ ಅವರು ಕ್ಷೇತ್ರವನ್ನು ನಾಲ್ಕು ಸಲ ಪ್ರತಿನಿಧಿಸಿ ಮುಖ್ಯಮಂತ್ರಿಯಾಗಿದ್ದರೂ, ಚುನಾವಣೆ ಸಂದರ್ಭದಲ್ಲಿ ಈ ರೀತಿ ಎಂದಿಗೂ ಅಧಿಕಾರ ದುರುಪಯೋಗ ಮಾಡಿಕೊಂಡಿರಲಿಲ್ಲ. ದೇವೇಗೌಡರ ಕುಟುಂಬದ ಕುಡಿಯಾದ ನಾನೆಂದೂ ಅಂತಹ ರಾಜಕೀಯ ಮಾಡಿಲ್ಲ. ಹಾಗೇನಾದರೂ ಮಾಡಿದ್ದರೆ ಕ್ಷೇತ್ರಕ್ಕೆ ಕಾಲಿಡುತ್ತಿರಲಿಲ್ಲ' ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

'ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ನವರು ರಾತ್ರೋರಾತ್ರಿ ಗಿಫ್ಟ್ ಕಾರ್ಡ್ ಹಂಚಿದ್ದರಿಂದ ನಾನು ಸೋತೆ. ಮುಗ್ಧ ಜನರನ್ನು ಯಾಮಾರಿಸಿ ಮತ ಪಡೆದು, ಯುವಕನಾದ ನನ್ನನ್ನು ಬಲಿಪಶು ಮಾಡಿದರು. ಇದೀಗ ಮತ್ತೆ ಮತದಾರರಿಗೆ ಗಿಫ್ಟ್ ಹಂಚಲಾಗುತ್ತಿದೆ. ನನ್ನಂತೆ ಡಾ.ಸಿ.ಎನ್. ಮಂಜುನಾಥ್ ಅವರಿಗೆ ಆಗಬಾರದು. ಜಿಲ್ಲಾಡಳಿತ ಮತ್ತು ಚುನಾವಣಾ ಆಯೋಗ ಇಂತಹದ್ದಕ್ಕೆ ಅವಕಾಶವಿಲ್ಲದಂತೆ ಪಾರದರ್ಶಕವಾಗಿ ಕೆಲಸ ಮಾಡಬೇಕು' ಎಂದರು.

ರಾಮನಗರದಲ್ಲಿ ಬುಧವಾರ ಸುದ್ದಿಗೋಷ್ಠಿ ನಡೆಸಿದ ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರು, ನಗರದಲ್ಲಿ ವಶಪಡಿಸಿಕೊಂಡ ಸೀರೆ ಮತ್ತು ಡ್ರೆಸ್ ಪೀಸ್‌ಗಳ ಫೋಟೊ ಪ್ರದರ್ಶಿಸಿದರು

## 'ಮಂಜುನಾಥ್ ಕುಗ್ಗಿಸುವ ಯತ್ನ'

'ಡಾ. ಮಂಜುನಾಥ್ ಅವರ ವಿರುದ್ಧ ಕಾಂಗ್ರೆಸ್ ಶಾಸಕರು ಲಘುವಾಗಿ ಮಾತನಾಡುವ ಮೂಲಕ, ಅವರನ್ನು ಮಾನಸಿಕವಾಗಿ ಕುಗ್ಗಿಸಲು ಯತ್ನಿಸುತ್ತಿದ್ದಾರೆ. ಮಾಗಡಿ ಶಾಸಕರು 'ತೆವಲು' ಎನ್ನುವ ಪದ ಬಳಸಿದ್ದಾರೆ. ಅವರಿಗೆ ಅದರರ್ಥ ಗೊತ್ತಿಲ್ಲವೆನಿಸುತ್ತದೆ. ರಾಮನಗರ ಶಾಸಕರು, 'ಮಂಜುನಾಥ್ ಅವರು ಯಾಕೆ ರಾಜಕೀಯಕ್ಕೆ ಬರಬೇಕು? ಅವರಿಗೆ ರಾಜಕೀಯದ ಗಂಧ–ಗಾಳಿ ಗೊತ್ತಿಲ್ಲ' ಎಂದಿದ್ದಾರೆ. ಅವರಿಬ್ಬರ ರಾಜಕೀಯ ಯಾವ ತರಹದ್ದು ಎಂಬುದು ಗೊತ್ತಿದೆ. ಅಲ್ಲದೆ, ಇದೆಲ್ಲಾ ಹೆಚ್ಚು ದಿನ ನಡೆಯುವುದಿಲ್ಲ' ಎಂದು ನಿಖಿಲ್ ಕುಮಾರಸ್ವಾಮಿ ವಾಗ್ದಾಳಿ ನಡೆಸಿದರು.

> **ನಾನು ಮಂಡ್ಯದಲ್ಲಿ ಸ್ಪರ್ಧಿಸಿದರೆ, ಒಂದು ಕ್ಷೇತ್ರಕ್ಕಷ್ಟೇ ಸೀಮಿತವಾಗಬೇಕಾಗುತ್ತದೆ. ಉಳಿದ ಕ್ಷೇತ್ರಗಳ ಕಡೆಗೆ ಗಮನ ಹರಿಸಲು ಸಾಧ್ಯವಾಗಲ್ಲ. ಪಕ್ಷ ಸಂಘಟನೆ ಯನ್ನು ಪ್ರಾಮಾಣಿಕವಾಗಿ ಮಾಡಿಕೊಂಡು ಹೋಗುವೆ**
> **ನಿಖಿಲ್ ಕುಮಾರಸ್ವಾಮಿ,** ಅಧ್ಯಕ್ಷ, ಜೆಡಿಎಸ್ ಯುವ ಘಟಕ

'ಸೀಟು ಹಂಚಿಕೆ ವಿಳಂಬದಿಂದ ಜೆಡಿಎಸ್ ಕಾರ್ಯಕರ್ತರು ಭ್ರಮನಿರಸನಗೊಂಡಿಲ್ಲ. ಮಂಡ್ಯ, ಹಾಸನ ಜೊತೆಗೆ ಕೋಲಾರವೂ ಜೆಡಿಎಸ್‌ಗೆ ಸಿಗಲಿದೆ. ಹಿಂದೆ ಸ್ವತಂತ್ರವಾಗಿ ಗೆದ್ದಿರುವ ಸಂಸದೆ ಸುಮಲತಾ ಅಂಬರೀಷ್ ಅವರು ಬಿಜೆಪಿ ಟಿಕೆಟ್ ಆಕಾಂಕ್ಷಿಯಾಗಿದ್ದಾರೆ. ಅವರನ್ನು ಸಹ ವಿಶ್ವಾಸಕ್ಕೆ ತೆಗೆದುಕೊಂಡು ಹೋಗುತ್ತೇವೆ' ಎಂದು ಹೇಳಿದರು.

## ಸುದ್ದಿ 2 ನಿಮಿಷ

### ರಾಹುಲ್ 'ಶಕ್ತಿ' ಹೇಳಿಕೆ: ದೂರು

**ನವದೆಹಲಿ:** ಕಾಂಗ್ರೆಸ್‌ನ 'ಭಾರತ ಜೋಡೊ ನ್ಯಾಯ ಯಾತ್ರೆ' ಸಮಾರೋಪ ಸಭೆಯಲ್ಲಿ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ನೀಡಿದ್ದ 'ನಾವು ಶಕ್ತಿ ವಿರುದ್ಧ ಹೋರಾಡುತ್ತಿದ್ದೇವೆ' ಎಂಬ ಹೇಳಿಕೆ ವಿರುದ್ಧ ಬಿಜೆಪಿಯು ಚುನಾವಣಾ ಆಯೋಗಕ್ಕೆ ಬುಧವಾರ ದೂರು ನೀಡಿದೆ.

ಕೇಂದ್ರ ಸಚಿವ ಹರ್ದೀಪ್ ಪುರಿ ಮತ್ತು ಪಕ್ಷದ ನಾಯಕ ಓಂ ಮಾಥುರ್ ಅವರು ಈ ದೂರು ನೀಡಿದ್ದಾರೆ. ಹಿಂದೂ ಧರ್ಮದಲ್ಲಿ 'ದುರ್ಗಾ ಮಾತೆ'ಯನ್ನು 'ಶಕ್ತಿ' ಎಂದು ಕರೆಯಲಾಗುತ್ತದೆ. ರಾಹುಲ್ ಅವರು 'ಶಕ್ತಿ' ಕುರಿತು ಮುಂಬೈನಲ್ಲಿ ಭಾನುವಾರ ನೀಡಿದ ಹೇಳಿಕೆಯು ಹಿಂದೂ ಸಮುದಾಯದ ಧಾರ್ಮಿಕ ಭಾವನೆಗೆ ಧಕ್ಕೆ ತಂದಿದೆ ಎಂದು ಅವರು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

### 85 ವರ್ಷ ಮೇಲ್ಪಟ್ಟವರಿಗೆ ಅಂಚೆ ಮತದಾನ

**ಬೆಂಗಳೂರು:** ಬೆಂಗಳೂರು ಉತ್ತರ, ಬೆಂಗಳೂರು ಕೇಂದ್ರ ಹಾಗೂ ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಮತದಾರರ ಪಟ್ಟಿಯಲ್ಲಿರುವ 85 ವರ್ಷಕ್ಕಿಂತ ಮೇಲ್ಪಟ್ಟ ಹಾಗೂ ಶೇ 40ಕ್ಕಿಂತ ಹೆಚ್ಚಿನ ಅಂಗವೈಕಲ್ಯವುಳ್ಳವರಿಗೆ ಅಂಚೆ ಮತದಾನಕ್ಕೆ ಅವಕಾಶ ಕಲ್ಪಿಸಲಾಗಿದೆ.

ಚುನಾವಣೆ ಅಧಿಕಾರಿಗಳು ಅಂಚೆ ಮತದಾನ ಮಾಡುವವರ ಮನೆಗಳಿಗೆ ಭೇಟಿ ನೀಡಿ ಮಾಹಿತಿಯನ್ನು ಪಡೆದುಕೊಳ್ಳಲಿದ್ದಾರೆ. ಚುನಾವಣಾ ಅಧಿಸೂಚನೆಯ ನಂತರ ಐದು ದಿನಗಳೊಳಗೆ ಭರ್ತಿಮಾಡಿದ ದೃಢೀಕೃತ 12ಡಿ ನಮೂನೆಯನ್ನು ಸಂಬಂಧಪಟ್ಟ ಚುನಾವಣಾಧಿಕಾರಿಗೆ ಸಲ್ಲಿಸಬೇಕಾಗಿರುತ್ತದೆ ಎಂದು ಜಿಲ್ಲಾ ಚುನಾವಣಾಧಿಕಾರಿ ತುಷಾರ್ ಗಿರಿನಾಥ್ ತಿಳಿಸಿದ್ದಾರೆ.

85 ವರ್ಷಕ್ಕಿಂತ ಮೇಲ್ಪಟ್ಟ ಹಾಗೂ ಶೇ 40ಕ್ಕಿಂತ ಹೆಚ್ಚಿನ ಅಂಗವೈಕಲ್ಯವುಳ್ಳವರು ಮತಗಟ್ಟೆಗೆ ತೆರಳಿ ಮತಚಲಾಯಿಸಲೂ ಅವಕಾಶವಿರುತ್ತದೆ. ಆದರೆ, 12ಡಿ ನಮೂನೆ ಸಲ್ಲಿಸಿದ ನಂತರ ಮತಗಟ್ಟೆಯಲ್ಲಿ ಮತ ಚಲಾಯಿಸು ಅವಕಾಶ ಇರುವುದಿಲ್ಲ ಎಂದು ಹೇಳಿದ್ದಾರೆ.

ಚುನಾವಣೆ ಅಧಿಕಾರಿಗಳು ಮನೆಗೆ ಭೇಟಿ ನೀಡಿದ ಸಂದರ್ಭದಲ್ಲಿ 12ಡಿ ನಮೂನೆ ದೃಢೀಕರಿಸಲು ಸಾಧ್ಯವಾಗದಿದ್ದಲ್ಲಿ ಭಾರತ ಚುನಾವಣಾ ಆಯೋಗದ ವೆಬ್‌ಸೈಟ್ https://www.eci.gov.in/ ನಲ್ಲೂ ನಮೂನೆಗಳನ್ನು ಸಲ್ಲಿಸಲು ಅವಕಾಶವಿರುತ್ತದೆ ಎಂದು ಮಾಹಿತಿ ನೀಡಿದ್ದಾರೆ.

## 'ಮಂಡ್ಯ ಬಿಟ್ಟು ಬೇರೆ ಕಡೆ ಸ್ಪರ್ಧಿಸಲ್ಲ'

ಪ್ರಜಾವಾಣಿ ವಾರ್ತೆ

ಸುಮಲತಾ

**ಬೆಂಗಳೂರು:** 'ನಾನು ಏನೇ ರಾಜಕೀಯ ಮಾಡಿದರೂ ಅದು ಮಂಡ್ಯದಲ್ಲಿ. ಇದನ್ನು ವರಿಷ್ಠರಿಗೆ ಹೇಳಿ ಬಂದಿದ್ದೇನೆ. ಬಿಜೆಪಿ ವರಿಷ್ಠರಿಂದ ಸಕಾರಾತ್ಮಕ ಪ್ರತಿಕ್ರಿಯೆ ಸಿಕ್ಕಿದೆ. ಇದೇ 22ರವರೆಗೆ ಕಾಯುವಂತೆಯೂ ಹೇಳಿದ್ದಾರೆ' ಎಂದು ಮಂಡ್ಯ ಸಂಸದೆ ಸುಮಲತಾ ಅಂಬರೀಷ್ ಹೇಳಿದರು.

ದೆಹಲಿಯಿಂದ ವಾಪಸಾದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಬೆಂಗಳೂರು ಉತ್ತರ ಕ್ಷೇತ್ರಕ್ಕೇ ನಾನು ಹೋಗಲಿಲ್ಲ. ಇನ್ನು ಚಿಕ್ಕಬಳ್ಳಾಪುರಕ್ಕೆ ಹೋಗುತ್ತೇನೆಯೇ? ಮಂಡ್ಯ ಕ್ಷೇತ್ರವನ್ನು ಬಿಟ್ಟು ಬೇರೆಲ್ಲೂ ಸ್ಪರ್ಧೆ ಮಾಡುವುದಿಲ್ಲ' ಎಂದು ಸ್ಪಷ್ಟಪಡಿಸಿದರು.

ದೆಹಲಿಗೆ ತೆರಳಿದ್ದ ಸುಮಲತಾ ಬಿಜೆಪಿ ವರಿಷ್ಠರನ್ನು ಭೇಟಿ ಮಾಡಿ ಚರ್ಚಿಸಿದ್ದರು. ಆ ವೇಳೆ, ಚಿಕ್ಕಬಳ್ಳಾಪುರ ಕ್ಷೇತ್ರದಿಂದ ಸ್ಪರ್ಧಿಸುವಂತೆ ಅವರಿಗೆ ಸೂಚಿಸಲಾಗಿತ್ತು ಎಂಬ ಚರ್ಚೆಗಳು ನಡೆದಿದ್ದವು. 'ಚಿಕ್ಕಬಳ್ಳಾಪುರದಲ್ಲಿ ಸ್ಪರ್ಧಿಸಿ ಏನು ಮಾಡಲಿ' ಎಂದು ಸುಮಲತಾ ಪ್ರಶ್ನಿಸಿದ್ದಾರೆ.

# ಕೆಆರ್‌ಎಸ್ ಅಭ್ಯರ್ಥಿಗಳ ಹೆಸರು ಘೋಷಣೆ

## ಬೆಂಗಳೂರು ಕೇಂದ್ರ, ಬೀದರ್, ತುಮಕೂರು ಸೇರಿ 16 ಕ್ಷೇತ್ರಗಳಿಗೆ ಅಖೈರು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷವು(ಕೆಆರ್‌ಎಸ್) ರಾಜ್ಯದ 28 ಲೋಕಸಭಾ ಕ್ಷೇತ್ರಗಳಲ್ಲೂ ತಮ್ಮ ಪಕ್ಷದ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಲು ನಿರ್ಧರಿಸಿದ್ದು, ಇದುವರೆಗೂ 16 ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರು ಘೋಷಿಸಿದೆ.

ಎಸ್.ಕೆ.ಪ್ರಭು (ಶಿವಮೊಗ್ಗ), ರಮೇಶ್ ಚೌಹಾಣ್ (ಬೀದರ್), ನಿರುಪಾದಿ ಗೋಮರ್ಸಿ (ಕೊಪ್ಪಳ), ಗಣಪತಿ ಲಾ. ರಾಠೋಡ್ (ವಿಜಯಪುರ), ಬಿ.ವೆಂಕಟೇಶ್ (ಚಿತ್ರದುರ್ಗ), ಕುಂದಳ್ಳಿ ಮಹೇಶ್ (ಚಾಮರಾಜನಗರ), ಮಹೇಶ್ ಎ.ವಿ. (ಕೋಲಾರ), ಪ್ರಕಾಶ್ ಕೆ. (ಬೆಂಗಳೂರು ಕೇಂದ್ರ), ಶಿವಕುಮಾರ್ ಬಿ.(ಬೆಂಗಳೂರು ಉತ್ತರ), ಪ್ರದೀಪ್ ಕುಮಾರ್ ದೊಡ್ಡಮುದ್ದೇಗೌಡ (ತುಮಕೂರು), ಬಿ.ಜಿ. ಕುಂಬಾರ (ಬೆಳಗಾವಿ), ನಾಗರಾಜ್ ಕರೆಣ್ಣವರ (ಧಾರವಾಡ), ವಿಜಯ್ ಜಾಧವ್ (ಕಲಬುರಗಿ), ಕೆ.ಎಚ್. ರುದ್ರೇಶ್ (ದಾವಣಗೆರೆ), ರಘುಪತಿ ಭಟ್ (ಬೆಂಗಳೂರು ದಕ್ಷಿಣ), ಮಾ.ಸ.ಪ್ರವೀಣ್ (ಮೈಸೂರು–ಕೊಡಗು) ಅವರನ್ನು ಅಭ್ಯರ್ಥಿಗಳನ್ನಾಗಿ ಕಣಕ್ಕೆ ಇಳಿಸಲಾಗುತ್ತಿದೆ ಎಂದು ಪಕ್ಷದ ಪ್ರಕಟಣೆ ತಿಳಿಸಿದೆ.

'ಮೊದಲ ಪಟ್ಟಿಯಲ್ಲಿ 6 ಅಭ್ಯರ್ಥಿಗಳ ಹೆಸರು ಘೋಷಣೆ ಮಾಡಲಾಗಿತ್ತು. 2ನೇ ಹಂತದಲ್ಲಿ 10 ಮಂದಿ ಹೆಸರು ಪ್ರಕಟಿಸಲಾಗಿದೆ. ಉಳಿದ ಕ್ಷೇತ್ರಗಳಿಗೆ ಸದ್ಯದಲ್ಲೇ ಹೆಸರು ಘೋಷಿಸಲಾಗುವುದು' ಎಂದು ಮುಖಂಡರು ತಿಳಿಸಿದ್ದಾರೆ.

### ಆರ್‌ಪಿಐನಿಂದಲೂ ಅಭ್ಯರ್ಥಿಗಳ ಹೆಸರು ಪ್ರಕಟ

**ಬೆಂಗಳೂರು:** ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ–ಅಂಬೇಡ್ಕರ್ (ಆರ್‌ಪಿಐ) ಪಕ್ಷವು ಬುಧವಾರ ರಾಜ್ಯದ 10 ಲೋಕಸಭಾ ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರುಗಳನ್ನು ಪ್ರಕಟಿಸಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಮಹೇಶ ಗೋರನಾಳಕರ್, 'ಕಾಂಗ್ರೆಸ್ ಮತ್ತು ಬಿಜೆಪಿ ಒಂದು ನಾಣ್ಯದ ಎರಡು ಮುಖಗಳಾಗಿವೆ. ಕಾಂಗ್ರೆಸ್ 65 ವರ್ಷಗಳ ಕಾಲ ಆಡಳಿತ ನಡೆಸಿದೆ. ಆದರೆ, ಸಂವಿಧಾನವನ್ನು ಸಂಪೂರ್ಣವಾಗಿ ಜಾರಿಗೊಳಿಸುವಲ್ಲಿ ವಿಫಲವಾಗಿದೆ. ಅದೇ ಮಾರ್ಗದಲ್ಲಿ ಬಿಜೆಪಿ ನಡೆಯುತ್ತಿದ್ದು, ಸಂವಿಧಾನ ಬದಲಾಯಿಸುವ ಮಾತುಗಳನ್ನಾಡುತ್ತಿದೆ. ಆದ್ದರಿಂದ, ಲೋಕಸಭಾ ಚುನಾವಣೆಯಲ್ಲಿ ಅಂಬೇಡ್ಕರ್ ಅವರ ತತ್ವ ಸಿದ್ಧಾಂತಗಳನ್ನು ಪಾಲಿಸುವ ಆರ್‌ಪಿಐ ಪಕ್ಷದ ಅಭ್ಯರ್ಥಿಗಳನ್ನು ಬೆಂಬಲಿಸಿ' ಎಂದು ಹೇಳಿದರು.

**ಅಭ್ಯರ್ಥಿಗಳ ಪಟ್ಟಿ:** 'ಜಿತೇಂದ್ರ ಕಾಂಬ್ಳೆ (ವಿಜಯಪುರ), ಶಂಕರ್ ವೆಂಕಪ್ಪ ನಾಯಕರ್ (ಬಾಗಲಕೋಟೆ), ರಮೇಶ್ ನಾಟೇಕರ್ (ಕಲಬುರಗಿ), ಮಹೇಶ ಗೋರನಾಳಕರ್ (ಬೀದರ್), ತಿಮ್ಮಣ್ಣ ಬಿಲ್ಲವ (ಯಾದಗಿರಿ), ಹೆಬ್ಬಾಳ್ ವೆಂಕಟೇಶ್ (ಬೆಂಗಳೂರು ಉತ್ತರ), ವೆಂಕಟೇಶ್ ಪ್ರಸಾದ್ (ಬೆಂಗಳೂರು ಕೇಂದ್ರ), ಅಂಬಣ್ಣ ಕುಕನೂರ್ (ಕೊಪ್ಪಳ), ಎನ್.ಜೆ. ನರಸಿಂಹಮೂರ್ತಿ (ಕೋಲಾರ), ಸುಲೇಮಾನ್ ಜಮಾದಾರ್(ಬೆಳಗಾವಿ) ಲೋಕಸಭಾ ಕ್ಷೇತ್ರಗಳಲ್ಲಿ ಸ್ಪರ್ಧಿಸಲಿದ್ದಾರೆ' ಎಂದು ಮಾಹಿತಿ ನೀಡಿದರು.

## ಪುಟಿನ್, ಝೆಲೆನ್‌ಸ್ಕಿ ಜೊತೆ ಮೋದಿ ಮಾತುಕತೆ

**ನವದೆಹಲಿ (ಪಿಟಿಐ):** ಪ್ರಧಾನಿ ನರೇಂದ್ರ ಮೋದಿ ಅವರು ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಮತ್ತು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರ ಜತೆ ಪ್ರತ್ಯೇಕವಾಗಿ ದೂರವಾಣಿ ಮೂಲಕ ಮಾತುಕತೆ ನಡೆಸಿದ್ದಾರೆ. ಉಕ್ರೇನ್ ಮತ್ತು ರಷ್ಯಾ ನಡುವಿನ ಸಂಘರ್ಷಕ್ಕೆ ಚರ್ಚೆ ಮತ್ತು ರಾಜತಾಂತ್ರಿಕ ಮಾರ್ಗದ ಮೂಲಕ ವಷ್ಟೇ ಪರಿಹಾರ ಕಂಡುಕೊಳ್ಳಲು ಸಾಧ್ಯ ಎಂದು ಅವರು ಎರಡೂ ದೇಶಗಳ ನಾಯಕರಿಗೆ ಹೇಳಿದ್ದಾರೆ.

ರಷ್ಯಾ ಅಧ್ಯಕ್ಷರಾಗಿ ಪುನರಾಯ್ಕೆಯಾದ ಪುಟಿನ್ ಅವರಿಗೆ ಶುಭಾಶಯ ಕೋರಲು ಪ್ರಧಾನಿ ನರೇಂದ್ರ ಮೋದಿ ಅವರು ಕರೆ ಮಾಡಿದ್ದರು.

## ಪ್ರಚಾರಕ್ಕೆ ರಂಗು...

ಲೋಕಸಭಾ ಚುನಾವಣೆ ಹತ್ತಿರವಾಗುತ್ತಿದ್ದು, ವಿವಿಧ ರಾಜಕೀಯ ಪಕ್ಷಗಳ ಅಭ್ಯರ್ಥಿಗಳ ಪ್ರಚಾರಕ್ಕೆ ರಂಗು ತುಂಬಲು ಮಾರುಕಟ್ಟೆಗೆ ತರಹೇವಾರಿ ಪ್ರಚಾರ ಸಾಮಗ್ರಿಗಳು ಲಗ್ಗೆಯಿಟ್ಟಿವೆ. ಬೆಂಗಳೂರಿನ ಬಳೇಪೇಟೆಯ ಮಳಿಗೆಯಲ್ಲಿ ಬುಧವಾರ ಕಂಡುಬಂದ ವಿವಿಧ ಪಕ್ಷಗಳ ಪ್ರಚಾರ ಪರಿಕರಗಳು

ಪ್ರಜಾವಾಣಿ ಚಿತ್ರ: ರಂಜು ಪಿ.

## ಮತದಾರರಿಗೆ ಸೀರೆ: ವಾಹನ ಪೊಲೀಸರ ವಶಕ್ಕೆ

ಪ್ರಜಾವಾಣಿ ವಾರ್ತೆ

**ರಾಮನಗರ:** ನಗರದ ದ್ಯಾವರಸೇಗೌಡನ ದೊಡ್ಡಿ ರಸ್ತೆಯಲ್ಲಿರುವ ಒಕ್ಕಲಿಗರ ಭವನದಲ್ಲಿರುವ ಖಾಸಗಿ ಗೋದಾಮಿನಲ್ಲಿ ಸೀರೆಗಳು ತುಂಬಿದ್ದ ವಾಹನವನ್ನು ಬಿಜೆಪಿ ಮತ್ತು ಜೆಡಿಎಸ್ ಕಾರ್ಯಕರ್ತರು ಮಂಗಳವಾರ ರಾತ್ರಿ ತಡೆದು ಪೊಲೀಸರಿಗೆ ಒಪ್ಪಿಸಿದ್ದಾರೆ.

ಕಾರ್ಯಕರ್ತರು ವಾಹನ ಹಿಡಿದು ಗೋದಾಮು ಸಿಬ್ಬಂದಿ ಮತ್ತು ವಾಹನದ ಚಾಲಕನನ್ನು ತಡೆದು ವಿಚಾರಿಸಿದರು. ನಂತರ ಪೊಲೀಸರಿಗೆ ಮಾಹಿತಿ ನೀಡಿದರು.

## ಲಂಚ: ಸಿಕ್ಕಿಬಿದ್ದ ತಹಶೀಲ್ದಾರ್

**ಚಿಕ್ಕನಾಯಕನಹಳ್ಳಿ:** ಜಮೀನನ್ನು ಭೂ ಪರಿವರ್ತನೆ ಮಾಡಿಕೊಡಲು ₹30 ಸಾವಿರ ಲಂಚ ಪಡೆಯುತ್ತಿದ್ದ ತಹಶೀಲ್ದಾರ್ ಗೀತಾ ಬುಧವಾರ ರಾತ್ರಿ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ. ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಗೋಡೆಕೆರೆ ಗ್ರಾಮದ ರೈತ ಮಲ್ಲಿಕಾರ್ಜುನ್ ಅವರಿಗೆ ಸೇರಿದ 33 ಗುಂಟೆ ಜಮೀನನ್ನು ಭೂ ಪರಿವರ್ತನೆ ಮಾಡಿಕೊಡಲು ₹3 ಲಕ್ಷ ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಬುಧವಾರ ಬೆಳಿಗ್ಗೆ ₹20 ಸಾವಿರ ಹಣ ಪಡೆದಿದ್ದರು.

ದ್ವೇಷ ಪ್ರಚೋದನೆ ನೀಡಿರುವವರ ವಿರುದ್ಧ ಕ್ರಮಕ್ಕೆ ಆಗ್ರಹ

# ನಗರ್ತಪೇಟೆ: ಆಯೋಗಕ್ಕೆ ದೂರು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಚುನಾವಣೆಯ ಹೊಸ್ತಿಲಲ್ಲಿ ಕೋಮುದ್ವೇಷ ಹೆಚ್ಚಿಸಿ, ಗಲಭೆ ಎಬ್ಬಿಸಲು ನಗರ್ತಪೇಟೆಯಲ್ಲಿ ದ್ವೇಷ ಭಾಷಣ ಮಾಡಿರುವ ಸಂಸದರು, ಶಾಸಕರ ವಿರುದ್ಧ ಕ್ರಮ ಕೈಗೊಳ್ಳುವಂತೆ 'ಜಾಗೃತ ನಾಗರಿಕರು ಕರ್ನಾಟಕ' ಸಂಘಟನೆ ಆಗ್ರಹಿಸಿದೆ.

ಸಂಘಟನೆಯ ಎಸ್.ಜಿ. ಸಿದ್ದರಾಮಯ್ಯ, ಮಾವಳ್ಳಿ ಶಂಕರ್, ದಿನೇಶ್ ಅಮಿನ್ ಮಟ್ಟು, ವಿಮಲಾ ಕೆ.ಎಸ್., ಬಿ. ಶ್ರೀಪಾದ ಭಟ್, ಜಾಣಗೆರೆ ವೆಂಕಟರಾಮಯ್ಯ, ಕಾ.ತ. ಚಿಕ್ಕಣ್ಣ, ಬಂಜಗೆರೆ ಜಯಪ್ರಕಾಶ್, ಟಿ. ಸುರೇಂದ್ರ ರಾವ್, ರವಿಕುಮಾರ್ ಬಾಗಿ, ಎಚ್. ದಂಡಪ್ಪ ಅವರು ಈ ಬಗ್ಗೆ ಚುನಾವಣಾಧಿಕಾರಿಗಳಿಗೆ ದೂರು ನೀಡಿದ್ದಾರೆ.

ನಗರ್ತಪೇಟೆಯ ಅಂಗಡಿಯೊಂದರಲ್ಲಿ ಜಗಳ ನಡೆದಿದ್ದು, ಅಂಗಡಿ ಮಾಲೀಕರು ಹಲಸೂರು ಗೇಟ್ ಪೊಲೀಸ್ ಠಾಣೆಗೆ ನೀಡಿದ ದೂರಲ್ಲಿ ಧಾರ್ಮಿಕ ನೆಲೆಯ ಗಲಾಟೆಗಳ ಕುರಿತ ಅಂಶಗಳಿಲ್ಲ. ಅಂಥ ಯಾವುದೇ ಘಟನೆಗಳು ನಡೆದಿಲ್ಲ ಎಂದು ಪೊಲೀಸರು ಮಾಹಿತಿ ನೀಡಿರುವುದು ಕೂಡ ವರದಿಯಾಗಿದೆ.

ಈ ಘಟನೆಗೆ ಕೋಮು ಬಣ್ಣ ಬಳಿಯಲು ತೇಜಸ್ವಿ ಸೂರ್ಯ ಪ್ರಯತ್ನ ನಡೆಸಿದ್ದಾರೆ. 'ಎಕ್ಸ್' ಪೋಸ್ಟ್‌ನಲ್ಲಿರುವ ಅವರ ಹೇಳಿಕೆಯಲ್ಲಿ ಇದು ಸ್ಪಷ್ಟವಾಗುತ್ತಿದೆ. ನಗರ್ತಪೇಟೆಯಲ್ಲಿ ಹಿಂದೂ ಜಾಗರಣ ವೇದಿಕೆ, ಬಜರಂಗದಳದ ಕಾರ್ಯಕರ್ತರು ಪ್ರತಿಭಟನೆ ನಡೆಸಿದ್ದಾರೆ. ಈ ಪ್ರತಿಭಟನೆಯಲ್ಲಿ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ರಾಜಾಜಿನಗರದ ಶಾಸಕ ಸುರೇಶ್ ಕುಮಾರ್, ಸಂಸದ ತೇಜಸ್ವಿ ಸೂರ್ಯ ಭಾಗವಹಿಸಿದ್ದರು. ದ್ವೇಷ ಭಾಷಣ ಮಾಡಿದ್ದರು. ಧರ್ಮ, ಜಾತಿಗಳ ಹೆಸರಿನಲ್ಲಿ ದ್ವೇಷ, ಹಿಂಸೆ, ಗಲಭೆ ಪ್ರಚೋದಿಸುವ ಶಕ್ತಿಗಳ ಮೇಲೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ತೇಜಸ್ವಿ ಸೂರ್ಯ, ಶೋಭಾ ಕರಂದ್ಲಾಜೆ, ಸುರೇಶ್ ಕುಮಾರ್ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

### ಪೊಲೀಸ್ ಭದ್ರತೆ ಮುಂದುವರಿಕೆ

**ಬೆಂಗಳೂರು:** ಹನುಮಾನ್ ಚಾಲೀಸಾ ಹಾಕಿದ್ದ ವಿಚಾರಕ್ಕೆ ಮೊಬೈಲ್ ಅಂಗಡಿ ಮಾಲೀಕನ ಕೊಲೆಗೆ ಯತ್ನಿಸಿದ್ದ ಪ್ರಕರಣ ಸಂಬಂಧ ಮತ್ತೊಬ್ಬ ಆರೋಪಿಗಾಗಿ ಪೊಲೀಸರು ಕಾರ್ಯಾಚರಣೆ ಮುಂದುವರಿಸಿದ್ದಾರೆ.

ಐವರು ಆರೋಪಿಗಳನ್ನು ಬಂಧಿಸಲಾಗಿದೆ. ಇನ್ನೊಬ್ಬ ಆರೋಪಿ ಹೊರ ರಾಜ್ಯಕ್ಕೆ ಪರಾರಿಯಾಗಿರುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ.

ಹಲ್ಲೆ ಪ್ರಕರಣ ಖಂಡಿಸಿ ಮಂಗಳವಾರ ನಗರ್ತಪೇಟೆಯಲ್ಲಿ ಬಿಜೆಪಿ ಹಾಗೂ ಹಿಂದೂ ಜಾಗರಣಾ ವೇದಿಕೆ ಕಾರ್ಯಕರ್ತರು ಬೃಹತ್ ಪ್ರತಿಭಟನೆ ನಡೆಸಿದ್ದರು. ಅಪಾರ ಸಂಖ್ಯೆಯಲ್ಲಿ ಕಾರ್ಯಕರ್ತರು ಜಮಾಯಿಸಿದ್ದರಿಂದ ಆತಂಕದ ವಾತಾವರಣ ನಿರ್ಮಾಣವಾಗಿತ್ತು.

'ಸ್ಥಳದಲ್ಲಿ ಈಗಲೂ 100ಕ್ಕೂ ಹೆಚ್ಚು ಸಿಬ್ಬಂದಿಯನ್ನು ಭದ್ರತೆಗೆ ನಿಯೋಜಿಸಲಾಗಿದೆ. ಪರಿಸ್ಥಿತಿ ಶಾಂತವಾಗಿದೆ' ಎಂದು ಮೂಲಗಳು ತಿಳಿಸಿವೆ.

## ಸಂಸದ ತೇಜಸ್ವಿ ಸೂರ್ಯ ವಿರುದ್ಧ ಪ್ರಕರಣ ದಾಖಲು

**ಬೆಂಗಳೂರು:** ಸಂಸದ ತೇಜಸ್ವಿ ಸೂರ್ಯ ವಿರುದ್ಧ ಹಲಸೂರು ಗೇಟ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ರಾಜ್ಯ ಚುನಾವಣಾ ಆಯೋಗದ ಸೂಚನೆ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ನಗರ್ತಪೇಟೆಯಲ್ಲಿರುವ ಮೊಬೈಲ್ ಅಂಗಡಿ ಮಾಲೀಕ ಮುಖೇಶ್ ಮೇಲೆ ನಡೆದ ಹಲ್ಲೆ ಖಂಡಿಸಿ ಮಂಗಳವಾರ ಬೃಹತ್ ಪ್ರತಿಭಟನೆ ಆಯೋಜಿಸಲಾಗಿತ್ತು. ಆ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ತೇಜಸ್ವಿ ಸೂರ್ಯ ಅವರು, ಮತೀಯ ಭಾವನೆ ಕೆರಳಿಸುವಂತೆ ದ್ವೇಷ ಭಾಷಣ ಮಾಡಿದ್ದಾರೆ. ಸಮಾಜದಲ್ಲಿ ಶಾಂತಿ ಕದಡುವ ಪ್ರಯತ್ನ ಮಾಡಿದ್ದು, ಅವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಕೋರಿ ಚಿಕ್ಕಪೇಟೆ ನಿವಾಸಿಯೊಬ್ಬರು ಚುನಾವಣಾಧಿಕಾರಿಗೆ ದೂರು ನೀಡಿದ್ದರು.

ಆಯೋಗದ ಸೂಚನೆಯಂತೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

'ತೇಜಸ್ವಿ ಸೂರ್ಯ ಅವರಿಗೆ ನೋಟಿಸ್ ಜಾರಿಗೊಳಿಸಲಾಗುವುದು. ಅಗತ್ಯ ಬಿದ್ದರೆ ವಿಚಾರಣೆಗೆ ಕರೆಸಲಾಗುವುದು' ಎಂದು ಪೊಲೀಸರು ಹೇಳಿದರು.

## ಪನ್ನೂ ಹತ್ಯೆ ಯತ್ನ ಸಂಚಿನಲ್ಲಿ ಅಧಿಕಾರಿ?

**ನವದೆಹಲಿ (ರಾಯಿಟರ್ಸ್):** ಅಮೆರಿಕದಲ್ಲಿ ಸಿಖ್ ಪ್ರತ್ಯೇಕತಾವಾದಿ ಮುಖಂಡನ ಹತ್ಯೆ ಯತ್ನ ಪ್ರಕರಣದ ಸಂಚಿನಲ್ಲಿ ವಂಚಕ ಅಧಿಕಾರಿಯೊಬ್ಬರು ಶಾಮೀಲಾಗಿದ್ದಾರೆ ಎಂದು ಭಾರತದಲ್ಲಿ ನಡೆಸಿದ ತನಿಖೆಯಲ್ಲಿ ಪತ್ತೆಯಾಗಿರುವುದಾಗಿ 'ಬ್ಲೂಮ್‌ಬರ್ಗ್ ನ್ಯೂಸ್' ಬುಧವಾರ ವರದಿ ಮಾಡಿದೆ.

ಆದರೆ, ಈ ವಿಚಾರವನ್ನು ಸರ್ಕಾರ ದೃಢಪಡಿಸಿಲ್ಲ ಎಂದೂ ಉಲ್ಲೇಖಿಸಿದೆ.

ಭಾರತ ಸರ್ಕಾರದ ಉದ್ಯೋಗಿಯೊಬ್ಬರು ಈ ಸಂಚಿನಲ್ಲಿ ನೇರವಾಗಿ ಶಾಮೀಲಾಗಿದ್ದಾರೆ. ಆದರೆ, ಅವರು ಭಾರತದ ಸಂಶೋಧನಾ ಮತ್ತು ವಿಶ್ಲೇಷಣಾ ವಿಭಾಗದಲ್ಲಿ (ರಾ) ಕೆಲಸ ನಿರ್ವಹಿಸುತ್ತಿಲ್ಲ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿರುವುದಾಗಿ ವರದಿಯಲ್ಲಿ ಹೇಳಲಾಗಿದೆ.

# ₹1 ಕೋಟಿ ಮೌಲ್ಯದ ಚಿನ್ನ ಜಪ್ತಿ

ಪ್ರಜಾವಾಣಿ ವಾರ್ತೆ

**ದೇವನಹಳ್ಳಿ:** ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಸೋಮವಾರ (ಮಾರ್ಚ್ 18ರಂದು) ಒಂದೇ ದಿನ ಕಸ್ಟಮ್ಸ್ ಅಧಿಕಾರಿಗಳು ವಿದೇಶದಿಂದ ಬಂದಿಳಿದ ಪ್ರಯಾಣಿಕರು ಕಳ್ಳಸಾಗಣೆ ಮಾಡುತ್ತಿದ್ದ ಕೋಟ್ಯಂತರ ರೂಪಾಯಿ ಮೌಲ್ಯದ ಚಿನ್ನಾಭರಣ ಜಪ್ತಿ ಮಾಡಿದ್ದಾರೆ.

ಮೂರು ಪ್ರತ್ಯೇಕ ಪ್ರಕರಣಗಳಲ್ಲಿ ಅಧಿಕಾರಿಗಳು ಒಟ್ಟು ₹1 ಕೋಟಿ ಮೌಲ್ಯದ ಚಿನ್ನವನ್ನು ಜಪ್ತಿ ಮಾಡಿದ್ದಾರೆ. ಪ್ರಕರಣದ ಆರೋಪಿಗಳು ಈ ಮೊದಲು ಚಿನ್ನ ಕಳ್ಳಸಾಗಣೆಯಲ್ಲಿ ಭಾಗಿಯಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕ್ವಾಲಾಲಂಪುರದಿಂದ ಬಂದ ಪ್ರಯಾಣಿಕನ ಬಳಿ ವಶಕ್ಕೆ ಪಡೆದ ಆಂಗ್ಲ ಭಾಷೆಯ 'ಓ' ಅಕ್ಷರ ವಿನ್ಯಾಸದ ಚಿನ್ನ

ಮಲೇಷ್ಯಾದ ಕ್ವಾಲಾಲಂಪುರದಿಂದ ಸೋಮವಾರ ರಾತ್ರಿ ಬಂದಿಳಿದ ಪ್ರಯಾಣಿಕನಿಂದ 197.43 ಗ್ರಾಂ ತೂಕದ ಚಿನ್ನ ಜಪ್ತಿ ಮಾಡಲಾಗಿದ್ದು, ಅದರ ಮೌಲ್ಯ ₹12.55 ಲಕ್ಷ ಎಂದು ಅಂದಾಜಿಸಲಾಗಿದೆ. ಆತ ತೊಟ್ಟಿದ್ದ ಬಟ್ಟೆಯಲ್ಲಿ ಆಂಗ್ಲ ಅಕ್ಷರ 'ಓ' ಆಕಾರದಲ್ಲಿ ಚಿನ್ನದ ಸುರುಳಿ ಇರುವುದನ್ನು ಅಧಿಕಾರಿಗಳು ಪತ್ತೆ ಮಾಡಿದರು.

ಕುವೈತ್‌ನಿಂದ ಬಂದ ಮಹಿಳೆಯು ಚಿನ್ನದ ಸರ, ಬಳೆ, ಪೆಂಡೆಂಟ್ ಕತ್ತರಿಸಿ ಬಟ್ಟೆಯಲ್ಲಿ ಬಚ್ಚಿಟ್ಟುಕೊಂಡಿದ್ದರು. 196.73 ಗ್ರಾಂ ಚಿನ್ನದ ಆಭರಣಗಳನ್ನು ಆಕೆಯಿಂದ ವಶಕ್ಕೆ ಪಡೆಯಲಾಗಿದೆ. ಅದರ ಮೌಲ್ಯ ₹12.51 ಲಕ್ಷ ಎಂದು ಅಂದಾಜಿಸಲಾಗಿದೆ.

ಮದೀನಾ ಮತ್ತು ಬಹರೇನ್‌ನಿಂದ ಬಂದಿಳಿದ ಇಬ್ಬರು ಪ್ರಯಾಣಿಕರು ಕಸ್ಟಮ್ಸ್ ಅಧಿಕಾರಿಗಳ ಗಸ್ತಿನ ವೇಳೆ ಸಿಕ್ಕಿಬಿದ್ದಿದ್ದಾರೆ. ಇಬ್ಬರಿಂದ 1.167 ಕೆ.ಜಿ. ಚಿನ್ನ ಪತ್ತೆಯಾಗಿದೆ. ಅದರ ಮೌಲ್ಯ ₹74.64 ಲಕ್ಷ ಎಂದು ಕಸ್ಟಮ್ಸ್ ಅಧಿಕಾರಿಗಳು ತಿಳಿಸಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

SOUNDARYA COLLEGE OF LAW
Affiliated to KSLU & Approved by BCI, New Delhi.
Soundarya Nagar, Sidedahalli, Nagasandra Post, Bengaluru-73.
Web: soundarya-lawcollege.com
FACULTY RECRUITMENT
Applications are invited from Eligible candidates for the post of
ASSISTANT PROFESSOR
Eligibility Criteria
• LL.M. with Minimum 55% Marks and NET/SLET/ Ph.D.
• Have actively engaged in research activity of high quality with evidence of published materials in Books and UGC approved Journals.
Specializations required:
Constitutional Law, Commercial Law, Business Law, International Law, Intellectual Property & Labour Law.
Candidates Committed to professionalism, dynamism & expertise to create competitiveness, leadership and innovation skills among the students will be preferred.
Interested candidates may submit the applications along with their updated CV to careers@soundaryainstitutions.in on or before 27-03-2024
Call: 99028 50725/77609 33289

PERSONAL

Change of Name

I, NARAYANASWAMY Anjanappa, residing at Agalagurki Village and Post, Chickballapur- 562101, have changed my minor son's name from NAVANEET NARAYAN to NAVNEET NARAYAN, vide affidavit dated 14.03.2024 before Notary K.H. Venkatappa, Chickballapur.

I, IRFAN MAHMAMADA MAUL, residing at 22nd Ward near Church, Devanahalli 562110, have changed my name to IRFAN, vide affidavit dated 16.03.2024 before Notary K.H. Venkatappa, Chickballapur.

I, JAYATEERTH have changed my name to JAYATEERTH V B DESAI vide affidavit dated: 20/3/2024 Before Notary Shreeshail B.Gobbani Bangalore.

I, SHEK SARDAR, residing at 202, Ward No. 14, Kandawara, Chickballapur-562101, have changed my name to SHAIK SARDAR, vide affidavit dated 16.03.2024 before Notary K.H. Venkatappa, Chickballapur.

CHANGE OF NAME
I, TANMAY HATTANGADY, Residing at #B-12, Anandashram, 13th Cross, 10th Main, Malleshwaram, Bengaluru-560003 have changed my name to TANMAY RAMESH HATTANGADY vide affidavit dt:20/03/2024 before Notary L.Gopalakrishna, Bengaluru. Henceforth I shall be called as TANMAY RAMESH HATTANGADY only.

CHANGE OF NAME
I, Padmavathi Gotawat alias Padmavathy Kantilal alias Padvathi.K alias K.Padmavathi alias K.Padmavathy D/o Late Mangal Chand Bohra W/o Kantilal Gotawat aged 69 yrs, R/at Flat #402, 4th Floor, #205/1/13, Sri Rama Arcade, Thyagarajanagar, Bengaluru- 560 028. all the names referred to the above are of one and the same person. vide affidavit dated 20.03.2024 before Notary Anitha Bai, Bengaluru.

I, SUHAIL KHAN, S/o. Late. Thangaraj, Aged 33 years, R/AT: No. 296, 9th Cross, Old Byappanahalli, Gajendra Nagar, Bengaluru 560 033, have changed the Old name from SRINIVAS to New Name SUHAIL KHAN, the affidavit sweared before the Advocate & Notary K. VENKATESHAN vide affidavit dated 15.03.2024.

BUSINESS

Business Offers

Finance

NRI'S INVESTMENT
And Finance Available
On Low Interest
Against
Properties,Land&
Building,Sites,Flats,
Converted&
Agriculture Lands
Call:7204995189

REAL ESTATE SELLING

House

HRBR Layout

3BHK INDEPENDENT House at HRBR Lyt 1block ground+2 flrs Plot area 600 sft calm locality, genuine buyers pl contact 9738540471

Sites

Kempegowda Layout

*SEMI_COMMERCIAL SITE* Sale, Nadabrabhu KEMPEGOWDA LAYOUT 8th Block 'D' Sector, 55X100, W/F BDA, NOC, NNA, Conversion land, Leagal Documents, 5250/-sqft. Contact: 9686469799

PUBLIC NOTICE

PUBLIC NOTICE
It is brought to the notice of General Public and to whomsoever it may concern that my clients **Mr. Ganesh Babu, S/o. Late Krishnamurthy Setty & his Daughter Dr.Chaitanya G.** are intending to purchase the immovable property described in the schedule hereunder from **Smt. Premalatha Viswanatha W/o. late Dr. V. Viswanatha & Mr. Naveen Viswanatha S/o. Dr. V. Viswanatha**, who represents to be the Owners of the Schedule Property, having succeeded in title and possession to the same after the demise of Dr. V. Viswanatha, who had acquired absolute right and title to the said property by virtue of Registered Sale Deed Dt:05.05.2005, Regd. as Doc. No.BDA-1-01664-2005-06, stored in CD No.BDAD88.
Any person/s having any claim over the Schedule Property or any objection/s regarding the proposed transaction of sale may contact the undersigned within 7 days of publication of this notice, with supporting documents in writing, failing which my clients being a bonafide purchasers will complete the sale transaction.
SCHEDULE
All that piece and parcel of vacant BDA Site No.218, formed by the Bangalore Development Authority situated at Raj Mahal Vilas Extensions, Second Stage, II Block, BBMP Ward No.100, Sanjay Nagar, Bangalore – 560 094 bearing BBMP PID No.100-756-218. Measuring East to West.- 26.50 Meters and North to South - 15.00 Meters totally measuring-397.50 Sq.Meters together with a building standing thereon.
And Bounded On The :
East by : Site No. 213
West by : Road
North by : Site No. 217
South by : Site No.219.
NAGARAJ N DAMODAR, ADVOCATE
RAO & RAO ASSOCIATES, No.554, Near Sai Baba Temple, 13th Cross, Sampige Road, Malleswaram, Bangalore-560003
Mob: 9448278827 / 9141678867

VENDORS FOR SOLAR POWER INSTALLATION UNDER CAPEX MODEL
Sandeep Vihar Owners Welfare Association (SVOWA) invites Expression of Interest (E of I) for installing Solar Power of 60 KWP under Phase-1 in Sandeep Vihar, (AWHO) Whitefield, Hoskote Road, Seegehalli, Kannmangala Post, Bengaluru–560115 from reputed Party enlisted under MNRE and holding Licence/ Permits. E of I to reach us through email by **31 March 2024**. Once E of I is received, Request for Proposal (RFP) will be issued.
secretary@sandeepvihar.com
Queries if any: 9591375403, 8147655086

PUBLIC NOTICE
The General Public are hereby notified that our clients propose to purchase the Schedule Property from the owners Mrs.MANGALA SHANKAR W/o Late M. Shankar, Resident of No.15, "SRINIVAS RESIDENCY", Plat No.S1, 3 Main, Amarjyothi Layout, RMV 2nd Stage Sanjaynagar, BANGALORE 560094 and Mr. MAHESHWARAPPA GURUNATH, S/o Late D.Maheshwarappa, Residing at F.F No.04, Ist Floor, Chaithrashree, Classic, 305/A, 10th Cross, Ideal Homes Township, Rajarajeshwari Nagar, Bangalore-560098. Any person or persons having any claim/s on the Schedule Property or objections for the proposed sale transaction may lodge their claims/objections with documentary proof with the undersigned within 15 days from the date of publication of this notice, failing which thereafter our clients shall proceed to complete the sale transaction and claims/ objections received beyond the stipulated period will not be entertained.
SCHEDULE
All that piece and parcel of the residential immovable property bearing Corporation No. 273, PID No. 82-20-273, Ground Floor and Corporation No. 273/1, PID No.82-20-273/1, First Floor, constructed on the property bearing Corporation No.273 (Old CITB Site No. 273), Situated at HAL II Stage, Bangalore presently within the Revenue Administrative Jurisdiction of Ward No.80, (Old Ward No. 82). Hoysalanagar Sub-Division Bruhat Bangalore Mahanagara Palike, Bangalore together with the building. East to West 50 Feet, North to South 69 Feet, East by Private Property (formerly Site No.272), West by Private Property (formerly Site No.274), North by Private Property (formerly Site Nos.697 & 696), South by : Road
Mr.N. JAIPRAKASH RAO, JAYPEE ASSOCIATES #38, "KRISHNA", I Cross, Malleswaram BANGALORE - 560003.
PH:23560365, 23468742, 23465286

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

DH Classifieds More value, more impact
ಪ್ರಜಾವಾಣಿ
REAL ESTATE
BOOK YOUR REAL ESTATE ADS IN DH ALL KARNATAKA + PRAJAVANI BENGALURU CITY ON SATURDAY + SUNDAY
@ 2481/-* FOR 15 WORDS
*Conditions apply
www.dhclassifieds.com BOOK NOW
Book your ad with us now! For more details contact:
+91 9845114560 | +91 9901641752 | 080-45557163/164

# ಮೈಸೂರಿಗೆ ನಿತೀಶ್ ಭೇಟಿ

ಪ್ರಜಾವಾಣಿ ವಾರ್ತೆ

**ಮೈಸೂರು:** ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಬುಧವಾರ ನಗರಕ್ಕೆ ಬಂದು ವೈದ್ಯರೊಬ್ಬರನ್ನು ಭೇಟಿಯಾಗಿ ಆರೋಗ್ಯ ಸಲಹೆ ಪಡೆದರು.

‘ಬೆಳಿಗ್ಗೆ 11.15ರ ಸುಮಾರಿಗೆ ವಿಶೇಷ ವಿಮಾನದ ಮೂಲಕ ಬಂದ ಅವರು, ಖಾಸಗಿ ಕಾರಿನಲ್ಲಿ ನಗರದ ನಂಜುಮಳಿಗೆ ರಸ್ತೆಯಲ್ಲಿರುವ ಖಾಸಗಿ ಆಸ್ಪತ್ರೆಯೊಂದಕ್ಕೆ ತೆರಳಿದರು. ಅಲ್ಲಿ ನರರೋಗ ತಜ್ಞರಾದ ಡಾ. ರತ್ನವೇಣಿ ಹಾಗೂ ಡಾ. ಜಿ.ಎಸ್. ಜನಾರ್ದನ್ ಅವರನ್ನು ಭೇಟಿ ಮಾಡಿ ಆರೋಗ್ಯ ಸಲಹೆ ಪಡೆದರು. ಬಳಿಕ ವಿಶೇಷ ವಿಮಾನದಲ್ಲಿ ತೆರಳಿದರು’ ಎಂದು ಮೂಲಗಳು ತಿಳಿಸಿವೆ. ಅವರಿಗೆ ರಾಜ್ಯಸಭಾ ಸದಸ್ಯ ಸಂಜಯ್ ಕುಮಾರ್ ಝಾ ಸೇರಿದಂತೆ ಜೆಡಿಯು ಮುಖಂಡರು ಸಾಥ್ ನೀಡಿದರು. ಇದೊಂದು ಖಾಸಗಿ ಭೇಟಿಯಾಗಿತ್ತು.

# ಚಂದ್ರಪ್ಪ ವಿರುದ್ಧ ಸುಳ್ಳು ಪ್ರಮಾಣ ಪತ್ರ: ಇಬ್ಬರ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬಿ.ಎನ್.ಚಂದ್ರಪ್ಪ

**ಬೆಂಗಳೂರು:** ‘ಶಾಲಾ ದಾಖಲಾತಿ ಹಾಗೂ ಜಾತಿ ಪ್ರಮಾಣ ಪತ್ರವನ್ನು ನಕಲು ಮಾಡಿ ಷಡ್ಯಂತ್ರ ನಡೆಸಲಾಗುತ್ತಿದೆ’ ಎಂದು ಆರೋಪಿಸಿ, ಚಿತ್ರದುರ್ಗದ ಮಾಜಿ ಸಂಸದ ಬಿ.ಎನ್.ಚಂದ್ರಪ್ಪ ನೀಡಿದ ದೂರು ಆಧರಿಸಿ, ಇಬ್ಬರ ವಿರುದ್ಧ ಹಲಸೂರುಗೇಟ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಚಿತ್ರದುರ್ಗದ ಕೆಇಬಿ ಹೌಸ್‌ನ ಗೋಪಾಲಪುರ ರಸ್ತೆಯ ರಾಜಪ್ಪ ಹಾಗೂ ಚಳ್ಳಕೆರೆ ತಾಲ್ಲೂಕು ಅಬ್ಬೇನಹಳ್ಳಿಯ ಬಾಬು ಎಂಬವರ ಹೆಸರು ಎಫ್‌ಐಆರ್‌ನಲ್ಲಿದೆ.

‘2014ರ ಲೋಕಸಭೆ ಚುನಾವಣೆಯಲ್ಲಿ ಚಿತ್ರದುರ್ಗ ಕ್ಷೇತ್ರದಿಂದ ಸ್ಪರ್ಧಿಸಿ ಗೆದ್ದಿದ್ದೆ. 2019ರ ಚುನಾವಣೆಯಲ್ಲಿ ಮತ್ತೆ ಸ್ಪರ್ಧಿಸಿ ಸೋಲು ಅನುಭವಿಸಿದ್ದೆ. ಈ ಬಾರಿಯೂ ಸ್ಪರ್ಧೆಗೆ ತಯಾರಿ ನಡೆಸುತ್ತಿದ್ದೇನೆ. ಇದೇ ಕ್ಷೇತ್ರದಿಂದ ಸ್ಪರ್ಧಿಸಲು ಹಲವು ಆಕಾಂಕ್ಷಿಗಳಿದ್ದಾರೆ. ಚುನಾವಣೆಗೆ ಸ್ಪರ್ಧಿಸದಂತೆ ತಡೆಯಲು ನನ್ನ ಜಾತಿಯನ್ನು ಆದಿ ಕರ್ನಾಟಕದ ಬದಲಾಗಿ ಮಾಸಾಳ ಎಂದು ಬಿಂಬಿಸಿ ಶಾಲಾ ವರ್ಗಾವಣೆ ಪತ್ರದ ನಕಲಿ ಪ್ರಮಾಣ ಪತ್ರಗಳನ್ನು ಸೃಷ್ಟಿಸಲಾಗಿದೆ. ಸಾಮಾಜಿಕ ಮಾಧ್ಯಮದಲ್ಲಿ ನಕಲಿ ಪ್ರಮಾಣ ಪತ್ರಗಳನ್ನು ಹರಿಯ ಬಿಡಲಾಗಿದೆ. ಕೆಲವು ವಿರೋಧಿಗಳು ಸುಳ್ಳು ಸುದ್ದಿ ಹಬ್ಬಿಸುತ್ತಿದ್ದಾರೆ. ಪರಿಶಿಷ್ಟ ಜಾತಿಯಲ್ಲಿ ಒಡಕು ಮೂಡಿಸಲು ಪ್ರಯತ್ನಿಸುತ್ತಿದ್ದಾರೆ’ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

‘ಆರೋಪಿಗಳು, ನಕಲಿ ದಾಖಲೆಗಳು ಹಾಗೂ ಮುದ್ರೆಯನ್ನು ಸೃಷ್ಟಿಸಿಕೊಂಡು ಜಾತಿ ಪ್ರಮಾಣ ಪತ್ರವನ್ನು ತಯಾರಿಸಿ ಅಸಲಿ ಎಂದು ಬಿಂಬಿಸಿ ತೇಜೋವಧೆ ಮಾಡಿದ್ದಾರೆ’ ಎಂದು ದೂರಿನಲ್ಲಿ ಹೇಳಲಾಗಿದೆ.

‘ಹತ್ತು ವರ್ಷಗಳಿಂದ ಷಡ್ಯಂತ್ರ ನಡೆಸಲಾಗುತ್ತಿದೆ’ ಎಂದು ಚಂದ್ರಪ್ಪ ಅವರು ಕಾಂಗ್ರೆಸ್ ಹೈಕಮಾಂಡ್ ಗಮನಕ್ಕೆ ತಂದಿದ್ದರು. ಹೈಕಮಾಂಡ್ ಸೂಚನೆ ಹಾಗೂ ಕಾನೂನು ತಜ್ಞರ ಸಲಹೆ ಮೇರೆಗೆ ದೂರು ನೀಡಿ ಕಾನೂನು ಕ್ರಮ ಕೈಗೊಳ್ಳಲು ಆಗ್ರಹಿಸಲಾಗಿದೆ ಎಂದು ಅವರ ಆಪ್ತರು ತಿಳಿಸಿದ್ದಾರೆ.

# ‘ಚುನಾವಣೆ ಬಳಿಕ ವಿಜಯೇಂದ್ರ ಹುದ್ದೆ ಕಳೆದುಕೊಳ್ಳುತ್ತಾರೆ’

ಪ್ರಜಾವಾಣಿ ವಾರ್ತೆ



ಕೆ.ಎಸ್.ಈಶ್ವರಪ್ಪ

**ಶಿವಮೊಗ್ಗ:** ಲೋಕಸಭಾ ಚುನಾವಣೆಯ ಫಲಿತಾಂಶದ ನಂತರ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ತಮ್ಮ ಹುದ್ದೆ ಕಳೆದುಕೊಳ್ಳುತ್ತಾರೆ ಎಂದು ಮಾಜಿ ಉಪಮುಖ್ಯಮಂತ್ರಿ ಕೆ.ಎಸ್.ಈಶ್ವರಪ್ಪ ಹೇಳಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ‘ಈಗ ನನಗೆ ರಾಜ್ಯಪಾಲ ಹುದ್ದೆ, ಮಗನಿಗೆ ವಿಧಾನ ಪರಿಷತ್ ಸ್ಥಾನ ಸೇರಿದಂತೆ ಯಾವುದೇ ಸ್ಥಾನಮಾನ ಮುಖ್ಯವಲ್ಲ. ಪಕ್ಷ ಉಳಿಯಬೇಕು ಅಷ್ಟೇ, ಹೀಗಾಗಿ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಲಿದ್ದು, ಚುನಾವಣೆಯಲ್ಲಿ ಗೆಲುವು ಸಾಧಿಸುತ್ತೇನೆ’ ಎಂದರು.

**ರಥೋತ್ಸವ** ವಿಜಯನಗರ ಜಿಲ್ಲೆ ಹರಪನಹಳ್ಳಿ ತಾಲ್ಲೂಕಿನ ಕೂಲಹಳ್ಳಿಯಲ್ಲಿ ಶ್ರೀಗೋಣಿಬಸವೇಶ್ವರ ಸ್ವಾಮಿ ರಥೋತ್ಸವ ಬುಧವಾರ ಭಕ್ತರ ಸಮ್ಮುಖದಲ್ಲಿ ನೆರವೇರಿತು

ಪ್ರಜಾವಾಣಿ ಚಿತ್ರ/ ವಿಶ್ವನಾಥ ಡಿ.

# ಎಸ್ಸೆಸ್ಸೆಲ್ಸಿ ಮೌಲ್ಯಮಾಪನ ಬಹಿಷ್ಕಾರಕ್ಕೆ ರುಪ್ಸ ನಿರ್ಧಾರ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಎಸ್ಸೆಸ್ಸೆಲ್ಸಿ ವಾರ್ಷಿಕ ಪರೀಕ್ಷೆಯ ಉತ್ತರಪತ್ರಿಕೆಗಳ ಮೌಲ್ಯಮಾಪನ ಬಹಿಷ್ಕರಿಸಲು ಅನುದಾನರಹಿತ ಖಾಸಗಿ ಶಾಲೆಗಳ ಶಿಕ್ಷಕರು ನಿರ್ಧರಿಸಿದ್ದಾರೆ.

ಈ ಕುರಿತು ಶಾಲಾ ಶಿಕ್ಷಣ ಇಲಾಖೆಯ ಆಯುಕ್ತರಿಗೆ ಪತ್ರ ಬರೆದಿರುವ ನೋಂದಾಯಿತ ಅನುದಾನರಹಿತ ಖಾಸಗಿ ಶಾಲೆಗಳ ಆಡಳಿತ ಸಂಘ (ರುಪ್ಸ) ಅಧ್ಯಕ್ಷ ಲೋಕೇಶ್ ತಾಳಿಕಟ್ಟೆ, ‘ಎಸ್ಸೆಸ್ಸೆಲ್ಸಿ ವಾರ್ಷಿಕ ಪರೀಕ್ಷೆಯ ಮೇಲ್ವಿಚಾರಣೆ ಕಾರ್ಯಗಳಿಂದ ಖಾಸಗಿ ಶಾಲಾ ಶಿಕ್ಷಕರನ್ನು ಶಿಕ್ಷಣ ಇಲಾಖೆ ಹೊರಗಿಟ್ಟಿದೆ. ಆ ಮೂಲಕ ಅವಮಾನಿಸಲಾಗಿದೆ. ಹೀಗಾಗಿ ಖಾಸಗಿ ಶಾಲೆಗಳ ಶಿಕ್ಷಕರು ಈ ನಿರ್ಧಾರ ತೆಗೆದುಕೊಂಡಿದ್ದಾರೆ’ ಎಂದಿದ್ದಾರೆ.

‘ವಾರ್ಷಿಕ ಪರೀಕ್ಷೆಯ ಮೇಲ್ವಿಚಾರಕರಾಗಿ ಸರ್ಕಾರಿ ಮತ್ತು ಅನುದಾನಿತ ಪ್ರೌಢ ಶಾಲಾ ಶಿಕ್ಷಕರನ್ನು ಮಾತ್ರ ನೇಮಿಸಲಾಗಿದೆ. ಅನುದಾನರಹಿತ ಖಾಸಗಿ ಶಾಲಾ ಶಿಕ್ಷಕರನ್ನು ಈ ಪ್ರಕ್ರಿಯೆಯಿಂದ ಹೊರಗಿಡುವ ಮೂಲಕ ಕಡೆಗಣಿಸಲಾಗಿದೆ. ಇಲಾಖೆಯ ಈ ತಾರತಮ್ಯ ಧೋರಣೆ ಅರ್ಥವಾಗದ ವಿಷಯ. ಶಿಕ್ಷಣ ಹಕ್ಕು ಕಾಯ್ದೆ ಅನ್ವಯ ಎಲ್ಲ ಶಿಕ್ಷಕರನ್ನು ಸಮಾನವಾಗಿ ಕಾಣಬೇಕು. ಆದರೆ, ಸಮಾನತೆಯ ಡಂಗುರ ಸಾರುವ ಸರ್ಕಾರವೇ ಈ ನಿಯಮವನ್ನು ಉಲ್ಲಂಘಿಸಿದೆ’ ಎಂದು ಪತ್ರದಲ್ಲಿ ಅವರು ಉಲ್ಲೇಖಿಸಿದ್ದಾರೆ.

‘ಸುಮಾರು 5 ಲಕ್ಷಕ್ಕೂ ಹೆಚ್ಚು ಮಕ್ಕಳು ರಾಜ್ಯದಲ್ಲಿರುವ ಖಾಸಗಿ ಶಾಲೆಗಳಲ್ಲಿ ಎಸ್ಸೆಸ್ಸೆಲ್ಸಿ ಕಲಿಯುತ್ತಿದ್ದಾರೆ. ಆದರೆ, ದ್ವೇಷ ಮತ್ತು ದುರುದ್ದೇಶದ ಕಾರಣಕ್ಕೆ ಖಾಸಗಿ ಶಾಲೆಗಳ ಶಿಕ್ಷಕರನ್ನು ಉತ್ತರಪತ್ರಿಕೆಗಳ ಮೌಲ್ಯಮಾಪನ ಪ್ರಕ್ರಿಯೆಯಿಂದ ದೂರ ಇಡಲಾಗಿದೆ. ನಮ್ಮ ಸಂಘದ ಅಡಿಯಲ್ಲಿರುವ ಶಾಲೆಗಳ ಶಿಕ್ಷಕರನ್ನು ಮೌಲ್ಯಮಾಪನಕ್ಕೆ ಕಳುಹಿಸದಿರಲು ನಿರ್ಧರಿಸಿದ್ದೇವೆ. ಖಾಸಗಿ ಪ್ರೌಢ ಶಾಲಾ ಶಿಕ್ಷಕರ ಸಂಘ ಕೂಡ ಮೌಲ್ಯಮಾಪನ ಪ್ರಕ್ರಿಯೆಗೆ ಸಹಕರಿಸದಿರಲು ತೀರ್ಮಾನಿಸಿವೆ’ ಎಂದೂ ಅವರು ಹೇಳಿದ್ದಾರೆ.

# ಉಗ್ರ ಸ್ವರೂಪಿ ನಾಯಿ ತಳಿ ನಿಷೇಧಕ್ಕೆ ತಡೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಮಾನವರ ಜೀವಕ್ಕೆ ಎರವಾಗುವ ಉಗ್ರ ಸ್ವರೂಪದವು ಎಂದೇ ಪರಿಗಣಿಸಲಾದ ಅಡ್ಡ ತಳಿಯೂ ಸೇರಿದಂತೆ 20ಕ್ಕೂ ಹೆಚ್ಚು ಬಗೆಯ ನಾಯಿಗಳ ತಳಿ ಅಭಿವೃದ್ಧಿ ಮತ್ತು ಸಾಕಾಣಿಕೆಯನ್ನು ನಿಷೇಧಿಸಿ ಕೇಂದ್ರ ಸರ್ಕಾರ ಹೊರಡಿಸಿರುವ ಸುತ್ತೋಲೆಯ ಅನುಷ್ಠಾನಕ್ಕೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

ಕೇಂದ್ರ ಸರ್ಕಾರ ಹೊರಡಿಸಿರುವ ಸುತ್ತೋಲೆ ಪ್ರಶ್ನಿಸಿ ನಗರದ ಶ್ವಾನ ತರಬೇತುದಾರರಾದ ಕಿಂಗ್ ಸಾಲೊಮನ್ ಡೇವಿಡ್ ಮತ್ತು ಮರ್ಡೋನಾ ಜೋನ್ಸ್ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯ ಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದೆ.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲ ಆರ್.ಸ್ವರೂಪ್ ಆನಂದ್, ‘ನಿಷೇಧದ ನಿರ್ಧಾರಕ್ಕೆ ಸಂಬಂಧಿಸಿದಂತೆ ನಾಯಿ ತಳಿಗಳ ಅಭಿವೃದ್ಧಿಯಲ್ಲಿ ಹೆಸರು ಮಾಡಿರುವ ಕೆನ್ನೆಲ್ ಕ್ಲಬ್ ಆಫ್ ಇಂಡಿಯಾ ಜೊತೆ ಚರ್ಚಿಸಿ ಅವರ ಅಭಿಪ್ರಾಯ ಸಂಗ್ರಹ ಮಾಡಿಲ್ಲ’ ಎಂಬ ಅಂಶವನ್ನು ಪರಿಗಣಿಸಿದ ನ್ಯಾಯಪೀಠ ಸುತ್ತೋಲೆಗೆ ತಡೆ ನೀಡಿದೆ. ಅಂತೆಯೇ, ‘ಈ ಆದೇಶವು ಕರ್ನಾಟಕ ರಾಜ್ಯಕ್ಕೆ ಮಾತ್ರವೇ ಅನ್ವಯಿಸುತ್ತದೆ’ ಎಂದು ಸ್ಪಷ್ಟಪಡಿಸಿದೆ.

‘ಯಾವ ಅಂಶಗಳ ಆಧಾರದಲ್ಲಿ ಈ ಎಲ್ಲಾ ತಳಿಗಳ ನಾಯಿ ಸಾಕಾಣಿಕೆ ಮತ್ತು ಅಭಿವೃದ್ಧಿ ನಿಷೇಧಿಸಲಾಗಿದೆ ಎಂಬ ಬಗ್ಗೆ ಅವಲೋಕನ ನಡೆಸಿದ ದಾಖಲೆಗಳನ್ನು ನ್ಯಾಯಪೀಠಕ್ಕೆ ಸಲ್ಲಿಸಿ’ ಎಂದು ಕೇಂದ್ರ ಸರ್ಕಾರಕ್ಕೆ ತಾಕೀತು ಮಾಡಿದೆ.

**ಪ್ರಕರಣವೇನು?:** ದೆಹಲಿ ಹೈಕೋರ್ಟ್‌ನಲ್ಲಿ ದಾಖಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯೊಂದಕ್ಕೆ ಸಂಬಂಧಿಸಿದಂತೆ ಅಲ್ಲಿನ ನ್ಯಾಯಪೀಠವು, ‘ಅರ್ಜಿದಾರರ ಮನವಿಯನ್ನು ಮೂರು ತಿಂಗಳ ಒಳಗಾಗಿ ಪರಿಗಣಿಸಬೇಕು. ಈ ವಿಷಯದಲ್ಲಿ ಸಂಬಂಧಿಸಿದ ಪಾಲುದಾರರ ಜೊತೆ ತಜ್ಞರು ಚರ್ಚಿಸಿ ಅಂತಿಮ ನಿರ್ಧಾರ ಕೈಗೊಳ್ಳಬೇಕು’ ಎಂದು ಆದೇಶಿಸಿತ್ತು. ಇದರನ್ವಯ ಕೇಂದ್ರ ಪಶು ಸಂಗೋಪನೆ ಮತ್ತು ಡೈರಿ ಸಚಿವಾಲಯ 20ಕ್ಕೂ ಹೆಚ್ಚು ಬಗೆ ತಳಿಗಳ ನಾಯಿ ಸಾಕಾಣಿಕೆ ಮತ್ತು ಅಭಿವೃದ್ಧಿಯನ್ನು ನಿಷೇಧಿಸಿ ಇದೇ 12ರಂದು ಸುತ್ತೋಲೆ ಹೊರಡಿಸಿತ್ತು.

‘ಈ ಸುತ್ತೋಲೆ ಅಸಾಂವಿಧಾನಿಕವಾಗಿದೆ’ ಎಂದು ಆಕ್ಷೇಪಿಸಿರುವ ಅರ್ಜಿದಾರರು, ‘ಅಪಾಯಕಾರಿ ಎಂಬ ಅಭಿಪ್ರಾಯಕ್ಕೆ ಬರುವ ಮುನ್ನ ಅಂತಹ ತಳಿಯ ಶ್ವಾನಗಳ ಬಗ್ಗೆ ಆಳವಾದ ಅಧ್ಯಯನದ ಅಗತ್ಯವಿದೆ. ಈ ವಿಷಯದಲ್ಲಿ ನಾವೂ ಪಾಲುದಾರರಿದ್ದೇವೆ ಮತ್ತು ಈ ದಿಸೆಯಲ್ಲಿ ಭಾರತದಾದ್ಯಂತ ಸುಪರಿಚಿತವಾದ ನಾಯಿಗಳ ತಳಿ ಅಭಿವೃದ್ಧಿಯ ಕೆನ್ನೆಲ್ ಕ್ಲಬ್ ಆಫ್ ಇಂಡಿಯಾದ ಜೊತೆ ತಜ್ಞರು ಯಾವ ಚರ್ಚೆಯನ್ನೂ ನಡೆಸಿಲ್ಲ. ಹಾಗಾಗಿ, ಸುತ್ತೋಲೆಯನ್ನು ರದ್ದುಗೊಳಿಸಬೇಕು. ಅರ್ಜಿ ಇತ್ಯರ್ಥವಾಗುವ ತನಕ ಸುತ್ತೋಲೆಯ ಅನುಷ್ಠಾನಕ್ಕೆ ಮಧ್ಯಂತರ ತಡೆ ನೀಡಬೇಕು’ ಎಂದು ಕೋರಿದ್ದರು.

### ನಿಷೇಧಿತ ತಳಿಗಳು

ಪಿಟ್‌ಬುಲ್ ಟೆರ್ರಿಯರ್, ಟೋಸಾ ಇನು, ಅಮೆರಿಕನ್ ಸ್ಟಾಫರ್ಡ್‌ಶೈರ್ ಟೆರಿಯರ್, ಫಿಲಾ ಬ್ರೆಸಿಲಿರೊ, ಡೊಗೊ ಅರ್ಜೆಂಟಿನೊ, ಅಮೆರಿಕನ್ ಬುಲ್ ಡಾಗ್, ಬೋರ್ ಬೋಲ್, ಕಂಗಲ್, ಮಧ್ಯ ಏಷ್ಯಾದ ಶೆಫರ್ಡ್ ಡಾಗ್, ಕಕೇಶಿಯನ್ ಶೆಫರ್ಡ್ ಡಾಗ್, ದಕ್ಷಿಣ ರಷ್ಯನ್ ಶೆಫರ್ಡ್ ಡಾಗ್ (ಓವ್ಚಾರ್ಕಾ), ಟೋರ್ನ್‌ಜಾಕ್, ಸರ್‌ಪ್ಲಾನಿನಾಕ್, ಜಪಾನೀಸ್ ತೋಸಾ ಮತ್ತು ಅಕಿತಾ, ಮ್ಯಾಸ್ಟಿಫ್ಸ್ (ಬೋರ್ ಬುಲ್ಸ್), ರಾಟ್‌ವೀಲರ್, ಟೆರೈರ್ಸ್, ರೊಡೇಸಿಯನ್ ರಿಡ್ಜ್ ಬ್ಯಾಕ್, ವೂಲ್ಫ್ ಡಾಗ್ಸ್, ಕೆನಾರಿಯೊ, ಅಕ್ಬಷ್ ನಾಯಿ, ಮಾಸ್ಕೊ ಗಾರ್ಡ್ ನಾಯಿ, ಕೇನ್ ಕೊರ್ಸೊ ಮತ್ತು ಬ್ಯಾನ್ ಡಾಗ್.

## ನಿಧನ ವಾರ್ತೆ

# ರಾಜು ಹೆಗಡೆ ಹೆಗ್ಗಾರ

**ಕಾರವಾರ:** ಜಲತರಂಗ ವಾದನದ ಬೆರಳೆಣಿಕೆಯ ಕಲಾವಿದರಲ್ಲಿ ಒಬ್ಬರಾಗಿದ್ದ ಸಿದ್ದಾಪುರ ತಾಲ್ಲೂಕು ಹೆಗ್ಗಾರ ಗ್ರಾಮದ ರಾಜು ಹೆಗಡೆ (64) ಬುಧವಾರ ಶಿವಮೊಗ್ಗದ ಆಸ್ಪತ್ರೆಯಲ್ಲಿ ನಿಧನರಾದರು.ಅವರಿಗೆ ಪತ್ನಿ, ಇಬ್ಬರು ಪುತ್ರಿಯರು ಇದ್ದಾರೆ.

ಜಲತರಂಗ ವಾದನದಲ್ಲಿ ನಿಷ್ಣಾತ ಕಲಾವಿದರೆನಿಸಿದ್ದ ಅವರು ರಾಜ್ಯ, ರಾಷ್ಟ್ರ ಮಟ್ಟದ ಹಲವು ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿದ್ದರು. ಉತ್ತರಾದಿ ಮತ್ತು ದಕ್ಷಿಣಾದಿ ಶೈಲಿಗಳಲ್ಲಿ ಅವರು ಜಲತರಂಗ ನುಡಿಸುತ್ತಿದ್ದರು. ಪಿಂಗಾಣಿ ತಟ್ಟೆ ಬದಲು ಕಂಚಿನ ತಟ್ಟೆ ಬಳಸಿ ಜಲತರಂಗ ನುಡಿಸಬಹುದು ಎಂಬುದನ್ನೂ ತೋರಿಸಿಕೊಟ್ಟಿದ್ದರು.


**ಪ್ರಾದೇಶಿಕ ಆಯುಕ್ತರವರ ಕಚೇರಿ, ಕಂದಾಯ ಇಲಾಖೆ, ಬೆಂಗಳೂರು ವಿಭಾಗ**
**ಮತ್ತು ನೋಡಲ್ ಅಧಿಕಾರಿ, ಪದನಿಮಿತ್ತ ಕಾರ್ಯದರ್ಶಿ (ಆರ್ಥಿಕ ಅಪರಾಧಗಳು), ಬೆಂಗಳೂರು**
ಬಿಎಂಟಿಸಿ ಬಿಲ್ಡಿಂಗ್, 2ನೇ ಮಹಡಿ, ಶಾಂತಿನಗರ, ಕೆ.ಎಚ್ ರಸ್ತೆ, ಬೆಂಗಳೂರು–560027

**ಸ್ಥಿರಾಸ್ತಿಯ ಇ-ಹರಾಜಿಗೆ ಆಹ್ವಾನ /ಸೂಚನೆ**

Pursuant to attachment of Immovable properties by the Government under the provisions of the Karnataka Protection of Interest of Depositors in Financial Establishments Act. 2004(KPIDFE Act) and pursuant to the absolute attachment order by the Hon'ble Special Court the Competent Authority for Sri Kanva Souhardha Co-operative Credit Ltd. is issuing notice for e-auction of the immovable property through e-auction on 'as is where is and whatever there is basis'.
The intending bidders will be required to furnish Earnest Money Deposit (EMD) (as mentioned against each auction in the e-portal provided by the Service Provider/Karnataka Public Procurement Portal only).

**Short description of the Immovable Property**

| Sl. No. | DETAILS OF THE PROPERTY | RESERVE PRICE (Rs) | EMD (Rs) | Bid Increase Value (Rs) | Clear Title |
|---|---|---|---|---|---|
| 1. | Agricultural land in Sy No. 18/4 measuring 0 acre 10 guntas and 0 acre 20 guntas totally 0-30 guntas of Honnasandra Village in DasanapuraHobli of Bangalore North Taluk of Bangalore. Bounded by As per GPAR (0 Acre 10 Guntas) :- East by: Remaining agricultural land in Sy. No. 18/4,West by: The property of Sri N Nanjundaiah and Sri Shivalingaiah, North by: Agricultural land of Sri Chikkaiah, South by: The properties of Sri Puttaiah and Sri Mahadevaiah, As per Sale Deed ( 0 Acre 20 Guntas) :- East by: Remaining agricultural land in Sy. No. 18/4, West by: The property of Sri Nanjundaiah and Sri Shivalingaiah, North by: Agricultural land of Sri Chikkaiah, South by: The properties of Sri Puttaiah and Sri Mahadevaiah<br>Google Location: **https://maps.app.goo.gl/ZG5GzvGfiJ7psJcD7**<br>Latitude and Longitude: 13°06'51.9"N 77°26'34.6"E | 1,20,00,000/- | 2,40,000/- | 60,000/- | Khata Stands in the Name of Competent Authority appointed by the Government. |
| 2. | Agricultural land in SY.NO.35/3 measuring 0-11 acres/guntas of Honnasandra village of Dasanapura Hobli of Bangalore North taluk,Bangalore. The said property is bounded by East by: The agricultural land in Sy. No. 34/1, West by: The agricultural land in Sy. No. 35/2, North by: Remaining land in Sy. No. 35/3, South by: The agricultural land of Sri Gali Ramaiah<br>Google Location: **https://maps.app.goo.gl/cUMQjQ7hF5emeXbP6**<br>Latitude and Longitude: 13°07'02.5"N 77°26'33.5"E | 47,91,600/- | 96,000/- | 24,000/- | |
| 3. | Agricultural land in SY.NO.18/3 measuring 0-36 acres/guntas of Honnasandra village of Dasanapura Hobli of Bangalore North taluk,Bangalore. The said property is bounded by East by: The agricultural land of Smt Chikkamma, West by: The agricultural land of Sri Honnappa, North by: The agricultural land of Sri Shivalingaiah, South by: The agricultural land of Sri Shivalingaiah<br>Google Location: **https://maps.app.goo.gl/dj5uunDWn9q8reV67**<br>Latitude and Longitude: 13°06'51.8"N 77°26'34.6"E | 1,56,81,600/- | 3,20,000/- | 79,000/- | |
| 4. | Agricultural land in SY.No.25/2 measuring 1-00 acres/guntas of Aralasandra village of Kasaba hobli of Nelamangala taluk, Bangalore rural district. The said property is bounded by East by: Boundary line of Koneripura village, West by: The agricultural land in Sy. No. 24/4, North by: The agricultural land in Sy. No. 25/1 and 24/4, South by: The agricultural land in Sy. No. 28/1<br>Google Location: **https://maps.app.goo.gl/85VfinBTnxhHGmam9**<br>Latitude and Longitude: 13°17'59.0"N 77°19'14.7"E | 2,55,00,000/- | 5,10,000/- | 1,28,000/- | |
| 5. | Agricultural land in Old SY.No.31 and New SY.No.31/2 measuring 1-20 acres/guntas of Aralasandra village of Kasaba hobli of Nelamangala taluk, Bangalore rural district. The said property is bounded by East by: The agricultural land of K.A Ugrasimha Rao and Kumudvati river, West by: The agricultural land of K.P Anandsimha Rao and Karianna, North by: The agricultural land of K.A Jayasimha Rao, South by: Kumudvati river and Boundary line of Madala Kote<br>Google Location: **https://maps.app.goo.gl/m9idRZRZtssfRaiu5**<br>Latitude and Longitude: 13°07'57.8"N 77°19'15.3"E | 3,82,50,000/- | 7,65,000/- | 1,92,000/- | |
| 6. | Agricultural land in SY.No.91( kushki land in 207) measuring 2-05 acres/guntas of Aralasandra village of Kasaba hobli of Nelamangala taluk, Bangalore rural district. The said property is bounded by East by: The agricultural land in Sy. No. 30, West by: The agricultural land in Sy. No. 27, North by: The agricultural land in Sy. No. 28/2, South by: Kumadvati river<br>Google Location: **https://maps.app.goo.gl/377UGa6FCZw2CKpU9**<br>Latitude and Longitude: 13°07'41.3"N 77°19'13.1"E | 3,40,00,000/- | 6,80,000/- | 1,70,000/- | |
| 7. | Agricultural land in SY.No.92 measuring 1-33 acres/guntas of Aralasandra village of Kasaba hobli of Nelamangala taluk, Bangalore rural district. The said property is bounded by East by: The agricultural land in Sy. No. 30, West by: The agricultural land in Sy. No. 30, North by: The agricultural land in Sy. No. 30 and 29/2, South by: The agricultural land in Sy. No. 30<br>Google Location: **https://maps.app.goo.gl/vdXfH8N7DGcQhKTy8**<br>Latitude and Longitude: 13°07'37.0"N 77°19'16.8"E | 4,65,37,500/- | 9,31,000/- | 2,40,000/- | |
| 8. | Agricultural land in SY.No.24/3 measuring 1-10 acres/guntas of Aralasandra village of Kasaba hobli of Nelamangala taluk, Bangalore rural district. The said property is bounded by East by: Boundary line Koneripura village, West by: The agricultural land in Sy. No. 26/1, North by: The agricultural land in Sy. No. 24/2, South by: The agricultural land in Sy. No.24/4<br>Google Location: **https://maps.app.goo.gl/x59LX1ZrpYLdexbm9**<br>Latitude and Longitude: 13°07'48.4"N 77°19'14.3"E | 3,81,25,000/- | 7,63,000/- | 1,90,000/- | |
| 9. | Agricultural land in SY.No.24/4 measuring 2-02 acres/guntas of Aralasandra village of Kasaba hobli of Nelamangala taluk, Bangalore rural district. The said property is bounded by East by: The agricultural land in Sy. No. 24/5, West by: The agricultural land in Sy. No. 26/1 and 26/2, North by: The agricultural land in Sy. No. 24/3, South by: The agricultural land in Sy. No. 25/2<br>Google Location: **https://maps.app.goo.gl/sp9BLkAWng83zbg6A**<br>Latitude and Longitude: 13°07'48.7"N 77°19'14.0"E | 6,25,25,000/- | 12,50,000/- | 3,13,000/- | |
| 10. | Site No. 50, Khata No. 519,measuring east to west 30 feet, north to south 40 feet, totally measuring 1,200 sq.ft. Amani GopalakrishnaKere Village coming within the jurisdiction of Patrenahalli Grama Panchayat of Chikkaballapura Taluk in Chikkaballapura District. The said property is bounded by East by: Site no. 55, West by: Road, North by: Site No. 49, South by: Site No. 51<br>Google Location: **https://maps.app.goo.gl/17CuotEgtSgnPdFy5**<br>Latitude and Longitude: 13°25'06.7"N 77°46'22.5"E | 12,00,000/- | 24,000/- | 6,000/- | |
| 11. | Site No. 83, Khata No. 552, measuring east to west 30 feet, north to south 40 feet, totally measuring 1,200 sq.ft. Amani GopalakrishnaKere Village coming within the jurisdiction of Patrenahalli Grama Panchayat of Chikkaballapura Taluk in Chikkaballapura District. The said property is bounded by East by: Road, West by: Private property, North by: Road, South by: Site No. 84<br>Google Location: **https://maps.app.goo.gl/2Ry2s8uKGu37rEak6**<br>Latitude and Longitude: 13°25'06.7"N 77°46'22.5"E | 12,00,000/- | 24,000/- | 6,000/- | |

| Date of Inspection & time | Date of Pre-bid meeting & time and Place | Last Date of Submission of Bids & EMD submission | Date & Time of E Auction |
|---|---|---|---|
| 05th April 2024, 11:00 AM to 05:00 PM | 06th April 2024,03:00 PM to 04:00 PM Place : Office of the Regional Commissioner, 2nd floor, BMTC Building, KH road, Shantinagar, Bengaluru-560027 | 15th April 2024,Until 05:00 PM | 19th April 2024, 11:00 AM to 01:00 PM |

For registration & Online Auction, you can login to **https://kppp.karnataka.gov.in** (Helpdesk no: 080-46010000, 080-68948777) The interested bidders who require auction related information can contact Additional Regional Commissioner, Office of the Regional Commissioner, 2nd floor, BMTC Building, KH road, Shantinagar, Bengaluru-560027, e-mail id: **arckauction@gmail.com** or Contact No. : **7760275682.**

ಸ್ಥಳ: ಬೆಂಗಳೂರು
ದಿನಾಂಕ: 21–03–2024

DIPR/CP/4396/Zen/2023-24

ಸಹಿ/– ಹೆಚ್ಚುವರಿ ಪ್ರಾದೇಶಿಕ ಆಯುಕ್ತರು ಮತ್ತು ಸಕ್ಷಮ ಪ್ರಾಧಿಕಾರ ಪ್ರಾದೇಶಿಕ ಆಯುಕ್ತರ ಕಚೇರಿ, ಬೆಂಗಳೂರು ವಿಭಾಗ, ಬೆಂಗಳೂರು.

EXAM DH ಪ್ರಜಾವಾಣಿ MASTERMIND™

ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹399ಕ್ಕೆ ಮಾತ್ರ

ಯುಪಿಎಸ್‌ಸಿ, ಕೆಪಿಎಸ್‌ಸಿ, ಪಿಎಸ್‌ಐ, ಎಫ್‌ಡಿಎ, ಬ್ಯಾಂಕಿಂಗ್ ಪಿ.ಒ... ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಇ-ಮಿತ್ರ

ಈಗಲೇ ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ www.exammastermind.comಗೆ ಭೇಟಿ ಕೊಡಿ

# 4187 ಸಬ್ ಇನ್‌ಸ್ಪೆಕ್ಟರ್ ಹುದ್ದೆಗೆ ಅವಕಾಶ

ಮಂಜುನಾಥ್ ಭದ್ರಶೆಟ್ಟಿ

ದೇಶದ ಪ್ಯಾರಾ ಮಿಲಿಟರಿ ಪಡೆಗಳಲ್ಲಿ ಸಬ್ ಇನ್‌ಸ್ಪೆಕ್ಟರ್ ಮಟ್ಟದ ಹುದ್ದೆಯಲ್ಲಿ ಕೆಲಸ ಮಾಡಬೇಕೆಂಬ ಕನಸು ಹೊಂದಿರುವ ಪದವೀಧರ ಯುವಕ-ಯುವತಿಯರಿಗೆ ಸುವರ್ಣಾವಕಾಶ ಒದಗಿ ಬಂದಿದೆ.

ಕೇಂದ್ರ ಗೃಹ ಸಚಿವಾಲಯದ ಅಡಿ ಕಾರ್ಯನಿರ್ವಹಿಸುವ ಕೇಂದ್ರ ಸಶಸ್ತ್ರ ಪೊಲೀಸ್ ಪಡೆಯ (CAPF) ವಿವಿಧ ವಿಭಾಗಗಳಲ್ಲಿ ಹಾಗೂ ದೆಹಲಿ ಪೊಲೀಸ್ ವಿಭಾಗದಲ್ಲಿ (ಎಕ್ಸಿಕ್ಯೂಟಿವ್) ಖಾಲಿ ಇರುವ ಒಟ್ಟು 4,187 ಸಬ್ ಇನ್‌ಸ್ಪೆಕ್ಟರ್ ಹುದ್ದೆಗಳಿಗೆ ಕೇಂದ್ರ 'ಸಿಬ್ಬಂದಿ ನೇಮಕಾತಿ ಆಯೋಗ' (SSC) ನೇಮಕಾತಿ ಪ್ರಕ್ರಿಯೆ ಪ್ರಾರಂಭಿಸಿದೆ.

ಸಿಎಪಿಎಫ್‌ನಲ್ಲಿ 4001 ಸಬ್ ಇನ್‌ಸ್ಪೆಕ್ಟರ್ (ಎಸ್‌ಐ ಜನರಲ್ ಡ್ಯೂಟಿ-ಜಿಡಿ) ಇದ್ದು, ದೆಹಲಿ ಪೊಲೀಸ್ ವಿಭಾಗದಲ್ಲಿ 186 ಸಬ್ ಇನ್‌ಸ್ಪೆಕ್ಟರ್ ಹುದ್ದೆಗಳಿವೆ. ಅರ್ಹ ಪುರುಷ ಹಾಗೂ ಮಹಿಳಾ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು.

ಸಿಎಪಿಎಫ್‌ನ 4,001 ಸಬ್ ಇನ್‌ಸ್ಪೆಕ್ಟರ್ ಹುದ್ದೆಗಳಲ್ಲಿ ಮಹಿಳೆಯರಿಗೆ 308 ಹುದ್ದೆಗಳು ಮೀಸಲಿವೆ. ದೆಹಲಿ ಪೊಲೀಸ್ ವಿಭಾಗದಲ್ಲಿನ 186 ಸಬ್ ಇನ್‌ಸ್ಪೆಕ್ಟರ್ ಹುದ್ದೆಗಳಲ್ಲಿ ಮಹಿಳೆಯರಿಗೆ 61 ಹುದ್ದೆಗಳು ಮೀಸಲಿವೆ.

ಈಗಾಗಲೇ ಮಾರ್ಚ್ 4ರಿಂದ ಆನ್‌ಲೈನ್ ಅರ್ಜಿ ಸಲ್ಲಿಕೆ ಪ್ರಕ್ರಿಯೆ ಆರಂಭವಾಗಿದ್ದು ಮಾರ್ಚ್ 28 ಅರ್ಜಿ ಸಲ್ಲಿಸಲು ಕಡೆಯ ದಿನ. ಅರ್ಜಿ ಶುಲ್ಕ ₹100 ಇದ್ದು, ಎಸ್‌ಸಿ, ಎಸ್‌ಟಿ ಹಾಗೂ ಮಾಜಿ ಸೈನಿಕ ಅಭ್ಯರ್ಥಿಗಳಿಗೆ ಶುಲ್ಕ ಇಲ್ಲ. ಅರ್ಜಿ ಸಲ್ಲಿಸಲು 24 ದಿನ ಮಾತ್ರ ಅವಕಾಶ ಕೊಟ್ಟಿದ್ದಾರೆ.

ಕನಿಷ್ಠ 20 ವರ್ಷದಿಂದ ಗರಿಷ್ಠ 25ವರ್ಷದೊಳಗಿನ, ಅಂಗೀಕೃತ ವಿಶ್ವವಿದ್ಯಾಲಯದಿಂದ ಯಾವುದೇ ಪದವಿ ಪಾಸಾದವರು ಅರ್ಜಿ ಸಲ್ಲಿಸಲು ಅರ್ಹರು. ವೇತನ ಶ್ರೇಣಿ- ₹1.12 ಲಕ್ಷ. ಮೀಸಲು ವರ್ಗಗಳಿಗೆ ವಯೋಮಿತಿಯಲ್ಲಿ ಸಡಿಲಿಕೆ ಇದೆ.

> ಕೇಂದ್ರ ಗೃಹ ಸಚಿವಾಲಯದ ಅಡಿ ಕಾರ್ಯನಿರ್ವಹಿಸುವ ಕೇಂದ್ರ ಸಶಸ್ತ್ರ ಪೊಲೀಸ್ ಪಡೆಯ (**CAPF**) ವಿವಿಧ ವಿಭಾಗಗಳಲ್ಲಿ ಹಾಗೂ ದೆಹಲಿ ಪೊಲೀಸ್ ವಿಭಾಗದಲ್ಲಿ (ಎಕ್ಸಿಕ್ಯೂಟಿವ್) ಖಾಲಿ ಇರುವ ಒಟ್ಟು 4,187 ಸಬ್ ಇನ್‌ಸ್ಪೆಕ್ಟರ್ ಹುದ್ದೆಗಳಿಗೆ ಕೇಂದ್ರ 'ಸಿಬ್ಬಂದಿ ನೇಮಕಾತಿ ಆಯೋಗ' (**SSC**) ನೇಮಕಾತಿ ಪ್ರಕ್ರಿಯೆ ಪ್ರಾರಂಭಿಸಿದೆ.

### ಪರೀಕ್ಷಾ ಕ್ರಮ

**ಪೇಪರ್-1**

| ಭಾಗಗಳು | ವಿಷಯ | ಪ್ರಶ್ನೆಗಳು | ಅಂಕ | ಅವಧಿ |
|---|---|---|---|---|
| 1 | ಸಾಮಾನ್ಯ ಗ್ರಹಿಕೆ ಸಾಮಾನ್ಯ ಜ್ಞಾನ | 50 | 50 | ಒಟ್ಟು 2 ಗಂಟೆ |
| 2 | ಪ್ರಚಲಿತ ಘಟನೆಗಳು | 50 | 50 | |
| 3 | ಕ್ವಾಂಟಿಟೇಟಿವ್ ಆಪ್ಟಿಟ್ಯೂಡ್ | 50 | 50 | |
| 4 | ಇಂಗ್ಲಿಷ್ ಕಾಂಪ್ರಹೆನ್ಸನ್ | 50 | 50 | |

**ಪೇಪರ್-2**

| ವಿಷಯ | ಪ್ರಶ್ನೆಗಳು | ಅಂಕಗಳು | ಅವಧಿ |
|---|---|---|---|
| ಇಂಗ್ಲಿಷ್ ಭಾಷೆ ಮತ್ತು ಪ್ರಬಂಧ | 200 | 200 | 2 ಗಂಟೆ |

### ಹುದ್ದೆಗಳ ವರ್ಗೀಕರಣ

| |
|---|
| ಬಿಎಸ್‌ಎಫ್ **892** (ಮಹಿಳೆಯರಿಗೆ 45) |
| ಸಿಐಎಸ್‌ಎಫ್ **1597** (ಮಹಿಳೆಯರಿಗೆ 160) |
| ಸಿಆರ್‌ಪಿಎಫ್ **1172** (ಮಹಿಳೆಯರಿಗೆ 59) |
| ಐಟಿಬಿಪಿ **278** (ಮಹಿಳೆಯರಿಗೆ 41) |
| ಎಸ್‌ಎಸ್‌ಬಿ **62** (ಮಹಿಳೆಯರಿಗೆ 3) |
| ದೆಹಲಿ ಪೊಲೀಸ್ **186** (ಮಹಿಳೆಯರಿಗೆ 61) |

### ಕನ್ನಡದಲ್ಲಿ ಪರೀಕ್ಷೆ ಇಲ್ಲ

ಈ ಹುದ್ದೆಗಳಿಗೆ ಕನ್ನಡ ಸೇರಿದಂತೆ ಯಾವುದೇ ಪ್ರಾದೇಶಿಕ ಭಾಷೆಯಲ್ಲಿ ಪರೀಕ್ಷೆ ಇಲ್ಲ. ಹಿಂದಿ ಅಥವಾ ಇಂಗ್ಲಿಷ್‌ನಲ್ಲಿ ಮಾತ್ರ ಪರೀಕ್ಷೆ ಬರೆಯಬೇಕಾಗುತ್ತದೆ. ಟೇಬಲ್‌ನಲ್ಲಿ ತೋರಿಸಿದ ಪರೀಕ್ಷಾ ವಿಷಯಗಳ ಪಠ್ಯಕ್ರಮವನ್ನು ಅಧಿಸೂಚನೆಯಲ್ಲಿ ವಿವರವಾಗಿ ನೋಡಿಕೊಳ್ಳಬೇಕು. ಮೇ ಮಧ್ಯದಲ್ಲಿ ಸಿಬಿಟಿ ಪರೀಕ್ಷೆಗಳು ನಡೆಯಲಿವೆ.

### ಸಿಎಪಿಎಫ್ ಸಬ್ ಇನ್‌ಸ್ಪೆಕ್ಟರ್ ಹುದ್ದೆಗಳಿಗೆ ಪರೀಕ್ಷೆ ಹೇಗಿರಲಿದೆ?

ಸಿಎಪಿಎಫ್ ಹಾಗೂ ದೆಹಲಿ ಪೊಲೀಸ್ ವಿಭಾಗದಲ್ಲಿನ ಹುದ್ದೆಗಳಿಗೆ ಒಟ್ಟಿಗೆ ಪರೀಕ್ಷೆ ಇರಲಿದೆ. ಮೂರು ಹಂತಗಳಲ್ಲಿ ನೇಮಕಾತಿ ಪ್ರಕ್ರಿಯೆ ನಡೆಯಲಿದೆ.

ಮೊದಲಿಗೆ ಸಿಬಿಟಿ ಮಾದರಿಯ (ಕಂಪ್ಯೂಟರ್ ಆಧಾರಿತ ಪರೀಕ್ಷೆ) ಬಹು ಆಯ್ಕೆಯ ಸ್ಪರ್ಧಾತ್ಮಕ ಪರೀಕ್ಷೆ ಇರಲಿದೆ. ಇದರಲ್ಲಿ ಎರಡು ಪತ್ರಿಕೆಗಳು ಇವೆ. ಪ್ರತಿ ಪತ್ರಿಕೆಯು 2 ಗಂಟೆಯ ಅವಧಿ ಇದ್ದು ತಲಾ 200 ಅಂಕಗಳನ್ನು ಹೊಂದಿರುತ್ತದೆ. ತಲಾ ನಾಲ್ಕು ತಪ್ಪು ಉತ್ತರಗಳಿಗೆ 1 ಅಂಕ ಕಳೆಯಲಾಗುತ್ತದೆ.

ಗಮನಿಸಬೇಕಾದ ಸಂಗತಿ ಎಂದರೆ ಇದು ಕರ್ನಾಟಕದಲ್ಲಿ ನಡೆಯುವ ಪಿಎಸ್‌ಐ ಪರೀಕ್ಷೆ ಹಾಗೇ ಪರೀಕ್ಷಾ ಕ್ರಮ ಹೊಂದಿಲ್ಲ. ಅಂದರೆ ವಿವರಣಾತ್ಮಕ ಪತ್ರಿಕೆ ಇರುವುದಿಲ್ಲ. ಎರಡೂ ಪತ್ರಿಕೆಗಳೂ ಬಹುಆಯ್ಕೆಯ ಮಾದರಿಯ ಪತ್ರಿಕೆಗಳಾಗಿರುತ್ತವೆ.

ಪರೀಕ್ಷೆಯ ಕಟ್ ಆಫ್ ಅಂಕಗಳ ಆಧಾರದ ಮೇಲೆ ಮೆರಿಟ್ ಅನುಗುಣವಾಗಿ ಮುಂದಿನ ಹಂತಕ್ಕೆ ಆಯ್ಕೆಯಾಗುವ ಅಭ್ಯರ್ಥಿಗಳ ಪಟ್ಟಿ ಪ್ರಕಟಿಸಲಾಗುತ್ತದೆ. ಎರಡನೇ ಹಂತ ದೈಹಿಕ ಸಹಿಷ್ಣುತೆ ಹಾಗೂ ದೇಹದಾರ್ಢ್ಯತೆ ಪರೀಕ್ಷೆ. ಈ ಪರೀಕ್ಷೆ ಪಾಸಾದ ಬಳಿಕ ವಿವರವಾದ ವೈದ್ಯಕೀಯ ಪರೀಕ್ಷೆ ಪೂರೈಸಬೇಕಾಗುತ್ತದೆ.

ಮೊದಲಿಗೆ ಕಂಪ್ಯೂಟರ್ ಆಧಾರಿತ ಸ್ಪರ್ಧಾತ್ಮಕ ಪರೀಕ್ಷೆ (ಸಿಬಿಟಿ) ನಂತರ ದೈಹಿಕ ಪರೀಕ್ಷೆ, ವೈದ್ಯಕೀಯ ಪರೀಕ್ಷೆ ಮೂಲಕ ನೇಮಕಾತಿ ನಡೆಯಲಿದೆ.

ದೈಹಿಕ ಪರೀಕ್ಷೆ ಮಾನದಂಡಗಳು, ಪರೀಕ್ಷಾ ವಿಧಾನ, ಹುದ್ದೆಗಳ ವರ್ಗೀಕರಣ, ಅರ್ಜಿ ಸಲ್ಲಿಸಲು ಇತರೆ ಹೆಚ್ಚಿನ ಮಾಹಿತಿಗಾಗಿ ssc.gov.in ಅಥವಾ ವೆಬ್‌ಸೈಟ್‌ಗೆ ಭೇಟಿ ನೀಡಬಹುದು. ಈ ಹಿಂದೆ SSC ಕೆಲ ಪತ್ರಿಕೆಗಳಲ್ಲಿ ಪ್ರಕಟಿಸಿದ ವೆಬ್‌ಸೈಟ್ ವಿಳಾಸ ತಪ್ಪಿದೆ. ಇಲ್ಲಿ ಸೂಚಿಸಿರುವ ವೆಬ್‌ಸೈಟ್ ಮೂಲಕ ಹೋಗಿ ಆನ್‌ಲೈನ್ ಅರ್ಜಿ ಸಲ್ಲಿಸಬಹುದು.

# ದಶರಾಷ್ಟ್ರಗಳ ಒಕ್ಕೂಟ ಬ್ರಿಕ್ಸ್

ಯು.ಟಿ.ಆಯಿಶಾ ಫರ್ಜಾನ

**ಸಮಕಾಲೀನ ಜಗತ್ತಿನಲ್ಲಿ** ಪ್ರಮುಖ ಒಕ್ಕೂಟವಾದ ಬ್ರಿಕ್ಸ್ (BRICS) ತನ್ನ ಮೈತ್ರಿಕೂಟವನ್ನು ವಿಸ್ತರಿಸಿ ಕೆಲವು ದೇಶಗಳನ್ನು ಸೇರಿಸಿಕೊಳ್ಳುವ ನಿರ್ಧಾರವು ಜಾಗತಿಕ ಆರ್ಥಿಕ, ರಾಜಕೀಯ ಚಿತ್ರಣದಲ್ಲಿ ಗಮನಾರ್ಹ ಬದಲಾವಣೆಯನ್ನು ತರಬಹುದಾದ ಒಂದು ನಡೆಯಾಗಿತ್ತು. ಈ ಪ್ರಸ್ತಾವಿತ ಒಕ್ಕೂಟದಲ್ಲಿ ಅರ್ಜೆಂಟೀನಾ ದೇಶವು ಬ್ರಿಕ್ಸ್ (BRICS) ಕೂಟವನ್ನು ಸೇರದಿರುವ ನಿರ್ಧಾರ ಕೈಗೊಂಡಿದೆ.

'ಬ್ರಿಕ್ಸ್' (BRICS) ಎಂಬುದು ಬ್ರೆಜಿಲ್, ರಷ್ಯಾ, ಇಂಡಿಯಾ, ಚೀನಾ ಮತ್ತು ದಕ್ಷಿಣ ಆಫ್ರಿಕಾ ಎಂಬುದರ ಸಂಕ್ಷಿಪ್ತ ರೂಪವಾಗಿದ್ದು, ಜಾಗತಿಕವಾದ ಆರ್ಥಿಕ ಅಭಿವೃದ್ಧಿ ಮತ್ತು ಸಹಕಾರಗಳಿಗೆ ಸಂಬಂಧಿಸಿದಂತೆ ಬೆಳೆಯುತ್ತಿರುವ ಆರ್ಥಿಕ ಶಕ್ತಿಗಳ ನಡುವಿನ ಮೈತ್ರಿಕೂಟವನ್ನು ಇದು ಪ್ರತಿನಿಧಿಸುತ್ತದೆ.

- ಅರ್ಜೆಂಟೀನಾ, ಈಜಿಪ್ಟ್, ಇಥಿಯೋಪಿಯಾ, ಇರಾನ್, ಸೌದಿ ಅರೇಬಿಯಾ ಮತ್ತು ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ) ದೇಶಗಳನ್ನು ಸೇರಿಸಿಕೊಳ್ಳುವುದು ಈ ಮೊದಲಿನ ಯೋಜನೆಯಾಗಿತ್ತು.
- ಆದರೆ ಅರ್ಜೆಂಟೀನಾದ ಅಧ್ಯಕ್ಷ ಜೇವಿಯರ್ ಮಿಲ್ಲೈ ವಿಸ್ತರಿತ "ಬ್ರಿಕ್ಸ್" ಕೂಟಕ್ಕೆ ಸೇರುವ ನಿರ್ಧಾರದಿಂದ ಹಿಂದೆ ಸರಿದಿದ್ದಾರೆ.
- 'ಬ್ರಿಕ್ಸ್' ಕೂಟದ ವಿಸ್ತರಣೆಯು ಅರಬ್ ಜಗತ್ತಿನ ಎರಡು ಅತಿ ದೊಡ್ಡ ಆರ್ಥಿಕತೆಗಳಾದ ಸೌದಿ ಅರೇಬಿಯಾ ಮತ್ತು ಯುಎಇಗೆ ಹೊಸ ಹೂಡಿಕೆ ಅವಕಾಶಗಳ ಬಾಗಿಲನ್ನು ತೆರೆಯಲಿದೆ.
- 2006ರಲ್ಲಿ ಸ್ಥಾಪನೆಯಾದ "ಬ್ರಿಕ್ಸ್" ದೇಶಗಳು ಸಾಮೂಹಿಕ ಬೆಳವಣಿಗೆ, ಸುಸ್ಥಿರ ಅಭಿವೃದ್ಧಿ ಮತ್ತು ಅಂತರರಾಷ್ಟ್ರೀಯ ಅಖಾಡದಲ್ಲಿ ಸಂಪನ್ಮೂಲಗಳ ಹೆಚ್ಚು ನ್ಯಾಯಸಮ್ಮತ ಹಂಚಿಕೆಯ ಸಮಾನ ಗುರಿಗಳನ್ನು ಹೊಂದಿವೆ.
- BRICS ಒಂದು ಔಪಚಾರಿಕ ಸಂಸ್ಥೆಯ ರೂಪದಲ್ಲಿ ಅಸ್ತಿತ್ವದಲ್ಲಿಲ್ಲವಾದರೂ, ಇದುವರೆಗೂ ಈ ಐದು ದೇಶಗಳ ನಡುವೆ ನಡೆಯುವ ವಾರ್ಷಿಕ ಶೃಂಗಸಭೆಯಾಗಿ ಕಾರ್ಯನಿರ್ವಹಿಸುತ್ತಿತ್ತು.
- ಇದರ ಅಧ್ಯಕ್ಷೀಯ ಸ್ಥಾನವನ್ನು BRICS ಇಂಗ್ಲಿಷ್ ಅಕ್ಷರಮಾಲೆಗೆ ಅನುಗುಣವಾಗಿ, ವಾರ್ಷಿಕವಾಗಿ ಸದಸ್ಯರ ನಡುವೆ ಆವರ್ತಕ ರೂಪದಲ್ಲಿ ನಿಗದಿ ಪಡಿಸಲಾಗುತ್ತಿತ್ತು.

### ಬ್ರಿಕ್ ಬ್ರಿಕ್ಸ್ ಆದದ್ದು ಹೇಗೆ ?

- ಬ್ರಿಕ್ ಎಂಬ ಸಂಕ್ಷಿಪ್ತ ರೂಪವನ್ನು 2001 ರಲ್ಲಿ ಗೋಲ್ಡ್‌ಮನ್ ಸ್ಯಾಚ್ಸ್‌ನ ಅರ್ಥಶಾಸ್ತ್ರಜ್ಞ ಜಿಮ್ ಓ'ನೀಲ್ ನಿರೂಪಿಸಿದರು.
- ಮೊದಲ BRIC ಶೃಂಗಸಭೆಯು 2009 ರಲ್ಲಿ ರಷ್ಯಾದ ಒಕ್ಕೂಟದಲ್ಲಿ ನಡೆದಿದ್ದು, 'ಜಾಗತಿಕ ಹಣಕಾಸು ರಚನಾವಿನ್ಯಾಸದಲ್ಲಿ ಸುಧಾರಣೆ'ಯ ವಿಷಯಗಳ ಮೇಲೆ ಕೇಂದ್ರೀಕರಿಸಿತ್ತು.
- 2010ರಲ್ಲಿ ದಕ್ಷಿಣ ಆಫ್ರಿಕಾವನ್ನು ಸೇರಲು ಆಹ್ವಾನಿಸಿದ್ದು ಬಳಿಕ ಈ ಗುಂಪು BRICS ಎಂಬ ಸಂಕ್ಷಿಪ್ತ ರೂಪವನ್ನು ಅಳವಡಿಸಿಕೊಂಡಿತು. 2011 ರಲ್ಲಿ ಚೀನಾದ ಸನ್ಯಾದಲ್ಲಿ ನಡೆದ ಮೂರನೇ ಬ್ರಿಕ್ಸ್ ಶೃಂಗಸಭೆಯಲ್ಲಿ ದಕ್ಷಿಣ ಆಫ್ರಿಕಾವು ಭಾಗವಹಿಸಿತು.

**ಉದ್ದೇಶಗಳು :** ಪರಸ್ಪರ ಗುಂಪಿನೊಳಗೆ ಮತ್ತು ದೇಶಗಳ ನಡುವೆ ಸಹಕಾರವನ್ನು ವಿಸ್ತರಿಸಿ ಮತ್ತು ತೀವ್ರಗೊಳಿಸಿ, ಪರಸ್ಪರ ಅಭಿವೃದ್ಧಿಗೆ ಪೂರಕವಾದ ಸುಸ್ಥಿರವಾದ ಲಾಭದಾಯಕ ನಡೆಗಳನ್ನು ಮುಂದುವರೆಸಲು ಬ್ರಿಕ್ಸ್ ಬಲವಾಗಿ ಪ್ರಯತ್ನಿಸುತ್ತದೆ.

ಜಾಗತಿಕ ಹಣಕಾಸು ಸಂಸ್ಥೆಗಳನ್ನು ಸುಧಾರಿಸುವ ತನ್ನ ಮೂಲ ಉದ್ದೇಶವನ್ನು ಮೀರಿ, ಪ್ರಸಕ್ತ ವೈವಿಧ್ಯಮಯ ಉದ್ದೇಶಗಳೊಂದಿಗೆ ಬ್ರಿಕ್ಸ್ ಹೊಸ ಮತ್ತು ಭರವಸೆಯ ರಾಜಕೀಯ - ರಾಜತಾಂತ್ರಿಕ ಘಟಕವಾಗಿ ಹೊರಹೊಮ್ಮುತ್ತಿದೆ.

### ಸಾಧನೆಗಳು

- 2010 ರಲ್ಲಿ ಅಂತರರಾಷ್ಟ್ರೀಯ ಹಣಕಾಸು ನಿಧಿಯಲ್ಲಿ ಕೋಟಾ ಸುಧಾರಣೆಗೆ ಕಾರಣವಾದ ಸಾಂಸ್ಥಿಕ ಸುಧಾರಣೆಗೆ ಬ್ರಿಕ್ಸ್ ಒತ್ತಾಯಿಸಿತು.

**ನ್ಯೂ ಡೆವೆಲಪ್ ಮೆಂಟ್ ಬ್ಯಾಂಕ್ : ( New Development Bank )**

- ಫೋರ್ಟಲೆಜಾದಲ್ಲಿ Fortaleza (2014) ನಲ್ಲಿ ನಡೆದ ಆರನೇ BRICS ಶೃಂಗಸಭೆಯ ಸಂದರ್ಭದಲ್ಲಿ, ನಾಯಕರು ನ್ಯೂ ಡೆವೆಲಪ್ ಮೆಂಟ್ ಬ್ಯಾಂಕ್ ಅನ್ನು ಸ್ಥಾಪಿಸುವ ಒಪ್ಪಂದಕ್ಕೆ ಸಹಿ ಹಾಕಿದರು.
- NDB ಯ ಪ್ರಮುಖ ಕಾರ್ಯಾಚರಣೆಯ ಕ್ಷೇತ್ರಗಳು - ಶುದ್ಧ ಶಕ್ತಿ, ಸಾರಿಗೆ ಮೂಲಸೌಕರ್ಯ, ನೀರಾವರಿ, ಸುಸ್ಥಿರ ನಗರಾಭಿವೃದ್ಧಿ ಮತ್ತು ಸದಸ್ಯ ರಾಷ್ಟ್ರಗಳ ನಡುವೆ ಆರ್ಥಿಕ ಸಹಕಾರ.
- ಆರನೇ ಬ್ರಿಕ್ಸ್ ಶೃಂಗಸಭೆಯಲ್ಲಿ ಫೋರ್ಟಲೆಜಾ ಘೋಷಣೆಯ ಭಾಗವಾಗಿ ಬ್ರಿಕ್ಸ್ ರಾಷ್ಟ್ರಗಳು 2014 ರಲ್ಲಿ ಬ್ರಿಕ್ಸ್ 'ತುರ್ತು ಮೀಸಲು ನಿಧಿ ವ್ಯವಸ್ಥೆ'ಗೆ (ಸಿಆರ್‌ಎ) ಸಹಿ ಹಾಕಿದವು.
- ಕರೆನ್ಸಿ ವಿನಿಮಯದ ಮೂಲಕ ಸದಸ್ಯರಿಗೆ ಅಲ್ಪಾವಧಿಯ ದ್ರವ್ಯತೆ ಬೆಂಬಲವನ್ನು ಒದಗಿಸುವ ಮತ್ತು ಆರ್ಥಿಕತೆಯನ್ನು ಮತ್ತಷ್ಟು ಬಲಪಡಿಸುವ ಗುರಿಯನ್ನು BRICS CRA ಹೊಂದಿದೆ.
- CRA ಯ ಆರಂಭಿಕ ಒಟ್ಟು ಬದ್ಧ ಸಂಪನ್ಮೂಲಗಳು 100 ಬಿಲಿಯನ್ ಡಾಲರ್ ಆಗಿರಬೇಕು ಎನ್ನುವ ಷರತ್ತಿನೊಂದಿಗೆ ಪ್ರಾರಂಭವಾಗಿದೆ.
- ಜೋಹಾನ್ಸ್‌ಬರ್ಗ್‌ನಲ್ಲಿ ನಡೆದ ಮೂರು ದಿನಗಳ ಬ್ರಿಕ್ಸ್ ಶೃಂಗಸಭೆಯ ಕೊನೆಯಲ್ಲಿ ದಕ್ಷಿಣ ಆಫ್ರಿಕಾದ ಅಧ್ಯಕ್ಷ ಸಿರಿಲ್ ರಾಮಫೋಸಾ ಅವರು ಬ್ರಿಕ್ಸ್ ಗುಂಪಿನ ವಿಸ್ತರಣೆಯ ಬಗ್ಗೆಗಿನ ಮಹತ್ವದ ನಿರ್ಧಾರವನ್ನು ಪ್ರಕಟಿಸಿದರು.
- ಜಗತ್ತಿನಾದ್ಯಂತ 20 ಕ್ಕೂ ಹೆಚ್ಚು ರಾಷ್ಟ್ರಗಳು ಬ್ರಿಕ್ಸ್ ನ ಸದಸ್ಯತ್ವವನ್ನು ಕೋರಿ ಅರ್ಜಿಗಳನ್ನು ಸಲ್ಲಿಸಿದ್ದರೆ, ಇತರ 15 ಕ್ಕೂ ಹೆಚ್ಚು ದೇಶಗಳು ಬ್ರಿಕ್ಸ್ ನ ಭಾಗವಾಗುವ ಆಸಕ್ತಿಯನ್ನು ವ್ಯಕ್ತಪಡಿಸಿವೆ.

## ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಸಮಾಜ ವಿಜ್ಞಾನ

### ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

**47) ಬ್ರಿಟಿಷ್ ಶಿಕ್ಷಣದ ಪರಿಣಾಮಗಳಾವುವು?**

**ಉತ್ತರ:-** (........ಹಿಂದಿನ ಸಂಚಿಕೆಯಿಂದ)

7. ಭಾರತೀಯರು ತಮ್ಮ ಸಮೃದ್ಧ ಸಾಂಸ್ಕೃತಿಕ ಪರಂಪರೆಗಳನ್ನು ಅರಿತುಕೊಳ್ಳಲು ಸಾಧ್ಯವಾಯಿತು. ಹೀಗೆ ಭಾರತದಲ್ಲಿ ಜಾರಿಗೊಂಡ ಪಾಶ್ಚಾತ್ಯ ವಿದ್ಯಾಭ್ಯಾಸದ ಕ್ರಮದಿಂದ ಸೃಷ್ಟಿಯಾದ ಅಭಿರುಚಿ ಮತ್ತು ಆಲೋಚನೆಗಳು ಭಾರತದಲ್ಲಿ ಹೊಸ ಹೊಸ ತಲೆಮಾರುಗಳನ್ನು ಸೃಷ್ಟಿಸುತ್ತಾ ಹೋಯಿತು.

**48) ಆಲಮಟ್ಟಿ ಎಲ್ಲಿದೆ ? ಅಲ್ಲಿ ಏನಿದೆ?**

**ಉತ್ತರ:-** ವಿಜಯಪುರ ಜಿಲ್ಲೆ, ಬಸವನಬಾಗೇವಾಡಿ ತಾಲ್ಲೂಕಿನಲ್ಲಿ 'ಆಲಮಟ್ಟಿ' ಇದೆ. ಇಲ್ಲಿ ಆಲಮಟ್ಟಿ ಅಣೆಕಟ್ಟೆ ಇದೆ.

**49) ಈ ಚಿತ್ರದಲ್ಲಿ ಇರುವವರು ಯಾರು? ಇವರು ಬರೆದಿರುವ ಕೃತಿಗಳಲ್ಲಿ ಯಾವುದಾದರೂ ಒಂದನ್ನು ಹೆಸರಿಸಿ**



**ಉತ್ತರ:-** ಬಾಲ ಗಂಗಾಧರ ತಿಲಕ

ಇವರು ಬರೆದಿರುವ ಕೃತಿ:- ಗೀತಾ ರಹಸ್ಯ

**50) ಕೃಷ್ಣಾ ಮೇಲ್ದಂಡೆಯ ಯೋಜನೆಯ ಲಾಭವನ್ನು ಯಾವೆಲ್ಲಾ ಜಿಲ್ಲೆಗಳು ಲಾಭ ಪಡೆಯುತ್ತಿವೆ?**

**ಉತ್ತರ:-** ಬಾಗಲಕೋಟೆ, ವಿಜಯಪುರ, ಕಲಬುರಗಿ, ಯಾದಗೀರಿ ಹಾಗೂ ಬೆಳಗಾವಿ ಜಿಲ್ಲೆಯ ಕೆಲವು ಭಾಗಗಳು ಈ ಯೋಜನೆಯ ಲಾಭವನ್ನು ಪಡೆಯುತ್ತವೆ.

**51) ಭಾರತದಲ್ಲಿ ರೂಢಿಯಲ್ಲಿರುವ ವಿವಿಧ ಕೃಷಿ ವಿಧಾನಗಳು ಯಾವುವು?**

**ಉತ್ತರ:-** ವಿವಿಧ ಭೌಗೋಳಿಕ, ಆರ್ಥಿಕ ಮತ್ತು ಸಾಮಾಜಿಕ ಅಂಶಗಳಿಂದಾಗಿ ಭಾರತದಲ್ಲಿ ವಿವಿಧ ಕೃಷಿ ವಿಧಾನಗಳು ರೂಢಿಯಲ್ಲಿವೆ. ಅವು ಹೀಗಿವೆ

(1) ಜೀವನಾಧಾರಿತ ಬೇಸಾಯ (2) ಸಾಂದ್ರ ಬೇಸಾಯ (3) ವಾಣಿಜ್ಯ ಬೇಸಾಯ (4) ಮಿಶ್ರಬೇಸಾಯ (5) ತೋಟಗಾರಿಕಾ ಬೇಸಾಯ

**52) ಭಾರತದಲ್ಲಿ ಕಾಲುವೆ ನೀರಾವರಿಯನ್ನು ವ್ಯಾಪಕವಾಗಿ ಬಳಸಿಕೊಂಡ ರಾಜ್ಯಗಳಾವುವು?**

**ಉತ್ತರ:-** ಭಾರತದಲ್ಲಿ ಕಾಲುವೆ ನೀರಾವರಿ ವ್ಯವಸ್ಥೆಯು ವ್ಯಾಪಕವಾಗಿ ಉತ್ತರ ಪ್ರದೇಶ, ಪಂಜಾಬ್, ಹರಿಯಾಣ, ಬಿಹಾರ, ಮಧ್ಯ ಪ್ರದೇಶ, ರಾಜಸ್ತಾನ, ಆಂಧ್ರ ಪ್ರದೇಶ, ಗುಜರಾತ್, ತಮಿಳುನಾಡು, ಒಡಿಶಾ, ಪಶ್ಚಿಮ ಬಂಗಾಳ ಮತ್ತು ಕರ್ನಾಟಕ ರಾಜ್ಯಗಳಲ್ಲಿ ಅಭಿವೃದ್ಧಿಗೊಂಡಿದೆ.

**53) ಭಾರತದಲ್ಲಿ 2011ರ ಜನಗಣತಿಯ ಪ್ರಕಾರ ಎಷ್ಟು ಜನರಿದ್ದಾರೆ?**

**ಉತ್ತರ:-** ಭಾರತವು 2011ರ ಜನಗಣತಿಯ ಪ್ರಕಾರ 121 ಕೋಟಿ ಜನಸಂಖ್ಯೆಯನ್ನು ಒಳಗೊಂಡಿದೆ. ಇದು ಪ್ರಪಂಚದ ಒಟ್ಟು ಜನಸಂಖ್ಯೆಯ ಶೇ 17.5 ರಷ್ಟಿದೆ.

**54) ಕೋಸಿ ಯೋಜನೆಯ ಬಗ್ಗೆ ಬರೆಯಿರಿ?**

**ಉತ್ತರ:** ಕೋಸಿ ನದಿಯನ್ನು ಬಿಹಾರಿನ 'ಕಣ್ಣೀರಿನ ನದಿ' ಎಂದು ಕರೆಯುತ್ತಾರೆ. ಇದರ ಪ್ರವಾಹ ನಿಯಂತ್ರಿಸುವುದೇ ಸಾಹಸವಾಗಿತ್ತು ಆ ಹಿನ್ನೆಲೆಯಲ್ಲಿ ಕೋಸಿ ಯೋಜನೆಯ ರೂಪಿಸಿ ಪ್ರವಾಹ ನಿಯಂತ್ರಣ ಮಾಡಲಾಯಿತು. ಇದು ಭಾರತ ಮತ್ತು ನೇಪಾಳ ರಾಷ್ಟ್ರಗಳ ಜಂಟಿ ಯೋಜನೆಯಾಗಿದೆ. ಭಾರತ ಮತ್ತು ನೇಪಾಳ ಗಡಿಯಲ್ಲಿ ಬರುವ 'ಹನುಮಾನ ನಗರ' ಎಂಬಲ್ಲಿ ಕೋಸಿ ನದಿಗೆ ಅಣೆಕಟ್ಟನ್ನು ನಿರ್ಮಿಸಲಾಗಿದೆ.

ಈ ಯೋಜನೆಯು ಸುಮಾರು 8.75 ಲಕ್ಷ ಹೆಕ್ಟೇರ್ ಭೂಮಿಗೆ ನೀರಾವರಿ ಸೌಲಭ್ಯ ಪಡೆದಿವೆ. ಇದರಿಂದ ಉತ್ಪಾದಿಸಲಾಗುವ ವಿದ್ಯುಚ್ಛಕ್ತಿಯಲ್ಲಿ ಶೇ 50 ರಷ್ಟನ್ನು ನೇಪಾಳಕ್ಕೆ ಒದಗಿಸಲಾಗುತ್ತಿದೆ.

**ಅಥವಾ**

**ಬ್ರಿಟಿಷರ ಕಂದಾಯ ನೀತಿಯ ಪರಿಣಾಮಗಳು ಯಾವುವು?**

**ಉತ್ತರ:-** ಬ್ರಿಟಿಷರ ಕಂದಾಯ ನೀತಿಯ ಪರಿಣಾಮಗಳು:

1. ನಿಜವಾದ ರೈತರನ್ನು ಶೋಷಿಸುವ ಹೊಸ ಸಾಮಾಜಿಕ ವರ್ಗವಾದ ಜಮೀನ್ದಾರಿ ಸಮುದಾಯ ಸೃಷ್ಟಿಯಾಯಿತು.
2. ಜಮೀನ್ದಾರರ ಶೋಷಣೆಗೆ ಒಳಗಾದ ರೈತರು ವಿವಿಧ ಬಗೆಯ ಸಂಕಷ್ಟಗಳಿಗೆ ಒಳಗಾದರು. ಕ್ರಮೇಣ ನಿರ್ಗತಿಕರಾದರು.
3. ಭೂಮಿ ಮಾರಾಟದ ವಸ್ತುವಾಯಿತು. ಇದನ್ನು ಪರಭಾರೆ (Mortgage) ಮಾಡಿ ಹಣವನ್ನು ಸಾಲವಾಗಿ ಪಡೆಯಬಹುದಾಗಿತ್ತು.
4. ಅನೇಕ ಜಮೀನ್ದಾರರೂ ಕೂಡ ಕಂದಾಯವನ್ನು ಸಲ್ಲಿಸುವ ಸಲುವಾಗಿ ತಮ್ಮ ಜಮೀನನ್ನು ಪರಭಾರೆ ಮಾಡಿದರು.
5. ಕೃಷಿ ಕ್ಷೇತ್ರವು ವಾಣಿಜ್ಯೀಕರಣಗೊಂಡು, ಇಂಗ್ಲೆಂಡಿನಲ್ಲಾದ ಕೈಗಾರೀಕರಣದಿಂದ ಅಲ್ಲಿನ ಕೈಗಾರಿಕೆಗಳಿಗೆ ಬೇಡಿದ ಕಚ್ಚಾವಸ್ತುಗಳನ್ನೇ ಬೆಳೆಯಬೇಕಾಯಿತು.
6. ಹಣದ ಲೇವಾದೇವಿಗಾರರು ಬಲಿಷ್ಠರಾಗ ತೊಡಗಿದರು

**55) ಭದ್ರತಾ ಮಂಡಳಿಯ ಕಾರ್ಯಗಳೇನು?**

**ಉತ್ತರ:-** ಭದ್ರತಾ ಮಂಡಳಿಯ ಕಾರ್ಯಗಳು:-

1) ವಿಟೋ ಚಲಾಯಿಸುವುದು
2) ಅಂತಾರಾಷ್ಟ್ರೀಯ ಭದ್ರತೆ-ಶಾಂತಿ ಕಾಪಾಡುವುದು
3) ಸಾಮಾನ್ಯ ಸಭೆಗೆ ಸದಸ್ಯರ ಆಯ್ಕೆ ಮತ್ತು ತಿರಸ್ಕರಿಸುವ ಕೆಲಸ.
4) ಅಂತಾರಾಷ್ಟ್ರೀಯ ನ್ಯಾಯಾಧೀಶರ ಆಯ್ಕೆಯಲ್ಲಿ ಪಾಲ್ಗೊಳ್ಳುವುದು.

**56) ಭಾರತದ ನಕ್ಷೆ ಬರೆದು ಇವುಗಳನ್ನು ಗುರುತಿಸಿ.**

1. ಭಾರತದ ಪೂರ್ವ ಜಲಮೇರೆ 2. ದಾವಣಗೆರೆ
3. ಕಲ್ಪಾಕಂ




ಎಸ್ಸೆಸ್ಸೆಲ್ಸಿ ಸಮಾಜವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

II PUC CET MATHS

*MULTIPLE CHOICE QUESTIONS*

**13) A bag contains 3 white, 4 black, 2 red balls. If 2 balls are drawn at random, then the probability that both the balls are white is.........**

(A) $\frac{1}{18}$ (B) $\frac{1}{36}$

(C) $\frac{1}{12}$ (D) $\frac{1}{24}$

**Ans :** (C) $\frac{1}{12}$

**Expln:-** Total no. of balls = 9.

Any two can be chosen in $9C_2$ ways.

From 3 white, any 2 white balls can be chosen in $3C_2$ ways.

$\therefore$ Required probability $= \frac{3C_2}{9C_2} = \frac{3}{\frac{9.8}{1.2}} = \frac{3}{36} = \frac{1}{12}$.

**14) The Contrapositive statement of the statement `` If $x$ is a prime number, then $x$ is odd'' is**

A) If $x$ is not a Prime number, then $x$ is not odd
B) If $x$ is a Prime number, then $x$ is not odd
C) If $x$ is not a Prime number, then $x$ is odd
D) If $x$ is not odd, then $x$ is not a prime number

**Ans:-D**

**Expln:-** Let P : x is a prime number
Q : let x be odd
Contrapositive statement is $\sim q \to \sim p$
i.e. if x is not an odd number then x is not a prime number

**15) The distance of the point(-2, 4, -5) from the line $\frac{x+3}{3} = \frac{y-4}{5} = \frac{z-4}{6}$ is**

(A) $\frac{\sqrt{37}}{10}$ (B) $\sqrt{\frac{37}{10}}$

(C) $\frac{37}{\sqrt{10}}$ (D) $\frac{37}{10}$

**Ans :** (B) $\sqrt{\frac{37}{10}}$

Expln :–Any point on the line given is of the form $3r-3,\ 5r+4,\ 6r-8$

Let R be the foot of ⊥r from $P(-2,4,-5)$ on the line given Then $R = (3r-3,\ 5r+4,\ 6r-8)$

$\therefore 3(3r-1)+5r+4, 6r-8$

The direction cosinnes of the line PR are proportional to $3r-1,\ 5r,\ 6r-3$ PR is ⊥r to the line given

$\therefore 3(3r-1)+5 \times 5r + 6(6r-3) = 0$

ie $9r-3+25r+36r-18=0$

$70r = 21 \therefore r = \frac{21}{70} = \frac{3}{10}$

$\therefore$ The coordinates of R are $\left(\frac{9}{10}-3,\ \frac{15}{10}+4,\ \frac{18}{10}-8\right)$

i.e, $R = \left(-\frac{21}{10}, \frac{55}{10}, \frac{62}{10}\right)$

The distance between $P(-2,4,-5)$ and $R\left(-\frac{21}{10}, \frac{55}{10}, \frac{62}{10}\right)^2$

is given by $PR^2 = \left(\frac{21}{10}+2\right)^2 + \left(\frac{55}{10}-4\right)^2 + \left(-\frac{62}{10}+5\right)^2$

$= \frac{1}{100} + \frac{15^2}{100} + \frac{12^2}{100} = \frac{1+225+144}{100} = \frac{370}{100} = \frac{37}{10}$

$PR = \sqrt{\frac{37}{10}}$

**16) If two sets A and B have 99 elements in common, then the number of elements common to the sets A × B and B × A is**

A) $2^{99}$ B) $99^2$
C) 100 D) 18

**Ans: (B) $99^2$**

**Expln:-** Let A and B be two non-empty sets having n elements in common.

Then A×A, B× A will have $n^2$ elements in common.

**17) If f (x) = $e^x$ and g (x) = log $e^x$, then which of the following is true?**

(A) $f\{g(x)\} \neq g\{f(x)\}$
(B) $f\{g(x)\} = g\{f(x)\}$
(C) $f\{g(x)\} + g\{f(x)\} = 0$
(D) $f\{g(x)\} - g\{f(x)\} = 1$

**Ans: (B) $f\{g(x)\} = g\{f(x)\}$**

**Expln:-** $f(x) = e^x$, $g(x) = \log e^x = x$ i.e., $g(x) = x$
$f\{g(x)\} = f(x) = e^x$
$g\{f(x)\} = g(e^x) = e^x$
$\therefore f\{g(x)\} = g\{f(x)\}$.

**18) The number of bijective functions from the set A to itself, if A contains 108 elements is**

(A) 108 (B) 108!
(C) $(108)^2$ (D) $2^{108}$

**Ans: (B) 108!**

**Expln:-**The number of bijections from set A to itself is 108!

19) $\int_1^e \log x \, dx =$

(A) 1 (B) e – 1 *(Contd...)*

**ಸಂಕ್ಷಿಪ್ತ ಸುದ್ದಿ**

## ರಾಮಚಂದ್ರ ಹೆಗಡೆಗೆ ಶ್ರೀ ವಿದ್ಯಾಮಾನ್ಯ ಯಕ್ಷಕಲಾ ಪ್ರಶಸ್ತಿ

**ಉಡುಪಿ:** ವಿದ್ಯಾಮಾನ್ಯತೀರ್ಥ ಶ್ರೀಗಳ ಹೆಸರಿನಲ್ಲಿ ಪಲಿಮಾರು ಮಠಾಧೀಶರಾದ ವಿದ್ಯಾಧೀಶ ತೀರ್ಥ ಸ್ವಾಮೀಜಿ ಕೊಡಮಾಡುವ 'ಶ್ರೀ ವಿದ್ಯಾಮಾನ್ಯ ಯಕ್ಷಕಲಾ ಪುರಸ್ಕಾರ'ಕ್ಕೆ ಬಡಗುತಿಟ್ಟಿನ ಕಲಾವಿದ ಕೊಂಡದಕುಳಿ ರಾಮಚಂದ್ರ ಹೆಗಡೆ ಆಯ್ಕೆಯಾಗಿದ್ದಾರೆ.

ಪ್ರಶಸ್ತಿಯು ಫಲಕ ಹಾಗೂ ₹50,000 ನಗದು ಪುರಸ್ಕಾರ ಒಳಗೊಂಡಿದ್ದು ಏ.23ರಂದು ಪಲಿಮಾರಿನಲ್ಲಿ ನಡೆಯುವ ವಿದ್ಯಾಮಾನ್ಯ ತೀರ್ಥರ ಆರಾಧನಾ ಮಹೋತ್ಸವದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಪಲಿಮಾರು ಮಠದ ದಿವಾನರು ತಿಳಿಸಿದ್ದಾರೆ.

ಕೊಂಡದಕುಳಿ ರಾಮಚಂದ್ರ ಹೆಗಡೆ ಅವರು ಗುಂಡುಬಾಳ, ಪಂಚಲಿಂಗ, ಸಾಲಿಗ್ರಾಮ ಮೇಳಗಳಲ್ಲಿ ಕಲಾಸೇವೆ ಮಾಡಿದ್ದಾರೆ. ಪೂರ್ಣಚಂದ್ರ ಯಕ್ಷಕಲಾ ಪ್ರತಿಷ್ಠಾನ ಎಂಬ ಸ್ವಂತ ಮೇಳ ಸ್ಥಾಪಿಸಿ ಕಾಲಮಿತಿಯ ಪ್ರದರ್ಶನಗಳನ್ನು ನೀಡುತ್ತಾ ಬಂದಿದ್ದಾರೆ.

## ಲಂಚ: ಮಧ್ಯವರ್ತಿ ಬಂಧನ

**ಮಡಿಕೇರಿ:** ಖಾತೆ ವರ್ಗಾವಣೆಗೆ ವ್ಯಕ್ತಿಯೊಬ್ಬರಿಂದ ₹ 50 ಸಾವಿರ ಲಂಚ ಪಡೆಯುತ್ತಿದ್ದ ಪ್ರಕರಣಕ್ಕೆ ಸಂಬಂಧಿಸಿ, ಮಧ್ಯವರ್ತಿ ಹರಿದತ್ತ ಎಂಬಾತನನ್ನು ಲೋಕಾಯುಕ್ತ ಪೊಲೀಸರು ಬುಧವಾರ ಇಲ್ಲಿ ಬಂಧಿಸಿದ್ದಾರೆ. ಆರೋಪಿ ಉಪನೋಂದಣಾಧಿಕಾರಿ ಸೌಮ್ಯಲತಾ ಪರಾರಿಯಾಗಿದ್ದಾರೆ.

ತಾಲ್ಲೂಕಿನ ಕೋರಂಗಾಲದ ವ್ಯಕ್ತಿಯೊಬ್ಬರಿಗೆ ಸೇರಿದ್ದ ಪಿತ್ರಾರ್ಜಿತ ಆಸ್ತಿಯ ಖಾತೆಯನ್ನು ಅವರ ಸೋದರಿ ಹೆಸರಿಗೆ ವರ್ಗಾವಣೆ ಮಾಡಿಕೊಡಲು ಅಧಿಕಾರಿಯು ಲಂಚ ಕೇಳಿದ್ದರು. ಹಣವನ್ನು ಮಧ್ಯವರ್ತಿಗೆ ನೀಡಬೇಕೆಂದು ತಿಳಿಸಿದ್ದರು. ವ್ಯಕ್ತಿಯು ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದರು.

'ದೂರುದಾರರು ಹಣವನ್ನು ಇಲ್ಲಿನ ಚೇನ್ ಗೇಟ್ ಬಳಿ ಇರುವ ಮಧ್ಯವರ್ತಿಯ ಕಚೇರಿಯ ಸಿಬ್ಬಂದಿಗೆ ನೀಡಿದ ಕೂಡಲೇ ಹರಿದತ್ತ ಅವರನ್ನು ಬಂಧಿಸಲಾಯಿತು. ವಿಷಯ ತಿಳಿಯುತ್ತಿದ್ದಂತೆ ತಮ್ಮ ಕಚೇರಿಯಿಂದ ಸೌಮ್ಯಲತಾ ಪರಾರಿಯಾದರು. ಹುಡುಕಾಟ ನಡೆದಿದೆ' ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ.

ಮೈಸೂರು ಲೋಕಾಯುಕ್ತ ಪೊಲೀಸ್ ಎಸ್.ಪಿ. ಸಜಿತ್ ಅವರ ನೇತೃತ್ವದಲ್ಲಿ ಇನ್‌ಸ್ಪೆಕ್ಟರ್‌ಗಳಾದ ಲೋಕೇಶ್ ಮತ್ತು ರೂಪಶ್ರೀ ಕಾರ್ಯಾಚರಣೆ ನಡೆಸಿದರು.

### ಸುತ್ತೋಲೆ ಹೊರಡಿಸಿದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್‌.ಕೆ. ಅತೀಕ್

# 4–ಜಿ ವಿನಾಯ್ತಿಗೆ ಲಗಾಮು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಟೆಂಡರ್ ಇಲ್ಲದೇ ನೇರವಾಗಿ ಸರಕು ಮತ್ತು ಸೇವೆಗಳ ಪೂರೈಕೆ ಹಾಗೂ ಕಾಮಗಾರಿಗಳ ಗುತ್ತಿಗೆ ನೀಡುವುದಕ್ಕೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ (ಕೆಟಿಪಿಪಿ) ಕಾಯ್ದೆಯ 4-ಜಿ ಅಡಿ ವಿನಾಯ್ತಿ ನೀಡುವುದಕ್ಕೆ ಆರ್ಥಿಕ ಇಲಾಖೆ ಲಗಾಮು ಹಾಕಿದೆ.

ವಾರ್ಷಿಕವಾಗಿ ಆಚರಿಸುವ ಕಾರ್ಯಕ್ರಮಗಳು, ಇಲಾಖಾವಾರು ಕ್ರಿಯಾಯೋಜನೆಗಳಲ್ಲಿ ಅನುಮೋದನೆಯಾಗಿರುವ ಕಾರ್ಯಕ್ರಮಗಳು, ಪೂರ್ವ ನಿರ್ಧರಿತವಾಗಿ ಪಡೆಯುವ ಸೇವೆ, ಸರಕು ಮತ್ತು ಕೈಗೊಳ್ಳುವ ಕಾಮಗಾರಿಗಳಲ್ಲಿ ಗುತ್ತಿಗೆ ನೀಡಲು 4-ಜಿ ವಿನಾಯ್ತಿ ಬಳಸುವುದನ್ನು ನಿರ್ಬಂಧಿಸಿ ಆರ್ಥಿಕ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್.ಕೆ. ಅತೀಕ್ ಮಾರ್ಚ್ 15ರಂದು ಸುತ್ತೋಲೆ ಹೊರಡಿಸಿದ್ದಾರೆ.

ಸ್ವಾತಂತ್ರ್ಯ ದಿನಾಚರಣೆ, ಗಣರಾಜ್ಯೋತ್ಸವ, ಮಹನೀಯರ ಜಯಂತಿ, ದಸರಾ, ಚಲನ ಚಿತ್ರೋತ್ಸವ ಸೇರಿದಂತೆ ಪ್ರತಿ ವರ್ಷವೂ ನಡೆಯುವ ಕಾರ್ಯಕ್ರಮಗಳನ್ನು ಆಯೋಜಿಸುವ ಕೆಲಸಗಳಿಗೆ ಟೆಂಡರ್ ಇಲ್ಲದೇ ಗುತ್ತಿಗೆ ನೀಡುವಂತಿಲ್ಲ. ಸಿವಿಲ್ ಕಾಮಗಾರಿಗಳಿಗೂ 4-ಜಿ ವಿನಾಯ್ತಿ ಕೋರಿ ಪ್ರಸ್ತಾವ ಸಲ್ಲಿಸಬಾರದು. ವಿಸ್ತೃತ ಯೋಜನಾ ವರದಿ (ಡಿಪಿಆರ್) ತಯಾರಿಸುವಂತಹ ಕೆಲಸಗಳಿಗೂ ವಿನಾಯ್ತಿ ಕೋರಿ ಪ್ರಸ್ತಾವ ಸಲ್ಲಿಸುವಂತಿಲ್ಲ ಎಂದು ವಿವಿಧ ಇಲಾಖೆಗಳ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು, ಪ್ರಧಾನ ಕಾರ್ಯದರ್ಶಿಗಳು ಮತ್ತು ಕಾರ್ಯದರ್ಶಿಗಳಿಗೆ ಸುತ್ತೋಲೆಯಲ್ಲಿ ಸೂಚಿಸಿದ್ದಾರೆ.

ಹಲವು ವರ್ಷಗಳಿಂದ ಟೆಂಡರ್ ಮೂಲಕ ನಡೆಯುತ್ತಿರುವ ಕೆಲಸಗಳನ್ನು ಏಕಾಏಕಿ 4-ಜಿ ವಿನಾಯ್ತಿ ಮೂಲಕ ಮಾಡಕೂಡದು. ಕಾಲಾವಕಾಶ ಕಡಿಮೆ ಇದೆ ಎಂಬ ಕಾರಣ ಮುಂದಿಟ್ಟುಕೊಂಡು 4-ಜಿ ವಿನಾಯ್ತಿ ಕೋರಬಾರದು. ಅಂತಹ ಸಂದರ್ಭಗಳಲ್ಲಿ ಕನಿಷ್ಠ ಏಳು ದಿನಗಳ ಅವಧಿಯ ಅಲ್ಪಾವಧಿ ಟೆಂಡರ್ ಪ್ರಕ್ರಿಯೆ ನಡೆಸಬೇಕು. ಸರ್ಕಾರದ ಅಧೀನ ಸಂಸ್ಥೆಗಳು ತಮ್ಮ ಸ್ವಂತ ಉತ್ಪನ್ನಗಳ ಪೂರೈಕೆಗೆ ಮಾತ್ರ ವಿನಾಯ್ತಿ ಕೋರಿ ಪ್ರಸ್ತಾವ ಸಲ್ಲಿಸಬಹುದು ಎಂದು ತಿಳಿಸಲಾಗಿದೆ.

**ಕಾರ್ಯದರ್ಶಿಯೇ ಸಲ್ಲಿಸಬೇಕು:** ಅತ್ಯಂತ ತುರ್ತು ಮತ್ತು ಅವಶ್ಯಕ ಪ್ರಕರಣಗಳಲ್ಲಿ ಟೆಂಡರ್ ಪ್ರಕ್ರಿಯೆಯನ್ನು ತುರ್ತಾಗಿ ನಡೆಸಲು ಸಾಧ್ಯವಿಲ್ಲದಿದ್ದರೆ ಮಾತ್ರ 4-ಜಿ ವಿನಾಯ್ತಿ ಕೋರಬಹುದು. ಜಿಲ್ಲಾಧಿಕಾರಿಗಳು ಅಥವಾ ಇಲಾಖೆಯ ಇತರ ಅಧಿಕಾರಿಗಳು ನೇರವಾಗಿ ಪ್ರಸ್ತಾವ ಸಲ್ಲಿಸುವಂತಿಲ್ಲ. ಆಯಾ ಇಲಾಖೆಯ ಕಾರ್ಯದರ್ಶಿಯೇ ಪ್ರಸ್ತಾವ ಸಲ್ಲಿಸಬೇಕು ಎಂದು ಸೂಚಿಸಲಾಗಿದೆ.

ಪ್ರಸ್ತಾವ ಸಲ್ಲಿಸುವ ಮುನ್ನ ಇಲಾಖಾ ಮುಖ್ಯಸ್ಥರು ಅಥವಾ ಕಾರ್ಯದರ್ಶಿ ಅದನ್ನು ವೈಯಕ್ತಿಕವಾಗಿ ಪ್ರಮಾಣೀಕರಿಸಬೇಕು. ಆರ್ಥಿಕ ಇಲಾಖೆಯ ಜತೆ ವೈಯಕ್ತಿಕವಾಗಿ ಚರ್ಚಿಸಬೇಕು. ಟೆಂಡರ್ ಮೂಲಕ ಸದರಿ ಕೆಲಸವನ್ನು ಮಾಡಲು ಏಕೆ ಸಾಧ್ಯವಿಲ್ಲ ಎಂಬ ಸಮರ್ಥನೆಯನ್ನೂ ಒದಗಿಸಬೇಕಾದ ಹೊಣೆಗಾರಿಕೆ ನಿಗದಿಪಡಿಸಿದ್ದಾರೆ.

**ದುರ್ಬಳಕೆ ಮಾಡಿದರೆ ಕ್ರಮ**

ಕೆಟಿಪಿಪಿ ಕಾಯ್ದೆಯ ಸೆಕ್ಷನ್ 4-ಜಿ ಅಡಿ ವಿನಾಯ್ತಿ ನೀಡಿ ಹೊರಡಿಸಿದ ಅಧಿಸೂಚನೆಯಲ್ಲಿನ ಷರತ್ತು ಉಲ್ಲಂಘಿಸಿ, ಹೆಚ್ಚುವರಿ ಮೊತ್ತ ಪಾವತಿ ಸೇರಿದಂತೆ ಈ ಕಾಯ್ದೆಯನ್ನು ದುರ್ಬಳಕೆ ಮಾಡುವವರ ವಿರುದ್ಧ ಕ್ರಮ ಕೈಗೊಳ್ಳುವುದಾಗಿಯೂ ಸುತ್ತೋಲೆಯಲ್ಲಿ ಎಚ್ಚರಿಕೆ ನೀಡಲಾಗಿದೆ.

'ಇಂತಹ ಪ್ರಕರಣಗಳಲ್ಲಿ ಭಾಗಿಯಾದ ಅಧಿಕಾರಿ, ಸಿಬ್ಬಂದಿ ಕುರಿತು ಸಕ್ಷಮ ಪ್ರಾಧಿಕಾರಿ ಅಥವಾ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಗೆ ವರದಿ ಸಲ್ಲಿಸಬೇಕು. ಅಂತಹ ಅಧಿಕಾರಿಗಳು, ನೌಕರರ ಸೇವಾ ಪುಸ್ತಕದಲ್ಲಿ ಪ್ರಕರಣಗಳ ವಿವರವನ್ನು ದಾಖಲಿಸಬೇಕು ಎಂದು ಸೂಚಿಸಲಾಗಿದೆ.

**ರಥೋತ್ಸವ**

ಶಿರಸಿ ಮಾರಿಕಾಂಬಾ ದೇವಿ ಜಾತ್ರಾ ಮಹೋತ್ಸವದ ಪ್ರಯುಕ್ತ ಬುಧವಾರ ಮಹಾರಥೋತ್ಸವವು ಭಕ್ತರ ಸಮ್ಮುಖದಲ್ಲಿ ಅದ್ದೂರಿಯಾಗಿ ನಡೆಯಿತು ಚಿತ್ರ: ಕಿರಣ್ ಹಾಣಜಿ

# 'ಮಠಕ್ಕೆ ಧಕ್ಕೆ ಉಂಟು ಮಾಡಿಲ್ಲ'

ಪ್ರಜಾವಾಣಿ ವಾರ್ತೆ

**ಹುಬ್ಬಳ್ಳಿ/ಹಾವೇರಿ:** 'ಆರೋಗ್ಯ, ಶಿಕ್ಷಣ ಮತ್ತು ಮಠದ ಅಭಿವೃದ್ಧಿಗೆ ಶ್ರೀಮಠದ ಆಸ್ತಿಯನ್ನು ಬ್ಯಾಂಕ್‌ನಲ್ಲಿ ಅಡವಿಟ್ಟು ಸಾಲ ಪಡೆದಿರುವೆ. ಬೇರೆ ಯಾವ ಮಠ, ಪೀಠಾಧಿಪತಿಗಳು ಆಸ್ತಿಯ ಮೇಲೆ ಸಾಲ ಮಾಡಿಲ್ಲವೇ' ಎಂದು ಮೂರುಸಾವಿರಮಠದ ಹಾಗೂ ಹಾನಗಲ್ ಕುಮಾರೇಶ್ವರ ಮಠದ ಪೀಠಾಧಿಪತಿ ಗುರುಸಿದ್ಧ ರಾಜಯೋಗೀಂದ್ರ ಸ್ವಾಮೀಜಿ ಪ್ರಶ್ನಿಸಿದರು.

ಹಾವೇರಿ ಜಿಲ್ಲೆಯ 'ಹಾನಗಲ್ ಕುಮಾರೇಶ್ವರ ವಿರಕ್ತ ಮಠದ ಆಸ್ತಿಯನ್ನು ಸಹಕಾರಿ ಬ್ಯಾಂಕ್‌ನಲ್ಲಿ ಅಡವಿಟ್ಟು, ಸ್ವಾಮೀಜಿಯವರು ಸಾಲ ಮಾಡಿದ್ದೇಕೆ?' ಎಂಬ ವಿಚಾರ ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆಯಾದ ಹಿನ್ನೆಲೆಯಲ್ಲಿ ಬುಧವಾರ ಸುದ್ದಿಗಾರರ ಜೊತೆ ಮಾತನಾಡಿದರು.

'ಭಕ್ತರಿಗೆ ತಿಳಿಯದಂತೆ ಮಠದ ಆಸ್ತಿಯನ್ನು ಖಾಸಗಿ ಬ್ಯಾಂಕ್‌ನಲ್ಲಿ ಇಟ್ಟು, ದುರ್ಬಳಕೆ ಮಾಡಿಕೊಳ್ಳಲಾಗಿದೆ' ಎಂಬ ಕೆಲ ಭಕ್ತರ ಆರೋಪಕ್ಕೆ ಉತ್ತರಿಸಿದ ಅವರು, 'ಶ್ರೀಮಠಕ್ಕೆ ಧಕ್ಕೆ ತರಲು ಹಾಗೂ ಗೊಂದಲ ಸೃಷ್ಟಿಸಲು, ಸಾಮಾಜಿಕ ಮಾಧ್ಯಮಗಳಲ್ಲಿ ಕೆಲವರು ಸುಳ್ಳು ಆರೋಪ ಮಾಡುತ್ತಿದ್ದಾರೆ' ಎಂದರು.

'ಮಠಾಧಿಪತಿಗೆ, ಮಠದ ನಿರ್ವಹಣೆ ಜವಾಬ್ದಾರಿ ಇರುವವರಿಗೆ, ಮಠದ ಆಸ್ತಿಯ ಮೇಲೆ ಸಾಲ ಮಾಡುವ ಅಧಿಕಾರ ಇರುವುದಿಲ್ಲವೇ? ಕಾನೂನಿನಲ್ಲಿ ಇದಕ್ಕೇನಾದರೂ ವಿರೋಧ ಇದೆಯೇ? ಆಸ್ತಿಯ ಮೇಲೆ ಸಾಲ ಪಡೆಯುವುದು, ತೀರಿಸುವುದು ದೊಡ್ಡ ವಿಷಯವಲ್ಲ, ಮಹಾ ಅಪರಾಧವೂ ಅಲ್ಲ' ಎಂದರು.

**ಭಕ್ತರ ಆಕ್ಷೇಪ:** 'ಮಠದ ಆಸ್ತಿಯ ಮೇಲೆ ಸಾಲ ಮಾಡಿದ್ದು ಸರಿಯಾದ ಕ್ರಮವಲ್ಲ. ಮಠದ ಅಭಿವೃದ್ಧಿಗೆ ಅಥವಾ ಧಾರ್ಮಿಕ ಕಾರ್ಯಕ್ರಮಗಳಿಗೆ ಈ ಹಣ ವೆಚ್ಚವಾಗಿಲ್ಲ. ಧಾರ್ಮಿಕ ಕಾರ್ಯಕ್ರಮಗಳಿಗೆ ಭಕ್ತರು ದೇಣಿಗೆ ನೀಡಿ ಕಾರ್ಯಕ್ರಮ ಮಾಡುತ್ತಾರೆ. ಸಾಲ ಮಾಡಿದ ಬಗ್ಗೆ ಶ್ರೀಗಳು ಮಾಹಿತಿ ನೀಡಿದ ಮೇಲೆ ಆ ಬಗ್ಗೆ ತೀರ್ಮಾನಿಸುತ್ತೇವೆ' ಎಂದು ಶ್ರೀಮಠದ ಹಾನಗಲ್ ಭಕ್ತರೊಬ್ಬರು ತಿಳಿಸಿದ್ದಾರೆ.

'ಯಾವುದಕ್ಕೆ ಹಾನಗಲ್ ಮಠದ ಆಸ್ತಿಯ ಮೇಲೆ ಸಾಲ ಮಾಡಲಾಗಿದೆ ಎಂಬುದು ನಮ್ಮ ಗಮನಕ್ಕೆ ಇಲ್ಲ. ಈ ಬಗ್ಗೆ ಶ್ರೀಗಳೊಂದಿಗೆ ಮಾತನಾಡಿದ್ದು, ನಾಲ್ಕಾರು ದಿನದಲ್ಲಿ ಇದರ ಪೂರ್ಣ ಮಾಹಿತಿ ನೀಡುವ ಭರವಸೆ ನೀಡಿದ್ದಾರೆ' ಎಂದು ಲಿಂ.ಕುಮಾರ ಶಿವಯೋಗಿಗಳ ಪುಣ್ಯಸ್ಮರಣೋತ್ಸವ ಸಮಿತಿ ಪ್ರಧಾನ ಕಾರ್ಯದರ್ಶಿ ಕಲ್ಯಾಣಕುಮಾರ ಶೆಟ್ಟರ ಹೇಳಿದ್ದಾರೆ.

# ಯುದ್ಧ ಟ್ಯಾಂಕರ್ ಎಂಜಿನ್ ಪರೀಕ್ಷೆ

### ಮೈಸೂರಿನ ಬಿಇಎಂಎಲ್ ಆವರಣದಲ್ಲಿ ರಕ್ಷಣಾ ಕಾರ್ಯದರ್ಶಿ ಗಿರಿಧರ್ ಭಾಗಿ

ಪ್ರಜಾವಾಣಿ ವಾರ್ತೆ

**ಮೈಸೂರು:** ಸಾರ್ವಜನಿಕ ವಲಯದ ಬಿಇಎಂಎಲ್‌ನಿಂದ ಸ್ಥಳೀಯವಾಗಿ ಅಭಿವೃದ್ಧಿಪಡಿಸಿರುವ '1,500 ಎಚ್‌ಪಿ ಪ್ರೋಟೋಟೈಪ್ ಎಂಜಿನ್' ಅನ್ನು ಬುಧವಾರ ಇಲ್ಲಿನ ಘಟಕದಲ್ಲಿ ಯಶಸ್ವಿಯಾಗಿ ಪರೀಕ್ಷಿಸಲಾಯಿತು.

ಇದನ್ನು ಮುಖ್ಯ ಯುದ್ಧ ಟ್ಯಾಂಕರ್‌ನಲ್ಲಿ ಬಳಸಲು ಯೋಜಿಸಲಾಗಿದೆ. ಬಿಇಎಂಎಲ್‌ನ ಎಂಜಿನ್ ವಿಭಾಗದ ಆವರಣದಲ್ಲಿ ನಡೆದ ಪರೀಕ್ಷಾರ್ಥ ಪ್ರಕ್ರಿಯೆ (ಫೈರಿಂಗ್) ಅನ್ನು ರಕ್ಷಣಾ ಕಾರ್ಯದರ್ಶಿ ಗಿರಿಧರ್ ಅರಮನೆ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, 'ಯೋಜನೆಯು ಪ್ರಧಾನಿ ನರೇಂದ್ರ ಮೋದಿ ಅವರು ರೂಪಿಸಿದ 'ಆತ್ಮನಿರ್ಭರ ಭಾರತ'ದ ದೃಷ್ಟಿಕೋನ ಸಾಕಾರ ಗೊಳಿಸುವತ್ತ ಮಹತ್ವದ್ದಾಗಿದೆ. ಅಲ್ಲದೇ, ಪರಿವರ್ತನೆಗೂ ನಾಂದಿ ಹಾಡುತ್ತದೆ. ಜಾಗತಿಕ ಮಟ್ಟದಲ್ಲಿ ಸೇನೆಯ ಸಾಮರ್ಥ್ಯದ ವೃದ್ಧಿಗೂ ಕಾರಣವಾಗಲಿದೆ. ಸ್ವಾವಲಂಬಿ ಭಾರತದ ಆಶಯದ ಸಾಕಾರಕ್ಕೆ ಕೊಡುಗೆ ನೀಡುತ್ತದೆ' ಎಂದು ತಿಳಿಸಿದರು.

'ಈ ಎಂಜಿನ್ ಅತ್ಯಾಧುನಿಕ ತಂತ್ರಜ್ಞಾನ ಒಳಗೊಂಡಿದೆ. ಸಿಆರ್‌ಡಿಐ ಇಂಧನ ವ್ಯವಸ್ಥೆಯೊಂದಿಗೆ ಎಲೆಕ್ಟ್ರಾನಿಕ್ ನಿಯಂತ್ರಣ, ಸ್ವಯಂ-ಗಾಳಿ ಫಿಲ್ಟರ್ ಸ್ವಚ್ಛಗೊಳಿಸುವ ಎಲೆಕ್ಟ್ರಾನಿಕ್ ಎಚ್ಚರಿಕೆ ನಿಯಂತ್ರಣ ಸೇರಿದಂತೆ ಸುಧಾರಿತ ತಂತ್ರಜ್ಞಾನಗಳನ್ನು ಹೊಂದಿದೆ. 5ಸಾವಿರ ಮೀಟರ್ ಮತ್ತು ಅದಕ್ಕಿಂತ ಹೆಚ್ಚಿನ ಎತ್ತರದಂತಹ ವಿಷಮ ಪರಿಸ್ಥಿತಿಗಳಲ್ಲಿ ಕಾರ್ಯಾಚರಣೆ ನಡೆಸುವ, ಕಡಿಮೆ ತಾಪಮಾನದಲ್ಲೂ ಕಾರ್ಯನಿರ್ವಹಿಸುವ ಸಾಮರ್ಥ್ಯ ಹೊಂದಿದೆ' ಎಂದು ಮಾಹಿತಿ ನೀಡಿದರು.

'ಈ ಎಂಜಿನ್ ತಯಾರಿಕೆ ಪ್ರಕ್ರಿಯೆ 2017ರಲ್ಲಿ ಆರಂಭಗೊಂಡಿತ್ತು. ಕೋವಿಡ್ ಪರಿಸ್ಥಿತಿ ಎದುರಾದ ಕಾರಣದಿಂದಾಗಿ ವಿಳಂಬವಾಯಿತು. ಇಲ್ಲದಿದ್ದರೆ ಹಿಂದೆಯೇ ಈ ಕೆಲಸ ಮುಗಿದಿರುತ್ತಿತ್ತು. ಮುಂದಿನ ಒಂದು ವರ್ಷದಲ್ಲಿ ಅಂತಹ 20 ಎಂಜಿನ್‌ಗಳನ್ನು ಮತ್ತಷ್ಟು ಪ್ರಯೋಗಗಳಿಗೆ ಒಳಪಡಿಸಲಾಗುವುದು' ಎಂದು ಹೇಳಿದರು.

'ಎಂಜಿನ್‌ನ ಕಾರ್ಯಕ್ಷಮತೆ, ಬಾಳಿಕೆ ಮತ್ತು ವಿಶ್ವಾಸಾರ್ಹತೆಗಾಗಿ ಪರೀಕ್ಷೆ ನಡೆಸಲಾಗುತ್ತಿದೆ. ಯಶಸ್ವಿಯಾದಲ್ಲಿ, ಭಾರತೀಯ ಸೇನೆಯು ಅದನ್ನು ತಮ್ಮ ಶಸ್ತ್ರಸಜ್ಜಿತ ವಾಹನಗಳಲ್ಲಿ ಅಳವಡಿಸುತ್ತದೆ. ಈ ಎಂಜಿನ್ ಶೇ 90ರಷ್ಟು ಭಾರತೀಯ ನಿರ್ಮಿತವಾದುದಾಗಿದೆ' ಎಂದು ತಿಳಿಸಿದರು.

'ಖಾಸಗಿ ವಲಯದೊಂದಿಗೆ ಸ್ಪರ್ಧಿಸಲು ಬಿಇಎಂಎಲ್‌ನಂತಹ ಸಂಸ್ಥೆಗಳಲ್ಲಿ ಗುಣಮಟ್ಟ, ಸಂಶೋಧನೆ, ಅಭಿವೃದ್ಧಿ ಹಾಗೂ ಉತ್ಪಾದಕತೆಯ ಪ್ರಮಾಣ ಹೆಚ್ಚಾಗುವ ಅಗತ್ಯವಿದೆ' ಎಂದು ಗಿರಿಧರ್ ಹೇಳಿದರು.

'1,500 ಎಚ್‌ಪಿ ಎಂಜಿನ್ ಅಭಿವೃದ್ಧಿಪಡಿಸುವ ಯೋಜನೆಯಲ್ಲಿ ಬಿಇಎಂಎಲ್‌ನ ನೌಕರರು ಉತ್ತಮ ಕಾರ್ಯನಿರ್ವಹಣೆ ಮಾಡಿದ್ದಾರೆ. ಕೇಂದ್ರ ಸರ್ಕಾರವು ಬಿಇಎಂಎಲ್‌ನಂತಹ ಸಾರ್ವಜನಿಕ ಕ್ಷೇತ್ರಗಳಿಗೆ ಗರಿಷ್ಠ ಬೆಂಬಲ ನೀಡಲಿದೆ. ಸಂಶೋಧನೆ, ಅಭಿವೃದ್ಧಿ ಹಾಗೂ ಉತ್ಪಾದಕತೆ ವೃದ್ಧಿಗೆ ಸಹಕಾರ ಕೊಡಲಿದೆ. ನೌಕರರು ಬದ್ಧತೆಯಿಂದ ಕೆಲಸ ಮಾಡಿದರೆ ಸಾಧನೆ ಸಾಧ್ಯವಾಗಲಿದೆ' ಎಂದರು.

'ಮುಂದಿನ ದಶಕವು ಬಾಹ್ಯಾಕಾಶ ಕ್ಷೇತ್ರ ಮತ್ತು ರಕ್ಷಣಾ ಉತ್ಪಾದನಾ ವಲಯಕ್ಕೆ ಮಹತ್ವದ್ದಾಗಿದೆ. ಮುಂದಿನ ವರ್ಷಗಳಲ್ಲಿ 'ಮೇಡ್ ಇನ್ ಇಂಡಿಯಾ' ಉಪಗ್ರಹಗಳು, ಹಡಗುಗಳು ಹಾಗೂ ಶಸ್ತ್ರಸಜ್ಜಿತ ವಾಹನಗಳ ಸಂಖ್ಯೆ ಹೆಚ್ಚಾಗಲಿದೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಬಿಇಎಂಎಲ್ ಸಿಇಒ ಶಾಂತನು ರಾಯ್ ಪಾಲ್ಗೊಂಡಿದ್ದರು.

ಮೈಸೂರಿನ ಬಿಇಎಂಎಲ್ ಆವರಣದಲ್ಲಿ ಬುಧವಾರ ನಡೆದ ಸ್ವದೇಶಿ '1,500 ಎಚ್‌ಪಿ ಪ್ರೋಟೋಟೈಪ್ ಎಂಜಿನ್' ಪ್ರಯೋಗ ಕಾರ್ಯಕ್ರಮದಲ್ಲಿ ರಕ್ಷಣಾ ಕಾರ್ಯದರ್ಶಿ ಗಿರಿಧರ್ ಅರಮನೆ ಅವರೊಂದಿಗೆ ಅಧಿಕಾರಿಗಳು ಹಾಗೂ ನೌಕರರು ಪಾಲ್ಗೊಂಡಿದ್ದರು

# ಯಾದಗಿರಿ: ಅನೈತಿಕ ಪೊಲೀಸ್‌ಗಿರಿ

ಪ್ರಜಾವಾಣಿ ವಾರ್ತೆ

**ಯಾದಗಿರಿ:** ಹಿಂದೂ ಧರ್ಮದ ಯುವತಿಯನ್ನು ಪ್ರೀತಿಸಿದ್ದಕ್ಕೆ ಮುಸ್ಲಿಂ ಯುವಕನ ಮೇಲೆ 9 ಜನರ ಗುಂಪು ತೀವ್ರವಾಗಿ ಹಲ್ಲೆ ಮಾಡುವ ಮೂಲಕ ಅನೈತಿಕ ಪೊಲೀಸ್‌ಗಿರಿ ನಡೆಸಿದ್ದು, ಈ ಕುರಿತು ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಗರದ ಗೋಗಿ ಮೊಹಲ್ಲಾ ನಿವಾಸಿ ವಾಹಿದ್ ಹಲ್ಲೆಗೊಳಗಾದ ಯುವಕ.

ಮಲ್ಲು, ತಾಯಪ್ಪ, ಶಿವುನಾಯಕ, ರೂಪೇಶ ಕೋಳಿವಾಡ, ಅಂಬ್ರೇಶ, ಆದರ್ಶಗೌಡ, ಪವನಕುಮಾರ, ಜಂಬು ಸೋಲಂಕಿ, ಬಾಪು ಸೋಲಂಕಿ ಹಲ್ಲೆ ನಡೆಸಿದ ಆರೋಪಿಗಳಾಗಿದ್ದಾರೆ.

ನಗರದಲ್ಲಿ ಮಾರ್ಚ್ 18ರಂದು ಕಾಲೇಜಿನಿಂದ ಮನೆಗೆ ಬರುವಾಗ ಯುವಕನನ್ನು ಅಪಹರಿಸಿದ ಒಂಬತ್ತು ಜನರಿದ್ದ ಗುಂಪು ನಂತರ ಕೊಠಡಿಯಲ್ಲಿ ಕೂಡಿ ಹಾಕಿ ಬೆನ್ನಿಗೆ ಬಾಸುಂಡೆ ಬರುವ ಹಾಗೆ ಥಳಿಸಿದೆ. ಹೊಟ್ಟೆಗೆ ಚಾಕು ಹಾಕಿ ಕೊಲೆ ಮಾಡಲು ಯತ್ನಿಸಿದೆ. ತಪ್ಪಾಗಿದೆ ಎಂದು ಕಾಲಿಗೆ ಬಿದ್ದು ಯುವಕ ಜೀವ ಉಳಿಸಿಕೊಂಡು ಬಂದಿದ್ದಾನೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಯುವತಿಗೆ ಹಾಗೂ ಹಲ್ಲೆ ನಡೆಸಿದ ಗುಂಪಿನವರಿಗೆ ಯಾವುದೇ ಸಂಬಂಧವಿಲ್ಲ. ಯುವತಿಯನ್ನು ಪ್ರೀತಿಸಿದವನು ಅನ್ಯ ಕೋಮಿನವನು ಎಂಬ ಕಾರಣಕ್ಕೆ ಹಲ್ಲೆ ಮಾಡಲಾಗಿದೆ ಎಂದು ತಿಳಿದುಬಂದಿದೆ.

ಯಾದಗಿರಿ ನಗರ ಠಾಣೆಯಲ್ಲಿ 9 ಜನರ ವಿರುದ್ಧ ಐಪಿಸಿಯ 143, 147, 148, 307, 323, 341, 342, 363, 504 ಹಾಗೂ 506 ಕಲಂ ಅಡಿ ಪ್ರಕರಣ ದಾಖಲಾಗಿದೆ. ಆರೋಪಿಗಳು ತಲೆಮರೆಸಿಕೊಂಡಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಹಲ್ಲೆಗೆ ಸಂಬಂಧಿಸಿದಂತೆ ಆರೋಪಿಗಳ ಪತ್ತೆಗಾಗಿ ಡಿವೈಎಸ್‌ಪಿ ನೇತೃತ್ವದಲ್ಲಿ ತಂಡ ರಚನೆ ಮಾಡಲಾಗಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಂಗೀತಾ ತಿಳಿಸಿದ್ದಾರೆ.

# ಶೌಚಾಲಯದಲ್ಲಿ ವಿಡಿಯೊ: ಸಾಬೀತು

ಪ್ರಜಾವಾಣಿ ವಾರ್ತೆ

**ಉಡುಪಿ:** ಇಲ್ಲಿನ ನೇತ್ರಜ್ಯೋತಿ ಪ್ಯಾರಾ ಮೆಡಿಕಲ್ ಕಾಲೇಜಿನ ಶೌಚಾಲಯದಲ್ಲಿ ಮೊಬೈಲ್ ಮೂಲಕ ವಿಡಿಯೊ ಚಿತ್ರೀಕರಣ ಮಾಡಿರುವ ಪ್ರಕರಣದ ಸಂಬಂಧ ಸಿಐಡಿ ಅಧಿಕಾರಿಗಳು ಉಡುಪಿಯ ಪ್ರಧಾನ ಸಿವಿಲ್ ಮತ್ತು ಜೆಎಂಎಫ್ ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಿದ್ದು ಶಬನಾಜ್, ಅಲ್ಫಿಯಾ ಹಾಗೂ ಅಲಿಮತ್ ಉಲ್ ಶಫಾ ಎಂಬ ವಿದ್ಯಾರ್ಥಿನಿಯರು ಶೌಚಾಲಯದಲ್ಲಿ ಸಹಪಾಠಿಯ ವಿಡಿಯೊ ಚಿತ್ರೀಕರಣ ಮಾಡಿರುವುದಾಗಿ ಬರೆದುಕೊಟ್ಟಿದ್ದ ತಪ್ಪೊಪ್ಪಿಗೆ ಪತ್ರ ಅಸಲಿ ಎಂಬುದು ಎಫ್‌ಎಸ್‌ಎಲ್ ವರದಿಯಲ್ಲಿ ದೃಢಪಟ್ಟಿದೆ ಎಂದು ಉಲ್ಲೇಖಿಸಲಾಗಿದೆ.

ಆರೋಪಿ ವಿದ್ಯಾರ್ಥಿನಿಯರು ಗೆಳತಿಯ ವಿಡಿಯೊ ಮಾಡಲು ಹೋಗಿ ಬೇರೆ ಯುವತಿಯ ವಿಡಿಯೊ ಮಾಡಿರುವುದು, ಬಳಿಕ ಮೊಬೈಲ್‌ನಲ್ಲಿದ್ದ ವಿಡಿಯೊ ಡಿಲೀಟ್ ಮಾಡಿರುವುದು ತಿಳಿದುಬಂದಿದೆ ಎಂದು ಸಿಐಡಿ ಅಧಿಕಾರಿಗಳು ಆರೋಪಪಟ್ಟಿಯಲ್ಲಿ ಉಲ್ಲೇಖಿಸಿದ್ದಾರೆ.

**ಆರೋಪಪಟ್ಟಿಯಲ್ಲಿ ಏನಿದೆ?:** ಆರೋಪಿತ ವಿದ್ಯಾರ್ಥಿನಿಯರು ತಮಾಷೆ ಹಾಗೂ ಪ್ರ್ಯಾಂಕ್ ವಿಡಿಯೊ ಮಾಡಲು 2023ರ ಜುಲೈ 18ರಂದು ಕಾಲೇಜಿನ ಶೌಚಾಲಯದಲ್ಲಿ ಗೆಳತಿಯ ವಿಡಿಯೊ ಮಾಡಿದ್ದರು. ಆದರೆ, ಆ ವಿಡಿಯೊದಲ್ಲಿ ಗೆಳತಿಯ ಬದಲಾಗಿ ಬೇರೆ ಯುವತಿ ಇರುವುದು ಅರಿವಿಗೆ ಬಂದಿದ್ದು ಕೂಡಲೇ ವಿಡಿಯೊ ಡಿಲೀಟ್ ಮಾಡಿ ಸಂತ್ರಸ್ತೆಗೆ ವಿಚಾರ ತಿಳಿಸಿ ಕ್ಷಮೆಯಾಚಿಸಿದ್ದಾರೆ. ಕಾಲೇಜಿನ ಆಡಳಿತ ಮಂಡಳಿಗೆ ಗೊತ್ತಾಗಿ ವಿಚಾರಣೆಗೊಳಪಡಿಸಿದಾಗ ವಿಡಿಯೊ ಮಾಡಿರುವುದಾಗಿ ಒಪ್ಪಿಕೊಂಡಿದ್ದರು.

ವಿದ್ಯಾರ್ಥಿನಿಯರ ಕೈಬರಹ ಹಾಗೂ ಕ್ಷಮಾಪಣಾ ಪತ್ರದ ಬರಹ ತಾಳೆಯಾಗುತ್ತಿದೆ ಎಂದು ಎಫ್‌ಎಸ್‌ಎಲ್ ವರದಿ ದೃಢೀಕರಿಸಿದ್ದು, ಕಾಲೇಜಿನ ಸಿಸಿಟಿವಿ ಕ್ಯಾಮೆರಾ ದೃಶ್ಯಾವಳಿಗಳು ಆರೋಪಗಳಿಗೆ ಪೂರಕವಾಗಿದೆ. ವಿದ್ಯಾರ್ಥಿನಿಯರ ಮೊಬೈಲ್ ಕುರಿತ ವಿಧಿವಿಜ್ಞಾನ ಪ್ರಯೋಗಾಲಯದ ವರದಿ ಬಂದ ನಂತರ ನ್ಯಾಯಾಲಯಕ್ಕೆ ಸಲ್ಲಿಸಲಾಗುವುದು ಎಂದು ತನಿಖಾಧಿಕಾರಿ ಜಾರ್ಜ್‌ಶೀಟ್‌ನಲ್ಲಿ ತಿಳಿಸಿದ್ದಾರೆ.

# ಬಿಡದ ಪಟ್ಟು, ಟಿಕೆಟ್ ಕಗ್ಗಂಟು

ಒಂದನೇ ಪುಟದಿಂದ...

ಚಿತ್ರದುರ್ಗ ಕ್ಷೇತ್ರದಲ್ಲಿ ಮಾಜಿ ಸಂಸದ ಬಿ.ಎನ್.ಚಂದ್ರಪ್ಪ ಅವರಿಗೆ ಟಿಕೆಟ್ ನೀಡಲು ತೀರ್ಮಾನಿಸಲಾಗಿದೆ. 'ಆಕಾಂಕ್ಷಿಯೊಬ್ಬರು ತಪ್ಪು ಮಾಹಿತಿ ನೀಡಿ ತಮ್ಮಲ್ಲಿ ಪತ್ರ ಬರೆಸಿಕೊಂಡಿದ್ದಾರೆ. ಚಂದ್ರಪ್ಪ ಅವರಿಗೆ ಅವಕಾಶ ನೀಡಬೇಕು' ಎಂದು ಜಿಲ್ಲೆಯ ಕಾಂಗ್ರೆಸ್ ಶಾಸಕರು ರಾಷ್ಟ್ರೀಯ ನಾಯಕರ ಗಮನಕ್ಕೆ ತಂದಿದ್ದಾರೆ. ಹೀಗಾಗಿ, ಈ ಕ್ಷೇತ್ರದ ಬಿಕ್ಕಟ್ಟು ಬಗೆಹರಿದಿದೆ ಎಂದು ಮೂಲಗಳು ತಿಳಿಸಿವೆ.

ಚಾಮರಾಜನಗರದಲ್ಲಿ ಪುತ್ರ ಸುನೀಲ್ ಬೋಸ್‌ಗೆ ಟಿಕೆಟ್ ಕೊಡಿಸಲು ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ.ಮಹದೇವಪ್ಪ ಇನ್ನಿಲ್ಲದ ಪ್ರಯತ್ನ ನಡೆಸುತ್ತಿದ್ದಾರೆ. ಮಾಜಿ ಶಾಸಕ ಜೆ.ನಂಜುಂಡಸ್ವಾಮಿ ಅವರು ನಾಲ್ಕೈದು ದಿನಗಳಿಂದ ನವದೆಹಲಿಯಲ್ಲಿ ಬೀಡು ಬಿಟ್ಟು ಪಕ್ಷದ ಉನ್ನತ ನಾಯಕರನ್ನು ಭೇಟಿ ಮಾಡಿ ಪ್ರಯತ್ನ ನಡೆಸುತ್ತಿದ್ದಾರೆ. ಸುನೀಲ್ ಬೋಸ್ ಅವರಿಗೆ ಅವಕಾಶ ನೀಡಲು ಸಿದ್ದರಾಮಯ್ಯ ಒಲವು ತೋರಿದ್ದಾರೆ. ಜಿಲ್ಲೆಯ ಶಾಸಕರ ವಿರೋಧ ಇರುವುದರಿಂದ ಸಮಸ್ಯೆ ಆಗಬಹುದು ಎಂಬ ಆತಂಕ ಶಿವಕುಮಾರ್ ಹಾಗೂ ಇತರ ನಾಯಕರಿಗೆ ಕಾಡುತ್ತಿದೆ. ಹೀಗಾಗಿ, ಇನ್ನಷ್ಟು ಸಮಾಲೋಚನೆ ನಡೆಸಲು ತೀರ್ಮಾನಿಸಲಾಗಿದೆ. 'ಐದು ಕ್ಷೇತ್ರಗಳಲ್ಲಿ ಸಚಿವರ ಮಕ್ಕಳಿಗೆ ಮಣೆ ಹಾಕಲಾಗಿದೆ. ನನ್ನ ಪುತ್ರನ ವಿಷಯದಲ್ಲಿ ಬೇರೊಂದು ನಿಲುವು ತಳೆಯುವುದು ಸರಿಯಲ್ಲ' ಎಂದು ಮಹದೇವಪ್ಪ ಅವರು ಬೇಸರ ವ್ಯಕ್ತಪಡಿಸಿದ್ದಾರೆ ಎಂದು ಗೊತ್ತಾಗಿದೆ.

ಚಿಕ್ಕಬಳ್ಳಾಪುರದಲ್ಲಿ ಮಾಜಿ ಸಚಿವ ಎನ್.ಎಚ್.ಶಿವಶಂಕರ ರೆಡ್ಡಿ ಹಾಗೂ ಯುವ ಕಾಂಗ್ರೆಸ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ರಕ್ಷಾ ರಾಮಯ್ಯ ನಡುವೆ ಪೈಪೋಟಿ ಏರ್ಪಟ್ಟಿದೆ. '2009ರ ಚುನಾವಣೆಯಲ್ಲಿ ಚಿಕ್ಕಬಳ್ಳಾಪುರ ಕ್ಷೇತ್ರಕ್ಕೆ ನನ್ನ ಹೆಸರನ್ನು ಅಂತಿಮಗೊಳಿಸಲಾಗಿತ್ತು. ಕೊನೆಯ ಕ್ಷಣದಲ್ಲಿ ಅವಕಾಶ ನಿರಾಕರಿಸಲಾಗಿತ್ತು. ಮಗನ ವಿಷಯದಲ್ಲಿ ಈ ರೀತಿ ಅನ್ಯಾಯ ಮಾಡಬೇಡಿ. ಕ್ಷೇತ್ರದಿಂದ ಸ್ಪರ್ಧಿಸಬೇಕು ಎಂಬ ಉದ್ದೇಶದಿಂದ ವರ್ಷದಿಂದ ಸಂಘಟನೆ ಮಾಡುತ್ತಿದ್ದಾನೆ' ಎಂದು ವಿಧಾನ ಪರಿಷತ್ ಸದಸ್ಯ ಎಂ.ಆರ್. ಸೀತಾರಾಮ್ ಅವರು ಸಿದ್ದರಾಮಯ್ಯ ಹಾಗೂ ಶಿವಕುಮಾರ್ ಅವರ ಗಮನಕ್ಕೆ ತಂದಿದ್ದಾರೆ.

ಬಳ್ಳಾರಿ ಕ್ಷೇತ್ರದಲ್ಲಿ ಮಾಜಿ ಸಂಸದ ವಿ.ಎಸ್. ಉಗ್ರಪ್ಪ ಮತ್ತು ಶಾಸಕ ಇ. ತುಕಾರಾಂ ಅಥವಾ ಅವರ ಮಗಳು ಸೌಪರ್ಣಿಕಾ (ಚೈತನ್ಯ) ಮಧ್ಯೆ ಪೈಪೋಟಿ ಇದೆ. ಈ ಮಧ್ಯೆ, ಹಾಲಿ ಬಿಜೆಪಿ ಸಂಸದ ದೇವೇಂದ್ರಪ್ಪ ಅವರೂ ಕಾಂಗ್ರೆಸ್ ಮುಖ ಮಾಡಿದ್ದು, ಟಿಕೆಟ್ ಆಕಾಂಕ್ಷಿಯಾಗಿದ್ದಾರೆ. ಆದರೆ, ವಲಸಿಗರಿಗೆ ಟಿಕೆಟ್ ಇಲ್ಲ ಎಂಬ ನಿಲುವನ್ನು ಹೈಕಮಾಂಡ್ ಹೊಂದಿದೆ.

**ಕೇಸರಿ ಪಾಳಯದಲ್ಲಿ 'ಪಂಚ' ಗೊಂದಲ**

ಐದು ಕ್ಷೇತ್ರಗಳಿಗೆ ಬಿಜೆಪಿ ಅಭ್ಯರ್ಥಿಗಳ ಹೆಸರನ್ನು ಅಖೈರುಗೊಳಿಸಲು ರಾಜ್ಯ ನಾಯಕರ ಜತೆಗೆ ವರಿಷ್ಠರು ಸುದೀರ್ಘ ಸಮಾಲೋಚನೆ ನಡೆಸಿದರು. ಆದರೆ, ಅಂತಿಮ ತೀರ್ಮಾನಕ್ಕೆ ಬರಲು ಸಾಧ್ಯವಾಗಲಿಲ್ಲ. ಕೇಂದ್ರ ಚುನಾವಣಾ ಸಮಿತಿ ಸಭೆಯಲ್ಲಿ ಮತ್ತೊಮ್ಮೆ ಸಭೆ ನಡೆಸಿ ಅಂತಿಮ ತೀರ್ಮಾನಕ್ಕೆ ಬರಲು ನಿರ್ಧರಿಸಲಾಗಿದೆ.

ಉತ್ತರ ಕನ್ನಡ ಕ್ಷೇತ್ರದಲ್ಲಿ ಹಾಲಿ ಸಂಸದ ಅನಂತ ಕುಮಾರ್ ಹೆಗಡೆ ಅವರಿಗೆ ಟಿಕೆಟ್ ಕೈ ತಪ್ಪುವುದು ಬಹುತೇಕ ಖಚಿತವಾಗಿದೆ. ವಿಧಾನಸಭೆಯ ಮಾಜಿ ಅಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಹೆಸರು ಮುನ್ನೆಲೆಗೆ ಬಂದಿದೆ. ಈಡಿಗ ಸಮುದಾಯದವರನ್ನು ಕಣಕ್ಕಿಳಿಸಿದರೆ ಹೇಗೆ ಎಂಬ ಚರ್ಚೆಗಳು ನಡೆದಿವೆ.

ಬೆಳಗಾವಿಯಲ್ಲಿ ಮಾಜಿ ಮುಖ್ಯಮಂತ್ರಿ ಜಗದೀಶ ಶೆಟ್ಟರ್ ಅವರನ್ನು ಕಣಕ್ಕಿಳಿಸುವ ಬಗ್ಗೆ ಒಮ್ಮತಕ್ಕೆ ಬರಲಾಗಿದೆ. ಬೆಳಗಾವಿ ಜಿಲ್ಲೆಯ ನಾಯಕರ ಜತೆಗೆ ಬಿ.ಎಸ್.ಯಡಿಯೂರಪ್ಪ ಹಾಗೂ ಬಿ.ವೈ.ವಿಜಯೇಂದ್ರ ಚರ್ಚೆ ನಡೆಸಿದ್ದಾರೆ. ಶೆಟ್ಟರ್ ಬೆಂಬಲಕ್ಕೆ ನಿಲ್ಲುವಂತೆ ಸೂಚಿಸಿದ್ದಾರೆ.

ಚಿಕ್ಕಬಳ್ಳಾಪುರ ಕ್ಷೇತ್ರದಲ್ಲಿ ಮಾಜಿ ಸಚಿವ ಡಾ.ಕೆ.ಸುಧಾಕರ್ ಹಾಗೂ ಅಲೋಕ್ ವಿಶ್ವನಾಥ್ ನಡುವೆ ಪೈಪೋಟಿ ಏರ್ಪಟ್ಟಿದೆ. ಸುಧಾಕರ್ ಅವರನ್ನು ಕಣಕ್ಕಿಳಿಸುವ ಕುರಿತು ಸಹಮತ ವ್ಯಕ್ತವಾಗಿದೆ. ಇದರ ಬೆನ್ನಲ್ಲೇ, ಶಾಸಕ ಎಸ್.ಆರ್. ವಿಶ್ವನಾಥ್ ಅವರು ನಾನೇ ಕಣಕ್ಕೆ ಇಳಿಯುವೆ ಎಂದು ಘೋಷಿಸಿದ್ದಾರೆ.

ಚಿತ್ರದುರ್ಗ ಕ್ಷೇತ್ರದಲ್ಲಿ ಕೇಂದ್ರ ಸಚಿವ ಎ.ನಾರಾಯಣಸ್ವಾಮಿ ಟಿಕೆಟ್ ವಂಚಿತರಾಗುವುದು ನಿಸ್ಸಂಶಯ. ಮಾಜಿ ಸಚಿವ ಗೋವಿಂದ ಕಾರಜೋಳ ಹೆಸರು ಮುಂಚೂಣಿಗೆ ಬಂದಿದೆ. ಹೊಳಲ್ಕೆರೆ ಶಾಸಕ ಬಿ.ಚಂದ್ರಪ್ಪ ಪುತ್ರ ರಘುನಂದನ್ ಪ್ರಯತ್ನ ಮುಂದುವರಿದಿದೆ.

ರಾಯಚೂರಿನಲ್ಲಿ ಟಿಕೆಟ್‌ಗಾಗಿ ಸಂಸದ ರಾಜ ಅಮರೇಶ್ವರ ನಾಯಕ ಹಾಗೂ ಮಾಜಿ ಸಂಸದ ಬಿ.ವಿ.ನಾಯಕ ನಡುವೆ ಸ್ಪರ್ಧೆ ಇದೆ.

# 'ಜೆಡಿಎಸ್‌ನವರು ಪಿ.ಎಂ, ಸಿ.ಎಂ ಆಗಿದ್ದು ನಮ್ಮಿಂದ'

ಪ್ರಜಾವಾಣಿ ವಾರ್ತೆ

ಡಿ.ಕೆ. ಸುರೇಶ್

**ಬೆಂಗಳೂರು:** 'ಜೆಡಿಎಸ್ ನಾಯಕರನ್ನು ಪ್ರಧಾನ ಮಂತ್ರಿ, ಮುಖ್ಯಮಂತ್ರಿಯಾಗಿ ಮಾಡಿದವರು ನಾವು (ಕಾಂಗ್ರೆಸ್)' ಎಂದು ಸಂಸದ ಡಿ.ಕೆ. ಸುರೇಶ್ ತಿರುಗೇಟು ನೀಡಿದರು.

'ಕಾಂಗ್ರೆಸ್‌ನಂತೆ ಬಿಜೆಪಿಯವರು ಕುತ್ತಿಗೆ ಕೊಯ್ಯುವ ಕೆಲಸ ಮಾಡಿಲ್ಲ' ಎಂಬ ಎಚ್.ಡಿ. ಕುಮಾರಸ್ವಾಮಿ ಆರೋಪಕ್ಕೆ ಪ್ರತಿಕ್ರಿಯಿಸಿದ ಅವರು, 'ಜೆಡಿಎಸ್‌ನವರನ್ನು ಈ ದೇಶ ಗುರುತಿಸುವಂತೆ ಮಾಡಿರುವುದು ಕಾಂಗ್ರೆಸ್ ಪಕ್ಷ. ದೇವೇಗೌಡರನ್ನು ಕಾಂಗ್ರೆಸ್ ಪಕ್ಷ ಪ್ರಧಾನಿ ಮಾಡದೇ ಹೋಗಿದ್ದರೆ, ಅವರನ್ನು ಈ ದೇಶ ನೆನಪಿಸಿಕೊಳ್ಳುತ್ತಿರಲಿಲ್ಲ. ರಾಜ್ಯದ 30 ಮುಖ್ಯಮಂತ್ರಿಗಳಲ್ಲಿ ಕುಮಾರಸ್ವಾಮಿ ಒಬ್ಬರಾಗಿರುತ್ತಿರಲಿಲ್ಲ' ಎಂದರು.

'ಆಸ್ಪತ್ರೆಯಿಂದ ಬಂದ ನಂತರ ದೊಡ್ಡಮಟ್ಟದಲ್ಲಿ ಪ್ರಚಾರ ಮಾಡುತ್ತೇನೆ' ಎನ್ನುವ ಕುಮಾರಸ್ವಾಮಿ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, 'ಆರೋಗ್ಯ ಸರಿ ಇಲ್ಲವೆಂದು ಆಸ್ಪತ್ರೆ ಸೇರಿರುವ ಕುಮಾರಸ್ವಾಮಿ ಆದಷ್ಟು ಬೇಗ ಗುಣಮುಖರಾಗಲಿ. ರಾಜಕಾರಣದಲ್ಲಿ ಎದುರಾಳಿಗಳು ಬಲಿಷ್ಠವಾಗಿದ್ದಷ್ಟು ಚೆನ್ನಾಗಿ ಕೆಲಸ ಮಾಡಲು ಸಾಧ್ಯ' ಎಂದರು.

**ಜನತೆಯ ಬಳಿ ಕೂಲಿ ಕೇಳುತ್ತಿದ್ದೇನೆ:** 'ಮಾಜಿ ಪ್ರಧಾನಿ ಹಿಂದೆ ಹೇಳಿದ್ದ, 'ಮುಂದಿನ ಜನ್ಮದಲ್ಲಿ ಮುಸ್ಲಿಮನಾಗಿ ಹುಟ್ಟುತ್ತೇನೆ', 'ಮೋದಿ ಗೆದ್ದರೆ ದೇಶ ಬಿಟ್ಟು ಹೋಗುತ್ತೇನೆ', 'ರಾಜ್ಯಕ್ಕೆ ರಾಷ್ಟ್ರೀಯ ಪಕ್ಷಗಳ ಅವಶ್ಯವಿಲ್ಲ, ಪ್ರಾದೇಶಿಕ ಪಕ್ಷಗಳ ಅಗತ್ಯ' ಎಂಬೆಲ್ಲ ಹೇಳಿಕೆಗಳನ್ನು ಮಾಧ್ಯಮಗಳು ಜನರಿಗೆ ತೋರಿಸಬೇಕು' ಎಂದ ಅವರು, 'ನಾನು ಮಾಡಿರುವ ಕೆಲಸಗಳಿಗೆ ನನ್ನ ಕ್ಷೇತ್ರದ ಜನತೆಯ ಬಳಿ ಕೂಲಿ ಕೇಳುತ್ತಿದ್ದೇನೆ. ಮಾಧ್ಯಮದವರು ನನಗೆ ಕೂಲಿ ಕೊಡಿಸುತ್ತೀರಿ ಎನ್ನುವ ಭಾವನೆ ಇದೆ' ಎಂದೂ ಡಿ.ಕೆ. ಸುರೇಶ್ ಹೇಳಿದರು.

ಹಳೇ ಮೈಸೂರು ಭಾಗದಲ್ಲಿ ಜೆಡಿಎಸ್- ಬಿಜೆಪಿ ನಾಯಕರು ಕಾಂಗ್ರೆಸ್ ಸೇರುವ ಸಾಧ್ಯತೆಯ ಬಗ್ಗೆ ಪ್ರಶ್ನಿಸಿದಾಗ, 'ಈ ಬಗ್ಗೆ ನಮ್ಮ ಪಕ್ಷದ ವರಿಷ್ಠರನ್ನು ಕೇಳಬೇಕು. ಎಲ್ಲವೂ ಪಕ್ಷದ ಹೈಕಮಾಂಡ್ ನಿರ್ಧಾರ' ಎಂದರು.

## ಈಶ್ವರಪ್ಪ ಹೇಳಿಕೆಗೆ ಉತ್ತರ ಕೊಡಲ್ಲ: ಬಿಎಸ್‌ವೈ

**ನವದೆಹಲಿ:** 'ಶಿವಮೊಗ್ಗ ಕ್ಷೇತ್ರದಲ್ಲಿ ಸ್ಪರ್ಧಿಸುತ್ತಿರುವ ಕೆ.ಎಸ್.ಈಶ್ವರಪ್ಪ ಅವರ ಬೇಜವಾಬ್ದಾರಿ ಹೇಳಿಕೆಗೆ ನಾನು ಉತ್ತರ ಕೊಡುವುದಿಲ್ಲ' ಎಂದು ಬಿಜೆಪಿ ಕೇಂದ್ರ ಸಂಸದೀಯ ಮಂಡಳಿಯ ಸದಸ್ಯ ಬಿ.ಎಸ್.ಯಡಿಯೂರಪ್ಪ ತಿಳಿಸಿದರು.

ಬುಧವಾರ ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, 'ವಿಜಯೇಂದ್ರ ಏನು ಎಂಬುದನ್ನು ರಾಜ್ಯದ ಜನರು ತೀರ್ಮಾನ ಮಾಡುತ್ತಾರೆ' ಎಂದರು.

'ತುಮಕೂರಿನಲ್ಲಿ ಟಿಕೆಟ್ ಸಿಗದೆ ಅಸಮಾಧಾನಗೊಂಡಿರುವ ಜೆ.ಸಿ. ಮಾಧುಸ್ವಾಮಿ ಅವರೊಂದಿಗೆ ನಾನು ಮಾತನಾಡುತ್ತೇನೆ. ಮಾಧುಸ್ವಾಮಿ ಹಾಗೂ ಕ್ಷೇತ್ರದ ಅಭ್ಯರ್ಥಿ ವಿ.ಸೋಮಣ್ಣ ಜತೆಗೂಡಿ ಕೆಲಸ ಮಾಡಲಿದ್ದಾರೆ' ಎಂದರು.

'ಕೊಪ್ಪಳ ಕ್ಷೇತ್ರದ ಹಾಲಿ ಸಂಸದ ಸಂಗಣ್ಣ ಕರಡಿ ಅವರಿಗೆ ಐದು ಸಲ ಕರೆ ಮಾಡಿ ಮಾತನಾಡುವ ಪ್ರಯತ್ನ ಮಾಡಿದ್ದೇನೆ. ಅವರು ಪಕ್ಷದಲ್ಲಿ ಹಿರಿಯರಿದ್ದಾರೆ. ಮುಂದಿನ ದಿನಗಳಲ್ಲಿ ಅವರಿಗೆ ಉತ್ತಮ ಸ್ಥಾನಮಾನ ಸಿಗಲಿದೆ' ಎಂದರು.

### 3 ದಿನ ಆಹಾರವಿಲ್ಲದೇ ಸಮುದ್ರದಲ್ಲಿ ಸಿಲುಕಿದ್ದ 8 ಸಿಬ್ಬಂದಿ

# ಮಂಗಳೂರಿನ ಹಡಗು ಲಕ್ಷದ್ವೀಪದ ಬಳಿ ಮುಳುಗಡೆ

ಪ್ರಜಾವಾಣಿ ವಾರ್ತೆ

**ಮಂಗಳೂರು:** ಇಲ್ಲಿನ ಹಳೆ ಬಂದರಿನಿಂದ ಮಾ.12ರಂದು ಲಕ್ಷದೀಪಕ್ಕೆ ಹೊರಟ ಸರಕು ಸಾಗಣೆ ಹಡಗು ಎಂಎಸ್‌ವಿ ವರಥರಾಜನ್ (ಸಿಎಲ್‌ಆರ್192) ಅರಬ್ಬಿ ಸಮುದ್ರದಲ್ಲಿ ಮುಳುಗಡೆಯಾಗಿದೆ. ಅದರಲ್ಲಿದ್ದ ಎಂಟು ಸಿಬ್ಬಂದಿಯನ್ನು ಲಕ್ಷದ್ವೀಪ ಸಮೂಹದ ಕಲ್ಪೇಣಿ ದ್ವೀಪದ ಮೀನುಗಾರರು ಸೋಮವಾರ (ಮಾ.18ರಂದು) ರಕ್ಷಣೆ ಮಾಡಿದ್ದಾರೆ.

ಸಿಮೆಂಟ್, ಜಲ್ಲಿಕಲ್ಲು, ಮರಳು (ಎಂ.ಸ್ಯಾಂಡ್), ಕಬ್ಬಿಣ ಹಾಗೂ ತರಕಾರಿಯೊಂದಿಗೆ ಇಲ್ಲಿನ ಹಳೆಬಂದರು ದಕ್ಕೆಯಿಂದ ಹೊರಟಿದ್ದ ಹಡಗು ಲಕ್ಷದ್ವೀಪದ ಆಂಡ್ರೋತ್ ದ್ವೀಪ ವನ್ನು ಮಾ.13ರಂದು ರಾತ್ರಿ ತಲುಪಿತ್ತು. ಅಲ್ಲಿ ಸ್ವಲ್ಪ ಸರಕನ್ನು ಇಳಿಸಿ, ಇನ್ನುಳಿದ ಸರಕನ್ನು ಅಗಥಿ ದ್ವೀಪಕ್ಕೆ ಸಾಗಿಸಬೇಕಿತ್ತು. ಆಂಡ್ರೋತ್ ದ್ವೀಪದಿಂದ ಮಾರ್ಚ್ 14ರಂದು ಅಗಥಿ ದ್ವೀಪಕ್ಕೆ ಸಾಗುವಾಗ ಹಡಗು ಭಾರಿ ಗಾಳಿಯ ಒತ್ತಡಕ್ಕೆ ಸಿಲುಕಿತ್ತು. ಅದೇ ವೇಳೆ ಹಡಗಿನ ಎಂಜಿನ್ ಕೆಟ್ಟಿತ್ತು. ಕ್ರಮೇಣ ಹಡಗಿನೊಳಗೆ ನೀರು ನುಗ್ಗಿತ್ತು. ಹಡಗು ಮುಳುಗುವುದು ಖಚಿತವಾಗುತ್ತಿದ್ದಂತೆಯೇ ಅದರಲ್ಲಿದ್ದ ಎಂಟು ಮಂದಿ ಸಿಬ್ಬಂದಿ ಪಾತಿಯಲ್ಲಿ (ಪುಟ್ಟ ದೋಣಿ) ರಕ್ಷಣೆ ಪಡೆದರು. ಈ ಹಡಗಿನ ಮಾಲೀಕ ಹಾಗೂ ಸಿಬ್ಬಂದಿ ತಮಿಳುನಾಡಿನವರು' ಎಂದು ಹಳೆಬಂದರು ಬಳಕೆದಾರರ ಸಂಘದ ಕಾರ್ಯದರ್ಶಿ ಅಬ್ದುಲ್ ಲತೀಫ್ ಬೆಂಗರೆ 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

'ಪಾತಿಯಲ್ಲಿ ಯಂತ್ರವನ್ನು ಅಳವಡಿಸಿರುವುದಿಲ್ಲ. ಹಾಗಾಗಿ ಅದನ್ನು ಬಳಸಿ ದಡ ಸೇರಲು ಆಗುವುದಿಲ್ಲ. ಹಡಗು ಮುಳುಗಿದ್ದರಿಂದ ಸಿಬ್ಬಂದಿ ಮೂರು ದಿನಗಳ ಕಾಲ ಸಮುದ್ರದಲ್ಲಿ ಆಹಾರವಿಲ್ಲದೇ ಕಳೆದಿದ್ದರು. ಕಲ್ಪೇಣಿ ದ್ವೀಪದ ಮೀನುಗಾರರು ಸಮುದ್ರದಲ್ಲಿ ಸಿಲುಕಿದ್ದ ಹಡಗಿನ ಕ್ಯಾಪ್ಟನ್ ಭಾಸ್ಕರನ್ ಹಾಗೂ ಸಿಬ್ಬಂದಿಯಾದ ನಾಗಲಿಂಗಂ, ನಲ್ಲಮುತ್ತು ಗೋಪಾಲ್, ಮಂಡಿದೇವನ್ ವೇಲು, ವಿಘ್ನೇಶ್, ಅಜಿತ್ ಕುಮಾರ್ ಎಸ್., ಕುಪ್ಪುರಾಮನ್, ಎಂ.ಮುರುಗನ್ ಅವರನ್ನು ರಕ್ಷಣೆ ಮಾಡಿದ್ದರು. ಪಾತಿಯನ್ನು ತಮ್ಮ ಮೀನುಗಾರಿಕಾ ದೋಣಿಯ ಮೂಲಕ ಕಲ್ಪೇಣಿ ದ್ವೀಪಕ್ಕೆ ಕರೆದೊಯ್ದು ಕರಾವಳಿ ರಕ್ಷಣಾ ಪಡೆಗೆ ಮಾಹಿತಿ ನೀಡಿದ್ದರು. ರಕ್ಷಣೆ ಮಾಡಲಾದ ಸಿಬ್ಬಂದಿಯನ್ನು ಕರಾವಳಿ ರಕ್ಷಣಾ ಪಡೆಯ ಕೊಚ್ಚಿ ನೆಲೆಗೆ ಕರೆದೊಯ್ಯಲಾಗಿದೆ' ಎಂದು ಅವರು ತಿಳಿಸಿದರು.

'ಹಡಗು ಮುಳುಗಿದ ಬಗ್ಗೆ ಮಂಗಳೂರು ಮತ್ತು ಲಕ್ಷದ್ವೀಪದ ಕರಾವಳಿ ರಕ್ಷಣಾ ಪಡೆಗೆ ಸಂತ್ರಸ್ತ ಮೀನುಗಾರರು ಮಾಹಿತಿ ನೀಡಿದ್ದರು. ಕರಾವಳಿ ರಕ್ಷಣಾ ಪಡೆಯ ಸಿಬ್ಬಂದಿ ಕಡಲಿನಲ್ಲಿ ಸಿಲುಕಿದ್ದ ಸಿಬ್ಬಂದಿಗಾಗಿ ಮಾರ್ಚ್ 15ರಿಂದ 17ರವರೆಗೆ ಹುಡುಕಾಟ ನಡೆಸಿದ್ದರು. ಆದರೂ ಅವರು ಪತ್ತೆಯಾಗಿರಲಿಲ್ಲ' ಎಂದರು.

ಕಲ್ಪೇಣಿಯ ಮೀನುಗಾರರು ರಕ್ಷಣೆ ಮಾಡಿದ ಸರಕು ಸಾಗಣೆ ಹಡಗಿನ ಸಿಬ್ಬಂದಿಯನ್ನು ಮೀನುಗಾರಿಕಾ ದೋಣಿಯಲ್ಲಿ ದ್ವೀಪಕ್ಕೆ ಕರೆದೊಯ್ಯಲಾಯಿತು

**'ಲಕ್ಷಾಂತರ ರೂಪಾಯಿ ಸರಕು ನಷ್ಟ'**

ಹಡಗಿನಲ್ಲಿ ಸಾಗಿಸಿದ್ದ ಲಕ್ಷಾಂತರ ರೂಪಾಯಿ ಸರಕು ಸಮುದ್ರಪಾಲಾಗಿದೆ. ವರ್ಷದ ಹಿಂದೆಯೂ ಒಂದು ದೋಣಿ ಇದೇ ರೀತಿ ಮುಳುಗಡೆಯಾಗಿದೆ. ಮೀನುಗಾರಿಕೆಗೆ ತೆರಳಿದವರು ದೋಣಿ ಮುಳುಗಿದರೆ ಅವರಿಗೆ ಸರ್ಕಾರದಿಂದ ಪರಿಹಾರ ಸಿಗುತ್ತದೆ. ಆದರೆ ಸರಕು ಸಾಗಣೆ ಹಡಗು ಮಾಲೀಕರಿಗೆ ಅಂತಹ ಯಾವುದೇ ರಕ್ಷಣೆ ಇಲ್ಲ. ನಮ್ಮಿಂದ ತೆರಿಗೆ ಪಡೆಯುವ ಸರ್ಕಾರ ಈ ತಾರತಮ್ಯ ನೀತಿಯನ್ನು ಸರಿಪಡಿಸಬೇಕು' ಎಂದು ಅಬ್ದುಲ್ ಲತೀಫ್ ಒತ್ತಾಯಿಸಿದರು.

# ವಂಚನೆ ಆರೋಪಿ ಕಾರಿನಲ್ಲಿ ಹ್ಯಾರಿಸ್ ಸ್ಟಿಕ್ಕರ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ವಂಚನೆ ಪ್ರಕರಣವೊಂದರಲ್ಲಿ ಆರೋಪಿಯಾಗಿರುವ ಕೇರಳದ ಕೊಚ್ಚಿಯ ಮುಹಮ್ಮದ್ ಹಫೀಜ್ ಎಂಬ ವ್ಯಕ್ತಿಯ ಮನೆಯಲ್ಲಿ ಬೆಂಗಳೂರಿನ ಶಾಂತಿನಗರ ಕ್ಷೇತ್ರದ ಕಾಂಗ್ರೆಸ್ ಶಾಸಕ ಎನ್.ಎ. ಹ್ಯಾರಿಸ್ ಹೆಸರಿನಲ್ಲಿ ವಿಧಾನಸಭೆಯ ಅಧಿಕೃತ ಸ್ಟಿಕ್ಕರ್ ಹೊಂದಿರುವ ಕಾರು ಪತ್ತೆಯಾಗಿದೆ ಎಂದು ಜಾರಿ ನಿರ್ದೇಶನಾಲಯ (ಇ.ಡಿ) ತಿಳಿಸಿದೆ.

ವಿವಿಧ ವ್ಯಕ್ತಿಗಳಿಂದ ₹ 103.73 ಕೋಟಿ ಹಣ ಸಂಗ್ರಹಿಸಿ ವಂಚಿಸಿರುವ ಆರೋಪಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಕೇರಳ, ಕರ್ನಾಟಕ, ಮತ್ತು ಗೋವಾದ ರಾಜ್ಯಗಳಲ್ಲಿ ಹಫೀಜ್ ಹಾಗೂ ಇತರ ಆರೋಪಿಗಳಿಗೆ ಸೇರಿದ ಒಂಬತ್ತು ಸ್ಥಳಗಳಲ್ಲಿ ಇ.ಡಿ ಅಧಿಕಾರಿಗಳು ದಾಳಿ ನಡೆಸಿದ್ದರು. ಗುರುವಾರದಿಂದ ಭಾನುವಾರದವರೆಗೂ ಶೋಧ ನಡೆಸಲಾಗಿತ್ತು.

'ಕರ್ನಾಟಕ ವಿಧಾನಸಭೆಯ ಶಿಷ್ಟಾಚಾರ ವಿಭಾಗವು ಶಾಸಕ ಎನ್.ಎ. ಹ್ಯಾರೀಸ್ ಹೆಸರಿನಲ್ಲಿ ವಿತರಿಸಿದ್ದ ಅಧಿಕೃತ ಸ್ಟಿಕ್ಕರ್ ಹೊಂದಿದ್ದ ಕಾರು ಹಫೀಜ್ ಮನೆಯಲ್ಲಿ ಪತ್ತೆಯಾಗಿದೆ. ಹ್ಯಾರೀಸ್ ಮಗ, ರಾಜ್ಯ ಯುವ ಕಾಂಗ್ರೆಸ್ ಮುಖಂಡ ಮೊಹಮ್ಮದ್ ಹ್ಯಾರಿಸ್ ನಲಪಾಡ್ ಈ ಕಾರನ್ನು ಖರೀದಿಸಿದ್ದು, ನಫೀಹ್ ಮುಹಮ್ಮದ್ ನಾಸೀರ್ ಎಂಬಾತನ ಹೆಸರಿನಲ್ಲಿ ನೋಂದಣಿ ಮಾಡಿಸಲಾಗಿತ್ತು ಎಂಬುದು ತನಿಖೆ ವೇಳೆ ಪತ್ತೆಯಾಗಿದೆ. ನಾಸೀರ್, ಶಾಸಕ ಹ್ಯಾರಿಸ್ ಅವರ ಸಂಬಂಧಿ ಹಾಗೂ ರಾಜಕೀಯ ಬೆಂಬಲಿಗ ಕೂಡ ಹೌದು' ಎಂದು ಇ.ಡಿ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶೋಧ ಕಾರ್ಯಾಚರಣೆಯಲ್ಲಿ 1.6 ಕೆ.ಜಿ. ಚಿನ್ನ, ₹ 12.5 ಲಕ್ಷ ನಗದು, ಏಳು ಮೊಬೈಲ್ ಫೋನ್‌ಗಳು, ಹಲವು ದಾಖಲೆಗಳನ್ನು ವಶಪಡಿಸಿಕೊಳ್ಳಲಾಗಿದೆ. ಆರೋಪಿಗಳ ಬ್ಯಾಂಕ್ ಖಾತೆಗಳಲ್ಲಿರುವ ₹ 4.4 ಕೋಟಿ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.



ಸುಭಾಷಿತ

ಕತ್ತಲನ್ನೇ ವಿಶ್ಲೇಷಿಸುತ್ತಾ ಕುಳಿತರೆ ನಿಮಗೆ ಬೆಳಕು ಗೋಚರಿಸದು.

–ವೇನ್ ಡಯರ್

# ರಷ್ಯಾದಲ್ಲಿ ಪುಟಿನ್ ಪುನರಾಯ್ಕೆ ದೇಶದ ಮೇಲೆ ಪ್ರಬಲ ಹಿಡಿತ

'ಜನರಿಂದ ಆಯ್ಕೆಯಾದವರು' ಎಂದು ಕರೆಸಿಕೊಳ್ಳುವ ಮೋಹವು ಸರ್ವಾಧಿಕಾರಿಗಳಿಗೆ ಇರುತ್ತದೆ. ಅವರ ಆಯ್ಕೆಗೆ ನಡೆಯುವ ಚುನಾವಣೆಯು ಸಂಶಯಾಸ್ಪದ ರೀತಿಯಲ್ಲಿ ಜರುಗಿದರೂ ಅಂಥದ್ದೊಂದು ಮೋಹದಿಂದ ಅವರು ಆಕರ್ಷಿತರಾಗುತ್ತಾರೆ. ಈ ಕಾರಣಕ್ಕಾಗಿಯೇ ಸದ್ದಾಂ ಹುಸೇನ್ ಅವರು ಅಧಿಕಾರ ಹಿಡಿದ ಎರಡು ದಶಕಗಳ ನಂತರ, 1995ರಲ್ಲಿ ಜನಮತಗಣನೆ ನಡೆಸಿದರು. ಆಗ ಸದ್ದಾಂ ಹುಸೇನ್ ಅವರ ಆಡಳಿತದ ಪರವಾಗಿ ಶೇಕಡ 99.96ರಷ್ಟು ಜನ ಮತ ಚಲಾಯಿಸಿದರು ಎಂದು ಪ್ರಕಟಿಸಲಾಯಿತು. 2002ರಲ್ಲಿ ಸದ್ದಾಂ ಅವರು ಶೇ 100ರಷ್ಟು ಮತಗಳನ್ನು ಪಡೆದು ಆಯ್ಕೆಯಾದರು. ವ್ಲಾದಿಮಿರ್ ಪುಟಿನ್ ಅವರು ರಷ್ಯಾ ಅಧ್ಯಕ್ಷರಾಗಿ ಐದನೆಯ ಬಾರಿಗೆ ಆಯ್ಕೆಯಾಗಿದ್ದಾರೆ, ಈ ಬಾರಿ ಅವರು ಶೇ 88ರಷ್ಟು ಮತಗಳನ್ನು ಪಡೆದುಕೊಂಡಿದ್ದಾರೆ. ಆದರೆ ರಷ್ಯಾದ ಚುನಾವಣೆಯ ಫಲಿತಾಂಶದ ಮೊದಲೇ ತೀರ್ಮಾನ ಆಗಿತ್ತು ಎಂಬುದು ಸತ್ಯ. ರಷ್ಯಾದಲ್ಲಿ ರಾಜಕೀಯ ವಿರೋಧಿಗಳ ಮೇಲೆ ಹಾಗೂ ಭಿನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸುವವರ ಮೇಲೆ ಪುಟಿನ್ ಹೊಂದಿರುವ ಹಿಡಿತವು ಪರಿಪೂರ್ಣ ಅಲ್ಲ. ಆದರೆ ಅವರು ಸರ್ಕಾರಿ ಸಂಸ್ಥೆಗಳ ಮೇಲೆ ಅವರು ಸಂಪೂರ್ಣ ಹಿಡಿತ ಸಾಧಿಸಿದ್ದಾರೆ. ಪುಟಿನ್ ಅವರು ಇದುವರೆಗೆ ಕಂಡ ಅತ್ಯಂತ ಪ್ರಬಲ ರಾಜಕೀಯ ವಿರೋಧಿ ಅಲೆಕ್ಸಿ ನವಾಲ್ನಿ ಅವರು ಈಚೆಗೆ ಮೃತಪಟ್ಟಾಗ ಅದು ಸ್ಪಷ್ಟವಾಗಿತ್ತು. ಪುಟಿನ್ ಅವರಿಗೆ ಸವಾಲು ಒಡ್ಡಬಲ್ಲವರಾಗಿದ್ದ ಬೋರಿಸ್ ನೆಮ್ಟ್‌ಸೊವ್ ಅವರನ್ನು 2015ರಲ್ಲಿ ಮಾಸ್ಕೊದ ಬೀದಿಯೊಂದರಲ್ಲಿ ಗುಂಡಿಕ್ಕಿ ಹತ್ಯೆ ಮಾಡಲಾಗಿತ್ತು. ಭಿನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ ಹಲವರು ಹಾಗೂ ಪುಟಿನ್ ಅವರಿಗೆ ರಾಜಕೀಯವಾಗಿ ಸವಾಲು ಒಡ್ಡಬಲ್ಲವರಾಗಿದ್ದ ಹಲವರು ಅಕಾಲ ಮೃತ್ಯುವನ್ನು ಕಂಡಿದ್ದಾರೆ. ರಷ್ಯಾದ ಮಾಧ್ಯಮಗಳು ಕಟ್ಟುನಿಟ್ಟಿನ ನಿಯಂತ್ರಣದಲ್ಲಿ ಇವೆ. ದೇಶವು ಪುಟಿನ್ ಅವರ ಬೆನ್ನಿಗೆ ನಿಂತಿದೆ ಎಂದು ಚುನಾವಣೆಯ ಫಲಿತಾಂಶವನ್ನು ಘೋಷಿಸಿದ ಅಲ್ಲಿನ ಚುನಾವಣಾ ಆಯುಕ್ತರು ವಸ್ತುಸ್ಥಿತಿಯನ್ನು ವಾಸ್ತವಕ್ಕಿಂತ ಭಿನ್ನವಾಗಿ, ಅಂದವಾಗಿ ತೋರಿಸುವ ಕೆಲಸವನ್ನಷ್ಟೇ ಮಾಡಿದ್ದಾರೆ.

ರಷ್ಯಾದಲ್ಲಿ ಪುಟಿನ್ ಅವರಿಗೆ ಸವಾಲು ಒಡ್ಡುವ ಹೊಸ ನಾಯಕ ಉದಯಿಸದೇ ಇದ್ದರೆ, ಅವರು ದೇಶದ ಮೇಲೆ ಹೊಂದಿರುವ ಬಲಿಷ್ಠ ಹಿಡಿತ ಮುಂದುವರಿಯುತ್ತದೆ

ಆದರೆ ಪುಟಿನ್ ಅವರಿಗೆ ಜನಪ್ರಿಯತೆ ಇಲ್ಲವೇ ಇಲ್ಲ ಎಂದು ಭಾವಿಸುವುದು ಕೂಡ ತಪ್ಪಾಗುತ್ತದೆ. ತಮ್ಮ ದೇಶಕ್ಕೆ ಅತ್ಯಂತ ಭವ್ಯವಾದ ಇತಿಹಾಸವೊಂದು ಇದೆ ಎಂಬ ಮಾತನ್ನು ಜನರನ್ನು ಸೆಳೆಯುವ ತಂತ್ರವಾಗಿ ಬಳಸಿಕೊಳ್ಳುವ ಎಲ್ಲ ನಾಯಕರ ರೀತಿಯಲ್ಲಿಯೇ ಪುಟಿನ್ ಅವರು ಕೂಡ ಬೆಂಬಲಿಗರ ದೊಡ್ಡ ಸಮೂಹವೊಂದನ್ನು ಹೊಂದಿದ್ದಾರೆ. ರಷ್ಯಾ ತನ್ನ ಭವ್ಯ ದಿನಗಳಿಗೆ ಮರಳುವುದು ಅತ್ಯಗತ್ಯವಾಗಿತ್ತು ಎಂದು ಇವರು ಭಾವಿಸುತ್ತಾರೆ. ಸೋವಿಯತ್ ಒಕ್ಕೂಟ ಪತನದ ನಂತರದಲ್ಲಿ ರಷ್ಯಾವನ್ನು 'ಅವಮಾನದ ದಶಕ'ದಿಂದ ಹೊರಗೆ ತಂದ ನಾಯಕ ಎಂದು ಪುಟಿನ್ ಅವರನ್ನು ಕಾಣಲಾಗುತ್ತದೆ. ಕ್ರಿಮಿಯಾವನ್ನು ವಶಪಡಿಸಿಕೊಂಡ ಅವರ ಕ್ರಮವನ್ನು ರಷ್ಯಾದಲ್ಲಿ ಶ್ಲಾಘಿಸಲಾಯಿತು. ಪಾಶ್ಚಿಮಾತ್ಯ ಮಾಧ್ಯಮಗಳು ಉಕ್ರೇನ್ ಯುದ್ಧದ ವಿಚಾರದಲ್ಲಿ ಒಂದು ಚಿತ್ರಣವನ್ನು ಕಟ್ಟಿಕೊಡಲು ಯತ್ನಿಸುತ್ತಿದ್ದರೂ, ಅದರಿಂದ ಪುಟಿನ್ ಅವರ ಜನಪ್ರಿಯತೆಗೆ ಕುತ್ತು ಬಂದಿಲ್ಲ. ಪಶ್ಚಿಮದ ಜಗತ್ತು ಹೇರಿರುವ ಆರ್ಥಿಕ ನಿರ್ಬಂಧಗಳು ರಷ್ಯಾದ ಅರ್ಥ ವ್ಯವಸ್ಥೆಯ ಮೇಲೆ ಅಲ್ಪಾವಧಿಯಲ್ಲಂತೂ ನಿರೀಕ್ಷಿತ ಮಟ್ಟದಲ್ಲಿ ಪರಿಣಾಮ ಉಂಟುಮಾಡಿಲ್ಲ.

ಮತದಾರರು ತಮ್ಮ ಮೇಲೆ ಇರಿಸಿದ ವಿಶ್ವಾಸಕ್ಕೆ, ತಮಗೆ ನೀಡಿದ ಬೆಂಬಲಕ್ಕೆ ಪುಟಿನ್ ಅವರು ಧನ್ಯವಾದ ಸಮರ್ಪಿಸಿದ್ದಾರೆ. ಈವರೆಗೆ ಸರಿಸುಮಾರು 25 ವರ್ಷ ರಷ್ಯಾವನ್ನು ಆಳಿರುವ 71 ವರ್ಷ ವಯಸ್ಸಿನ ಪುಟಿನ್ ಅವರು ಈ ಚುನಾವಣೆಯನ್ನು ಉಕ್ರೇನ್ ವಿರುದ್ಧದ ಸಮರದ ವಿಚಾರವಾಗಿ ನಡೆಯುತ್ತಿರುವ ಜನಮತಗಣನೆ ಎಂಬಂತೆಯೂ ಪರಿಗಣಿಸಿದ್ದರು. ದೇಶವು ಕಳೆದುಕೊಂಡ ಪ್ರದೇಶಗಳನ್ನು ಮತ್ತೆ ಗೆದ್ದುಕೊಳ್ಳುವ ತಮ್ಮ ಮಹತ್ವಾಕಾಂಕ್ಷೆಗೆ ಬೆಂಬಲ ನೀಡಬೇಕು ಎಂದು ಕೋರಿದ್ದರು. ಉಕ್ರೇನ್‌ನ ಕೆಲವು ಪ್ರದೇಶಗಳನ್ನು ಅಂದುಕೊಂಡಿದ್ದನ್ನು ಮಾಡಲು ಮುಂದಿನ ಇರುವುದ ಆಶ್ವಾಸನೆ ನೀಡುವ ಮೂಲಕ, ರಷ್ಯಾವನ್ನು ಬೆದರಿಸಲು ಯಾರಿಂದಲೂ ಸಾಧ್ಯವಿಲ್ಲ ಎಂದು ಮಾತಿನಿಂದಲೇ ಅವರು ಗೆಲುವಿನ ಸಂಭ್ರಮವನ್ನು ಆಚರಿಸಿಕೊಂಡಿದ್ದಾರೆ. ರಷ್ಯಾ ಮತ್ತು ಉಕ್ರೇನ್ ನಡುವಿನ ಸಮರವು ಯಾವ ತಾರ್ಕಿಕ ಹಂತವನ್ನು ತಲುಪದ ಸ್ಥಿತಿಯಲ್ಲಿದೆ. ಉಕ್ರೇನ್‌ಗೆ ಬೆಂಬಲ ನೀಡುವ ಅಮೆರಿಕದ ನೀತಿಯಲ್ಲಿ ಬದಲಾವಣೆ ಆಗದೇ ಇದ್ದರೆ ಅಥವಾ ತನ್ನ ಆರ್ಥಿಕ ಹಿತಾಸಕ್ತಿಗಳ ರಕ್ಷಣೆಗಾಗಿ ಯುರೋಪು ಈ ಯುದ್ಧದಲ್ಲಿ ನಿರಾಸಕ್ತಿ ತಾಳದೇ ಇದ್ದಲ್ಲಿ ಈ ಸಮರವು ಇದೇ ಸ್ಥಿತಿಯಲ್ಲಿ ಉಳಿಯಬಹುದು. ರಷ್ಯಾದಲ್ಲಿ ಪುಟಿನ್ ಅವರಿಗೆ ಸವಾಲು ಒಡ್ಡುವ ಹೊಸ ನಾಯಕ ಉದಯಿಸದೇ ಇದ್ದರೆ, ಅವರು ದೇಶದ ಮೇಲೆ ಹೊಂದಿರುವ ಈ ಬಲಿಷ್ಠ ಹಿಡಿತವು ಮುಂದುವರಿಯುತ್ತದೆ.

## ದಿನದ ಟ್ವೀಟ್

### ಹೊರಗಿನ ಆಹಾರ: ಎಚ್ಚರವಿರಲಿ

**ರೋಟಿ, ದಾಲ್, ಸಬ್ಜಿ, ಪಾಸ್ತ, ಕರ್‍ರಿ, ಅನ್ನ-ಬಿರಿಯಾನಿ ಅಥವಾ ಸಲಾಡ್‌ನಂತಹ ಯಾವುದನ್ನೇ ನೀವು ಆರ್ಡರ್ ಮಾಡಿದರೂ ಅದೇ ಪದಾರ್ಥವನ್ನು ನೀವು ಮನೆಯಲ್ಲಿ ತಯಾರಿಸುವುದಕ್ಕಿಂತಲೂ ಮೂರು ಪಟ್ಟು ಹೆಚ್ಚಿನ ಕ್ಯಾಲೊರಿ ಇರುತ್ತದೆ. ಅತಿಯಾದ ಉಪ್ಪು, ಬಳಸಿದ ಎಣ್ಣೆಯ ಗುಣಮಟ್ಟದ ಅರಿವಿಲ್ಲದಿರುವುದು, ಹಳೆಯ ಉತ್ಪನ್ನಗಳ ಬಳಕೆ, ನೈರ್ಮಲ್ಯ ಕಾಯ್ದುಕೊಳ್ಳದಿರುವಂತಹ ಹಲವು ಸಂಗತಿಗಳು ಇದರ ಹಿಂದೆ ಇರುತ್ತವೆ. ಕ್ಯಾಲೊರಿ ಕುರಿತು ಆ್ಯಪ್‌ಗಳಲ್ಲಿ ನೀಡುವ ಮಾಹಿತಿಗಳಲ್ಲಿ ಹೆಚ್ಚಿನವು ನಂಬಲು ಅನರ್ಹವಾಗಿರುತ್ತವೆ. ಮನೆಯಲ್ಲಿ ತಯಾರಿಸಿದ ಆಹಾರವನ್ನೇ ಹೆಚ್ಚಾಗಿ ಸೇವಿಸಿ ಮತ್ತು ಅದು ಆರೋಗ್ಯ ಕಾಯ್ದುಕೊಳ್ಳುವುದರತ್ತ ಇಡುವ ಏಕೈಕ ಪ್ರಮುಖ ಹೆಜ್ಜೆಯಾಗಿರುತ್ತದೆ.**

**ಡಾ. ನಂದಿತಾ ಅಯ್ಯರ್,** ವೈದ್ಯೆ, ಲೇಖಕಿ

## ಕಿಡಿನುಡಿ

**ಭಾರತಕ್ಕೆ ನಿಜಕ್ಕೂ ರಾಜ್ಯಪಾಲರ ಅಗತ್ಯ ಇದೆಯೇ? ತಮಿಳ್ ಇಸೈ ಸೌಂದರರಾಜನ್: 2014ರ ಮೇ ತಿಂಗಳಿಂದ 2019ರ ಸೆಪ್ಟೆಂಬರ್‌ವರೆಗೆ ಬಿಜೆಪಿಯ ತಮಿಳುನಾಡು ಘಟಕದ ಅಧ್ಯಕ್ಷೆ. 2019ರ ಸೆಪ್ಟೆಂಬರ್‌ನಿಂದ 2024ರ ಮಾರ್ಚ್‌ವರೆಗೆ ತೆಲಂಗಾಣ ರಾಜ್ಯಪಾಲೆ. ಈ ಮಾರ್ಚ್‌ನಲ್ಲಿ ಲೋಕಸಭಾ ಚುನಾವಣೆಗೆ ಸ್ಪರ್ಧಿಸಲು ಬಿಜೆಪಿಗೆ ಮರುಸೇರ್ಪಡೆ. ರಾಜ್ಯಪಾಲರು ಎಲ್ಲ ರಾಜಕೀಯ ಸಂಬಂಧಗಳನ್ನೂ ಕಡಿದುಕೊಂಡು ಪಕ್ಷಾತೀತವಾಗಿ ನಡೆದುಕೊಳ್ಳಬೇಕೆಂಬ ನಿರೀಕ್ಷೆ ಇರುತ್ತದೆ. ಆದರೆ ಇಂದು ಆಗಿರುವ ಪರಿವರ್ತನೆಯನ್ನು ಗಮನಿಸಿದರೆ, ರಾಜ್ಯಪಾಲರ ಕಚೇರಿಯ ರಾಜಕೀಯರಹಿತ ನಡೆ ಮತ್ತು ಪ್ರಜಾಸತ್ತಾತ್ಮಕ ಪ್ರಕ್ರಿಯೆ ಕುರಿತ ನಂಬಿಕೆಯೇ ಕಳೆದುಹೋಗಿದೆ ಅನ್ನಿಸುತ್ತದೆ!**

**ನಯಿನಿ ಅನುರಾಗ್ ರೆಡ್ಡಿ,** ಉದ್ಯಮಿ

## 25 ವರ್ಷಗಳ ಹಿಂದೆ

ಭಾನುವಾರ, 21-3-1999

**• ರಾಜ್ಯಗಳ ಹಣಕಾಸು ಸ್ಥಿತಿ ತೀವ್ರ ಕುಸಿತ: ಪರಿಹಾರಕ್ಕೆ ಪಂಚ ಸೂತ್ರ**

ನವದೆಹಲಿ, ಮಾರ್ಚ್ 20 (ಪಿಟಿಐ)– ರಾಜ್ಯಗಳ ಹಣಕಾಸು ಪರಿಸ್ಥಿತಿ ತೀರಾ ಹದಗೆಟ್ಟಿದೆ ಎಂದು ಕೇಂದ್ರ ಹಣಕಾಸು ಸಚಿವ ಯಶವಂತ ಸಿನ್ಹಾ ಅವರು ಇಂದು ಇಲ್ಲಿ ಎಚ್ಚರಿಸಿದರಲ್ಲದೆ, ಈ ಪರಿಸ್ಥಿತಿಯನ್ನು ನಿಭಾಯಿಸಲು ಐದಂಶಗಳ ಕಾರ್ಯಕ್ರಮವೊಂದನ್ನು ಮುಂದಿಟ್ಟರು.

'ಬರೇ ಮಾತುಗಳಿಂದ ಫಲವಾಗದು. ಕಾರ್ಯ ಅಗತ್ಯ. ಈ (ಹಣಕಾಸು) ಬಿಕ್ಕಟ್ಟನ್ನು ಬಗೆಹರಿಸಲು ಸಮರೋಪಾದಿಯಲ್ಲಿ ಕೆಲಸ ಮಾಡಬೇಕಾಗಿದೆ' ಎಂದು ಅವರು ರಾಷ್ಟ್ರೀಯ ಅಭಿವೃದ್ಧಿ ಮಂಡಲಿಯ ಹಣಕಾಸು ಉಪಸಮಿತಿಯ ಸಭೆಯಲ್ಲಿ ಹೇಳಿದರು.

**• ಬಿಹಾರದಿಂದ ಕೇಂದ್ರಪಡೆ ವಾಪಸಿಲ್ಲ– ಅಡ್ವಾಣಿ**

ತಿರುವನಂತಪುರ, ಮಾರ್ಚ್ 20 (ಯುಎನ್‌ಐ)– ಕೇಂದ್ರ ಸರ್ಕಾರ ಬಿಹಾರದಿಂದ ತನ್ನ ಪಡೆಗಳಲ್ಲಿ ಒಂದು ಭಾಗವನ್ನು ವಾಪಸು ಕರೆಸಿದೆ ಎಂಬ ಆರೋಪವನ್ನು ಕೇಂದ್ರ ಗೃಹ ಸಚಿವ ಎಲ್.ಕೆ. ಅಡ್ವಾಣಿ ಅವರು ಇಂದು ಇಲ್ಲಿ ಅಲ್ಲಗಳೆದರು.

ಬಿಹಾರದಿಂದ ಕೇಂದ್ರದ ಪಡೆಗಳನ್ನು ವಾಪಸು ಪಡೆಯುವ ಉದ್ದೇಶವೇ ಇಲ್ಲ. ಬದಲಾಗಿ ಅಗತ್ಯವೆನಿಸಿದರೆ ಅಲ್ಲಿಗೆ ಇನ್ನಷ್ಟು ಪಡೆ ಕಳಿಸಲಾಗುವುದು ಎಂದು ಪತ್ರಿಕಾ ಸಂದರ್ಶನದಲ್ಲಿ ಹೇಳಿದರು.

## 50 ವರ್ಷಗಳ ಹಿಂದೆ

ಗುರುವಾರ, 21-3-1974

**• ಬಿಹಾರ: ರೈಲುಗಳ ಮೇಲೆ ದಾಳಿ, ಬೆಂಕಿ; ಗುಂಡೇಟಿನಿಂದ ನಾಲ್ವರ ಸಾವು**

ಪಟನಾ, ಮಾರ್ಚ್ 20– ಬಿಹಾರದ ರಾಜಧಾನಿಯಲ್ಲಿ ತ್ವರಿತವಾಗಿ ಶಾಂತಿಯುಂಟಾಗುತ್ತದೆಂದು ಕಂಡುಬಂದಾಗ್ಯೂ ರಾಜ್ಯದ ನಾನಾ ಭಾಗಗಳಲ್ಲಿ ರೈಲು ಹಾಗೂ ಸರ್ಕಾರಿ ಕಚೇರಿಗಳ ಮೇಲೆ ದಾಳಿ, ಅಗ್ನಿಸ್ಪರ್ಶ ಹಾಗೂ ಲೂಟಿ ಪ್ರಕರಣಗಳು ನಡೆದುದು ವರದಿಯಾಗಿದೆ.

ಮುಂಘೇರ್ ಜಿಲ್ಲೆಯ ಲಖಿಸರಾಯ್ ಹಾಗೂ ಸೀತಾಮರ್ಹಿ ಜಿಲ್ಲೆಯ ಬೈರ್ಗಾನಿಯದಲ್ಲಿ ಪೊಲೀಸರ ಗುಂಡಿನಿಂದ 4 ಮಂದಿ ಸತ್ತು, ಇತರ 6 ಮಂದಿ ಗಾಯಗೊಂಡಿದ್ದಾರೆ.

ರೈಲು ನಿಲ್ದಾಣಗಳು, ಗೂಡ್ಸ್‌ಶೆಡ್‌ಗಳ ಮೇಲೆ ಉದ್ರಿಕ್ತ ಗುಂಪುಗಳು ಮುಖ್ಯವಾಗಿ ದಾಳಿಯಿಟ್ಟವು. ಅನೇಕ ಕಡೆ ಅವುಗಳಿಗೆ ಬೆಂಕಿ ಹಚ್ಚಲಾಯಿತು.

### ದಶಕಗಳ ಹಿಂದಿನ ಶಿಕ್ಷಣ ವ್ಯವಸ್ಥೆಯು ಈಗಿನ ವ್ಯವಸ್ಥೆಗಿಂತ ನಿಜವಾಗಿಯೂ ಉತ್ತಮವಾಗಿತ್ತೇ?

# ಶಾಲಾ ಶಿಕ್ಷಣ: ವಾಸ್ತವಿಕ ಸವಾಲು

ವಿಶ್ಲೇಷಣೆ

ಅರವಿಂದ ಚೊಕ್ಕಾಡಿ

**'ಪರೀಕ್ಷಾ** ಫಲಿತಾಂಶಕ್ಕಾಗಿ ಶಿಕ್ಷಕರ ಮೇಲೆ ಅತಿಯಾಗಿ ಒತ್ತಡ ಹಾಕಲಾಗುತ್ತಿದೆ. ಇದರಿಂದ ಶಿಕ್ಷಣದ ಗುಣಮಟ್ಟ ಕುಸಿಯುತ್ತದೆ. ನಮ್ಮ ಕಾಲದಲ್ಲಿ ಹೀಗಿರಲಿಲ್ಲ' ಎನ್ನುವ ಗೊಣಗಾಟ ನಿರಂತರವಾಗಿ ಇದೆ. ಇದರ ಹಿಂದೆ ಸತ್ಯ ಸಂಗತಿಗಳೇ ಇಲ್ಲ ಎಂದೇನಿಲ್ಲ. 'ನಮ್ಮ ಕಾಲ' ಎನ್ನುವ ಪರಿಕಲ್ಪನೆ ಯಾವಾಗಲೂ ಸಾಪೇಕ್ಷವಾಗಿರುತ್ತದೆ. ಸಾಮಾನ್ಯವಾಗಿ ಈ ಪರಿಕಲ್ಪನೆಯು ತಾನು ಅಂದುಕೊಂಡ ಕಾಲಘಟ್ಟವು ಬಹಳ ಶ್ರೇಷ್ಠವಾಗಿತ್ತೆಂದೂ, ಬದಲಾಗಿರುವ ಸನ್ನಿವೇಶವು ತೀರಾ ಕಳಪೆಯಾಗಿದೆ ಎಂದೂ ಅರ್ಥೈಸಲ್ಪಟ್ಟೇ ಬಳಕೆಯಾಗುತ್ತದೆ. ಆದರೆ ವಾಸ್ತವ ಹಾಗೇನೂ ಇರುವುದಿಲ್ಲ.

ಪದವಿ ಮುಗಿಸುವವರೆಗೂ ತನ್ನ ಜೀವನದ ಗುರಿ ಏನು ಎಂಬುದರ ಸ್ಪಷ್ಟ ಕಲ್ಪನೆ ಇರದೆ, ಎಸ್‌ಎಸ್‌ಎಲ್‌ಸಿ ಮುಗಿದದ್ದರಿಂದ ಪಿಯುಸಿ, ಪಿಯುಸಿ ಮುಗಿದದ್ದರಿಂದ ಪದವಿ ಎಂದು ಗೊತ್ತು ಗುರಿ ಇಲ್ಲದೆ ಒಟ್ಟಂದದಲ್ಲಿ ಅಭ್ಯಾಸ ಮಾಡುತ್ತಿದ್ದ ವ್ಯವಸ್ಥೆ ಒಂದು ಕಾಲಮಾನದ್ದು. ಇದು, ಪಿಯುಸಿಯಲ್ಲೇ ತನ್ನ ಜೀವನದ ಗುರಿಯ ಸ್ಪಷ್ಟ ಕಲ್ಪನೆ ಇರಿಸಿಕೊಂಡು, ಏನನ್ನು ಅಭ್ಯಾಸ ಮಾಡಬೇಕು ಎಂದು ವಿದ್ಯಾರ್ಥಿ ನಿರ್ಧರಿಸುವ ಕಾಲಮಾನದ ವ್ಯವಸ್ಥೆಗಿಂತ ಶ್ರೇಷ್ಠವಾಗಿತ್ತೆಂದು ಹೇಳಲು ಆಗುವುದಿಲ್ಲ. ಈಗ 'ನಮ್ಮ ಕಾಲ' ಎನ್ನುವ ಪರಿಕಲ್ಪನೆಯು ಬಹುತೇಕ 1980ರಿಂದ 2000ದವರೆಗಿನ ಕಾಲಮಾನದ ಸಾಮಾನ್ಯ ಶೈಕ್ಷಣಿಕ ಅನುಭವಗಳನ್ನು ಸೂಚಿಸುತ್ತದೆ.

'ನಮ್ಮ ಕಾಲ' ಎನ್ನುವ ಕಾಲಮಾನದಲ್ಲಿ ಶಾಲೆಗಳು ಬಹಳ ದೂರ ದೂರ ಇದ್ದವು. ಕಡ್ಡಾಯ ಶಿಕ್ಷಣವು ಈಗಿನಂತೆ ಮೂಲಭೂತ ಹಕ್ಕಾಗಿರಲಿಲ್ಲ. ಆದ್ದರಿಂದ ತಾನು ಶಾಲಾ ಶಿಕ್ಷಣ ಪಡೆಯಲೇಬೇಕು ಎಂಬ ಭಾವನೆ ಇದ್ದ ಮಕ್ಕಳು, ಕೆಲವೊಮ್ಮೆ ತಂದೆ-ತಾಯಿಯ ಒತ್ತಡಕ್ಕೆ ಒಳಗಾದವರು ಶಾಲೆಗೆ ಬರುತ್ತಿದ್ದರು. 'ನಮ್ಮ ಕಾಲ'ದಲ್ಲಿನ ಕಲಿಕೆಯಲ್ಲಿ ಹಿಂದುಳಿದ ಮಕ್ಕಳು ಎಳವೆಯಲ್ಲೇ ಹೋಟೆಲ್ ಕೆಲಸಕ್ಕೊ, ಬಡಗಿಯ ಕೆಲಸಕ್ಕೊ, ಕೂಲಿಗೋ ಹೋಗಿ ಜೀವನದ ದಾರಿಯನ್ನು ಕಂಡುಕೊಳ್ಳುತ್ತಿದ್ದರು. ಆ ಆಯ್ಕೆಯನ್ನು ಮಾಡಿಕೊಂಡವರೂ ಸಮೃದ್ಧ ಜೀವನವನ್ನು ನಡೆಸುತ್ತಿದ್ದಾರೆ. ಇದು ಏನನ್ನು ಶಿಕ್ಷಣ ಎಂದು ಪರಿಗಣಿಸಬೇಕು ಎಂಬ ಬೇರೆಯದೇ ಆದ ವಿಷಯವಾಗಿದೆ. ಆದರೆ ಸ್ಥಾಪಿತ ಔಪಚಾರಿಕ ಶಿಕ್ಷಣ ವ್ಯವಸ್ಥೆಯಲ್ಲಿ ಕಲಿಕೆಯಲ್ಲಿ ಹಿಂದುಳಿದ ಅಂದಿನ ಬಹುತೇಕ ಮಕ್ಕಳು ಇರಲೇ ಇಲ್ಲ. ಆದರೆ ಆಗಲೂ ಅಂತಹ ಮಕ್ಕಳನ್ನು ಗುರುತಿಸಲಾಗುತ್ತಿತ್ತು. ಅವರು ಪ್ರಯತ್ನಪಟ್ಟೂ ಕಲಿಕೆಯನ್ನು ಸಾಧಿಸಲು ಹಿನ್ನಡೆ ಅನುಭವಿಸಿದವರಾಗಿದ್ದರು. ಕಲಿಕೆಯ ಔಚಿತ್ಯವನ್ನು ಅರಿಯದವರಾಗಿರಲಿಲ್ಲ.

ಇಂದಿನ ಔಪಚಾರಿಕ ಶಿಕ್ಷಣದ ವ್ಯವಸ್ಥೆ ಹಾಗಿಲ್ಲ. ಎಲ್ಲ ಮಕ್ಕಳೂ ಶಾಲಾ ಶಿಕ್ಷಣದಲ್ಲಿ ಒಳಗೊಂಡಿದ್ದಾರೆ. ಆದರೆ ಕಲಿಕೆಯ ಔಚಿತ್ಯವನ್ನು ಅರಿತು, ಅರ್ಥ ಮಾಡಿಕೊಂಡು ಬಂದವರಲ್ಲ. ಆಗ ಅಂತಹ ಮಕ್ಕಳಲ್ಲಿ ಕಲಿಕೆಯ ಮಹತ್ವದ ಅರಿವನ್ನು ಹುಟ್ಟುಹಾಕುವುದೇ ಬಹುದೊಡ್ಡ ಸವಾಲಾಗಿರುತ್ತದೆ. ನಮ್ಮ ಪೋಷಕರು, ಶಿಕ್ಷಕರು, ಸಮುದಾಯವು ಮಕ್ಕಳಲ್ಲಿ ಅಂತಃಪ್ರೇರಣೆಯನ್ನು ಹುಟ್ಟಿಸಲು ಬಳಸುವ ಪ್ರಧಾನ ಉತ್ತೇಜಕ ಪರಿಕಲ್ಪನೆ ಎಂದರೆ, 'ನೀನು ಚೆನ್ನಾಗಿ ಓದಿದರೆ ಅತ್ಯುತ್ತಮ ಉದ್ಯೋಗ ಪಡೆಯಬಹುದು' ಎನ್ನುವುದು. ಆದರೆ ವಾಸ್ತವದಲ್ಲಿ ಚೆನ್ನಾಗಿ ಓದಿಯೂ ಉತ್ತಮ ಉದ್ಯೋಗವನ್ನು ಪಡೆಯಲಾರದವರು ಮಕ್ಕಳ ಕಣ್ಣಿಗೆ ಪ್ರತಿನಿತ್ಯ ಕಾಣುತ್ತಲೇ ಇದ್ದಾರೆ. ಸ್ವತಃ ಅವರ ಶಿಕ್ಷಕರಲ್ಲೇ ಅತಿಥಿ ಶಿಕ್ಷಕರು, ಹೊರಗುತ್ತಿಗೆ ಆಧಾರದ ಶಿಕ್ಷಕರು ಎಂದು ಒಳ್ಳೆಯ ವೇತನವನ್ನಾಗಲೀ ಔದ್ಯೋಗಿಕ ಸ್ಥಿರತೆಯನ್ನಾಗಲೀ ಹೊಂದಿಲ್ಲದವರು ಕಾಣುತ್ತಾ ಇರುವಾಗ, ಅಂತಹ ಮಾತೆಲ್ಲ ಬೊಗಳೆ ಎಂದು ಮಕ್ಕಳಿಗೆ ಅರ್ಥವಾಗುತ್ತದೆ.

ಎರಡನೆಯದಾಗಿ, ಉತ್ತಮ ಉದ್ಯೋಗ ಎಂದು ಹಿರಿಯರು ನೀಡುವ ಪರಿಕಲ್ಪನೆಗೂ ಎಳೆಯ ಮಕ್ಕಳ ಪರಿಕಲ್ಪನೆಗೂ ವ್ಯತ್ಯಾಸ ಇರುತ್ತದೆ. ಒಮ್ಮೆ ಕವಿ ಸಿದ್ಧಲಿಂಗಯ್ಯ ಅವರು ನಮ್ಮ ಶಾಲೆಗೆ ಬಂದಿದ್ದರು. ಮಕ್ಕಳ ಬಳಿ 'ನೀವು ಏನಾಗಬಯಸುತ್ತೀರಿ?' ಎಂದು ಕೇಳಿದರು. ಹೆಚ್ಚಿನ ಮಕ್ಕಳು 'ಪೊಲೀಸ್ ಕಾನ್‌ಸ್ಟೆಬಲ್ ಆಗುತ್ತೇವೆ' ಎಂದರು. ಐಪಿಎಸ್ ಮಾಡುವುದು ಮಕ್ಕಳಿಗೆ ಬೇಡ. ಪೊಲೀಸ್ ಕಾನ್‌ಸ್ಟೆಬಲ್ ಆದಾಗ ಮಾತ್ರ ರಸ್ತೆಯಲ್ಲಿ ಹೋಗುವ ವಾಹನ ಚಾಲಕರನ್ನು ನಿಲ್ಲಿಸಿ ಅಧಿಕಾರ ಚಲಾಯಿಸಲು ಆಗುತ್ತದೆ. ಪೊಲೀಸ್ ವರಿಷ್ಠಾಧಿಕಾರಿಯು (ಎಸ್.ಪಿ.) ಜನರ ಮೇಲೆ ಅಧಿಕಾರ ಚಲಾಯಿಸಿರಬಹುದಾದ ನಿದರ್ಶನಗಳನ್ನು ಮಕ್ಕಳು ನೋಡಿರುವ ಸಾಧ್ಯತೆ ಕಡಿಮೆ.

ಎಷ್ಟೋ ಮಕ್ಕಳಿಗೆ ಜೆಸಿಬಿ ಯಂತ್ರದ ಚಾಲಕನಾಗುವುದು ಉತ್ತಮ ಉದ್ಯೋಗ ಎನಿಸಿರುತ್ತದೆ. ಹಾಗಿರುವಾಗ, ಹಿರಿಯರು ಹೇಳುವ ಉತ್ತಮ ಉದ್ಯೋಗ ಮಕ್ಕಳಿಗೆ ಆಕರ್ಷಕ ಆಗಿರಬೇಕಾಗಿಲ್ಲ ಎನ್ನುವುದು ಸಮಸ್ಯೆಯ ಒಂದು ಭಾಗವಾಗಿದ್ದರೆ, ಉತ್ತಮ ಉದ್ಯೋಗದ ಪರಿಕಲ್ಪನೆಯ ಮೂಲಕ ಮಕ್ಕಳಲ್ಲಿ ಮೇಲು–ಕೀಳಿನ ತಾರತಮ್ಯವನ್ನೂ ಸೃಷ್ಟಿಸಲಾಗುತ್ತಿರುವುದು ಸಮಸ್ಯೆಯ ಮತ್ತೊಂದು ಮಗ್ಗುಲಾಗಿದೆ. ಒಮ್ಮೆ ಅನುತ್ತೀರ್ಣರಾದವರಿಗೆ ಪರಿಹಾರ ಬೋಧನೆ, ಮರುಪರೀಕ್ಷೆ ಮಾಡಿದಾಗಲೂ ಪ್ರಯೋಜನ ಆಗದಿದ್ದರೆ ಆಗ ಅನುತ್ತೀರ್ಣಗೊಳಿಸಬಹುದು. ಮಕ್ಕಳ ಪರವಾಗಿರಿ ಎಂದು ಸರ್ಕಾರ ಹೇಳುವುದೇ ವಿನಾ ಎಷ್ಟು ಮಾತ್ರಕ್ಕೂ ಯಾವ ಹಂತದಲ್ಲೂ ಅನುತ್ತೀರ್ಣಗೊಳಿಸತಕ್ಕದ್ದಲ್ಲ ಎಂದು ಹೇಳಿಲ್ಲ. ಅನುತ್ತೀರ್ಣಗೊಳಿಸದೇ ಇರುವುದು ಸರ್ಕಾರಕ್ಕಿಂತ ಹೆಚ್ಚಾಗಿ ಶಾಲೆಗಳ ಅನಿವಾರ್ಯ ಆಗಿರುತ್ತದೆ.

ಅನುತ್ತೀರ್ಣನಾದ ವಿದ್ಯಾರ್ಥಿ ಮುಂದಿನ ವರ್ಷ ಬೇರೆ ಶಾಲೆಗೆ ಹೋಗುತ್ತಾನೆ. ಆಗ ಸರ್ಕಾರಿ ಶಾಲೆಗಾಗಲೀ ಖಾಸಗಿ ಶಾಲೆಗಾಗಲೀ ಮಕ್ಕಳ ಸಂಖ್ಯೆ ಕಡಿಮೆಯಾಗುತ್ತದೆ. ಶಾಲೆಯ ಬಗ್ಗೆ ನಕಾರಾತ್ಮಕ ಭಾವನೆ ಬರುತ್ತದೆ. ಮಕ್ಕಳ ಸಂಖ್ಯೆ ಕಡಿಮೆಯಾದರೆ ಸರ್ಕಾರಿ ಶಾಲೆಯಲ್ಲಿ ಹೆಚ್ಚುವರಿ ಹುದ್ದೆ, ವರ್ಗಾವಣೆಯಂತಹ ಸಮಸ್ಯೆಗಳು ಬರುತ್ತವೆ. ಖಾಸಗಿ ಶಾಲೆಯಲ್ಲಿ ಗ್ರಾಹಕರನ್ನು ಕಳೆದುಕೊಳ್ಳುವ ಸಮಸ್ಯೆ ಬರುತ್ತದೆ. ಹಾಗಾಗಿ, ಉತ್ತೀರ್ಣರಾಗುತ್ತಾ ಹೋಗುವ ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿಗೆ ಬಂದಾಗ ಪಬ್ಲಿಕ್ ಪರೀಕ್ಷೆಯನ್ನು ಎದುರಿಸಬೇಕಾದಾಗ ಪೋಷಕರಿಗೂ ಶಿಕ್ಷಕರಿಗೂ ಏನು ಮಾಡುವುದು ಎಂದು ಗೊತ್ತಾಗದ ರೀತಿಯ ಸವಾಲಾಗುತ್ತಾರೆ. ಆಗ 'ಫಲಿತಾಂಶಕ್ಕಾಗಿ ಸರ್ಕಾರ ಒತ್ತಡ ಹೇರುತ್ತದೆ' ಎಂಬ ಗೊಣಗಾಟ ಶಿಕ್ಷಕರಿಂದ ಕೇಳಿಬರುತ್ತದೆ. ಆದರೆ ಒತ್ತಡ ಹೇರುವುದರಿಂದಾಗಿ, ವಿದ್ಯಾರ್ಥಿಯಲ್ಲಿ ಕಲಿಕೆಯೇ ನಡೆಯದಿದ್ದರೂ ಒಂದಷ್ಟು ಆಯ್ದ ಪ್ರಶ್ನೆಗಳನ್ನು ಕೊಟ್ಟು ಪದೇಪದೇ ಅವುಗಳನ್ನು ಬರೆಸೀ ಬರೆಸೀ ಹೇಗಾದರೂ ಮಾಡಿ ಬಹಳಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗುವ ಹಾಗೆ ಮಾಡಲಾಗುತ್ತದೆ ಎನ್ನುವುದೂ ಸತ್ಯವಲ್ಲವೇ? ಒತ್ತಡವೇ ಇಲ್ಲದಿದ್ದರೆ ಅಷ್ಟೂ ವಿದ್ಯಾರ್ಥಿಗಳು ಅನುತ್ತೀರ್ಣರಾಗಿರುತ್ತಿದ್ದರು ಎನ್ನುವುದೂ ಸತ್ಯವಲ್ಲವೇ? ಶಿಕ್ಷಕರು ಆತ್ಮಸಾಕ್ಷಿಗನುಗುಣವಾಗಿ ಯೋಚಿಸಿದರೆ ಈ ಸತ್ಯ ಅವರಿಗೇ ಹೊಳೆಯುತ್ತದೆ.

ಹಾಗಿದ್ದರೆ ಸಮರ್ಪಕ ಕಲಿಕೆ ನಡೆಯದೇ ಉತ್ತೀರ್ಣಗೊಳ್ಳುವುದು ಸರಿಯೇ ಎಂದರೆ, ಸರಿಯಲ್ಲ. ಸಮರ್ಪಕ ಕಲಿಕೆ ನಡೆಯಬೇಕಾದರೆ ಶಾಲೆಗಳನ್ನು ಆಡಳಿತಾತ್ಮಕವಾಗಿ ಉತ್ತಮೀಕರಿಸಬೇಕು. ನಮ್ಮೆಲ್ಲ ಶೈಕ್ಷಣಿಕ ಸುಧಾರಣೆಗಳು ಶೈಕ್ಷಣಿಕ ಪ್ರಕ್ರಿಯೆಯನ್ನು ಬದಲಿಸಿವೆಯೇ ವಿನಾ ಶೈಕ್ಷಣಿಕ ಆಡಳಿತವನ್ನು ಬದಲಿಸಿಲ್ಲ. ಅದು 'ನಮ್ಮ ಕಾಲ'ದಲ್ಲಿದ್ದ ಹಾಗೆಯೇ ಇದೆ. ಡಿ.ಇಡಿ ಆಗಿ, ಟಿಇಟಿಯನ್ನೂ ಮಾಡಿ, ಸಿಇಟಿಯಲ್ಲೂ ಆಯ್ಕೆಯಾದ ಶಿಕ್ಷಕರ ಗುಣಮಟ್ಟ ಅತ್ಯುತ್ತಮವಾಗಿ ಇರಲೇಬೇಕು. ಇಲ್ಲದಿದ್ದರೆ ಅಷ್ಟೂ ಸ್ಪರ್ಧಾತ್ಮಕ ಪರೀಕ್ಷೆಗಳೇ ಸರಿಯಿಲ್ಲ ಎಂದಾಗುತ್ತದೆ. ಆದರೆ ಅತ್ಯುತ್ತಮ ಶಿಕ್ಷಕ ಹೋಗುವ ಶಾಲೆ ಅತ್ಯುತ್ತಮವಾಗಿಯೇ ಇರುವ ಹಾಗೆ ಮಾಡಿಲ್ಲ. ಆಗ ಉತ್ತಮ ಶಿಕ್ಷಕನೂ ಉತ್ತಮವಲ್ಲದ ಶಾಲಾ ಸನ್ನಿವೇಶಕ್ಕೆ ಹೊಂದಿಕೊಂಡಾಗ ವಿಫಲನಾಗುವುದು ಅನಿವಾರ್ಯ ಆಗುತ್ತದೆ. ಉದಾಹರಣೆಗೆ, ಹಲವಾರು ಪರೀಕ್ಷೆಗಳ ಮೂಲಕ ಉತ್ತಮ ವಿಜ್ಞಾನ ಶಿಕ್ಷಕರ ನೇಮಕ ಆಗುತ್ತದೆ ಎಂದು ಭಾವಿಸಿ. ಆ ಶಾಲೆಯಲ್ಲಿ ಹತ್ತು ವರ್ಷಗಳಿಂದ ಕನ್ನಡ ಭಾಷಾ ಶಿಕ್ಷಕರೇ ಇಲ್ಲದಿದ್ದರೆ ಮಕ್ಕಳಿಗೆ ವಾಕ್ಯ ರಚನೆಯ ಕೌಶಲ ಬಂದಿರುವುದಿಲ್ಲ. ವಾಕ್ಯ ರಚನೆ ಬಾರದ ವಿದ್ಯಾರ್ಥಿಗಳಿಂದ ವಿಜ್ಞಾನ ಶಿಕ್ಷಕ ವಿಜ್ಞಾನದ ಪರಿಕಲ್ಪನೆಗಳನ್ನು ಹೇಗೆ ನಿರೂಪಣೆ ಮಾಡಿಸಬೇಕು? ಆಗ ವಿಜ್ಞಾನ ಶಿಕ್ಷಕರಾಗಿ ಹೋದವರು ಕನ್ನಡ ಕಲಿಸಲು ಶುರು ಮಾಡಬೇಕು. ಆದರೆ ಅವರು ಕನ್ನಡ ಭಾಷಾ ಶಿಕ್ಷಕರಾಗಿ ಯಾವ ಪರೀಕ್ಷೆಯನ್ನೂ ಬರೆದು ಆಯ್ಕೆ ಆದವರೇ ಅಲ್ಲ. ನಿಜವಾಗಿ ಕಲಿಕೆ ಸಮರ್ಪಕ ಆಗಬೇಕಾದರೆ ಶಾಲೆಗಳ ಆಡಳಿತಾತ್ಮಕ ಸನ್ನಿವೇಶದ ಸುಧಾರಣೆಗೆ ಆದ್ಯತೆಯನ್ನು ನೀಡಬೇಕಾಗಿದೆ.

'ನಮ್ಮ ಕಾಲ'ದ ಆಡಳಿತಾತ್ಮಕ ಸನ್ನಿವೇಶವನ್ನೇ ಇರಿಸಿಕೊಂಡು ಈ ಕಾಲಮಾನದ ಸುಧಾರಿತ ಶಿಕ್ಷಣವನ್ನು ಯಶಸ್ವಿಗೊಳಿಸುತ್ತೇವೆ ಎಂದರೆ ಅದು ಸಾಧ್ಯವಾಗುವುದಿಲ್ಲ.

## ಚುರುಮುರಿ

### ನೇಷನ್–ಡೊನೇಷನ್!

• ಗುರು ಪಿ.ಎಸ್.

'ರೀ, ಈ ಸಲ ನೀವು ಎಲೆಕ್ಷನ್‌ಗೆ ನಿಲ್ಲಬೇಡಿ. ನನಗೆ ಟಿಕೆಟ್ ಕೊಡೋಕೆ ನಿಮ್ ಪಾರ್ಟಿಯವರಿಗೆ ಹೇಳಿ' ಹೊಸ ವರಸೆ ತೆಗೆದಳು ಹೆಂಡತಿ.

'ನೀನಾ' ವ್ಯಂಗ್ಯವಾಗಿ ನಗುತ್ತಾ ಕೇಳಿದೆ.

'ಏನ್ರೀ, ಇಷ್ಟು ವ್ಯಂಗ್ಯವಾಗಿ ನಗ್ತಿದೀರಿ. ಕ್ರಿಕೆಟ್ ನೋಡಲಿಲ್ವ... ನಮ್ ಆರ್‌ಸಿಬಿ ಹುಡುಗೀರು ಕಪ್ ಗೆದ್ದಿದ್ದನ್ನು'.

'ವಿಕೆಟ್ ತಗೊಂಡಷ್ಟು ಸುಲಭ ಅಲ್ಲಮ್ಮ ವೋಟ್ ತಗೊಳೋದು. ಅಲ್ಲದೆ, ನಮ್ ಪಾರ್ಟಿಯಲ್ಲಿ ಫ್ಯಾಮಿಲಿ ಪಾಲಿಟಿಕ್ಸ್‌ಗೆ ವಿರೋಧ ಇದೆ'.

'ನೀವು ತಪ್ಪು ತಿಳ್ಕೊಂಡಿದಿರಿ ರೀ... ಈಗಾಗಲೇ ಪಾಲಿಟಿಕ್ಸ್‌ನಲ್ಲಿರೋ ಫ್ಯಾಮಿಲಿಗಳನ್ನ ಬಿಟ್ಟು, ಬೇರೆ ಫ್ಯಾಮಿಲಿಯವರ ಪಾಲಿಟಿಕ್ಸ್‌ಗೆ ವಿರೋಧ ಇದೆ ಅಂತ ಅದರರ್ಥ. ಅಧಿಕಾರ ನಡೆಸಿದ ಅನುಭವ ಇರೋ ನಮ್ಮಂಥ ಕುಟುಂಬಗಳಿಗೆ ಇದು ಅನ್ವಯಿಸಲ್ಲ' ಹೊಸ ವಾದ ಮುಂದಿಟ್ಟಳು ಪತ್ನಿ.

'ಮೈತ್ರಿ ಬೇರೆ ಮಾಡ್ಕೊಂಡಿದೀವಿ ಕಣೆ. ಹೊಸ ಕ್ಷೇತ್ರವಾದರೆ ನಮ್ ಪಾರ್ಟಿ ಸಿಂಬಲ್ ಬದಲು ಅವರ ಪಾರ್ಟಿ ಸಿಂಬಲ್ ಮೇಲೆ ನಿಂತ್ಕೊಬೇಕು'.

'ನಮ್ ಪಾರ್ಟಿ ಸಿಂಬಲ್ ಯಾವುದು ಅಂತ ನಮಗೇ ಮರೆತುಹೋಗ್ತಿದೆ. ಇನ್ನು, ಕಾರ್ಯಕರ್ತರಿಗೆ ನೆನಪಿರುತ್ತಾ? ಅದಕ್ಕೆ, ಅವರ ಸಿಂಬಲ್‌ನಲ್ಲೇ ನಿಲ್ಲೋಣ ಬಿಡಿ'.

'ಅವರಿಗೆ ನೇಷನ್ ಮುಖ್ಯ ಕಣಮ್ಮ'.

'ಕೊಡೋಣ ಬಿಡಿ, ನಮ್ಮ ಹತ್ರ ಏನು ಕಡಿಮೆ ಇದೆಯಾ?'

'ನೇಷನ್ ಕೊಡ್ತೀಯಾ!' ಎಂದು ಕೇಳಿದೆ.

'ಓಹ್, ನೀವು ನೇಷನ್ ಅಂದ್ರಾ? ನನಗೆ ಡೊನೇಷನ್ ಅಂತ ಕೇಳಿಸ್ತು. ಅವರೆಲ್ಲ, ನೇಷನ್ ಮುಖ್ಯ ಅಂದಾಗಲೆಲ್ಲ, ನನಗೆ ಡೊನೇಷನ್ ಮುಖ್ಯ ಅಂತಾನೆ ಕೇಳಿಸುತ್ತೆ ರೀ' ನಕ್ಕಳು ಪತ್ನಿ.

'ಈಗ ಯುವ ಸಮೂಹಕ್ಕೆ ಆದ್ಯತೆ ಕೊಡಬೇಕು ಅಂತ ಪಾರ್ಟಿಯಲ್ಲಿ ಚರ್ಚೆ ನಡೀತಿದೆ'.

'ಹಾಗಾದರೆ, ನಮ್ಮ ಮಗನಿಗೆ ಟಿಕೆಟ್ ಕೊಡೋಕೆ ಹೇಳಿ'.

'ಆಗ ಅವನು ಬಾಂಡ್, ಜೇಮ್ಸ್ ಬಾಂಡ್ ಅಂತ ಹೇಳ್ಕೊಂಡು ಓಡಾಡ್ತಾನಾ?' ನಾನೂ ನಕ್ಕೆ.

'ಹಾಗೆಲ್ಲ ಏನಿಲ್ಲ. ನನ್ನ ಮಗ ಸ್ವಾಭಿಮಾನಿ. ಟಿಕೆಟ್ ಕೊಡದಿದ್ರೆ ಸ್ವಾಭಿಮಾನಕ್ಕಾಗಿ ಬಂಡಾಯವಾಗಿ ಎಲೆಕ್ಷನ್‌ಗೆ ನಿಲ್ತಾನೆ. ಒನ್ ನೇಷನ್, ಮೋರ್ ಡೊನೇಷನ್ ಅಂತ ಓಡಾಡ್ತಾನೆ' ನಗತೊಡಗಿದಳು.

## ಸಂಗತ

# ಕವಿತೆ ಹುಟ್ಟುವ ಈ ಹೊತ್ತು...

### ಆಂತರ್ಯ ಧ್ವನಿಸುವ ಕಾವ್ಯಕ್ಕೂ ಮೀಸಲಾಗಿದೆ ಒಂದು ದಿನ!

• ಡಾ. ಕೆ.ಎಸ್.ಪವಿತ್ರ

**ಮೌನವನ್ನು** 'ಮೌನ' ಎಂದೇ ನೋಡಲಾಗದು, ಮೌನವು ಎಷ್ಟೋ ಅರ್ಥಗಳನ್ನು ಧ್ವನಿಸಬಲ್ಲದು ಎನ್ನುತ್ತದೆ ಮನೋವಿಜ್ಞಾನ. ಕವಿತೆಯಾದರೂ ಈ 'ಮೌನ'ದ ಹಾಗೇ ತತ್‌ಕ್ಷಣಕ್ಕೆ ಹೊಳೆಯುವ, ಹೊಳೆಯದ ಬಹು ಅರ್ಥಗಳನ್ನು ತನ್ನೊಳಗೇ ಹುದುಗಿಸಿಕೊಂಡಿರುತ್ತದೆ. ಕವಿತೆಯ ಇಂತಹ ಮಹತ್ವವನ್ನು ಮನಗಂಡು ಯುನೆಸ್ಕೊ 'ವಿಶ್ವ ಕಾವ್ಯ ದಿನ' ಎಂಬ ಒಂದು ಆಚರಣೆಯನ್ನೇ 1999ರಿಂದ ಜಾರಿಗೆ ತಂದಿದೆ.

ಮಾರ್ಚ್ 21ರ ಈ ದಿನದ ಈ ಬಾರಿಯ ಧ್ಯೇಯವಾಕ್ಯ 'ಸ್ಟ್ಯಾಂಡಿಂಗ್ ಆನ್ ದಿ ಶೋಲ್ಡರ್ಸ್ ಆಫ್ ಜಯಂಟ್ಸ್'– 'ಹಿಂದೆ ಸಾಧನೆಗಳನ್ನು ಮಾಡಿದ ಹಿರಿಯರ ಭುಜದ ಮೇಲೆ ನಿಂತು ಮತ್ತಷ್ಟನ್ನು ನೋಡು' ಎಂಬ ಅರ್ಥದ ಈ ಪ್ರಸಿದ್ಧ ಹೇಳಿಕೆಯ ಮೂಲವು ವಿಜ್ಞಾನಿ ಐಸಾಕ್ ನ್ಯೂಟನ್‌ನ ಬಹು ಪ್ರಚಲಿತ ಮಾತಾಗಿತ್ತು ಎಂಬುದು ಕುತೂಹಲಕರ. 1675ರಲ್ಲಿ ನ್ಯೂಟನ್ ತನ್ನ ಗೆಳೆಯ, ಮೇಧಾವಿ ರಾಬರ್ಟ್ ಹುಕ್‌ಗೆ ಹೀಗೆ ಬರೆದನಂತೆ: 'ನಾನು ಮತ್ತಷ್ಟನ್ನು ನೋಡಿದ್ದೇನೆಂದರೆ, ಸಂಶೋಧಿಸಿದ್ದೇನೆಂದರೆ, ಅದು ನನಗಿಂತ ಮೊದಲು ಸಾಧಿಸಿದ ಹಿರಿಯರಿಂದ ವಿಷಯಗಳನ್ನು ಕಲಿತು, ಅವರ ಭುಜದ ಮೇಲೆ ನಿಂತಿದ್ದರಿಂದಷ್ಟೇ ಸಾಧ್ಯವಾಗಿರುವುದು'. ಅಂದರೆ, ನಿರ್ವಾತದಲ್ಲಿ ಹೊಸತೊಂದು ಸೃಷ್ಟಿಯಾಗದು, ವೈಜ್ಞಾನಿಕ ಪ್ರಗತಿ ಮುಂದುವರಿಯಬೇಕೆಂದರೆ ಅದು ಹಿಂದಿನವರ ಸಂಶೋಧನೆಗಳನ್ನು ಗಮನಿಸಿಯೇ ಮುಂದೆ ಸಾಗಬೇಕು ಎನ್ನುವ ಅರ್ಥದಲ್ಲಿ ವಿಜ್ಞಾನ ಕ್ಷೇತ್ರದಲ್ಲಿ ಇಂದಿಗೂ ಬಳಕೆಯಾಗುತ್ತದೆ.

ಮನೋವಿಜ್ಞಾನಿ ಸಿಗ್ಮಂಡ್ ಫ್ರಾಯ್ಡ್ ಪ್ರಕಾರ, ಪ್ರತಿನಿತ್ಯ ರಾತ್ರಿ ಕನಸು ಕಾಣುವ ನಾವೆಲ್ಲರೂ 'ಕವಿ'ಗಳೇ! ನಮ್ಮ ಸುಪ್ತ ಮನಸ್ಸಿನ ಕೆಲವನ್ನು, ನೆನಪಿನ ಕೋಶದ ಹಲವನ್ನು ಮೆದುಳು ಹೊರಹಾಕುತ್ತದೆ ಎನ್ನುವ ಕಾರಣಕ್ಕೆ ಕನಸು ಕಾವ್ಯದಂತೆ ಕೆಲಸ ಮಾಡುತ್ತದೆ. ನಾಲ್ಕು ಸಾವಿರ ವರ್ಷಗಳ ಹಿಂದೆ ಹುಟ್ಟಿದ ಬ್ಯಾಬಿಲೋನ್‌ನ ಗಿಲ್ಗಮೇಷ್ ಮಹಾಕಾವ್ಯದಿಂದ ಆರಂಭಿಸಿ ಇಂದಿನವರೆಗೆ ಬೇರೆ ಬೇರೆ ಬಗೆಯ ಕಾವ್ಯಗಳು ಹುಟ್ಟಿಕೊಂಡಿವೆ. ಮಾನವ ಅನುಭವಗಳನ್ನು ಶೋಧಿಸುವ ಪ್ರಕ್ರಿಯೆಯೇ ಕಾವ್ಯ ಎನ್ನುವುದು ನಾವು ಒಪ್ಪಬಹುದಾದ ಮಾತು. ಹಾಗೆ ಮಾಡುವ ಮೂಲಕ ಸಾಮಾಜಿಕ ಮೌಲ್ಯಗಳ ಬಗ್ಗೆ ಕಾವ್ಯ ನಮ್ಮನ್ನು ಮತ್ತೆ ಮತ್ತೆ ಎಚ್ಚರಿಸುತ್ತದೆ.

ಕಾವ್ಯ ಮತ್ತು ಆರೋಗ್ಯಕ್ಕೂ ಸಂಬಂಧ ಇದೆ ಎನ್ನುತ್ತವೆ ಅಧ್ಯಯನಗಳು. ಕಾವ್ಯವನ್ನು ಬರೆಯಲೇ ಬೇಕೆಂದಿಲ್ಲ. ಕೇಳಿದರೂ, ಓದಿದರೂ ಅದರಿಂದ ಮಾನಸಿಕ, ದೈಹಿಕ ಸ್ವಾಸ್ಥ್ಯಗಳೆರಡೂ ಹೆಚ್ಚುತ್ತವೆ. 2016ರಲ್ಲಿ ಕ್ಯಾನ್ಸರ್ ರೋಗಿಗಳನ್ನು ಒಳಗೊಂಡು ನಡೆದ ಅಧ್ಯಯನವೊಂದರಲ್ಲಿ, ನೋವಿನ ತೀವ್ರತೆ ಕಡಿಮೆ ಮಾಡುವಲ್ಲಿ ಸಂಗೀತ ಮತ್ತು ಕವಿತೆಯ ಓದಿನ ಪರಿಣಾಮವನ್ನು ಪರಿಶೀಲಿಸಲಾಯಿತು. ಎರಡೂ ನೋವಿನ ತೀವ್ರತೆಯನ್ನು ಕಡಿಮೆ ಮಾಡಿದವು. ಆದರೆ ಕಾವ್ಯದ ಓದುವಿಕೆ ಅಥವಾ ಕೇಳುವಿಕೆ 'ಭರವಸೆ'ಯ ಮಟ್ಟವನ್ನು ಗಮನಾರ್ಹವಾಗಿ ಏರಿಸಿತು. ಮತ್ತೊಂದು ಅಧ್ಯಯನದಲ್ಲಿ, ಪಾರ್ಶ್ವವಾಯುವಿಗೆ ತುತ್ತಾದ ವ್ಯಕ್ತಿಗಳಲ್ಲಿ ಕಾವ್ಯವು ನೆನಪಿನ ಶಕ್ತಿಯನ್ನು ಹೆಚ್ಚಿಸಲು ಸಹಕಾರಿ ಆಗಿತ್ತು. ಅನಾರೋಗ್ಯ, ಸಂಕಷ್ಟದ ಸಮಯದಲ್ಲಿ ವೇದನೆಯನ್ನೇ ವಸ್ತುವಾಗುಳ್ಳ ಕಾವ್ಯ 'ನಮಗೊಬ್ಬರಿಗೇ ಅಲ್ಲ ಈ ಅನುಭವ' ಎಂಬ ಅರಿವು ಮೂಡಿಸಿ, ಒಂಟಿತನದ ಭಾವವನ್ನು ದೂರವಾಗಿಸಬಹುದು.

ಅಧ್ಯಯನವೊಂದರ ಸಲುವಾಗಿ, ವಿವಿಧ ಆರೋಗ್ಯ ಸಮಸ್ಯೆಗಳಿಂದ ಆಸ್ಪತ್ರೆಗೆ ದಾಖಲಾಗಿದ್ದ ಮಕ್ಕಳಿಗೆ 'ಕಾವ್ಯದ ಕಿಟ್' ನೀಡಿ ಪರೀಕ್ಷಿಸಲಾಯಿತು. ಅಮೆರಿಕದ ಕವಯಿತ್ರಿ ಎಮಿಲಿ ಡಿಕಿನ್‌ಸನ್‌ಳ 'ಹೋಪ್ ಈಸ್ ದ ಥಿಂಗ್ ವಿತ್ ಫೆದರ್ಸ್' ಎನ್ನುವ ಕವನವೊಂದನ್ನು ಅವರಿಗೆ ಓದಿ ಹೇಳಲಾಯಿತು. ಭಯ, ದುಃಖ, ದಣಿವು, ಕೋಪದಿಂದ ತುಂಬಿದ್ದ ಈ ಪುಟಾಣಿಗಳು ತಮ್ಮ ಭಾವನೆಗಳನ್ನು ಹೊರಹಾಕುವುದು ಸುಲಭವಾಯಿತು.

ಕಾವ್ಯ ರಚನೆಯ ಉದ್ದೇಶ ಬಹುಮುಖಿಯಾದುದು. ಮನಸ್ಸಿನ ಭಾವನೆಗಳನ್ನು ಕಾಗದದ ಮೇಲೆ ಹೊರಹಾಕುವ, ಭಾವನೆಗಳಿಗೆ ಅಕ್ಷರ ರೂಪ ನೀಡಿ ಅವುಗಳಿಂದ ಮುಕ್ತರಾಗುವ ಉದ್ದೇಶವೂ ಕಾವ್ಯ ಬರೆಯಲು ಕಾರಣವಾಗಬಹುದು. ಆರೋಗ್ಯದ ಸಮಸ್ಯೆಗಳಲ್ಲಂತೂ ಇದು ಒಂದು ಉಪಯುಕ್ತ ಸಾಧನ. ಕನ್ನಡದಲ್ಲಿಯೇ ಬಂದಿರುವ ಕೊರೊನಾ ಕಾವ್ಯ, ಕೀಮೋ ಕವನಗಳನ್ನು ನೋಡಿದರೆ ಇದು ಸುಸ್ಪಷ್ಟ. ತನ್ನ ಒಳಗನ್ನು ತಾನೇ ಹೆಚ್ಚು ಕರುಣೆಯಿಂದ, ಸಹಾನುಭೂತಿಯಿಂದ ನೋಡುವ ಅಪರೂಪದ ಪ್ರಕ್ರಿಯೆಯನ್ನು ಕವಿತೆ ಬರೆಯುವುದು ಸಾಧ್ಯವಾಗಿಸುತ್ತದೆ. ಹೀಗೆ ನಿರಾಳವಾಗುವ ಮನಸ್ಸು ಔಷಧಿಗಳನ್ನು ಸರಿಯಾಗಿ ತೆಗೆದುಕೊಳ್ಳುವುದು, ಶಸ್ತ್ರಚಿಕಿತ್ಸೆಗೆ ಸಿದ್ಧವಾಗುವುದು, ಕಾಲಕಾಲಕ್ಕೆ ವೈದ್ಯರ ಭೇಟಿಯನ್ನು ಮುಂದುವರಿಸುವಂತಹ ಚಿಕಿತ್ಸೆಯ ಅಂಶಗಳಿಗೆ ದಾರಿ ಮಾಡಿಕೊಡುತ್ತದೆ. ರೋಗಿಯೊಬ್ಬನ 'ಮೌನ'ದಲ್ಲಿ, ಕವಿತೆಯೊಂದರ ಸಾಲುಗಳ ಮಧ್ಯೆ ಅಡಗಿರುವಂತಹ ಅರ್ಥವೇ ಇದೆ ಎಂಬ ಅರಿವು ವೈದ್ಯ-ರೋಗಿ ಬಾಂಧವ್ಯಕ್ಕೆ ಬಹು ಸಹಕಾರಿ.

ಸಾಮಾಜಿಕ ಆರೋಗ್ಯಕ್ಕೆ, ಕ್ರಾಂತಿಕಾರಕ ಬೆಳವಣಿಗೆಗಳಿಗೆ, ಬೇರೆ ಬೇರೆ ಬಗೆಯ ಪಲ್ಲಟಗಳಿಗೆ ಕಾವ್ಯ ಕಾರಣವಾಗಿರುವ ನಿದರ್ಶನಗಳು ಕನ್ನಡ ಸಾಹಿತ್ಯದ ತುಂಬ ಎದ್ದು ಕಾಣುತ್ತವೆ. ಅಂತಹ ದೈತ್ಯ ಪ್ರತಿಭೆಗಳ ಭುಜದ ಮೇಲೆ ನಿಂತು, ದೈಹಿಕ, ಮಾನಸಿಕ, ಸಾಮಾಜಿಕ, ಆಧ್ಯಾತ್ಮಿಕ ಆಯಾಮಗಳಿಂದ ಕೂಡಿದ ಸಮಗ್ರ ಆರೋಗ್ಯದ ದಾರಿಯನ್ನು ದಿಟ್ಟಿಸಿ ನೋಡಬೇಕಾದ, ವಿಜ್ಞಾನ, ಕಲೆಗಳೆರಡರ ಗುರಿಯೂ ಒಂದೇ ಎಂದು ಮನಗಾಣಬೇಕಾದ ಸತ್ಯವನ್ನು 'ವಿಶ್ವ ಕಾವ್ಯ ದಿನ' ನಮಗೆ ನೆನಪಿಸಬೇಕು. ಅರಿವಿನಿಂದ ಕಾವ್ಯವನ್ನು ಓದಿ ಆರೋಗ್ಯ ಪಡೆಯೋಣ!

## ವಾಚಕರ ವಾಣಿ

### ಹೋಳಿ ನೆಪದಲ್ಲಿ ಪೋಲಾಗದಿರಲಿ ನೀರು

ಬೆಂಗಳೂರು ಒಳಗೊಂಡು ರಾಜ್ಯದ ಅನೇಕ ನಗರ, ಪಟ್ಟಣ, ಹಳ್ಳಿಗಳಲ್ಲಿ ಬಳಕೆಯ ಹಾಗೂ ಕುಡಿಯುವ ನೀರಿನ ತೀವ್ರ ಅಭಾವ ತಲೆದೋರಿದೆ. ಮಳೆ ಬರುವುದಕ್ಕೆ ಮೊದಲೇ ಹೋಳಿ ಬರುತ್ತಿದೆ. ಉತ್ತರ ಕರ್ನಾಟಕದ ಹೆಚ್ಚಿನ ಊರುಗಳಲ್ಲಿ, ಗಲ್ಲಿ ಗಲ್ಲಿಗಳಲ್ಲಿ, ಪೀಪಾಯಿಗಟ್ಟಲೆ ನೀರಿನಲ್ಲಿ ಬಣ್ಣ ಕಲೆಸಿ, ಎರಚಾಡಿ ಸಂಭ್ರಮಿಸುವುದುಂಟು. ಇದೂ ಅಲ್ಲದೆ, ಆಮೇಲೆ ಬಣ್ಣ ತೊಳೆದುಕೊಳ್ಳಲು ಕೂಡ ಅಪಾರ ಪ್ರಮಾಣದ ನೀರು ವ್ಯಯವಾಗುತ್ತದೆ. ಹೀಗಾಗಿ, ಈ ವರ್ಷದ ಮಟ್ಟಿಗಾದರೂ ಹೋಳಿ ದೆಸೆಯಿಂದಾಗುವ ನೀರಿನ ಅತಿ ಬಳಕೆಯನ್ನು ನಿಯಂತ್ರಿಸುವುದು ಅಗತ್ಯವಾಗಿದೆ. 'ನೀರು ನಾಳೆಗಿರಲಿ' ಎಂಬ ಆಶಯದೊಂದಿಗೆ, ನೀರಿನ ಸಮಸ್ಯೆ ಇರುವೆಡೆಯಲ್ಲಿ ನೀರು ಪೋಲಾಗುವುದನ್ನು ತಡೆಯಲು ಆಯಾ ಜಿಲ್ಲಾಡಳಿತ, ಪಂಚಾಯಿತಿಗಳಿಗೆ ಸರ್ಕಾರ ಕಟ್ಟುನಿಟ್ಟಿನ ನಿರ್ದೇಶನ ನೀಡಬೇಕು.

**ರಾಮಚಂದ್ರ ಎಸ್. ಕುಲಕರ್ಣಿ,** ಧಾರವಾಡ

### ಮೇಲುಕೋಟೆಯ ಸುಪುತ್ರನಿಗೆ ಸಲ್ಲಲಿ ಗೌರವ

ಕನ್ನಡ ನವೋದಯ ಸಾಹಿತ್ಯದ ಪ್ರಮುಖರಲ್ಲಿ ಒಬ್ಬರಾಗಿರುವ ಪುತಿನ (ಪುರೋಹಿತ ತಿರುನಾರಾಯಣ ನರಸಿಂಹಾಚಾರ್) ಅವರ ಸಮಾಧಿಯನ್ನು ವೈರಮುಡಿ ಮಹೋತ್ಸವದ ಅಭಿವೃದ್ಧಿಯ ನೆಪದಲ್ಲಿ ಅವರ ಸ್ವಗ್ರಾಮ ಮೇಲುಕೋಟೆಯಲ್ಲಿ ಹಾಳುಗೆಡವಿರುವ ಸುದ್ದಿ (ಪ್ರ.ವಾ., ಮಾರ್ಚ್ 19) ಓದಿ ಬೇಸರವಾಯಿತು. ಇದು ಕವಿಗೆ ಮಾಡಿರುವ ಅಪಚಾರ. ಸ್ವಚ್ಛತೆಯನ್ನು ಎಲ್ಲಿಂದಲೋ ಬಂದವರು ಮಾಡಿಲ್ಲ, ಸ್ಥಳೀಯರೇ ಮಾಡಿರುತ್ತಾರೆ. ಮೇಲ್ವಿಚಾರಣೆ ಮಾಡುವ ಪಂಚಾಯಿತಿಯಲ್ಲಿ ಇರುವವರೂ ಸ್ಥಳೀಯರೇ. ಹೀಗಿದ್ದೂ ಈ ಪ್ರಮಾದ ನಡೆದಿರುವುದು ನಿರ್ಲಕ್ಷ್ಯ ಮತ್ತು ಉಡಾಫೆಯ ಪರಮಾವಧಿ.

ಸಂಬಂಧಪಟ್ಟವರು ಇತ್ತ ಗಮನಹರಿಸಿ, ನಿರ್ಲಕ್ಷ್ಯಕ್ಕೆ ಒಳಗಾಗಿರುವ ಸಮಾಧಿಯನ್ನು ಸ್ಮಾರಕವಾಗಿಸಬೇಕು. ಸಮಾಧಿಯ ಸುತ್ತ 10 ಅಡಿ ಹಸಿರು ಬೆಳೆಸಿ ಬೇಲಿ ಹಾಕಿಸಬೇಕು. ಅಲ್ಲಿ ದೊಡ್ಡದಾದ ಫಲಕ ಬರೆಸಬೇಕು. ಮೇಲುಕೋಟೆಯ ಚೆಲುವ ನಾರಾಯಣನ ದರ್ಶನಕ್ಕೆ ಬರುವ ಲಕ್ಷಾಂತರ ಮಂದಿ ಇಲ್ಲಿ ಹಲವು ಸ್ಮಾರಕಗಳನ್ನು ನೋಡುತ್ತಾರೆ. ಅದೇ ಮಾದರಿಯಲ್ಲಿ ಇದನ್ನೂ ನೋಡುವಂತೆ ಅಭಿವೃದ್ಧಿಪಡಿಸಲು ಜಿಲ್ಲಾಡಳಿತ ಕ್ರಮ ಕೈಗೊಳ್ಳಬೇಕು. ಈ ಕಾರ್ಯ ಆದಾಗ ಮಾತ್ರ ನಿಜವಾದ ವೈರಮುಡಿ ಪೂಜೆ ಆದಂತೆ ಆಗುತ್ತದೆ. ಯದುಗಿರಿಯನ್ನೇ ಉಸಿರಾಗಿಸಿಕೊಂಡು ಕಾವ್ಯ, ಕತೆ, ನಾಟಕ, ಪ್ರಬಂಧ ಬರೆದ ಮೇಲುಕೋಟೆಯ ಸುಪುತ್ರನಿಗೆ ನಿಜವಾದ ಗೌರವ ಸಲ್ಲಿಸಿದಂತೆ ಆಗುತ್ತದೆ.

**ಬಲ್ಲೇನಹಳ್ಳಿ ಮಂಜುನಾಥ್,** ಕೆ.ಆರ್.ಪೇಟೆ

### ಏಕಕಾಲಕ್ಕೆ ಚುನಾವಣೆ: ಸೂಕ್ತವಲ್ಲದ ದೃಷ್ಟಿಕೋನ

ವಿಧಾನಸಭೆ, ಲೋಕಸಭೆ ಮತ್ತು ಸ್ಥಳೀಯ ಆಡಳಿತಕ್ಕೆ ಏಕಕಾಲಕ್ಕೆ ಚುನಾವಣೆ ನಡೆಸಲು ಮಾಜಿ ರಾಷ್ಟ್ರಪತಿ ರಾಮನಾಥ ಕೋವಿಂದ್ ನೇತೃತ್ವದ ಸಮಿತಿಯು ಶಿಫಾರಸು ಮಾಡಿರುವುದು ಆಡಳಿತಾತ್ಮಕ ವೆಚ್ಚ ತಗ್ಗಿಸುವುದೂ ಸೇರಿದಂತೆ ಕೆಲವು ಕಾರಣಗಳಿಂದ ಸರಿ ಎನ್ನಿಸಬಹುದಾದರೂ ಮತ್ತೊಂದು ದೃಷ್ಟಿಯಿಂದಲೂ ಅವಲೋಕಿಸಬೇಕಾಗುತ್ತದೆ. ರಾಷ್ಟ್ರೀಯ ಸಮಸ್ಯೆಗಳು, ಸ್ಥಳೀಯ ಸಮಸ್ಯೆಗಳು ಹಾಗೂ ರಾಷ್ಟ್ರೀಯ ನಾಯಕತ್ವ ಮತ್ತು ಸ್ಥಳೀಯ ನಾಯಕತ್ವದ ವಿಚಾರದಲ್ಲಿ ಜನರ ದೃಷ್ಟಿಕೋನದಲ್ಲಿ ವ್ಯತ್ಯಾಸಗಳಿರುತ್ತವೆ. ಬೇರೆ ಬೇರೆ ಸಮಯದಲ್ಲಿ ಚುನಾವಣೆ ನಡೆದಾಗ ಒಂದೇ ರಾಜ್ಯದಲ್ಲಿ ಲೋಕಸಭೆಗೆ ಮತ್ತು ವಿಧಾನಸಭೆಗೆ ವಿಭಿನ್ನ ಫಲಿತಾಂಶ ಬಂದಿರುವ ನಿದರ್ಶನಗಳು ನಮ್ಮ ಕಣ್ಣ ಮುಂದೆಯೇ ಇವೆ. ದೇಶದಲ್ಲಿ ಇನ್ನು ಕೆಲವರು ಚಿಹ್ನೆಯನ್ನು ಗುರುತಿಸಿ ಮತದಾನ ಮಾಡುತ್ತಾರೆ. ಅಂತಹವರಿಗೆ ಮತದಾನದಲ್ಲಿ ಗೊಂದಲವುಂಟಾಗಿ, ಇದರಿಂದ ನಿಖರವಾದ ಫಲಿತಾಂಶ ಕಷ್ಟಕರವಾಗುತ್ತದೆ. ಎಸ್.ಎಂ.ಕೃಷ್ಣ ಅವರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ 2004ರಲ್ಲಿ ಎರಡೂ ಚುನಾವಣೆಗಳು ಒಟ್ಟಿಗೆ ನಡೆದಾಗ ಬಂದ ಫಲಿತಾಂಶ ಬಹುಶಃ ಇದಕ್ಕೆ ತಾಜಾ ಉದಾಹರಣೆ ಆಗಬಹುದು. ಈ ದೃಷ್ಟಿಯಿಂದ ಏಕಕಾಲದ ಚುನಾವಣೆ ನಮ್ಮ ರಾಷ್ಟ್ರಕ್ಕೆ ಸೂಕ್ತ ಎನಿಸುವುದಿಲ್ಲ.

**ಕೆ.ಎಂ.ನಾಗರಾಜು,** ಮೈಸೂರು

### ಮಕ್ಕಳ ಮೇಲೇಕೆ ಮತ್ತೆ ಹೊರೆ?

ಇನ್ನೇನು ಶಾಲಾ ವಾರ್ಷಿಕ ಪರೀಕ್ಷೆಗಳು ಮುಗಿಯುವ ಹಂತದಲ್ಲಿವೆ. ಪ್ರತಿ ವರ್ಷದಂತೆ ಈ ಬಾರಿಯೂ ಬೇಸಿಗೆ ಶಿಬಿರಗಳ ಬಗೆಗೆ ಜಾಹೀರಾತುಗಳನ್ನು ನೋಡುತ್ತಿದ್ದೇವೆ. ಖಾಸಗಿ ಶಾಲೆಗಳು, ಇತರ ಶೈಕ್ಷಣಿಕ ಸಂಸ್ಥೆಗಳ ಜತೆಗೆ ಕೆಲವು ಟ್ಯೂಷನ್ ಸೆಂಟರ್‌ಗಳೂ ಬೇಸಿಗೆ ಶಿಬಿರಗಳನ್ನು ನಡೆಸುತ್ತವೆ. ಇಷ್ಟು ದಿನ ಮಕ್ಕಳು ಶಾಲೆ, ಹೋಂವರ್ಕ್, ಪರೀಕ್ಷೆ ಅನ್ನುವ ಗಡಿಬಿಡಿಯಲ್ಲಿ ದೈಹಿಕವಾಗಿ, ಮಾನಸಿಕವಾಗಿ ದಣಿದಿರುತ್ತಾರೆ. ಈ ಸಂದರ್ಭದಲ್ಲಿ ಸ್ವಲ್ಪ ವಿರಾಮದೊಂದಿಗೆ ಆರಾಮವಾಗಿ ಊಟ, ತಿಂಡಿ, ನಿದ್ದೆ, ಮನೆಯ ಸದಸ್ಯರ ಜೊತೆಗೆ ಬೆರೆತು ಆಡುವ ಅವಕಾಶ ಕಲ್ಪಿಸುವ ಉದ್ದೇಶ ಯಾಕೋ ಪೋಷಕರಿಗೂ ಇಲ್ಲವಾಗಿದೆ. ಇಂತಹ ಹೆಚ್ಚಿನ ಶಿಬಿರಗಳು ಹಣ ವಸೂಲಿಯ ಕೇಂದ್ರಗಳಾಗುತ್ತಿವೆ. ಇವುಗಳಿಗೆಲ್ಲ ಕಡಿವಾಣ ಹಾಕುವವರಾರು?

**ಟಿ.ಎಸ್.ಪ್ರತಿಭಾ,** ಚಿತ್ರದುರ್ಗ

### ಮಕ್ಕಳನ್ನು ಈ ರೀತಿ ಬಳಸುವುದು ಬೇಡ

ಕೋಲಾರದ ಸರ್ಕಾರಿ ಜೂನಿಯರ್ ಕಾಲೇಜಿನಲ್ಲಿ ನೀರಿನ ಪೈಪು ಅಳವಡಿಸುವ ಸಲುವಾಗಿ ಕಲ್ಲು ಒಡೆಯುವ, ಚಪ್ಪಡಿ ಕಲ್ಲು ಎತ್ತುವ ಹಾಗೂ ಮಣ್ಣು ಹೊರುವಂಥ ಶ್ರಮದಾಯಕ ಕೆಲಸಗಳಿಗೆ ವಿದ್ಯಾರ್ಥಿಗಳನ್ನು ಬಳಸಿಕೊಂಡಿರುವ ಬಗ್ಗೆ ವರದಿಯಾಗಿದೆ (ಪ್ರ.ವಾ., ಮಾರ್ಚ್ 20). ಇಂತಹ ಪ್ರಕರಣಗಳು ಸರ್ಕಾರಿ ಶಾಲಾ ಕಾಲೇಜುಗಳಿಂದಲೇ ಪದೇಪದೇ ವರದಿಯಾಗುತ್ತಿದ್ದರೂ ಶಿಕ್ಷಣ ಇಲಾಖೆ ಇದನ್ನು ಗಂಭೀರವಾಗಿ ಪರಿಗಣಿಸಿದಂತೆ ಕಾಣುತ್ತಿಲ್ಲ.

ಮೊದಲೇ ಪೋಷಕರು, ವಿದ್ಯಾರ್ಥಿಗಳು ಖಾಸಗಿ ಶಾಲೆಗಳತ್ತ ಆಕರ್ಷಿತರಾಗಿ ಸರ್ಕಾರಿ ಶಾಲೆಗಳು ಮಕ್ಕಳ ಕೊರತೆಯಿಂದ ಒಂದೊಂದಾಗಿ ಮುಚ್ಚುವ ಹಂತಕ್ಕೆ ಬರುತ್ತಿವೆ. ಇನ್ನು ಮಕ್ಕಳನ್ನು ಈ ರೀತಿ ದುರ್ಬಳಕೆ ಮಾಡಿಕೊಂಡರೆ ಯಾರು ತಾನೇ ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗಳಿಗೆ ಸೇರಿಸಲು ಮುಂದೆ ಬರುತ್ತಾರೆ? ಪರೀಕ್ಷೆಯ ಸಮಯದಲ್ಲಿ ಮಕ್ಕಳನ್ನು ಇಂತಹ ಕೆಲಸಗಳಿಗೆ ಬಳಸಿಕೊಳ್ಳುವುದು ಕೂಡ ಅಕ್ಷಮ್ಯ ಅಪರಾಧ. ಅವರಿಗೆ ಏನಾದರೂ ಆದರೆ ಅದಕ್ಕೆ ಯಾರು ಹೊಣೆ? ಶಿಕ್ಷಣ ಇಲಾಖೆಯು ಇದನ್ನು ಗಂಭೀರವಾಗಿ ಪರಿಗಣಿಸಬೇಕು. ಈ ರೀತಿ ಮಾಡಬಾರದು ಎಂದು ಎಲ್ಲ ಶಾಲಾ ಕಾಲೇಜುಗಳಿಗೆ ಸುತ್ತೋಲೆ ಹೊರಡಿಸಬೇಕು. ಅದನ್ನು ಉಲ್ಲಂಘಿಸಿದರೆ ಕಠಿಣ ಕ್ರಮ ಜರುಗಿಸಬೇಕು.

**ಚಾವಲ್ಮನೆ ಸುರೇಶ್ ನಾಯಕ್,** ಹಾಲ್ಮತ್ತೂರು, ಕೊಪ್ಪ

Printed and published by B A Ravi on behalf of The Printers (Mysore ) Private Ltd., at The Printers (Mysore ) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

# ನವೋದ್ಯಮ ಭಾರತ ಸರ್ಕಾರದ ಲೆಕ್ಕ ಏನು, ಎತ್ತ...

• ಸುಕೃತ ಎಸ್.

**ದೇಶದಲ್ಲಿ ಒಟ್ಟು 1.25 ಲಕ್ಷ ನವೋದ್ಯಮಗಳು ಸ್ಥಾಪನೆಯಾಗಿವೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಬುಧವಾರ ನಡೆದ 'ಸ್ಟಾರ್ಟ್‌ಅಪ್ ಮಹಾಕುಂಭ' ಕಾರ್ಯಕ್ರಮದಲ್ಲಿ ಹೇಳಿಕೆ ನೀಡಿದ್ದಾರೆ. 'ಈ ಉದ್ಯಮಗಳಿಂದ ಸರಿಸುಮಾರು 12 ಲಕ್ಷ ಜನರಿಗೆ ಉದ್ಯೋಗ ದೊರೆತಿದೆ' ಎಂದೂ ಅವರು ಮಾಹಿತಿ ನೀಡಿದ್ದಾರೆ**

**ನವೋದ್ಯಮಗಳ ಕುರಿತು 'ಇಂಡಿಯನ್ ವೆಂಚರ್ ಕ್ಯಾಪಿಟಲ್ 2024' ಎನ್ನುವ ವರದಿಯೊಂದು 2024ರ ಆರಂಭದಲ್ಲಿ ಬಿಡುಗಡೆಯಾಗಿದೆ. ಈ ವರದಿಯನ್ನು ಬೈನ್ ಆ್ಯಂಡ್ ಕಂಪನಿ ಹಾಗೂ ಇಂಡಿಯನ್ ವೆಂಚರ್ ಆ್ಯಂಡ್ ಆಲ್ಟರ್‌ನೇಟ್ ಕ್ಯಾಪಿಟಲ್ ಅಸೋಸಿಯೇಷನ್ ಸೇರಿ ಸಿದ್ಧಪಡಿಸಿವೆ. '2023ರಲ್ಲಿ ಸುಮಾರು 35 ಸಾವಿರ ನವೋದ್ಯಮಗಳು ಬಾಗಿಲು ಮುಚ್ಚಿವೆ' ಎನ್ನುವುದು ಈ ವರದಿಯ ಪ್ರಮುಖ ಅಂಶಗಳಲ್ಲಿ ಒಂದು**

**ಒಂದು** ಕಡೆ ಭಾರತದಲ್ಲಿ ನವೋದ್ಯಮಗಳ ಸಂಖ್ಯೆ ಏರಿಕೆಯಾಗುತ್ತಿದೆ. ಉದ್ಯಮಗಳ ಸಂಖ್ಯೆಯೊಂದಿಗೆ ಉದ್ಯೋಗಾವಕಾಶಗಳೂ ಏರಿಕೆಯಾಗುತ್ತಿವೆ ಎಂದು ಕೇಂದ್ರ ಸರ್ಕಾರದ ದಾಖಲೆಗಳು ಹೇಳುತ್ತಿವೆ. ಇನ್ನೊಂದೆಡೆ ನವೋದ್ಯಮಗಳು ಬಾಗಿಲು ಮುಚ್ಚುತ್ತಿರುವ ಸಂಖ್ಯೆ ಏರಿಕೆಯಾಗುತ್ತಿದೆ ಮತ್ತು ಅವುಗಳಲ್ಲಿನ ಉದ್ಯೋಗಿಗಳನ್ನು ಕಡಿತ ಮಾಡಲಾಗುತ್ತಿದೆ ಎಂದು ಹಲವು ವರದಿಗಳು ಹೇಳುತ್ತಿವೆ. ಹಾಗಿದ್ದರೆ, ಸಾಂಖ್ಯಿಕ ಏರಿಕೆ ಮಾತ್ರವೇ ಉತ್ತಮ ಬೆಳವಣಿಗೆಯೇ ಅಥವಾ ಸ್ಥಾಪನೆಗೊಂಡ ಉದ್ಯಮವು ಉತ್ತಮ ಸ್ಥಿತಿಯಲ್ಲಿ ಕಾರ್ಯನಿರ್ವಹಿಸುವುದು ಉತ್ತಮ ಬೆಳವಣಿಗೆಯೇ ಎಂಬ ಪ್ರಶ್ನೆ ಸಹಜವಾಗಿ ಹುಟ್ಟಿಕೊಳ್ಳುತ್ತದೆ.

2023ರಲ್ಲಿ ದೇಶದಲ್ಲಿ ನವೋದ್ಯಮ ಉಗಮಕ್ಕೆ ಅಷ್ಟೇನು ಉತ್ತಮ ವಾತಾವರಣ ಇರಲಿಲ್ಲ ಎಂದು 'ಇಂಡಿಯನ್ ವೆಂಚರ್ ಕ್ಯಾಪಿಟಲ್ 2024' ವರದಿ ಹೇಳುತ್ತದೆ. ನವೋದ್ಯಮಗಳಲ್ಲಿ ಸಾರ್ವಜನಿಕರು ಹೂಡಿಕೆ ಮಾಡುವುದಿರಲಿ, ದೊಡ್ಡ ದೊಡ್ಡ ಕಂಪನಿಗಳು ಕೂಡ ಹೂಡಿಕೆ ಮಾಡುವುದು ಭಾರತದಲ್ಲಿ ಕಡಿಮೆಯಾಗಿವೆ. ಅಂತರರಾಷ್ಟ್ರೀಯ ಮಟ್ಟದ ಕಂಪನಿಗಳು ಕೂಡ ಹೂಡಿಕೆಗೆ ಹಿಂದೇಟು ಹಾಕಿವೆ ಎನ್ನುತ್ತದೆ ವರದಿ. 2024ರ ನಂತರವೇ ಉತ್ತಮ ವಾತಾವರಣ ಸೃಷ್ಟಿಯಾಗಬಹುದು ಎಂಬ ನಂಬಿಕೆಯಲ್ಲಿವೆ ದೇಶೀಯ ಹಾಗೂ ಅಂತರರಾಷ್ಟ್ರೀಯ ಕಂಪನಿಗಳು.

**ಯಾಕಾಗಿ ಹೂಡಿಕೆ ಕುಸಿಯಿತು?** :ದೇಶೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಹೂಡಿಕೆ ಇಳಿಕೆಯಾಗಲು ಹಲವು ಕಾರಣಗಳಿವೆ. ದೇಶೀಯ ಮಟ್ಟದ ಹೂಡಿಕೆ ಇಳಿಕೆಗೆ ಹೆಚ್ಚಿನ ಬಡ್ಡಿದರ ಪಾವತಿಸಬೇಕಾಗಿರುವುದು ಪ್ರಮುಖ ಕಾರಣ. ಹಣದುಬ್ಬರ ನೀಡಿದ ಹೊಡೆತ, ಹೂಡಿಕೆದಾರರ ನಿರೀಕ್ಷೆಗಳು ಹೆಚ್ಚಾಗಿರುವುದು ಇತರ ಪ್ರಮುಖ ಕಾರಣಗಳು. ಉಕ್ರೇನ್ ಮೇಲೆ ರಷ್ಯಾ ನಡೆಸುತ್ತಿರುವ ಯುದ್ಧ, ಗಾಜಾ ಮೇಲಿನ ಇಸ್ರೇಲ್ ಯುದ್ಧ- ಇವುಗಳ ಕಾರಣದಿಂದಾಗಿ ಅಂತರರಾಷ್ಟ್ರೀಯ ಕಂಪನಿಗಳು ಹೂಡಿಕೆಗೆ ಮುಂದಾಗುತ್ತಿಲ್ಲ. ನವೋದ್ಯಮಗಳು ಅತ್ಯುತ್ತಮ ಪ್ರಗತಿ ತೋರಿಸಬಲ್ಲವು ಎನ್ನುವ ನಂಬಿಕೆ ಇಲ್ಲದ ಕಾರಣಕ್ಕಾಗಿಯೂ ಹೂಡಿಕೆ ಕಡಿತಗೊಂಡಿದೆ.

ಈ ಕಾರಣಗಳಿಗಾಗಿ ನವೋದ್ಯಮಗಳ ನಡುವಿನ, ದೊಡ್ಡ ದೊಡ್ಡ ಕಂಪನಿಗಳು ಹಾಗೂ ನವೋದ್ಯಮಗಳ ನಡುವಿನ ಹೂಡಿಕೆ ಮತ್ತು ಮಾಲೀಕತ್ವ ವರ್ಗಾವಣೆ ವಹಿವಾಟುಗಳೂ ಇಳಿಕೆಯಾಗಿವೆ. 2021-22ರ ಆರ್ಥಿಕ ವರ್ಷದಲ್ಲಿ ಇಂಥ ವಹಿವಾಟುಗಳ ಸಂಖ್ಯೆ 1,611ರಷ್ಟಿತ್ತು. ಅದು 2022-23ರ ಹೊತ್ತಿಗೆ 880ಕ್ಕೆ ಇಳಿಕೆಯಾಗಿದೆ. ಅಂದರೆ, ಕಳೆದ ಆರ್ಥಿಕ ವರ್ಷದ ಹೋಲಿಕೆಯಲ್ಲಿ ಶೇ 45ರಷ್ಟು ವಹಿವಾಟುಗಳು ಕಡಿತಗೊಂಡಿವೆ. ಇನ್ನು ಇಂಥ ವಹಿವಾಟುಗಳ ಮೊತ್ತದಲ್ಲಿಯೂ ಇಳಿಕೆ ಕಂಡುಬಂದಿದೆ. 2021-22ರಲ್ಲಿ ವಹಿವಾಟುಗಳ ಮೊತ್ತವು ಅಂದಾಜು ₹133 ಕೋಟಿಯಷ್ಟಿತ್ತು. ಇದು 2022-23ರ ಹೊತ್ತಿಗೆ ಅಂದಾಜು ₹92 ಕೋಟಿಯಷ್ಟಾಗಿದೆ. ಈ ಎಲ್ಲ ಕಾರಣಗಳಿಂದ ದೇಶದ ಒಟ್ಟು 35 ಸಾವಿರ ನವೋದ್ಯಮಗಳು 2023ರಲ್ಲಿ ಬಾಗಿಲು ಮುಚ್ಚಿವೆ ಎಂದು 'ಇಂಡಿಯನ್ ವೆಂಚರ್ ಕ್ಯಾಪಿಟಲ್ 2024' ವರದಿ ಹೇಳಿದೆ.

**ಮೂರು ಮಾಹಿತಿ:** ಉದ್ಯೋಗ ಸೃಷ್ಟಿಯ ಕುರಿತು ಕೇಂದ್ರ ಸರ್ಕಾರದ ಬಳಿ ಮೂರು ವಿವಿಧ ಮಾಹಿತಿಗಳಿವೆ. ಪ್ರಧಾನಿ ನರೇಂದ್ರ ಮೋದಿ ಅವರು ಬುಧವಾರ ತಮ್ಮ ಭಾಷಣದಲ್ಲಿ ಸುಮಾರು 12 ಲಕ್ಷ ಉದ್ಯೋಗ ಸೃಷ್ಟಿಯಾಗಿದೆ ಎಂದು ಹೇಳಿದ್ದಾರೆ. ಕೇಂದ್ರ ಸರ್ಕಾರವೇ ಪ್ರಕಟಿಸುವ ಪಿಐಬಿ ಪತ್ರಿಕಾ ಪ್ರಕಟಣೆಯಲ್ಲಿ, 'ನವೋದ್ಯಮಗಳು ದೇಶದಲ್ಲಿ ಒಟ್ಟು 12.42 ಲಕ್ಷ ಉದ್ಯೋಗವನ್ನು ಸೃಷ್ಟಿಸಿವೆ' ಎಂದು ಹೇಳಿದೆ. '2016ರಿಂದ 2023ರ ನವೆಂಬರ್‌ವರೆಗೆ ದೇಶದಾದ್ಯಂತ ನೋಂದಣಿಯಾದ ನವೋದ್ಯಮಗಳು ಒಟ್ಟು 12.56 ಲಕ್ಷ ಉದ್ಯೋಗಗಳನ್ನು ಸೃಷ್ಟಿಸಿವೆ' ಎಂದು ಕೇಂದ್ರ ಸರ್ಕಾರವೇ ತನ್ನ 'ನವೋದ್ಯಮ ಭಾರತದ ಏಳು ವರ್ಷಗಳು:2016-2023' ವರದಿಯಲ್ಲಿ ಹೇಳಿದೆ.

**₹2.13 ಲಕ್ಷ ಕೋಟಿ** 2021-22ರಲ್ಲಿ ದೇಶದ ನವೋದ್ಯಮಗಳಲ್ಲಿ ಆಗಿದ್ದ ಸಾಂಸ್ಥಿಕ ಹೂಡಿಕೆಯ ಮೊತ್ತ

**₹79,873 ಕೋಟಿ** 2022-23ರಲ್ಲಿ ದೇಶದ ನವೋದ್ಯಮಗಳಲ್ಲಿ ಆಗಿದ್ದ ಸಾಂಸ್ಥಿಕ ಹೂಡಿಕೆಯ ಮೊತ್ತ

**65%** ಹೂಡಿಕೆಯಲ್ಲಿ ಆದ ಇಳಿಕೆಯ ಪ್ರಮಾಣ

ಆಧಾರ: ಪಿಐಬಿ, ಇಂಡಿಯನ್ ವೆಂಚರ್ ಕ್ಯಾಪಿಟಲ್ 2024 ವರದಿ, 'ಪ್ರಾರಂಭ: ಭಾರತದಲ್ಲಿ ನವೋದ್ಯಮಗಳ ಎಂಟು ವರ್ಷಗಳು' ವರದಿ

## ಏರಿಕೆ ಹಾದಿಯಲ್ಲಿ ನವೋದ್ಯಮಗಳ ಸಂಖ್ಯೆ







## ನಿಲ್ಲದ ಉದ್ಯೋಗ ಕಡಿತ

ಕೇಂದ್ರ ಸರ್ಕಾರವು ಉದ್ಯೋಗ ಸೃಷ್ಟಿ ಹಾಗೂ ನವೋದ್ಯಮಗಳ ಸ್ಥಾಪನೆಗಳ ಕುರಿತು ಮಾಹಿತಿ ಸಂಗ್ರಹಿಸುತ್ತದೆ. ಆದರೆ, ಉದ್ಯೋಗ ನಷ್ಟದ ಕುರಿತು ಯಾವುದೇ ಮಾಹಿತಿಯನ್ನು ಸಂಗ್ರಹಿಸಿಡುವುದಿಲ್ಲ. ಈ ಕಾರಣಗಳಿಗಾಗಿ ಹಲವು ವರದಿಗಳನ್ನು ಆಶ್ರಯಿಸಬೇಕಾಗುತ್ತದೆ.

ನವೋದ್ಯಮಗಳ ಕುರಿತು ಅಧ್ಯಯನ ನಡೆಸುವ 'ಗ್ಲೋಬಲ್‌ಡಾಟಾ' ಉದ್ಯೋಗ ಕಡಿತದ ಕುರಿತು ವರದಿವೊಂದನ್ನು ನೀಡಿತ್ತು. ಈ ವರದಿಯ ಪ್ರಕಾರ, 2023ರ ಮೊದಲ 11 ತಿಂಗಳಲ್ಲಿ ಭಾರತದ ಪ್ರಮುಖ ನವೋದ್ಯಮಗಳು 15,000 ಜನರನ್ನು ಮನೆಗೆ ಕಳುಹಿಸಿವೆ. 2022ರಲ್ಲಿ ಈ ಸಂಖ್ಯೆ 24,000ಕ್ಕಿಂತ ಹೆಚ್ಚು ಇತ್ತು. ಇನ್ನು, 2023ರಲ್ಲಿ ಅತಿಹೆಚ್ಚು ಜನರನ್ನು (2,500) ಕೆಲಸದಿಂದ ತೆಗೆದುಹಾಕಿದ್ದು ಬೈಜು'ಸ್. ಆ ಹನ್ನೊಂದು ತಿಂಗಳಲ್ಲಿ 100ಕ್ಕೂ ಹೆಚ್ಚು ಜನರನ್ನು ಕೆಲಸದಿಂದ ತೆಗೆದುಹಾಕಿದ ನವೋದ್ಯಮಗಳ ಸಂಖ್ಯೆ 36. ಇವು ದೊಡ್ಡ ನವೋದ್ಯಮಗಳ ಲೆಕ್ಕ ಮಾತ್ರ. ಆದರೆ 100ಕ್ಕಿಂತ ಕಡಿಮೆ ಸಂಖ್ಯೆಯಲ್ಲಿ ಉದ್ಯೋಗ ಕಡಿತ ಮಾಡಿದ ಸಂಸ್ಥೆಗಳ ಮಾಹಿತಿ ಇಲ್ಲ. ಈಗ ಇಂಥದ್ದೇ ಮಾಹಿತಿ ಯನ್ನು 'ಇಂಡಿಯನ್ ವೆಂಚರ್ ಕ್ಯಾಪಿಟಲ್ 2024' ವರದಿಯೂ ಹೇಳುತ್ತದೆ. ಈ ವರದಿಯ ಪ್ರಕಾರ 2023ರಲ್ಲಿ ಪ್ರಮುಖ ನವೋದ್ಯಮಗಳು ಒಟ್ಟು 20 ಸಾವಿರ ಮಂದಿಯನ್ನು ಕೆಲಸದಿಂದ ತೆಗೆದು ಹಾಕಿವೆ ಎಂದು ಹೇಳಿದೆ.

## ನವೋದ್ಯಮಗಳಲ್ಲಿ ಉದ್ಯೋಗಾವಕಾಶ




* 2018 ಮತ್ತು ಅದಕ್ಕೂ ಮೊದಲು ನವೋದ್ಯಮಗಳಲ್ಲಿ ಇದ್ದ ಉದ್ಯೋಗಗಳ ಒಟ್ಟು ಸಂಖ್ಯೆ




## ಪ್ರೈಂನಲ್ಲಿ 'ಕಾಂತಾರ' ಪ್ರೀಕ್ವೆಲ್

**ರಿಷಬ್ ಶೆಟ್ಟಿ** ನಟಿಸಿ ನಿರ್ದೇಶಿಸುತ್ತಿರುವ 'ಕಾಂತಾರ-ಒಂದು ದಂತಕಥೆ'ಯ ಮೊದಲ ಅಧ್ಯಾಯ ಸಿನಿಮಾ ರಿಲೀಸ್‌ಗೂ ಮುನ್ನವೇ ಒಟಿಟಿಗೆ ಮಾರಾಟವಾಗಿದೆ. ದೊಡ್ಡ ಮೊತ್ತಕ್ಕೆ ಪ್ರೈಂ ವಿಡಿಯೊ ಈ ಸಿನಿಮಾವನ್ನು ಖರೀದಿಸಿದ್ದು, ಮಂಗಳವಾರ ಮುಂಬೈನಲ್ಲಿ ನಡೆದ ಕಾರ್ಯಕ್ರಮದಲ್ಲಿ ತಾನು ಖರೀದಿಸಿದ 29 ಸಿನಿಮಾಗಳ ಶೀರ್ಷಿಕೆಯನ್ನು ಪ್ರೈಂ ಘೋಷಿಸಿತು.

ರಿಷಬ್ ಶೆಟ್ಟಿ ಹಾಗೂ ಚಿತ್ರದ ನಿರ್ಮಾಪಕ ವಿಜಯ್ ಕಿರಗಂದೂರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ವರಾಹ ರೂಪಂ ಹಾಡಿಗೆ ಯಕ್ಷಗಾನ ಕಲಾವಿದರು ಪ್ರದರ್ಶನ ನೀಡಿದ ಬಳಿಕ, ಪ್ರೈಂ ತಂಡವು 'ಕಾಂತಾರ-ಒಂದು ದಂತಕಥೆ' ಅಧ್ಯಾಯ 1ರ ಬಿಡುಗಡೆಯನ್ನು ಘೋಷಿಸಿತು. ಕಾಂತಾರ ಚಿತ್ರದ ಪ್ರೀಕ್ವೆಲ್ ಚಿತ್ರೀಕರಣ ಏಪ್ರಿಲ್‌ನಿಂದ ಆರಂಭವಾಗಿದ್ದು, ಇದಕ್ಕಾಗಿ ಕೆರಾಡಿಯಲ್ಲಿ ಬೃಹತ್ ಸೆಟ್‌ಗಳನ್ನು ನಿರ್ಮಿಸಲಾಗಿದೆ ಎಂದು ಮಾಹಿತಿ ನೀಡಿದ್ದಾರೆ ರಿಷಬ್.

ಈ ಸಿನಿಮಾದ ಜೊತೆಗೆ ಶಾಹಿದ್ ಕಪೂರ್ ನಟಿಸುತ್ತಿರುವ 'ಅಶ್ವತ್ಥಾಮ-ದಿ ಸಾಗಾ ಕಂಟಿನ್ಯೂಸ್' ಸಿನಿಮಾವನ್ನೂ ಪ್ರೈಂ ಖರೀದಿಸಿದೆ. ರಕ್ಷಿತ್ ಶೆಟ್ಟಿ ಅಭಿನಯದ 'ಅವನೇ ಶ್ರೀಮನ್ನಾರಾಯಣ' ಚಿತ್ರ ನಿರ್ದೇಶಿಸಿದ್ದ ಸಚಿನ್ ರವಿ ಈ ಸಿನಿಮಾಗೆ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ. 'ಕಾಂತಾರ' ಪ್ರೀಕ್ವೆಲ್ ಹಾಗೂ 'ಅಶ್ವತ್ಥಾಮ' ಸಿನಿಮಾಗಳು ಚಿತ್ರಮಂದಿರಗಳಲ್ಲಿ ಬಿಡುಗಡೆಯಾದ ಬಳಿಕ ಪ್ರೈಂನಲ್ಲಿ ಲಭ್ಯವಾಗಲಿವೆ. ಇವುಗಳ ಜೊತೆಗೆ ಹಿಂದಿಯ ಹಿಟ್ ವೆಬ್ ಸರಣಿಗಳಾದ 'ಮಿರ್ಜಾಪುರ್' ಹಾಗೂ 'ಪಂಚಾಯತ್'ನ ಮೂರನೇ ಚಾಪ್ಟರ್‌ಗಳನ್ನೂ ಪ್ರೈಂ ಘೋಷಿಸಿದೆ.

## ತೆರೆಗೆ ಬರಲು ಸಜ್ಜಾದ 'ರಕ್ತಾಕ್ಷ'

**ರೋಹಿತ್**, ರೂಪಾ ರಾಯಪ್ಪ, ಅರ್ಚನಾ ಕೊಟ್ಟಿಗೆ ಮುಖ್ಯಭೂಮಿಕೆಯಲ್ಲಿರುವ 'ರಕ್ತಾಕ್ಷ' ಚಿತ್ರ ತೆರೆಗೆ ಬರಲು ಸಜ್ಜಾಗಿದೆ. ಆ್ಯಕ್ಷನ್, ಥ್ರಿಲ್ಲರ್ ಕಥಾಹಂದರದ ಈ ಸಿನಿಮಾವನ್ನು ವಾಸುದೇವ ಎಸ್.ಎನ್ ನಿರ್ದೇಶಿಸಿದ್ದಾರೆ.

'ಚಿತ್ರದಲ್ಲಿ ಸಾಕಷ್ಟು ತಿರುವುಗಳಿವೆ. ನಾಯಕ ರೋಹಿತ್ ಹಾಗೂ ನಟ ಪ್ರಮೋದ್ ಶೆಟ್ಟಿ ನಡುವಿನ ಆ್ಯಕ್ಷನ್ ಸನ್ನಿವೇಶಗಳು ಚಿತ್ರದ ಹೈಲೆಟ್. ನಟ ವಸಿಷ್ಠ ಸಿಂಹ ಹಾಡಿರುವ ಟೈಟಲ್ ಟ್ರ್ಯಾಕ್ ಈಗಾಗಲೇ ಬಿಡುಗಡೆಗೊಂಡಿದ್ದು, ಎಲ್ಲರ ಮೆಚ್ಚುಗೆ ಪಡೆದಿದೆ. ಸೆನ್ಸಾರ್ ಪೂರ್ಣಗೊಂಡಿದ್ದು ಶೀಘ್ರದಲ್ಲಿಯೇ ಬಿಡುಗಡೆ ದಿನಾಂಕ ಪ್ರಕಟಿಸುತ್ತೇವೆ' ಎನ್ನುತ್ತಾರೆ ನಿರ್ದೇಶಕರು.

ಉತ್ತರ ಕರ್ನಾಟಕ ಮೂಲದ ರೋಹಿತ್ ನಟನೆಯ ಜೊತೆಗೆ ಚಿತ್ರಕ್ಕೆ ಬಂಡವಾಳವನ್ನೂ ಹೂಡಿದ್ದಾರೆ. ರಚನಾ ದಶರಥ್, ಗುರುದೇವ್ ನಾಗರಾಜ ಸೇರಿದಂತೆ ದೊಡ್ಡ ತಾರಾಬಳಗವೇ ಚಿತ್ರದಲ್ಲಿದೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ **https://www.prajavani.net**

## ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

✗ **ಪಶ್ಚಿಮ ಬಂಗಾಳ** ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ಹಣೆಯಿಂದ ರಕ್ತ ಸುರಿಯುತ್ತಿರುವ ಒಂದು ಚಿತ್ರ ಮತ್ತು ಅವರ ಹಣೆಯ ಎಡಭಾಗದಲ್ಲಿ ಬ್ಯಾಂಡ್‌ಏಡ್ ಹಾಕಿರುವ ಮತ್ತೊಂದು ಚಿತ್ರ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಅವುಗಳ ಜತೆಗೆ, 'ಚುನಾವಣೆಗಾಗಿ ಎಷ್ಟೆಲ್ಲಾ ಗಿಮಿಕ್ ಮಾಡುತ್ತಾರೆ ನೋಡಿ. ಗಾಯ ಆಗಿದ್ದು ಹಣೆಯ ಮಧ್ಯಭಾಗಕ್ಕೆ. ಆದರೆ ಬ್ಯಾಂಡ್‌ಏಡ್ ಹಾಕಿದ್ದು ಹಣೆಯ ಎಡಭಾಗಕ್ಕೆ. ಇವರೆಲ್ಲಾ ಎಷ್ಟು ಸುಳ್ಳುಕೋರರು ಎಂಬುದು ಇಷ್ಟರಲ್ಲೇ ಗೊತ್ತಾಗುತ್ತದೆ' ಎಂಬ ಸಂದೇಶವನ್ನೂ ಹಂಚಿಕೊಳ್ಳಲಾಗುತ್ತಿದೆ. ಆದರೆ ಆ ಎರಡೂ ಚಿತ್ರಗಳು ಬೇರೆ ಬೇರೆ ಅವಧಿಗೆ ಸಂಬಂಧಿಸಿದವು.

✓ **ಮಮತಾ ಬ್ಯಾನರ್ಜಿ** ಅವರ ಕಾರು ಇದೇ ಜನವರಿ 24ರಂದು ಸಣ್ಣ ಅಪಘಾತಕ್ಕೆ ತುತ್ತಾಗಿತ್ತು. ಆಗ ಅವರ ಹಣೆಗೆ ಸಣ್ಣ ತರಚಿದ ಗಾಯವಾಗಿತ್ತು. ಆನಂತರ ಅವರು ತಮ್ಮ ಹಣೆಯ ಎಡಭಾಗಕ್ಕೆ ಬ್ಯಾಂಡ್‌ಏಡ್ ಹಾಕಿಕೊಂಡೇ ಸಾರ್ವಜನಿಕವಾಗಿ ಕಾಣಿಸಿಕೊಂಡಿದ್ದರು. ಅದು ಒಂದು ಚಿತ್ರ. ಮಾರ್ಚ್ ಎರಡನೇ ವಾರದಲ್ಲಿ ಮಮತಾ ಅವರು ತಮ್ಮ ಮನೆಯಲ್ಲೇ ಬಿದ್ದಿದ್ದರು. ಅವರ ಹಣೆಗೆ ತೀವ್ರ ಪೆಟ್ಟಾಗಿತ್ತು. ಆ ಚಿತ್ರವನ್ನು ಟಿಎಂಸಿ ಹಂಚಿಕೊಂಡಿತ್ತು. ಎರಡೂ ಭಿನ್ನ ಘಟನೆಗೆ ಸಂಬಂಧಿಸಿದ ಚಿತ್ರಗಳು. ಆದರೆ ಕೆಲವರು ಎರಡನ್ನೂ ಅಕ್ಕ-ಪಕ್ಕ ಇಟ್ಟು ಮಮತಾ ಅವರು ನಾಟಕ ಮಾಡುತ್ತಿದ್ದಾರೆ ಎಂದು ಸುಳ್ಳು ಸುದ್ದಿ ಸೃಷ್ಟಿಸಿದ್ದಾರೆ.

## ಗುಂಡಣ್ಣ




## ಬಿದ್ದು ಎದ್ದೇಳುವ ಪರಿ

ನುಡಿ ಬೆಳಗು

ದೀಪಾ ಹಿರೇಗುತ್ತಿ, ಇಂಗ್ಲಿಷ್ ಉಪನ್ಯಾಸಕಿ

**ಸ್ಟೀವ್ ಜಾಬ್ಸ್** ಯಾರಿಗೆ ಗೊತ್ತಿಲ್ಲ? ವಿಶ್ವವಿಖ್ಯಾತ ಆ್ಯಪಲ್ ಕಂಪನಿಯ ಸಂಸ್ಥಾಪಕರಲ್ಲೊಬ್ಬರು. ಕಾರಣಾಂತರಗಳಿಂದ ಸ್ಟೀವ್‌ರನ್ನು ಅವರು ಕಟ್ಟಿದ ಕಂಪನಿಯಿಂದಲೇ ಹೊರಹಾಕಲಾಯಿತು. ಆ ಸವಾಲಿನ ಸಂದರ್ಭದಲ್ಲಿ ಅವರೆದುರು ಎರಡು ಆಯ್ಕೆಗಳಿದ್ದವು. ಮೊದಲನೆಯದು, ಕಷ್ಟಪಟ್ಟು ತಾನೇ ಕಟ್ಟಿದ ಕಂಪನಿಯಿಂದಲೇ ಹೊರಬರುವಂತಾಯಿತಲ್ಲ ಎಂದು ಯೋಚಿಸುತ್ತ ಸ್ವಮರುಕದಿಂದ ನರಳುವುದು, ಎರಡನೆಯದು, ಉಂಟಾದ ಸಮಸ್ಯೆಯಿಂದ ಹೊರಬರಲು ತಾನೇನು ಮಾಡಬೇಕು ಎಂಬುದನ್ನು ತರ್ಕಬದ್ಧವಾಗಿ ಯೋಚಿಸಿ ಕಾರ್ಯಪ್ರವೃತ್ತರಾಗುವುದು.

ಸಾಧಾರಣ ವ್ಯಕ್ತಿಗಳು ಮೊದಲನೆಯ ದಾರಿ ಆಯ್ದುಕೊಳ್ಳುತ್ತಾರೆ. ಆದರೆ ಸ್ಟೀವ್ ಹೀಗೇಕಾಯಿತೆಂದು ಯೋಚಿಸುತ್ತ ಕೂರುವ ಬದಲು ಈ ಸಮಸ್ಯೆಯನ್ನು ಹೇಗೆ ಪರಿಹರಿಸಿಕೊಳ್ಳಬಹುದೆಂದು ಯೋಚಿಸಿ ಕಾರ್ಯತತ್ಪರರಾದರು. ನೆಕ್ಸ್ಟ್ ಕಂಪ್ಯೂಟರ್ ಮತ್ತು ಪಿಕ್ಸಾರ್ ಆ್ಯನಿಮೇಷನ್ ಸ್ಟುಡಿಯೋಸ್ ಎಂಬ ಎರಡು ಅತ್ಯದ್ಭುತ ಸಂಸ್ಥೆಗಳನ್ನು ಹುಟ್ಟುಹಾಕಿದರು. ಹನ್ನೆರಡು ವರ್ಷಗಳ ಬಳಿಕ ಆ್ಯಪಲ್ ಸ್ಟೀವ್ ಅವರನ್ನು ಮತ್ತೆ ಆಹ್ವಾನಿಸಿತು. ಎಷ್ಟೆಂದರೂ ಆ್ಯಪಲ್ ಸ್ಟೀವ್‌ರ ಕನಸಿನ ಕೂಸಲ್ಲವೇ? ಮರಳಿ ಸಿಇಒ ಆದರು. ಸ್ಟೀವ್ ಬಂದ ಮೇಲೆ ನಿರ್ಮಾಣವಾದ ಐಪಾಡ್, ಐಫೋನ್, ಐಟ್ಯೂನ್ಸ್ ಸ್ಟೋರ್, ಐಮ್ಯಾಕ್ ಮತ್ತು ಐಪ್ಯಾಡ್‌ನಂತಹ ಉತ್ಪನ್ನಗಳು ಕಂಪನಿಯನ್ನು ಮುಗಿಲೆತ್ತರಕ್ಕೆ ಏರಿಸಿದವು.

ಸ್ಟೀವ್ ಅವರ ಉದಾಹರಣೆಯಿಂದ ನಾವು ಕಲಿಯಬೇಕಾದದ್ದು ಬದುಕಿನಲ್ಲಿ ಸೋತರೂ ಅದರಿಂದೀಚೆ ಜಿಗಿದು ಮತ್ತೆ ಆ ಎತ್ತರ ತಲುಪುವ ಬಗೆಯನ್ನು. ಸೋಲು ಅಥವಾ ಆಘಾತ ಎಂಬುದು ವೃತ್ತಿಜೀವನದ ಅಥವಾ ಬದುಕಿನ ಆರಂಭದಲ್ಲಿ ಮಾತ್ರವಲ್ಲ. ಯಾವ ಸಂದರ್ಭದಲ್ಲಿ ಬೇಕಾದರೂ ಅನಿರೀಕ್ಷಿತವಾಗಿ ಸವಾಲೊಡ್ಡಬಹುದು. ಸ್ಟೀವ್‌ರಂತೆ ಯಶಸ್ಸಿನ ಉತ್ತುಂಗದಲ್ಲಿದ್ದಾಗಲೂ.

ಕ್ರಿಕೆಟ್‌ನಂತಹ ಅನಿಶ್ಚಿತತೆಯ ಆಟದಲ್ಲಿ ಸಣ್ಣ ಅಂದಾಜನ್ನಾದರೂ ಮಾಡಬಹುದು. ಆದರೆ ಬದುಕು ಹಾಗಲ್ಲ. ಇಲ್ಲಿ ನಡೆಯುವಷ್ಟು ಅನಿರೀಕ್ಷಿತಗಳು ಮತ್ತೆಲ್ಲೂ ನಡೆಯುವುದಿಲ್ಲ. ಎಲ್ಲ ಸರಿಯಿದೆ ಎಂದು ಸಮಾಧಾನದ ಉಸಿರು ಬಿಡುತ್ತಿರುವಾಗಲೇ ಹೊಸದೊಂದು ಆಘಾತ ನಮಗಾಗಿ ಕಾಯುತ್ತಿರುತ್ತದೆ. ಹಾಗಾಗಿ ಇಂತಹ ಸಂದರ್ಭದಲ್ಲಿ ಮೊದಲು ಮಾಡಬೇಕಾದದ್ದು ಪರಿಸ್ಥಿತಿಯನ್ನು ಒಪ್ಪಿಕೊಳ್ಳುವುದು. ಏಕೆಂದರೆ ಆಗಿಹೋದ ಘಟನೆಗಳನ್ನು ಬದಲಾಯಿಸಲು ಸಾಧ್ಯವಿಲ್ಲ. ಜತೆಗೆ ಅದನ್ನು ಸರಿಪಡಿಸಲು ಏನು ಕ್ರಮ ಕೈಗೊಳ್ಳಬಹುದೆಂದು ಯೋಚಿಸಿ ಆ ದಿಸೆಯಲ್ಲಿ ಕಾರ್ಯತತ್ಪರವಾಗುವುದು. ಆಘಾತಗಳು ಬರುವುದನ್ನು ತಪ್ಪಿಸಲಂತೂ ಸಾಧ್ಯವಿಲ್ಲ, ಆದರೆ ಅವನ್ನೇ ಮೆಟ್ಟಿಲಾಗಿಸಿಕೊಂಡು ಯಶಸ್ಸು ಕಾಣುವುದಿದೆಯಲ್ಲ, ಅದು ಜಾಣತನ.

ತನಗೆ ಮಾತ್ರ ಏಕೆ ಕಷ್ಟ ಬಂತೆಂದು ಯೋಚಿಸುವವರು ಮರೆಯದೇ ನೆನಪಿಡಬೇಕಾದ ಸಂಗತಿಯೆಂದರೆ ಪ್ರತಿಯೊಬ್ಬರೂ ಅವರದ್ದೇ ಆದ ಸಂಕಟವೊಂದನ್ನು ಹೊಂದಿರುತ್ತಾರೆ ಮತ್ತು ಅದರಿಂದ ಹೊರಬರಲು ಹೋರಾಡುತ್ತಿರುತ್ತಾರೆ. ಎದೆಗುಂದಿ ಹತಾಶರಾಗಿ ಸೋಲೊಪ್ಪಿಕೊಳ್ಳುವ ಬದಲು ನೆಲಕ್ಕೆ ಬಲವಾಗಿ ಬಡಿಸಿಕೊಂಡರೂ ಪುಟಿದೇಳುವ ಚೆಂಡಿನಂತೆ ಎದ್ದೇಳುವುದು ಬದುಕು ಚಲನಶೀಲ ಎಂಬುದರ ನಿದರ್ಶನ.

## ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಮಾರ್ಚ್ 21, 2024

**ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ:** ಫಾಲ್ಗುಣ ಶುಕ್ಲ ದ್ವಾದಶಿ ಗಂ. 28-45 ನಕ್ಷತ್ರ: ಆಶ್ಲೇಷ ಗಂ. 25-27 ಯೋಗ: ಸುಕರ್ಮ ಗಂ. 17-42 ಕರಣ: ಬವ ಗಂ. 15-32, ಮೀನ ಮಾಸದ 07 ನೇ ದಿನ, ಮಳೆನಕ್ಷತ್ರ: ಉತ್ತರಾಭಾದ್ರ 2.
ರಾಹುಕಾಲ : ಮಧ್ಯಾಹ್ನ 01-30 - 03-00
ಸೂರ್ಯೋದಯ : 06-37 ಸೂರ್ಯಾಸ್ತ : 06-38
ಮುಸ್ಲಿಂ ದಿನಾಂಕ : 10 ರಂಜಾನ್
ಅದೃಷ್ಟ ಸಂಖ್ಯೆ : 2, 8

**ಮೇಷ :** ಮೋಸ ಮಾಡುವ ಬುದ್ಧಿ, ಅನ್ಯಾಯ ಮಾಡುವ ಯೋಚನೆಗಳನ್ನು ಕಡಿಮೆ ಮಾಡಿಕೊಳ್ಳಿ. ಹಣದ ವಿಚಾರದಲ್ಲಿ ಖರ್ಚು-ವೆಚ್ಚಗಳ ವಿಷಯದಲ್ಲಿ ಜಾಗ್ರತೆ ಇರಲಿ. ರಾಜಕೀಯ ವಿದ್ಯಮಾನಗಳಿಂದ ಓಡಾಟ ಅಧಿಕಗೊಳ್ಳುವುದು.

**ವೃಷಭ:** ಮುಂಜಾನೆ ಏಳುವಾಗಲೇ ನೀವು ಉತ್ಸಾಹಿಗಳಾಗಿರುತ್ತೀರಿ. ಸಂತಸ ಭರಿತ ಒಂದು ಸುದ್ದಿ ನಿಮ್ಮನ್ನು ತಲುಪುತ್ತದೆ. ಯಾವ ಕೆಲಸದಲ್ಲೂ ನಿರ್ಲಕ್ಷ್ಯ ತೋರದಿರಿ. ಹೊಸದಾಗಿ ಹಣ ಹೂಡಿಕೆ ಮಾಡಬೇಕಾದರೆ ಪರಿಶೀಲನೆ ಅಗತ್ಯ.

**ಮಿಥುನ:** ಮನೆಯ ವಿಸ್ತರಣೆ ವಿಷಯವಾಗಿ ಉತ್ತಮ ಆಲೋಚನೆಗಳು ಗರಿಗೆದರಲಿವೆ. ಸಹಾಯಕ ದರ್ಜೆಯವರಿಂದ ನಿರೀಕ್ಷೆಗೆ ಮೀರಿದ ಸಹಾಯ ದೊರೆಯುವುದು. ಮಲ್ಲಿಕಾರ್ಜುನನ ಆರಾಧನೆ ಮಾಡುವುದರಿಂದ ಶುಭ.

**ಕರ್ಕಾಟಕ:** ಆಶಾವಾದ ಮತ್ತು ಧನಾತ್ಮಕ ವರ್ತನೆಯ ಹೆಜ್ಜೆಗಳು ನಿಮ್ಮ ಸುತ್ತಮುತ್ತಲಿನ ಜನರ ಕಣ್ಣನ್ನು ಕೆಂಪಾಗಿಸುತ್ತದೆ. ಎಲ್ಲಾ ಕಿರಿ ಕಿರಿಗಳನ್ನೂ ಶಾಂತ ರೀತಿಯಿಂದ ಎದುರಿಸಿ. ಮಾನಸಿಕಪೀಡೆಗಳಿಗೆ ಒಳಗಾಗದಂತೆ ಕಾಳಜಿವಹಿಸಿ.

**ಸಿಂಹ:** ವೃತ್ತಿ ಬದುಕಿನಲ್ಲಿ ಅಪೂರ್ವ ಅವಕಾಶಗಳು ನಿಮ್ಮದಾಗಲಿವೆ. ವ್ಯಾಪಾರದಲ್ಲಿ ಸ್ಪರ್ಧಾತ್ಮಕ ರೀತಿಯ ವಾತಾವರಣ ಇರುತ್ತದೆ. ವಿದೇಶದಿಂದ ಮಗನ ಆಗಮನದ ಸುದ್ದಿ ಸಂತೋಷ ತರುವುದು.

**ಕನ್ಯಾ:** ಗಂಭೀರ ಹಂತದಲ್ಲಿರುವ ವೈಯಕ್ತಿಕ ಹಾಗೂ ಔದ್ಯೋಗಿಕ ಸಂಬಂಧಗಳನ್ನು ಸರಿಗೊಳಿಸುವ ಪ್ರಯತ್ನವನ್ನು ನಡೆಸಬಹುದು. ಹಿಂದೆಂದೂ ಮಾಡದ ಅಪರೂಪದ ಕೆಲಸಗಳನ್ನು ಈಗ ಮಾಡಬೇಕಾಗುವುದು.

**ತುಲಾ :** ಎಂಜಿನಿಯರಿಂಗ್ ಶಿಕ್ಷಣದಲ್ಲಿನ ವಿದ್ಯಾರ್ಥಿಗಳು ವಿದ್ಯಾಭ್ಯಾಸದಲ್ಲಿ ವಿಶೇಷ ಸಾಧನೆ ತೋರಿರುವುದರಿಂದ ವಿದೇಶಕ್ಕೆ ತೆರಳುವ ಸಂಭವ. ಮನೆಗೆ ಬಂಧುಗಳ ಆಗಮನವಿರುವುದು. ಶ್ರಮಕ್ಕೆ ತಕ್ಕ ಧನ ಸಂಪಾದನೆ ಹೆಚ್ಚುವುದು.

**ವೃಶ್ಚಿಕ:** ಕ್ರೀಡಾಪಟುಗಳಿಗೆ, ಸಂಗೀತಗಾರರಿಗೆ ಸಾಧನೆಯ ಅವಕಾಶ ಸಿಕ್ಕಿದರೂ ಅನಾರೋಗ್ಯ ಎದುರಾಗಬಹುದು. ಶುಭ ಕಾರ್ಯಗಳು ಕೈಗೂಡಿದ್ದು ಜವಾಬ್ದಾರಿ ಹೆಚ್ಚಲಿದೆ. ಸರ್ವತೋಮುಖ ಪ್ರಗತಿಯಿಂದ ಹರ್ಷವಿರುವುದು.

**ಧನು:** ಕೊಡು ಕೊಳ್ಳುವ ವಿಚಾರಗಳಲ್ಲಿ ಒಬ್ಬರೇ ತೀರ್ಮಾನ ಕೈಗೊಳ್ಳುವುದು ಸೂಕ್ತವಲ್ಲ. ಆಭರಣ ಮಾರಾಟಗಾರರಿಗೆ ಒದಗುವ ಅವಕಾಶಗಳ ಹೆಚ್ಚಳದಿಂದ ಕೆಲಸವಿರುವುದು. ಆಗಾಗ ಒಂಟಿತನದ ಚಿಂತೆಯು ಕಾಡಲಿದೆ.

**ಮಕರ:** ವಕೀಲೀ ವೃತ್ತಿ ನಡೆಸುವವರಿಗೆ, ನ್ಯಾಯಾಂಗ ಇಲಾಖೆಯವರಿಗೆ ಉತ್ತಮ ದಿನ. ತಂದೆ-ತಾಯಿಯ ಆರೋಗ್ಯದ ಬಗ್ಗೆ ಕಾಳಜಿವಹಿಸುವುದು ಅನಿವಾರ್ಯ. ವೈದ್ಯಕೀಯ ವಿದ್ಯಾರ್ಥಿಗಳಿಗೆ ಯಶಸ್ಸು ಲಭ್ಯವಾಗಲಿದೆ.

**ಕುಂಭ:** ಕೆಲವು ಬಾರಿ ಆತಂಕ ಎದುರಾಗುವ ಸಾಧ್ಯತೆ ಇರುತ್ತದೆ. ಆದರೂ ಜೀವನದಲ್ಲಿ ಸೋಮಾರಿತನವನ್ನು ದೂರ ಮಾಡಿದರೆ, ಯೋಗ್ಯತೆಗೆ ಮೀರಿದ ಕೆಲಸಕಾರ್ಯಗಳಿಗೆ ಕೈಹಾಕಿದರೂ ಸಮಸ್ಯೆ ಆಗದು. ಗಮನವಿರಲಿ.

**ಮೀನ:** ಸ್ಪಷ್ಟ ನಿರ್ಧಾರವನ್ನು ಮಾಡಿದ ವಿಚಾರವನ್ನು ಮತ್ತೊಮ್ಮೆ ಯೋಚಿಸಲು ಅವಕಾಶಗಳು ಒದಗಿಬರುತ್ತದೆ. ಕುಟುಂಬ ವರ್ಗದಲ್ಲಿ ಆರೋಗ್ಯ ಉತ್ತಮವಾಗಿ ಇರುವುದು. ಈ ದಿನ ಅಪವಾದಗಳು ದೂರವಾಗಲಿವೆ.

## ಪದಬಂಧ 5627

– ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**
1.ನೊಣ ಇಲ್ಲಿ ಬಂದೆದೆ (3)
3.ಎಲ್ಲವನ್ನೂ ತಿಳಿದವನು (3)
4.ಗಡಿ ಹತ್ತಿರವಿರುವ ದೊಡ್ಡ ಹಾರೆ (3)
5.ಆಳು ಸುರಿಸಿದ ಕಣ್ಣೀರು! (2)
6.ಕರದಲ್ಲಿರುವುದು ನೀರು ತುಂಬಿದ ಕಳಶ (3)
8.ಈ ವಿಧವಾಗಿ ವ್ಯಕ್ತವಾಗಿರುವ ದುಃಖ (3)
9.ಮಾತು ಕೇಳುತ್ತಿರುವ ಸೋದರಮಾವ (3)
11.ನರನು ನೋಡಿರುವ ಪಟ್ಟಣ (3)
14.ದಿಟ್ಟತನದಿಂದ ನುಡಿದ ಸತ್ಯ (2)
15.ಭಾರ ಹೊರುವ ಕೂಲಿಯಾಳು (3)
16. ಶ್ವಾಸದ್ವಾರವು ತಟ್ಟನೆ ಮುಚ್ಚಿದಾಗ ಉಂಟಾಗುವ ಶಬ್ದ (3)
17.ದೃಷ್ಟಿ ನೆಟ್ಟಾಗ ನೀಡಿದ ಕಾಣಿಕೆ (3)

**ಮೇಲಿಂದ ಕೆಳಕ್ಕೆ**
2.ಕರುವಿನ ಪಚನಾಂಗ (3)
3.ಈತ ಸರಿಸಮಾನನಾದವನು (3)
4.ಟಾರ ರಸ್ತೆಯ ಬಳಿಯಲ್ಲಿರುವ ಮೋರಿ (3)
5.ಅಡಗಿಕೊಳ್ಳಲು ಸೂಕ್ತವಾದ ಕಾಡು (3)
6.ದನಕ್ಕಾಗಿ ನಡೆದ ಕಾಳಗ (3)
7.ಈತ ಪಕ್ಕಾ ಹಳ್ಳಿಯವ (3)
10.ವಿಧಿ ಲಿಖಿತವಿರುವ ಹಣೆ (3)
12.ಗಲ್ಲಿ ಗಲ್ಲಿಯಲ್ಲಿ ನಡೆಯುತ್ತಿರುವ ಗಲಾಟೆ (3)
13.ಮಹನೀಯ ಕಟ್ಟಿಸಿರುವ ಭವ್ಯ ಸೌಧ (3)
14.ದಿನದಲ್ಲೇ ಬಂದಿರುವ ಮಂತ್ರಿ (3)



## 5626ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ:**
1.ಪ್ರಲೋಭನ 3.ಕಂಠುಪಿತ
5.ಗುಲಾಬಿ 7.ಸಜಾ
9.ಚರಣ 12.ವಾರಸು
13.ಮಿತ 15.ಶುನಕ
17.ಕರಂಡಕ 18.ಪಿತಾಮಹ

**ಮೇಲಿಂದ ಕೆಳಕ್ಕೆ:**
1.ಪ್ರವಾಸ
2.ನಗು 3.ಕಂಬಿ
4.ತರುಣ 6.ಲಾಲಸೆ
8.ಜಾಮೀನುದಾರ 10.ರಥಸಪ್ತಮಿ
11.ಭೋಜನ 12.ವಾದಕ
14.ತರಹ 15.ಶುಕ
16.ಕಪಿ

## ಸುಡೊಕು 6012

| | | | | | | | | |
|---|---|---|---|---|---|---|---|---|
| | 4 | | 1 | | 3 | 5 | | 7 |
| 7 | | 6 | 4 | | | | 3 | 1 |
| | 3 | | | | 7 | 4 | | |
| 6 | 1 | | | | 4 | | | |
| | | | | | | 6 | | 4 |
| 8 | 2 | | | | | | 1 | |
| | | 3 | | 2 | | 9 | | 8 |
| 9 | | | 3 | | 6 | | 7 | 5 |
| 4 | | 1 | | 8 | | | 6 | 2 |

### ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

### 6011 ಸುಡೊಕು

| | | | | | | | | |
|---|---|---|---|---|---|---|---|---|
| 3 | 5 | 2 | 1 | 9 | 4 | 8 | 6 | 7 |
| 6 | 1 | 4 | 5 | 8 | 7 | 9 | 3 | 2 |
| 7 | 9 | 8 | 6 | 3 | 2 | 5 | 1 | 4 |
| 2 | 7 | 9 | 8 | 1 | 3 | 6 | 4 | 5 |
| 1 | 3 | 6 | 7 | 4 | 5 | 2 | 9 | 8 |
| 4 | 8 | 5 | 9 | 2 | 6 | 3 | 7 | 1 |
| 5 | 4 | 1 | 2 | 6 | 9 | 7 | 8 | 3 |
| 9 | 2 | 3 | 4 | 7 | 8 | 1 | 5 | 6 |
| 8 | 6 | 7 | 3 | 5 | 1 | 4 | 2 | 9 |

# ‘ಗ್ಯಾರಂಟಿ’ಗಳ ನಡುವೆ ಜಂಗೀಕುಸ್ತಿ

## ಕೇಂದ್ರ ಯೋಜನೆ: ರಾಜ್ಯವ್ಯಾಪಿ ಪ್ರಚಾರ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕೇಂದ್ರ ಸರ್ಕಾರ ಕಳೆದ 10 ವರ್ಷಗಳಲ್ಲಿ ಜಾರಿ ಮಾಡಿರುವ ಜನಪರ ಯೋಜನೆಗಳು ಮತ್ತು ಸಾಧನೆಗಳ ಪಟ್ಟಿ ‘ಮೋದಿ ಗ್ಯಾರಂಟಿ’ಯನ್ನು ಹಿಡಿದುಕೊಂಡು ಪ್ರತಿ ಮತದಾರನ ಮನೆಗೂ ಹೋಗಲು ಬಿಜೆಪಿ ತಯಾರಿ ನಡೆಸಿದೆ.

ನಗರ ಮತ್ತು ಗ್ರಾಮಾಂತರ ಪ್ರದೇಶಗಳ ಜನರ ಮನೆಯಂಗಳಕ್ಕೇ ಹೋಗಿ ಚರ್ಚೆಯ ಮೂಲಕ ಜನರಿಗೆ ಕೇಂದ್ರದ ಯೋಜನೆಗಳ ಮೂಲಕ ಆಗುತ್ತಿರುವ ಪ್ರಯೋಜನಗಳು, ಅದರಿಂದ ಜನ ಜೀವನದಲ್ಲಿ ಆಗಿರುವ ಕ್ರಾಂತಿಕಾರಕ ಬದಲಾವಣೆಗಳನ್ನು ವಿವರಿಸಲಾಗುವುದು ಎಂದು ಬಿಜೆಪಿ ಚುನಾವಣಾ ನಿರ್ವಹಣಾ ಸಮಿತಿ ಸಂಚಾಲಕ ವಿ.ಸುನಿಲ್‌ಕುಮಾರ್ ತಿಳಿಸಿದರು.

‘ಮೋದಿ ಗ್ಯಾರಂಟಿಗಳು ಚೀಪ್ ಗಿಮಿಕ್‌ಗಳಲ್ಲ, ಸೌದೆ, ಸೀಮೆ ಎಣ್ಣೆ ಸ್ಟೌವ್ ಬಳಸುತ್ತಿದ್ದ ಬಡ ಕುಟುಂಬಗಳಿಗೆ ಉಜ್ವಲ ಮೂಲಕ ಉಚಿತ ಅಡುಗೆ ಅನಿಲ, ಮನೆ ಮನೆಗೆ ನಲ್ಲಿಗಳ ಮೂಲಕ ಶುದ್ಧ ಕುಡಿಯುವ ನೀರು, ಶೌಚಾಲಯ, ಪಕ್ಕಾ ಮನೆ, ಆಯುಷ್ಮಾನ್ ಭಾರತ್ ಕಾರ್ಡ್, ಕಡಿಮೆ ಬೆಲೆಗೆ ಔಷಧ ವಿತರಣೆ ಮಳಿಗೆಗಳು, ಪರಿಶಿಷ್ಟ ಜಾತಿ ವರ್ಗದವರು ಉದ್ದಿಮೆದಾರರಾಗಲು ಮುದ್ರಾ ಯೋಜನೆ, ಪ್ರತಿ ಬಡ ಕುಟುಂಬದ ಪ್ರತಿ ವ್ಯಕ್ತಿಗೆ ತಲಾ 5 ಕೆ.ಜಿ ಅಕ್ಕಿ, ಡಿಬಿಟಿ ಮೂಲಕ ಹಣಪಾವತಿ ಹೀಗೆ ಹಲವು ಯೋಜನೆಗಳ ಲಾಭದಿಂದ ಬಡವರ ಜೀವನವೇ ಬದಲಾಗಿದೆ. ಕೋವಿಡ್ ಸಂದರ್ಭದಲ್ಲಿ ಉಚಿತವಾಗಿ ಲಸಿಕೆ ವಿತರಿಸಲಾಯಿತು. ಈ ಅಂಶಗಳನ್ನು ಜನರಿಗೆ ಮನದಟ್ಟು ಮಾಡಿಕೊಡಲಾಗುವುದು ಎಂದರು.

ಈ ಎಲ್ಲ ಯೋಜನೆಗಳ ಬಗ್ಗೆ, ಇವುಗಳಿಂದ ಪ್ರತಿಯೊಂದು ಕುಟುಂಬಕ್ಕೆ ಆಗುತ್ತಿರುವ ಲಾಭದ ಪ್ರಮಾಣವನ್ನು ವಿವರಿಸಲಾಗುವುದು. ಕೇಂದ್ರದ ಯೋಜನೆಗಳು ಕರ್ನಾಟಕ ಸರ್ಕಾರ ಜಾರಿ ಮಾಡಿರುವ ಗ್ಯಾರಂಟಿಗಿಂತಲೂ ಎಷ್ಟು ಭಿನ್ನ ಮತ್ತು ಪ್ರಯೋಜನಕಾರಿ ಎಂಬುದನ್ನು ವಿವರಿಸಲಾಗುವುದು. ಕರ್ನಾಟಕ ಸರ್ಕಾರದ ಗ್ಯಾರಂಟಿಯ ಅವಾಂತರಗಳನ್ನು ರಾಜ್ಯದ ಜನರೂ ನೋಡಿದ್ದಾರೆ. ಅದನ್ನು ಇನ್ನಷ್ಟು ಪರಿಣಾಮಕಾರಿಯಾಗಿ ವಿವರಿಸಲಾಗುವುದು. ಏಪ್ರಿಲ್ 5ರೊಳಗೆ ಮನೆ ಮನೆ ತಲುಪುವ ಅಭಿಯಾನ ಪೂರ್ಣಗೊಳ್ಳಲಿದೆ ಎಂದು ಸುನಿಲ್ ಹೇಳಿದರು.

ಇದಕ್ಕೆ ಪೂರಕವಾಗಿ ಪ್ರತಿಯೊಂದು ಮಂಡಲದ ಮಟ್ಟದಲ್ಲೂ ಕಾರ್ಯಕರ್ತರ ಸಮಾವೇಶ ನಡೆಸಲಾಗುವುದು. ಪ್ರಕೋಷ್ಠಗಳ ಮೂಲಕ ನಗರ ಪ್ರದೇಶಗಳಲ್ಲಿ ವಿವಿಧ ವರ್ಗಗಳನ್ನು ಸಂಪರ್ಕಿಸಿ ಸರ್ಕಾರದ ಸಾಧನೆಗಳನ್ನು ವಿವರಿಸಲಾಗುವುದು. ನಗರ ಪ್ರದೇಶಗಳಲ್ಲಿ ಅಪಾರ್ಟ್‌ಮೆಂಟ್ ಮತ್ತು ಗೇಟೆಡ್ ಕಮ್ಯುನಿಟಿ ಇರುವಲ್ಲೂ ಮತದಾರರನ್ನು ಸಂಪರ್ಕಿಸಲಾಗುವುದು ಎಂದು ಹೇಳಿದರು.

### 10 ಕಡೆ ಮೋದಿ ಸಮಾವೇಶ

ಈ ಬಾರಿ ಲೋಕಸಭೆ ಚುನಾವಣೆಯಲ್ಲಿ ಗರಿಷ್ಠ ಸ್ಥಾನಗಳನ್ನು ಗೆಲ್ಲುವ ಉದ್ದೇಶದಿಂದ ಅಬ್ಬರ ಪ್ರಚಾರ ನಡೆಸಲು ಬಿಜೆಪಿ ಘಟಕ ತೀರ್ಮಾನಿಸಿದೆ. ಪ್ರಧಾನಿ ನರೇಂದ್ರ ಮೋದಿ ಅವರು ರಾಜ್ಯದಲ್ಲಿ 10 ಬೃಹತ್ ಸಮಾವೇಶಗಳನ್ನು ನಡೆಸಲಿದ್ದಾರೆ. ಅಲ್ಲದೇ, ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರೂ ರಾಜ್ಯದಲ್ಲಿ ಪ್ರಚಾರಕ್ಕೆ ಬರಲಿದ್ದಾರೆ.

ರಾಜ್ಯದಲ್ಲಿ ಚುನಾವಣಾ ಪ್ರಚಾರದಲ್ಲಿ ಜೆಡಿಎಸ್ ನಾಯಕರನ್ನೂ ತೊಡಗಿಸಿಕೊಳ್ಳಲಾಗುವುದು. ಪ್ರಧಾನಿಯವರ ಕೆಲವು ಸಮಾವೇಶಗಳಿಗೆ ಮಾಜಿ ಪ್ರಧಾನಿ ಎಚ್‌.ಡಿ. ದೇವೇಗೌಡ ಮತ್ತು ರಾಜ್ಯ ಜೆಡಿಎಸ್ ಅಧ್ಯಕ್ಷ ಎಚ್‌.ಡಿ. ಕುಮಾರಸ್ವಾಮಿ ಅವರನ್ನೂ ಆಹ್ವಾನಿಸಲಾಗುವುದು. ಯಾವ ಕ್ಷೇತ್ರಗಳು ಮತ್ತು ಯಾವ ದಿನಾಂಕ ಎಂಬುದು ನಿರ್ಧಾರ ಆಗಬೇಕಾಗಿದೆ ಎಂದು ವಿ.ಸುನಿಲ್‌ಕುಮಾರ್ ತಿಳಿಸಿದರು.

ಲೋಕಸಭಾ ಚುನಾವಣೆಯಲ್ಲಿ ಜೆಡಿಎಸ್ ಜತೆಗಿನ ಸಮನ್ವಯತೆಗಾಗಿ ಎರಡು ಪಕ್ಷಗಳ ಇಬ್ಬರು ನಾಯಕರನ್ನು ಒಳಗೊಂಡ ರಾಜ್ಯ ಮಟ್ಟ ಮತ್ತು ಜಿಲ್ಲಾ ಮಟ್ಟದಲ್ಲಿ ಸಮನ್ವಯ ಸಮಿತಿ ರಚಿಸಲಾಗುವುದು ಎಂದು ಅವರು ಹೇಳಿದರು.

ಅಲ್ಲದೇ, ಜೆಡಿಎಸ್ ಸ್ಪರ್ಧಿಸುವ ಕ್ಷೇತ್ರಗಳಲ್ಲಿ ಬಿಜೆಪಿ ಮತಗಳನ್ನು ಪರಿಣಾಮಕಾರಿಯಾಗಿ ವರ್ಗಾಯಿಸುವ ಸಂಬಂಧ ಪಕ್ಷದ ಪ್ರಮುಖ ನಾಯಕರು ಪ್ರತಿಯೊಂದು ಕ್ಷೇತ್ರದಲ್ಲೂ ಪಕ್ಷದ ಕಾರ್ಯಕರ್ತರ ಜತೆ ಸಭೆ ನಡೆಸಲು ನಿರ್ಧರಿಸಲಾಗಿದೆ. ಇದರಿಂದ ಸ್ಥಳೀಯ ಮಟ್ಟದಲ್ಲೂ ಗೊಂದಲಗಳು ನಿವಾರಣೆ ಆಗಲಿದೆ ಎಂದು ಸುನಿಲ್‌ಕುಮಾರ್ ವಿವರಿಸಿದರು.

**ಗ್ಯಾರಂಟಿಗಳೇ ಅಭಿವೃದ್ಧಿಯಲ್ಲ. ರಾಜ್ಯ ಸರ್ಕಾರ ಗ್ಯಾರಂಟಿ ಕೊಡುತ್ತಿದ್ದೇವೆ ಎನ್ನುತ್ತಿದೆ. ಆದರೆ, 10 ತಿಂಗಳಲ್ಲಿ ಒಂದೇ ಒಂದು ಅಭಿವೃದ್ಧಿ ಕಾರ್ಯ ಮಾಡಿಲ್ಲ. ಇದನ್ನು ಜನರಿಗೆ ಮುಟ್ಟಿಸಬೇಕು**



**ವಿ. ಸುನಿಲ್ ಕುಮಾರ್,** ಚುನಾವಣಾ ನಿರ್ವಹಣಾ ಸಮಿತಿ ಸಂಚಾಲಕ

## ಮತ ಸೆಳೆಯಲು ‘ಕೈ’ ತಂತ್ರ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಐದು ಗ್ಯಾರಂಟಿ ಯೋಜನೆಗಳನ್ನು ಲೋಕಸಭಾ ಚುನಾವಣೆಯಲ್ಲಿ ಜನಬೆಂಬಲ ಗಳಿಸುವ ಪ್ರಬಲ ಅಸ್ತ್ರಗಳನ್ನಾಗಿ ಬಳಸಲು ಕಾಂಗ್ರೆಸ್ ಮುಂದಾಗಿದೆ. ಗ್ಯಾರಂಟಿ ಯೋಜನೆಗಳನ್ನು ಮುಂದಿಟ್ಟುಕೊಂಡೇ ಮತ ಸೆಳೆಯುವ ಕಾರ್ಯತಂತ್ರ ರೂಪಿಸುತ್ತಿದೆ.

ಗೃಹ ಜ್ಯೋತಿ, ಗೃಹ ಲಕ್ಷ್ಮಿ, ಶಕ್ತಿ, ಯುವನಿಧಿ ಮತ್ತು ಅನ್ನ ಭಾಗ್ಯ ಯೋಜನೆಗಳ ಫಲಾನುಭವಿಗಳನ್ನು ಮನವೊಲಿಸಿ ಮತಗಳಾಗಿ ಪರಿವರ್ತಿಸುವ ಚಿಂತನೆ ಕಾಂಗ್ರೆಸ್ ಪಾಳೆಯದಲ್ಲಿ ಜೋರಾಗಿ ನಡೆದಿದೆ. ರಾಜ್ಯ ಸರ್ಕಾರ ವಿವಿಧ ಮೂಲಗಳಿಂದ ಸಂಗ್ರಹಿಸಿರುವ ಫಲಾನುಭವಿಗಳ ದತ್ತಾಂಶವನ್ನು ಆಧರಿಸಿ ‘ಗ್ಯಾರಂಟಿ’ ಪ್ರಚಾರ ಕಾರ್ಯತಂತ್ರ ಸಿದ್ಧಪಡಿಸಲಾಗುತ್ತಿದೆ.

2023ರ ವಿಧಾನಸಭಾ ಚುನಾವಣೆಗೂ ಮುನ್ನ ಐದು ಗ್ಯಾರಂಟಿಗಳನ್ನು ಘೋಷಿಸಿದ್ದ ಕಾಂಗ್ರೆಸ್, ಅಧಿಕಾರಕ್ಕೆ ಬರುವಲ್ಲಿ ಯಶಸ್ವಿಯಾಗಿತ್ತು. ಈಗ ಅದೇ ಗ್ಯಾರಂಟಿಗಳ ಬಲವನ್ನು ನೆಚ್ಚಿಕೊಂಡು ಲೋಕಸಭಾ ಚುನಾವಣೆಯಲ್ಲಿ ಗುರಿ ತಲುಪುವ ಯೋಚನೆ ಕಾಂಗ್ರೆಸ್ ನಾಯಕರಲ್ಲಿದೆ.

ರಾಜ್ಯ ಸರ್ಕಾರ ಜಾರಿಗೊಳಿಸಿರುವ ಗ್ಯಾರಂಟಿ ಯೋಜನೆಗಳ ಫಲಾನುಭವಿಗಳಲ್ಲಿ ಹೆಚ್ಚಿನವರು ಮಹಿಳೆಯರು ಮತ್ತು ಯುವಜನರು. ಈ ಎರಡೂ ವರ್ಗಗಳ ಮತದಾರರನ್ನು ಗ್ಯಾರಂಟಿಗಳ ಮೂಲಕವೇ ‘ಹಸ್ತ’ದತ್ತ ಸೆಳೆಯಲು ‘ಗ್ಯಾರಂಟಿ’ ಅಸ್ತ್ರವನ್ನು ಚುನಾವಣಾ ಪ್ರಚಾರದುದ್ದಕ್ಕೂ ಪದೇ ಪದೇ ಪ್ರಸ್ತಾಪಿಸಲು ತೀರ್ಮಾನಿಸಿದೆ.

ಗ್ಯಾರಂಟಿ ಯೋಜನೆಗಳ ಕುರಿತು ಲೋಕಸಭಾ ಚುನಾವಣೆ ಅಧಿಸೂಚನೆ ಹೊರಬೀಳುವ ಮುನ್ನ ಅಂಗನವಾಡಿ ಕಾರ್ಯಕರ್ತರ ಮೂಲಕ ರಾಜ್ಯದಾದ್ಯಂತ ಸಮೀಕ್ಷೆ ನಡೆಸಲಾಗಿತ್ತು. 1.14 ಲಕ್ಷ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ಸಮೀಕ್ಷೆಯಲ್ಲಿ ಪಾಲ್ಗೊಂಡಿದ್ದರು. ಸಮೀಕ್ಷೆಯ ವರದಿ ಮುಖ್ಯಮಂತ್ರಿಯವರ ಸಚಿವಾಲಯಕ್ಕೆ ಸಲ್ಲಿಕೆಯಾಗಿದೆ. ಈ ವರದಿಯನ್ನೂ ಚುನಾವಣಾ ಪ್ರಚಾರಕ್ಕೆ ಬಳಸಿಕೊಳ್ಳಲು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮುಂದಾಗಿದ್ದಾರೆ ಎಂದು ಮೂಲಗಳು ತಿಳಿಸಿವೆ.

ರಾಜ್ಯ ಸರ್ಕಾರದ ನೇತೃತ್ವದಲ್ಲೇ ಈವರೆಗೆ ಗ್ಯಾರಂಟಿ ಯೋಜನೆ ಫಲಾನುಭವಿಗಳ 565 ಸಮಾವೇಶಗಳನ್ನು ನಡೆಸಲಾಗಿದೆ. ಜಿಲ್ಲಾ ಮಟ್ಟದಲ್ಲಿ 25, ತಾಲ್ಲೂಕು ಮಟ್ಟದಲ್ಲಿ 140 ಮತ್ತು ಹೋಬಳಿ ಮಟ್ಟದಲ್ಲಿ 400 ಸಮಾವೇಶಗಳನ್ನು ನಡೆಸಲಾಗಿದೆ.

### ಗ್ಯಾರಂಟಿ ಯೋಜನೆ ಫಲಾನುಭವಿಗಳು

2 ಕೋಟಿ ಅನ್ನ ಭಾಗ್ಯ

1.23 ಕೋಟಿ ಗೃಹ ಜ್ಯೋತಿ

87.58 ಲಕ್ಷ, ಗೃಹ ಲಕ್ಷ್ಮಿ

4.7 ಲಕ್ಷ, ಯುವ ನಿಧಿ

**ವಿಧಾನಸಭೆ ಚುನಾವಣೆಗೆ ಮುನ್ನ ಭರವಸೆ ನೀಡಿ, ಈಗ ಜಾರಿಯಾಗಿರುವ ನಮ್ಮ ಗ್ಯಾರಂಟಿಗಳು ಜನರನ್ನು ತಲುಪಿವೆ. ಮೋದಿಯವರ ಗ್ಯಾರಂಟಿಗಳು ಇನ್ನೂ ಟಿ.ವಿಯಲ್ಲೇ ಇವೆ**

**ಪ್ರಿಯಾಂಕ್ ಖರ್ಗೆ,** ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ

## ಗುಸುಗುಸು

### ಪೌರುಷ ತೋರಿಸುವುದು ಹೇಗೆ?

‘ಮಂಡ್ಯದಲ್ಲಿ ಎಚ್‌.ಡಿ.ಕುಮಾರಸ್ವಾಮಿ ಸ್ಪರ್ಧಿಸಲಿದ್ದಾರೆ’ ಎಂಬ ಸುದ್ದಿ ಹರಡುತ್ತಿದ್ದಂತೆ, ಮದ್ದೂರು ಶಾಸಕ ಕದಲೂರು ಉದಯ್ ‘ಮಂಡ್ಯ ಜೆಡಿಎಸ್‌ನಲ್ಲಿ ಗಂಡಸರಿಲ್ವೇ’ ಎಂದು ಪ್ರಶ್ನಿಸಿದ್ದಾರೆ. ಅದರಿಂದ ಕೆಂಡಾಮಂಡಲರಾಗಿರುವ ಸ್ಥಳೀಯ ಜೆಡಿಎಸ್ ನಾಯಕರು ‘ಗಂಡಸುತನ ರುಜುವಾತು ಮಾಡೋದು ಹೇಗೆ’ ಎಂದು ಚರ್ಚಿಸುತ್ತಿದ್ದಾರಂತೆ.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಸೋತು ಸುಣ್ಣವಾಗಿದ್ದ ಕೆಲ ಜೆಡಿಎಸ್ ನಾಯಕರು ಇಲ್ಲಿಯವರೆಗೂ ಮನೆಯಿಂದ ಹೊರಗೇ ಬಂದಿರಲಿಲ್ಲ. ಈಗ ಉದಯ್ ಮಾತಿನಿಂದ ಕೋಪೋದ್ರಿಕ್ತರಾಗಿರುವ ಅವರು ಮನೆಯಿಂದ ಹೊರಗೆ ಬಂದು ‘ಸ್ಥಳೀಯ ನಾಯಕರಿಗೆ ಟಿಕೆಟ್ ಕೊಡಿ’ ಎಂದು ಕೇಳಲು ನಿರ್ಧರಿಸಿದ್ದರಂತೆ. ಆ ಮೂಲಕವಾದರೂ ತಮ್ಮ ಗಂಡುಸುತನ ತೋರಿಸುವ ಪ್ರಯತ್ನ ಪಟ್ಟಿದ್ದರಂತೆ.

ಆದರೆ, ಅದಕ್ಕೆಲ್ಲಾ ಸೊಪ್ಪು ಹಾಕದ ಕುಮಾರಸ್ವಾಮಿ ‘ನನ್ನ ಹಳೇ ಗೆಳೆಯ ಚೆಲುವಣ್ಣ ಹಾಗೂ ಅವರ ಹುರಿಯಾಳು ಸ್ಟಾರ್ ಚಂದ್ರು ವಿರುದ್ಧ ಗೆಲ್ಲೋದು ನಿಮಗೆಲ್ಲಾ ಕಷ್ಟವಾಗಬಹುದು, ಜೊತೆಗೆ, ನಿಮ್ಮಲ್ಲೇ ಒಗ್ಗಟ್ಟಿಲ್ಲದೆ ಕಿತ್ತಾಡುತ್ತೀರಿ. ನಾನೇ ಬರ್ತೇನೆ’ ಎಂದು ಸ್ಪಷ್ಟವಾಗಿ ತಿಳಿಸಿದ್ದಾರಂತೆ.

ಈಗ ಮತ್ತೆ ಗಂಡಸುತನದ ಪ್ರಶ್ನೆ ಎದುರಾಗಿದ್ದು, ಈ ನಾಯಕರು ಹೊಸ ಉಪಾಯ ಕಂಡುಕೊಂಡಿದ್ದಾರಂತೆ. ‘ಕುಮಾರಣ್ಣನನ್ನು 4 ಲಕ್ಷ ಮತಗಳ ಅಂತರದಿಂದ ಗೆಲ್ಲಿಸಿ, ನರೇಂದ್ರ ಮೋದಿ ಸಂಪುಟದಲ್ಲಿ ಕೃಷಿ ಸಚಿವರನ್ನಾಗಿ ಮಾಡಬೇಕು’ ಎಂದು ಶಪಥ ಮಾಡಿದ್ದಾರಂತೆ. ಆ ಮೂಲಕ ತಮ್ಮ ಗಂಡುಸುತನವನ್ನು ತೋರಿಸಲು ನಿರ್ಧರಿಸಿದ್ದಾರಂತೆ.

ಜೊತೆಗೆ, ‘ಬೆಟ್ಟಿಂಗ್ ಆಡಿಸುವವರು, ರಿಯಲ್ ಎಸ್ಟೇಟ್ ದಂಧೆಕೋರರೆಲ್ಲರೂ ಗಂಡಸರಾ’ ಎಂದು ಕಾಂಗ್ರೆಸ್ ಮುಖಂಡರನ್ನು ಪ್ರಶ್ನಿಸಲೂ ನಿರ್ಧರಿಸಿದ್ದಾರಂತೆ!

### ಒಂದೇ ಕಲ್ಲಿಗೆ ಎರಡು ಹಕ್ಕಿ

ರಾಜೇಶ್ವರಿ

ಹಾಸನದಲ್ಲಿ ಕಾಂಗ್ರೆಸ್‌ನಿಂದ ಶ್ರೇಯಸ್ ಪಟೇಲ್, ಬಿಜೆಪಿ–ಜೆಡಿಎಸ್ ಮೈತ್ರಿ ಅಭ್ಯರ್ಥಿ ಕಣಕ್ಕಿಳಿಯುವುದು ನಿಶ್ಚಿತವಾಗಿದೆ. ಆದರೆ, ಎರಡು ಕಡೆಯೂ ಅಸಮಾಧಾನದ ಅಲೆ ಎದ್ದಿದ್ದು, ಸ್ವತಂತ್ರ ಅಭ್ಯರ್ಥಿಯ ಮೂಲಕ ಕಾಂಗ್ರೆಸ್–ಜೆಡಿಎಸ್ ಅತೃಪ್ತರನ್ನು ಸೆಳೆಯಲು ಬಿಜೆಪಿಯು ತೆರೆಮರೆಯಲ್ಲಿ ಪ್ರಯತ್ನಿಸುತ್ತಿದೆ ಎಂಬ ಗುಸುಗುಸು ಕ್ಷೇತ್ರದಲ್ಲಿ ನಡೆದಿದೆ.

ಮಾಜಿ ಸಚಿವ ದಿ. ಎಚ್‌.ಸಿ. ಶ್ರೀಕಂಠಯ್ಯ ಅವರ ಪುತ್ರ ವಿಜಯಕುಮಾರ್ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಯಾಗಿದ್ದರು. ಆದರೆ, ಶ್ರೇಯಸ್ ಪಟೇಲ್ ಅವರಿಗೆ ಟಿಕೆಟ್ ನೀಡಲಾಗಿದೆ. ಮೈತ್ರಿ ಅಭ್ಯರ್ಥಿ ಘೋಷಣೆಯಾಗದಿದ್ದರೂ, ಪ್ರಜ್ವಲ್ ಕಣಕ್ಕಿಳಿದಿರುವುದನ್ನು ಸ್ಥಳೀಯ ಬಿಜೆಪಿ ನಾಯಕರು ಒಪ್ಪುತ್ತಿಲ್ಲ. ಹೀಗಾಗಿ ಒಂದೇ ಕಲ್ಲಿಗೆ ಎರಡು ಹಕ್ಕಿ ಹೊಡೆಯುವ ತಂತ್ರವೊಂದು ಆರಂಭವಾಗಿದೆ.

ಪರಿಣಾಮವಾಗಿ, ಮಾಜಿ ಸಚಿವ ಪುಟ್ಟಸ್ವಾಮಿಗೌಡರ ಪುತ್ರಿ, ವಿಜಯಕುಮಾರ್ ಪತ್ನಿ ರಾಜೇಶ್ವರಿ ಅವರನ್ನು ‘ಮೋದಿ ಬೆಂಬಲಿತ ಸ್ವತಂತ್ರ ಅಭ್ಯರ್ಥಿ’ಯಾಗಿ ಕಣಕ್ಕಿಳಿಸಬೇಕೆಂಬ ಚಿಂತನೆ ನಡೆದಿದೆಯಂತೆ. ರಾಜೇಶ್ವರಿ ಅವರು ಶ್ರೇಯಸ್ ಪಟೇಲ್ ಅವರ ಸೋದರತ್ತೆಯೂ ಹೌದು.

ಎರಡೂ ಕಡೆಯಿಂದ ಪ್ರಬಲ ರಾಜಕೀಯ ಹಿನ್ನೆಲೆಯುಳ್ಳ ರಾಜೇಶ್ವರಿಯವರನ್ನೇ ಕಣಕ್ಕಿಳಿಸಿದರೆ, ಕಾಂಗ್ರೆಸ್ ಅತೃಪ್ತರು ಬೆಂಬಲಿಸುತ್ತಾರೆ. ಬಿಜೆಪಿಯ ಮುಖಂಡರೂ ಬೆನ್ನಿಗೆ ನಿಲ್ಲಲಿದ್ದಾರೆ. ಅವರ ಮೂಲಕ ಕಾಂಗ್ರೆಸ್ ಹಾಗೂ ಜೆಡಿಎಸ್ ನಾಯಕರಿಗೆ ಪಾಠ ಕಲಿಸಬಹುದು ಎಂಬ ತಂತ್ರವನ್ನು ಹೆಣೆಯಲಾಗುತ್ತಿದೆ ಎನ್ನುವುದು ಜಿಲ್ಲೆಯಲ್ಲಿ ಇದೀಗ ಚರ್ಚೆಯ ವಿಷಯ.

## ಕುಕ್ಕರ್ ಕೇಳಿದ ವೃದ್ಧೆಗೆ ಹಲ್ಲೆ!

**ಕುಣಿಗಲ್ (ತುಮಕೂರು):** ಮತದಾರರಿಗೆ ಹಂಚಲಾದ ಕುಕ್ಕರ್ ತನಗೆ ಸಿಕ್ಕಿಲ್ಲ ಎಂದು ಕೇಳಿದ ವೃದ್ಧೆಯ ಮೇಲೆ ಕಾಂಗ್ರೆಸ್ ಪಕ್ಷದ ಸ್ಥಳೀಯ ಮುಖಂಡ ಬುಧವಾರ ಹಲ್ಲೆ ನಡೆಸಿದ್ದಾನೆ ಎಂದು ದೂರಲಾಗಿದೆ.

ಹಲ್ಲೆಗೆ ಒಳಗಾಗಿದ್ದಾರೆ ಎಂದು ಹೇಳಲಾದ ಉಜ್ಜನಿ ಗ್ರಾಮದ ಗಂಗಚಂದ್ರಮ್ಮ(75) ಅವರ ಮಗ ಶಿವಕುಮಾರ್, ಸ್ಥಳೀಯ ಕಾಂಗ್ರೆಸ್ ಮುಖಂಡ ನಾರಾಯಣ ಎಂಬುವರ ವಿರುದ್ಧ ಹುಲಿಯೂರುದುರ್ಗ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಾರೆ.

ಹದಿನೈದು ದಿನದ ಹಿಂದೆ ಚುನಾವಣೆ ನೀತಿ ಸಂಹಿತೆ ಜಾರಿಯಾಗುವ ಮುನ್ನ ಉಜ್ಜನಿ ಗ್ರಾಮದಲ್ಲಿ ಮತದಾರರಿಗೆ ಕುಕ್ಕರ್ ಹಂಚಲಾಗಿತ್ತು. ಆಗ ಮಗಳ ಮನೆಗೆ ಹೋಗಿದ್ದ ಗಂಗಚಂದ್ರಮ್ಮ ಹದಿನೈದು ದಿನದ ಬಳಿಕ ಗ್ರಾಮಕ್ಕೆ ಮರಳಿದ್ದರು. ಬುಧವಾರ ಮನೆಯ ಮುಂದೆ ಕುಳಿತಿದ್ದ ಅವರು, ಬೈಕ್‌ನಲ್ಲಿ ಹೊರಟಿದ್ದ ಮುಖಂಡನನ್ನು ‘ನನಗೆ ಯಾಕೆ ಕುಕ್ಕರ್ ನೀಡಿಲ್ಲ’ ಎಂದು ಪ್ರಶ್ನಿಸಿದ್ದಾರೆ. ಇದರಿಂದ ಕೋಪಗೊಂಡ ಆತ ಕಪಾಳಕ್ಕೆ ಹೊಡೆದು, ಹಲ್ಲೆ ಮಾಡಿದ್ದಾನೆ. ಸ್ಥಳೀಯರು ನನ್ನ ತಾಯಿಯನ್ನು ರಕ್ಷಿಸಿದ್ದಾರೆ ಎಂದು ಶಿವಕುಮಾರ್ ದೂರಿನಲ್ಲಿ ಹೇಳಿದ್ದಾರೆ. ಹುಲಿಯೂರುದುರ್ಗ ಪ್ರಾಥಮಿಕ ಆರೋಗ್ಯ ಕೇಂದ್ರಲ್ಲಿ ಚಂದ್ರಗಂಗಮ್ಮನವರಿಗೆ ಚಿಕಿತ್ಸೆ ಕೊಡಿಸಲಾಗಿದೆ.

## ‘ಕೈ’ ಟಿಕೆಟ್‌ಗಾಗಿ ವೀಣಾ ಕಣ್ಣೀರು

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ನವದೆಹಲಿಯಲ್ಲಿ ಭೇಟಿ ಮಾಡಿದ ಬಸವ ಜಯ ಮೃತ್ಯುಂಜಯ ಸ್ವಾಮೀಜಿ ಅವರು, ಚರ್ಚೆ ನಡೆಸಿದರು. ಈ ವೇಳೆ, ವೀಣಾ ಕಾಶಪ್ಪನವರ ಉಪಸ್ಥಿತರಿದ್ದರು.

ಪ್ರಜಾವಾಣಿ ವಾರ್ತೆ

**ನವದೆಹಲಿ:** ಬಾಗಲಕೋಟೆ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಯಾಗಿರುವ ವೀಣಾ ಕಾಶಪ್ಪನವರ ಅವರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಬುಧವಾರ ಭೇಟಿ ಮಾಡಿ ಲಾಬಿ ನಡೆಸಿದರು. ಟಿಕೆಟ್ ಕೈತಪ್ಪುವ ಸುಳಿವು ಸಿಕ್ಕ ಹಿನ್ನೆಲೆಯಲ್ಲಿ ಅವರು ಕಣ್ಣೀರು ಹಾಕಿದರು.

ಬಳಿಕ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, ‘2019ರ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಸ್ಪರ್ಧಿಸಲು ಯಾರೂ ಮುಂದೆ ಬಂದಿರಲಿಲ್ಲ. ಕಷ್ಟದ ಸಮಯದಲ್ಲಿ ನಾನು ಸ್ಪರ್ಧೆ ಮಾಡಿದ್ದೇನೆ. ಸೋಲು ಗೆಲುವು ಲೆಕ್ಕಿಸದೆ ಸ್ಪರ್ಧೆಯೊಡ್ಡಿದ್ದೆ. ಜಿಲ್ಲೆಯಲ್ಲಿ ಕಳೆದ ಬಾರಿ ನಮ್ಮ ಪಕ್ಷದ ಶಾಸಕರು ಇರಲಿಲ್ಲ. ಈಗ ಐದು ಮಂದಿ ಶಾಸಕರು ಇದ್ದಾರೆ. ಆದರೆ, ನನಗೆ ಅವಕಾಶ ನೀಡಲು ನಿರಾಕರಿಸುತ್ತಿದ್ದಾರೆ’ ಎಂದರು.

‘ಟಿಕೆಟ್ ಆಕಾಂಕ್ಷಿಯಾಗಿರುವ ಸಂಯುಕ್ತಾ ಪಾಟೀಲ ಯಾರು ಎಂಬುದು ಕ್ಷೇತ್ರದವರಿಗೆ ಗೊತ್ತಿಲ್ಲ. ಪಕ್ಷಕ್ಕಾಗಿ ದುಡಿದವರನ್ನು ಪರಿಗಣಿಸುತ್ತಿಲ್ಲ. ಪಟ್ಟಿ ಬಿಡುಗಡೆಯಾಗುವ ತನಕ ಕಾಯುತ್ತೇನೆ. ಬಳಿಕ ನನ್ನ ನಿರ್ಧಾರ ತಿಳಿಸುತ್ತೇನೆ’ ಎಂದು ಅವರು ಹೇಳಿದರು.

ವೀಣಾ ಅವರ ಪತಿ, ಶಾಸಕ ವಿಜಯಾನಂದ ಕಾಶಪ್ಪನವರ, ‘ವೀಣಾ ಅವರು ಸಂಕಷ್ಟದ ಸಮಯದಲ್ಲಿ ಕಣಕ್ಕೆ ಇಳಿದಿದ್ದರು. ಈ ಸಲವೂ ಅವರಿಗೆ ಅವಕಾಶ ನೀಡಬೇಕು. ಇಲ್ಲದಿದ್ದರೆ ಕಾರ್ಯಕರ್ತರ ಸಭೆ ನಡೆಸಿ ಮುಂದಿನ ತೀರ್ಮಾನ ಕೈಗೊಳ್ಳಲಾಗುವುದು’ ಎಂದರು.

### ‘ವೀಣಾಗೆ ಟಿಕೆಟ್ ಕೊಡದಿದ್ದರೆ ತಕ್ಕ ಪಾಠ’

**ಬೆಂಗಳೂರು:** ಬಾಗಲಕೋಟೆ ಲೋಕಸಭಾ ಕ್ಷೇತ್ರಕ್ಕೆ ವೀಣಾ ಕಾಶಪ್ಪನವರ್ ಅವರಿಗೆ ಟಿಕೆಟ್ ನೀಡದಿದ್ದರೆ, ಪಂಚಮಸಾಲಿ ಸಮುದಾಯ ಕಾಂಗ್ರೆಸ್ ಪಕ್ಷಕ್ಕೆ ತಕ್ಕ ಪಾಠ ಕಲಿಸಲಿದೆ ಎಂದು ಕೂಡಲ ಸಂಗಮ ಪೀಠದ ಬಸವ ಜಯ ಮೃತ್ಯುಂಜಯ ಸ್ವಾಮೀಜಿ ಎಚ್ಚರಿಕೆ ನೀಡಿದರು.

ಬುಧವಾರ ನವದೆಹಲಿಯಲ್ಲಿ ಎಐಸಿಸಿ ಅಧ್ಯಕ್ಷ ಎಂ. ಮಲ್ಲಿಕಾರ್ಜುನ ಖರ್ಗೆ ಮತ್ತು ಇತರ ಮುಖಂಡರನ್ನು ಭೇಟಿಯಾಗಿ ವೀಣಾ ಕಾಶಪ್ಪನವರಿಗೆ ಏಕೆ ಟಿಕೆಟ್ ನೀಡಬೇಕು ಎಂಬುದನ್ನು ಮನವರಿಕೆ ಮಾಡುವ ಪ್ರಯತ್ನ ನಡೆಸಿದರು.

ಬಳಿಕ ಅವರು ಸುದ್ದಿಗಾರರ ಜತೆ ಮಾತನಾಡಿ, ‘ಬಾಗಲಕೋಟೆ ಕ್ಷೇತ್ರದಿಂದ ಸಂಯುಕ್ತ ಪಾಟೀಲ ಅವರಿಗೆ ಟಿಕೆಟ್ ನೀಡುವ ನಿರ್ಧಾರವನ್ನು ಪುನರ್ ಪರಿಶೀಲನೆ ಮಾಡಬೇಕು. ಒಂದು ವೇಳೆ ಇದೇ ಅಂತಿಮ ನಿರ್ಧಾರ ಎಂದರೆ, ನಾವು ಕೂಡ ಚುನಾವಣೆಯಲ್ಲಿ ಒಮ್ಮತದ ನಿರ್ಣಯ ಮಾಡಬೇಕಾಗುತ್ತದೆ’ ಎಂದು ಸ್ವಾಮೀಜಿ ಹೇಳಿದರು.

ಸಂಯುಕ್ತಾ ಪಾಟೀಲ ಅವರಿಗೆ ಬಾಗಲಕೋಟೆ ಕ್ಷೇತ್ರ ಹೊರತುಪಡಿಸಿ ಬೇರೆ ಕಡೆ ಕೊಡಲಿ. ಆದರೆ, ಸ್ಥಳೀಯರೇ ಆದ ವೀಣಾ ಕಾಶಪ್ಪನವರ್‌ಗೆ ಟಿಕೆಟ್ ನಿರಾಕರಿಸಿದ್ದರ ಉದ್ದೇಶವಾದರೂ ಏನು ಎಂದು ಪ್ರಶ್ನಿಸಿದರು.

## ಎಂಥಾ ಮಾತು

ಎಚ್‌.ಡಿ.ದೇವೇಗೌಡರು ಪ್ರಧಾನಿಯಾಗಲು, ಎಚ್‌.ಡಿ.ಕುಮಾರಸ್ವಾಮಿ ಮುಖ್ಯಮಂತ್ರಿಯಾಗಲು ಕಾಂಗ್ರೆಸ್ ಕಾರಣ. ಆದರೆ, ಜೆಡಿಎಸ್ ನಾಯಕರು ಕನಿಷ್ಠ ಸೌಜನ್ಯಕ್ಕೂ ಧನ್ಯವಾದ ಹೇಳಿಲ್ಲ. ಕುಮಾರಸ್ವಾಮಿ ಅವರ ಮುಖ್ಯಮಂತ್ರಿ ಸ್ಥಾನ ಉಳಿಸಲು ಡಿ.ಕೆ.ಶಿವಕುಮಾರ್ ಅವರು ಮುಂಬೈವರೆಗೂ ಹೋಗಿ ಹೋರಾಡಿದ್ದರು. ಆದರೆ, ಬಿಜೆಪಿ ಜೊತೆಗೆ ಮೈತ್ರಿ ಮಾಡಿಕೊಂಡಿರುವ ಜೆಡಿಎಸ್‌ನವರ ಸ್ಥಿತಿ ಏನಾಗಿದೆ? ಬಿಜೆಪಿ ಮಂದೆ ಅವರ ಆಟಗಳು ನಡೆಯುತ್ತಿಲ್ಲ, ಗೌರವವೂ ಇಲ್ಲವಾಗಿದೆ. ಇಲ್ಲಿಯವರೆಗೂ ಮಂಡ್ಯ, ಹಾಸನ ಅಭ್ಯರ್ಥಿ ಘೋಷಣೆ ಮಾಡಲು ಸಾಧ್ಯವಾಗಿಲ್ಲ. ಕೇವಲ ಎರಡು ಸೀಟಿಗಾಗಿ ಮೈತ್ರಿ ಬೇಕಿತ್ತಾ ಎಂದು ಕುಮಾರಸ್ವಾಮಿಯವರೇ ಹೇಳಿದ್ದಾರೆ

**ಎನ್.ಚಲುವರಾಯಸ್ವಾಮಿ,** ಕೃಷಿ ಸಚಿವ

ಬಿಜೆಪಿ ಜೊತೆ ಮೈತ್ರಿ ಮಾಡಿಕೊಂಡಿರುವ ಜೆಡಿಎಸ್ ಎರಡು ಕ್ಷೇತ್ರ ಪಡೆಯಲು ತಿಣುಕಾಡುತ್ತಿದೆ. ಕುಮಾರಸ್ವಾಮಿ ಅವರು ಯಾವುದೇ ಪಕ್ಷದ ಜೊತೆ ಹೋದರೂ ಅಸಮಾಧಾನ ಹೊರ ಹಾಕುತ್ತಾರೆ. ಕಡೆಗೆ ಬೈದುಕೊಂಡು ಆಚೆ ಬರುತ್ತಾರೆ. ಇನ್ನೊಂದು ತಿಂಗಳಲ್ಲಿ ನರೇಂದ್ರ ಮೋದಿ ಮತ್ತು ಅಮಿತ್ ಶಾ ಅವರನ್ನು ಹೇಗೆ ಬೈಯುತ್ತಾರೆಂದು ಕಾದು ನೋಡಿ...

**ಎಚ್‌.ಸಿ. ಬಾಲಕೃಷ್ಣ,** ಮಾಗಡಿ ಶಾಸಕ

## ರಾಜಕೀಯ ಛತ್ರಿ...

**ಪ್ರಚಾರಕ್ಕೆ ರಂಗು...** ಲೋಕಸಭಾ ಚುನಾವಣೆ ಹತ್ತಿರವಾಗುತ್ತಿದ್ದು ವಿವಿಧ ರಾಜಕೀಯ ಪಕ್ಷಗಳ ಅಭ್ಯರ್ಥಿಗಳ ಪ್ರಚಾರಕ್ಕೆ ರಂಗು ತುಂಬಲು ಮಾರುಕಟ್ಟೆಗೆ ತರಹೇವಾರಿ ಪ್ರಚಾರ ಸಾಮಗ್ರಿಗಳು ಲಗ್ಗೆಯಿಟ್ಟಿವೆ. ಬೆಂಗಳೂರಿನ ಬಳೇಪೇಟೆಯ ಮಳಿಗೆಯಲ್ಲಿ ಬುಧವಾರ ಕಂಡುಬಂದ ಆಕರ್ಷಕ ಚುನಾವಣಾ ಸಾಮಗ್ರಿಗಳು. – ಪ್ರಜಾವಾಣಿ ಚಿತ್ರ/ ರಂಜು ಪಿ.

## ಚಿಕ್ಕಬಳ್ಳಾಪುರದಿಂದ ನಾನೇ ಕಣಕ್ಕೆ: ವಿಶ್ವನಾಥ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ಟಿಕೆಟ್ ಪುತ್ರ ಅಲೋಕ್ ವಿಶ್ವನಾಥ್‌ಗೆ ನೀಡದಿದ್ದರೆ ನಾನೇ ಅಭ್ಯರ್ಥಿ ಆಗುತ್ತೇನೆ. ನನಗೇ ಟಿಕೆಟ್ ನೀಡುವಂತೆ ಪಕ್ಷದ ರಾಜ್ಯ ಘಟಕದ ಅಧ್ಯಕ್ಷರಿಗೆ ಮನವಿ ಮಾಡಿದ್ದೇನೆ’ ಎಂದು ಯಲಹಂಕ ಶಾಸಕ ಎಸ್‌.ಆರ್. ವಿಶ್ವನಾಥ್ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ವಿದ್ಯಾವಂತರಾಗಿರುವ ನನ್ನ ಪುತ್ರ ಅಲೋಕ್ ವಿಶ್ವನಾಥ್ ಬಗ್ಗೆ ಕ್ಷೇತ್ರದ ಮತದಾರರಲ್ಲಿ ಒಲವಿದೆ ಎಂಬುದನ್ನು ಸಮೀಕ್ಷೆಗಳು ಹೇಳಿವೆ. ಈ ಹಿನ್ನೆಲೆಯಲ್ಲಿ ಕ್ಷೇತ್ರದಲ್ಲಿ ಒಂದು ಸುತ್ತಿನ ಪ್ರವಾಸವನ್ನೂ ಮಾಡಿ ಕಾರ್ಯಕರ್ತರನ್ನು ಹುರಿದುಂಬಿಸುವ ಕೆಲಸ ಮಾಡಲಾಗಿದೆ’ ಎಂದರು.

‘ನಾನು ಪಕ್ಷ ನಿಷ್ಠನಾಗಿರುವ ಶಿಸ್ತಿನ ಸಿಪಾಯಿ. ನನಗೆ ಚಮಚಾಗಿರಿ ಮಾಡಿ ಗೊತ್ತಿಲ್ಲ. ಲಾಬಿಯನ್ನೂ ಮಾಡುವುದಿಲ್ಲ. ಸಮೀಕ್ಷೆಯ ವಾಸ್ತವಾಂಶವನ್ನು ವರಿಷ್ಠರಿಗೆ ತಿಳಿಸಿದ್ದೇನೆ’ ಎಂದರು.

‘ಬಿಜೆಪಿಯ ಭದ್ರಕೋಟೆ ಆಗಿರುವ ಚಿಕ್ಕಬಳ್ಳಾಪುರ ಕ್ಷೇತ್ರ ಕೈತಪ್ಪಬಾರದು ಎಂಬ ಕಾರಣಕ್ಕೆ ನಾನೇ ಅಭ್ಯರ್ಥಿಯಾಗಲು ನಿರ್ಧರಿಸಿದ್ದೇನೆ’ ಎಂದೂ ಅವರು ಸ್ಪಷ್ಟಪಡಿಸಿದರು.

## ‘ಯಾರೋ ನೋಡಿದ ಹೆಣ್ಣನ್ನು ಮದುವೆಯಾಗಲ್ಲ’

ಪ್ರಜಾವಾಣಿ ವಾರ್ತೆ

ಮಾಧುಸ್ವಾಮಿ

**ತುಮಕೂರು:** ‘ಕಾಂಗ್ರೆಸ್, ಬಿಜೆಪಿ ಸೇರಿದಂತೆ ಯಾವ ಪಕ್ಷದಿಂದ ಟಿಕೆಟ್ ಕೊಟ್ಟರೂ ಲೋಕಸಭೆ ಚುನಾವಣೆಗೆ ಸ್ಪರ್ಧಿಸುವುದಿಲ್ಲ. ಯಾರೋ ನೋಡಿದ ಹೆಣ್ಣನ್ನು ನಾನು ಮದುವೆಯಾಗುವುದಿಲ್ಲ’ ಎಂದು ಮಾಜಿ ಸಚಿವ, ಬಿಜೆಪಿ ಮುಖಂಡ ಜೆ.ಸಿ.ಮಾಧುಸ್ವಾಮಿ ಸ್ಪಷ್ಟಪಡಿಸಿದ್ದಾರೆ.

ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಜೆ.ಸಿ.ಪುರದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಕಾಂಗ್ರೆಸ್ ನಾಯಕರು ಸಂಪರ್ಕ ಮಾಡಿದ್ದು ನಿಜ. ಅವರಿಗೆ ಪಕ್ಷಕ್ಕೆ ಬರುತ್ತೇನೆ ಎಂದು ನಾನು ಹೇಳಿಲ್ಲ. ಬರುವುದಿಲ್ಲ ಎಂದೂ ಹೇಳಿಲ್ಲ’ ಎಂದರು.

ಕಾಂಗ್ರೆಸ್‌ನಲ್ಲಿ ನಿರ್ಧಾರ ತೆಗೆದುಕೊಳ್ಳುವಂತಹ ನಾಯಕರು ಸಂಪರ್ಕ ಮಾಡಿಲ್ಲ. ಕಾರ್ಯಕರ್ತರ ಸಭೆ ಕರೆದು ಚರ್ಚಿಸಿ ಮುಂದಿನ ನಿರ್ಧಾರ ಕೈಗೊಳ್ಳುವುದಾಗಿ ಅವರು ಸ್ಪಷ್ಟಪಡಿಸಿದರು.

‘ಲೋಕಸಭೆ ಚುನಾವಣೆಗೆ ಸ್ಪರ್ಧಿಸುವುದಿಲ್ಲ ಎಂದು ಹೇಳಿದ್ದೆ. ಆದರೂ ಸ್ಪರ್ಧಿಸುವಂತೆ ಬಿ.ಎಸ್.ಯಡಿಯೂರಪ್ಪ ಒತ್ತಾಯಿಸಿದರು. ಬಿ ಫಾರಂ ತೆಗೆದುಕೊಂಡು ಬರುತ್ತೇನೆ, ನೀವು ದೆಹಲಿಗೆ ಬರುವುದು ಬೇಡ ಎಂದು ಹೇಳಿದ್ದರು. ಎರಡು,ಮೂರು ಸಲ ಕರೆದು ಅವಮಾನ ಮಾಡಿದರು. ನಂಬಿದ್ದಕ್ಕೆ ಮೋಸ ಮಾಡಿದ್ದಾರೆ. ಅವರು ಮತ್ತೆ ನನ್ನನ್ನು ಸಂಪರ್ಕಿಸುವುದಿಲ್ಲ. ಮೋಸ ಮಾಡಿದವರು ಎಂದಾದರೂ ಸಂಪರ್ಕ ಮಾಡುತ್ತಾರೆಯೇ’ ಎಂದು ಯಡಿಯೂರಪ್ಪ ವಿರುದ್ಧ ಹರಿಹಾಯ್ದರು.

### ವಿಜಯೇಂದ್ರ ಅವರ ಕರೆ ಸ್ವೀಕರಿಸಲಿಲ್ಲ

**ಬೆಂಗಳೂರು:** ತುಮಕೂರು ಲೋಕಸಭಾ ಕ್ಷೇತ್ರದ ಟಿಕೆಟ್ ಸಿಗದೇ ಮುನಿಸಿಕೊಂಡಿರುವ ಮಾಜಿ ಸಚಿವ ಜೆ.ಸಿ.ಮಾಧುಸ್ವಾಮಿ ಬುಧವಾರ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರ ದೂರವಾಣಿ ಕರೆಯನ್ನು ಸ್ವೀಕರಿಸಲಿಲ್ಲ ಎಂದು ಮೂಲಗಳು ಹೇಳಿವೆ.

ದೆಹಲಿಯಿಂದ ಮರಳಿದ ವಿಜಯೇಂದ್ರ ಅವರು ಮಾಧುಸ್ವಾಮಿ ಜತೆ ಮಾತನಾಡಲು ದೂರವಾಣಿ ಕರೆ ಮಾಡಿದಾಗ ಅವರು ಕರೆಯನ್ನು ಸ್ವೀಕರಿಸಲಿಲ್ಲ. ಬದಲಿಗೆ ಅವರ ಆಪ್ತ ಸಹಾಯಕ ಮಾತನಾಡಿ, ‘ಸಾಹೇಬರು ಮಾತನಾಡುವುದಿಲ್ಲವಂತೆ’ ಎಂದು ಹೇಳಿದರು. ಈ ಸಂದರ್ಭದಲ್ಲಿ ‘ಮಾತನಾಡೋದು ಏನಿದೆ’ ಎಂದು ಮಾಧುಸ್ವಾಮಿ ಸಿಟ್ಟಿನಿಂದ ಹೇಳಿದ್ದು ವಿಜಯೇಂದ್ರ ಅವರಿಗೆ ಕೇಳಿಸಿತು. ಮತ್ತೊಮ್ಮೆ ಕರೆ ಮಾಡಿದರು. ಆಗಲೂ ಮಾಧುಸ್ವಾಮಿ ಕರೆಯನ್ನು ಸ್ವೀಕರಿಸಲಿಲ್ಲ ಎಂದು ಮೂಲಗಳು ತಿಳಿಸಿವೆ.

## ಸಚಿವೆ ಮನೆ ಮೇಲೆ ಅಧಿಕಾರಿಗಳ ದಾಳಿ

ಸುದ್ದಿ ಗದ್ದಲ

**• ಎಲ್ಲಿ?**

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಅವರ ಬೆಳಗಾವಿಯ ಗೃಹಕಚೇರಿ

**• ನಡೆದದ್ದೇನು?**

ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯ ಹಾಗೂ ಆಶಾ ಕಾರ್ಯಕರ್ತೆಯರ ಸಭೆ ನಡೆಯುತ್ತಿತ್ತು. ಜಿಲ್ಲಾ ಚುನಾವಣಾಧಿಕಾರಿ ನಿತೇಶ್ ಪಾಟೀಲ ನೇತೃತ್ವದಲ್ಲಿ ಚುನಾವಣಾಧಿಕಾರಿಗಳು ಹಾಗೂ ಫ್ಲೈಯಿಂಗ್ ಸ್ಕ್ವಾಡ್ ಸಿಬ್ಬಂದಿ ದಾಳಿ ಮಾಡಿದರು. ಸಭೆಯಲ್ಲಿ ಪಾಲ್ಗೊಂಡಿದ್ದ ಎಲ್ಲ ಕಾರ್ಯಕರ್ತೆಯರನ್ನು ಹೊರಗೆ ಕಳುಹಿಸಿದರು. ಹಲವರಿಂದ ಮಾಹಿತಿ ಸಂಗ್ರಹಿಸಿದರು. ಬಳಿಕ ಸಚಿವೆ ಲಕ್ಷ್ಮಿ ಅವರಿಂದಲೂ ವಿವರ ಪಡೆದರು. ‘ನೀತಿ ಸಂಹಿತೆ ಉಲ್ಲಂಘನೆ ಆಗಿದ್ದರೆ ಸಚಿವೆ ವಿರುದ್ಧ ಪ್ರಕರಣ ದಾಖಲಿಸಲಾಗುವುದು’ ಎಂದು ಚುನಾವಣಾಧಿಕಾರಿಗಳು ತಿಳಿಸಿದರು.

**• ಮಾಹಿತಿ ಸಿಕ್ಕಿದ್ದು ಹೇಗೆ?**

ಬುಧವಾರ ಬೆಳಿಗ್ಗೆಯೇ ಸಚಿವರ ಗೃಹ ಕಚೇರಿಯಲ್ಲಿ ಹಲವಾರು ಅಂಗನವಾಡಿ–ಆಶಾ ಕಾರ್ಯಕರ್ತೆಯರು ಸೇರಿದ್ದರು. ಇದನ್ನು ಕಂಡು ಅಪರಿಚಿತರೊಬ್ಬರು ಚುನಾವಣಾಧಿಕಾರಿಗಳಿಗೆ ಮಾಹಿತಿ ನೀಡಿದ್ದರು.

**• ಆರೋಪವೇನು?**

‘ಬೆಳಗಾವಿ ಲೋಕಸಭಾ ಕ್ಷೇತ್ರಕ್ಕೆ ತಮ್ಮ ಪುತ್ರ ಮೃಣಾಲ್ ಹೆಬ್ಬಾಳಕರ ಕಾಂಗ್ರೆಸ್‌ನಿಂದ ಸ್ಪರ್ಧಿಸುವುದು ಖಚಿತವಾಗಿದೆ. ಈ ಹಿನ್ನೆಲೆಯಲ್ಲಿ ಅವರು ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರು ಹಾಗೂ ಆಶಾ ಕಾರ್ಯಕರ್ತೆಯರನ್ನು ತಮ್ಮ ಮನೆಗೆ ಕರೆಯಿಸಿ ಸಭೆ ನಡೆಸಿದ್ದಾರೆ. ಚುನಾವಣೆಯಲ್ಲಿ ತಮ್ಮ ಮಗನ ಪರ ಮತಗಳನ್ನು ಹಾಕಿಸುವಂತೆ ಒತ್ತಡ ಹೇರುತ್ತಿದ್ದಾರೆ. ಇದು ಅಧಿಕಾರದ ದುರುಪಯೋಗ’ ಎಂದು ಆರೋಪಿಸಲಾಗಿದೆ.

**ಅಂಗನವಾಡಿ ಕಾರ್ಯಕರ್ತೆಯರಿಗೆ ಕೆಲಸದ ಒತ್ತಡ ಹೆಚ್ಚಾಗಿದ್ದು, ಅದನ್ನು ನಿವಾರಿಸುವಂತೆ ಕೋರಿ ಮನವಿ ಪತ್ರ ನೀಡಲು ಬಂದಿದ್ದರು. ಚುನಾವಣೆಗೆ ಸಂಬಂಧಪಟ್ಟಂತೆ ನಾನು ಸಭೆ ನಡೆಸಿಲ್ಲ. ನೀತಿ ಸಂಹಿತೆ ಉಲ್ಲಂಘಿಸಿಲ್ಲ**

**ಲಕ್ಷ್ಮಿ ಹೆಬ್ಬಾಳಕರ,** ಸಚಿವೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಸಚಿವೆ ಲಕ್ಷ್ಮಿ ಹೆಬ್ಬಾಳಕರ ಗೃಹಕಚೇರಿಯಿಂದ ಅಂಗನವಾಡಿ ಹಾಗೂ ಆಶಾ ಕಾರ್ಯಕರ್ತೆಯರನ್ನು ಹೊರಗೆ ಕಳುಹಿಸಲಾಯಿತು

## ಕ್ಷೇತ್ರ ಮಹಾತ್ಮೆ

ಲೋಕಸಭಾ ಚುನಾವಣೆಯಲ್ಲಿ ಭಾರಿ ಕುತೂಹಲದ ಕ್ಷೇತ್ರವಾಗಿರುವ ಇದು, ಹಲವು ಕಾರಣಕ್ಕೆ ಗಮನ ಸೆಳೆದಿದೆ. ಮಾಜಿ ಮುಖ್ಯಮಂತ್ರಿಗಳಾದ ಎಸ್.ಬಂಗಾರಪ್ಪ, ಬಿ.ಎಸ್. ಯಡಿಯೂರಪ್ಪನವರ ಮಕ್ಕಳು ಇಲ್ಲಿ ಎದುರಾಳಿಗಳು. ಸಾಲದ್ದಕ್ಕೆ, ಬಿಜೆಪಿ ಅಭ್ಯರ್ಥಿ ಬಿ.ವೈ. ರಾಘವೇಂದ್ರ, ಆ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರ ಅಣ್ಣ. ಕಾಂಗ್ರೆಸ್ ಹುರಿಯಾಳು ಗೀತಾ ಶಿವರಾಜ್ ಕುಮಾರ್, ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರ ಅಕ್ಕ. ಕಮಲ–ಹಸ್ತದ ಮಧ್ಯೆ ಪೈಪೋಟಿಗೆ ರಂಗೇರಿಸುತ್ತಿರುವ ಇಬ್ಬರು ಜನಪ್ರಿಯ ನಾಯಕರಲ್ಲಿ ಒಬ್ಬರಾದ ಬಿಜೆಪಿಯ ಕೇಂದ್ರ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ತಮ್ಮ ಮಗನ ಪರ ಪ್ರಚಾರದ ಮುಂದಾಳತ್ವ ವಹಿಸಿದ್ದರೆ, ಜನಪ್ರಿಯ ನಟ ಶಿವರಾಜ್ ಕುಮಾರ್ ತಮ್ಮ ಪತ್ನಿಪರ ಅಖಾಡಕ್ಕೆ ಧುಮುಕಿದ್ದಾರೆ.

ಯಡಿಯೂರಪ್ಪನವರ ಒಂದು ಕಾಲದ ಸಂಗಾತಿ, ರಾಜ್ಯದಲ್ಲಿ ಬಿಜೆಪಿ ಕಟ್ಟಿದ, ‘ಹಿಂದುತ್ವ’ದ ಉಗ್ರ ಪ್ರತಿಪಾದಕ, ಜೋರು ಬಾಯಿಯ ಕೆ.ಎಸ್. ಈಶ್ವರಪ್ಪ ಇಲ್ಲಿ ದಂಗೆ ಎದ್ದಿದ್ದಾರೆ. ‘ಅಪ್ಪ–ಮಕ್ಕಳಿಗೆ ಪಾಠ ಕಲಿಸುತ್ತೇನೆ’ ಎಂಬ ಉಮೇದಿನಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕೆ ಇಳಿಯಲು ಅಣಿಯಾಗಿದ್ದಾರೆ. ಹೀಗಿದೆ, ಮಲೆನಾಡಿನ ರಾಜಧಾನಿಯ ರಾಜಕೀಯ ಬೃಹನ್ನಾಟಕ.

## ಜಪ್ತಿ: ಏನು? ಎಷ್ಟು?

₹3.97 ಕೋಟಿ – 24 ಗಂಟೆಗಳ ಅವಧಿಯಲ್ಲಿ ವಶ

₹5.85 ಕೋಟಿ – ಒಟ್ಟು ವಶ

### ವಶಪಡಿಸಿಕೊಂಡ ಸ್ವತ್ತುಗಳ ವಿವರ

| ಸ್ವತ್ತು | 24 ಗಂಟೆಗಳಲ್ಲಿ ವಶ | ಒಟ್ಟು ವಶ |
|---|---|---|
| ಉಚಿತ ಉಡುಗೊರೆ | ₹2.25 ಲಕ್ಷ | ₹ 8.12 ಲಕ್ಷ |
| ಮದ್ಯ | ₹ 2.89 ಕೋಟಿ (90,148 ಲೀ) | ₹ 21.48 ಕೋಟಿ (6.84 ಲಕ್ಷ ಲೀ) |
| ಮಾದಕವಸ್ತು | ₹ 4.48 ಲಕ್ಷ (13.42 ಕೆ.ಜಿ.) | ₹ 15.21 ಲಕ್ಷ (24.30 ಕೆ.ಜಿ.) |
| ಚಿನ್ನ ಮತ್ತು ಬೆಳ್ಳಿ | ₹ 7 ಕೋಟಿ (2.24 ಕೆ.ಜಿ.) | ₹ 27.62 ಕೋಟಿ (4.24 ಕೆ.ಜಿ.) |

ನೀತಿ ಸಂಹಿತೆ ಉಲ್ಲಂಘನೆ ಆರೋಪ • ಶೋಭಾ ಕರಂದ್ಲಾಜೆ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಡಿಎಂಕೆ ಪತ್ರ

# ತಕ್ಷಣ ಕ್ರಮಕ್ಕೆ ಆಯೋಗ ನಿರ್ದೇಶನ

ಪ್ರಜಾವಾಣಿ ವಾರ್ತೆ/ಪಿಟಿಐ

**ಚೆನ್ನೈ/ನವದೆಹಲಿ:** ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರಿಂದ ಮಾದರಿ ನೀತಿ ಸಂಹಿತೆ ಉಲ್ಲಂಘನೆಯಾಗಿದೆ ಎಂದು ಆರೋಪಿಸಿ ಡಿಎಂಕೆ ನೀಡಿರುವ ದೂರಿಗೆ ಸಂಬಂಧಿಸಿ, ತಕ್ಷಣ ಹಾಗೂ ಸೂಕ್ತ ಕ್ರಮ ಕೈಗೊಳ್ಳುವಂತೆ ಕರ್ನಾಟಕ ಮುಖ್ಯ ಚುನಾವಣಾ ಅಧಿಕಾರಿಗೆ ಚುನಾವಣಾ ಆಯೋಗ ಬುಧವಾರ ನಿರ್ದೇಶನ ನೀಡಿದೆ.

ಈ ವಿಚಾರವಾಗಿ ಕೈಗೊಂಡಿರುವ ಕ್ರಮ ಕುರಿತು 48 ಗಂಟೆಗಳ ಒಳಗಾಗಿ ವರದಿ ಸಲ್ಲಿಸುವಂತೆಯೂ ಆಯೋಗ ಸೂಚಿಸಿದೆ.

‘ಬೆಂಗಳೂರಿನ ರಾಮೇಶ್ವರಂ ಕೆಫೆಯಲ್ಲಿ ಮಾರ್ಚ್ 1ರಂದು ಸಂಭವಿಸಿದ ಕಚ್ಚಾಬಾಂಬ್ ಸ್ಫೋಟಕ್ಕೆ ತಮಿಳುನಾಡು ಮೂಲದ ವ್ಯಕ್ತಿಯೇ ಹೊಣೆ ಎಂಬುದಾಗಿ ಸಚಿವೆ ಶೋಭಾ ಕರಂದ್ಲಾಜೆ ಹೇಳಿದ್ದಾರೆ’ ಎಂದು ಆರೋಪಿಸಿರುವ ಡಿಎಂಕೆ, ಅವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿತ್ತು.

ಬೆಂಗಳೂರಿನಲ್ಲಿ ಮಂಗಳವಾರ ನಡೆದಿದ್ದ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಶೋಭಾ ಕರಂದ್ಲಾಜೆ, ‘ಕರ್ನಾಟಕದಲ್ಲಿ ಕಾನೂನು–ಸುವ್ಯವಸ್ಥೆ ಕುಸಿದಿದೆ. ತಮಿಳುನಾಡಿನಿಂದ ಬರುವ ಜನರು ಇಲ್ಲಿ ಬಾಂಬ್‌ಗಳನ್ನು ಇಡುತ್ತಾರೆ. ದೆಹಲಿಯಿಂದ ಬರುವ ಒಬ್ಬ ವ್ಯಕ್ತಿ ವಿಧಾನಸೌಧದಲ್ಲಿ ಪಾಕಿಸ್ತಾನ ಪರ ಘೋಷಣೆ ಕೂಗುತ್ತಾನೆ. ಕೇರಳದಿಂದ ಬರುವ ವ್ಯಕ್ತಿ ಕಾಲೇಜು ವಿದ್ಯಾರ್ಥಿನಿಯರ ಮೇಲೆ ಆ್ಯಸಿಡ್ ಎರಚುತ್ತಾನೆ’ ಎಂದು ಹೇಳಿದ್ದರು.

ಶೋಭಾ ಅವರ ಈ ಹೇಳಿಕೆ ಕುರಿತು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಹಾಗೂ ಡಿಎಂಕೆ ಇತರ ನಾಯಕರು ತೀಕ್ಷ್ಣ ಪ್ರತಿಕ್ರಿಯೆ ನೀಡಿದ್ದರು.

‘ಶೋಭಾ ಕರಂದ್ಲಾಜೆ ಅವರ ಹೇಳಿಕೆ ಬೇಜವಾಬ್ದಾರಿಯಿಂದ ಕೂಡಿದೆ. ಪ್ರಧಾನಿ ನರೇಂದ್ರ ಮೋದಿ ಅವರಿಂದ ಹಿಡಿದು ಬಿಜೆಪಿಯ ಪ್ರತಿಯೊಬ್ಬ ಕಾರ್ಯಕರ್ತ ಇಂತಹ ವಿಭಜಕ ರಾಜಕಾರಣವನ್ನು ತಕ್ಷಣವೇ ನಿಲ್ಲಿಸಬೇಕು’ ಎಂದು ಸ್ಟಾಲಿನ್ ಆಗ್ರಹಿಸಿದ್ದರು.

ಸ್ಟಾಲಿನ್ ಅವರ ಹೇಳಿಕೆ ಬೆನ್ನಲ್ಲೇ, ಚುನಾವಣಾ ಆಯೋಗಕ್ಕೆ ಪತ್ರ ಬರೆದಿದ್ದ ಡಿಎಂಕೆ ಸಂಘಟನಾ ಕಾರ್ಯದರ್ಶಿ ಆರ್.ಎಸ್.ಭಾರತಿ, ‘ಕರ್ನಾಟಕ ಮತ್ತು ತಮಿಳುನಾಡು ಜನರ ಮಧ್ಯೆ ದ್ವೇಷ ಮತ್ತು ವೈರತ್ವ ಬಿತ್ತುವುದು ಹಾಗೂ ಆ ಮೂಲಕ ಚುನಾವಣೆಯಲ್ಲಿ ಲಾಭ ಗಳಿಸುವ ಉದ್ದೇಶದಿಂದ ಸಚಿವೆ ಈ ವಿವಾದಾತ್ಮಕ ಹೇಳಿಕೆ ನೀಡಿದ್ದಾರೆ’ ಎಂದು ದೂರಿದ್ದಾರೆ.

‘ಸಚಿವೆಯ ಹೇಳಿಕೆ ಮಾದರಿ ನೀತಿ ಸಂಹಿತೆಯ ಉಲ್ಲಂಘನೆಯಾಗಿದೆ. ಇದು ಸಮಾಜವನ್ನು ವಿಭಜಿಸುವ ಹೇಳಿಕೆಯಾಗಿದ್ದು, ಎರಡು ಸಮುದಾಯಗಳ ನಡುವಿನ ಸಂಬಂಧಕ್ಕೆ ಹಾನಿ ಉಂಟು ಮಾಡಿದೆ. ಸಾಮಾಜಿಕ ಜಾಲತಾಣಗಳು ಎರಡು ಸಮುದಾಯಗಳ ನಡುವಿನ ದ್ವೇಷ–ವೈರತ್ವ ಮತ್ತಷ್ಟೂ ಹೆಚ್ಚಾಗುವಂತೆ ಮಾಡಿವೆ’ ಎಂದೂ ಅವರು ಪತ್ರದಲ್ಲಿ ವಿವರಿಸಿದ್ದಾರೆ.

**ಪ್ರಕರಣ ದಾಖಲು:** ‘ವಿವಿಧ ಗುಂಪುಗಳ ನಡುವೆ ವೈರತ್ವ ಸೃಷ್ಟಿಸಿದ’ ಆರೋಪದಡಿ ಸಚಿವೆ ಶೋಭಾ ಕರಂದ್ಲಾಜೆ ವಿರುದ್ಧ ಮದುರೈ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಎಲ್‌ಡಿಎಫ್, ಯುಡಿಎಫ್ ಖಂಡನೆ

**ತಿರುವನಂತಪುರ(ಪಿಟಿಐ):** ರಾಜ್ಯದ ಜನರ ಕುರಿತಾಗಿ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ನೀಡಿದ್ದಾರೆ ಎನ್ನಲಾದ ಹೇಳಿಕೆಯನ್ನು ಕೇರಳದ ಆಡಳಿತಾರೂಢ ಎಡಪಕ್ಷಗಳ ನೇತೃತ್ವದ ಒಕ್ಕೂಟ ಹಾಗೂ ವಿರೋಧಿ ಪಾಳಯ ಯುಡಿಎಫ್ ಬುಧವಾರ ತೀವ್ರವಾಗಿ ಖಂಡಿಸಿವೆ.

‘ಇಂತಹ ಹೇಳಿಕೆಗಳ ಮೂಲಕ ಕರ್ನಾಟಕದ ನಾಯಕಿ ರಾಜ್ಯದಲ್ಲಿನ ಧಾರ್ಮಿಕ ಸೌಹಾರ್ದವನ್ನು ನಾಶ ಮಾಡಲು ಯತ್ನಿಸುತ್ತಿದ್ದಾರೆ’ ಎಂದು ಎರಡೂ ರಂಗಗಳು ಹೇಳಿವೆ.

‘ಬಿಜೆಪಿ ನಾಯಕಿ ನೀಡಿರುವ ದ್ವೇಷದ ಹೇಳಿಕೆ ಕುರಿತು ಪ್ರಧಾನಿ ನರೇಂದ್ರ ಮೋದಿ ಅವರು ಕ್ರಮ ಕೈಗೊಳ್ಳಬೇಕು’ ಎಂದು ಸಿಪಿಐ ರಾಜ್ಯ ಕಾರ್ಯದರ್ಶಿ ಬಿನೋಯ್ ವಿಶ್ವಂ ಆಗ್ರಹಿಸಿದ್ದಾರೆ.

## ತಮಿಳುನಾಡಿನವರಿಂದ ಬಾಂಬ್: ಕ್ಷಮೆಯಾಚಿಸಿದ ಶೋಭಾ

ಶೋಭಾ ಕರಂದ್ಲಾಜೆ

**ಬೆಂಗಳೂರು:** ‘ಯಾರೋ ತಮಿಳುನಾಡಿನಿಂದ ಬಂದು ದಿ ರಾಮೇಶ್ವರ ಕೆಫೆಯಲ್ಲಿ ಬಾಂಬ್ ಇರಿಸಿ ಹೋಗುತ್ತಾರೆ’ ಎಂಬ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಹೇಳಿಕೆಗೆ ವಿವಿಧ ತಮಿಳು ಸಂಘಟನೆಗಳು ಆಕ್ರೋಶ ವ್ಯಕ್ತಪಡಿಸಿರುವ ಬೆನ್ನಲ್ಲೇ ಶೋಭಾ ಅವರು ಕ್ಷಮೆಯಾಚಿಸಿದ್ದಾರೆ.

ಮೊಬೈಲ್ ಅಂಗಡಿ ಮಾಲೀಕನ ಮೇಲೆ ಹಲ್ಲೆ ಪ್ರಕರಣ ಖಂಡಿಸಿ ನಗರ್ತಪೇಟೆಯಲ್ಲಿ ಬಿಜೆಪಿ ಹಾಗೂ ಹಿಂದೂ ಜಾಗರಣಾ ವೇದಿಕೆ ಆಯೋಜಿಸಿದ್ದ ಪ್ರತಿಭಟನಾ ರ‍್ಯಾಲಿಯಲ್ಲಿ ಮಾತನಾಡಿದ್ದ ಅವರು, ‘ವಿಧಾನಸೌಧ ಆವರಣಕ್ಕೆ ಯಾರೋ ಬಂದು ಪಾಕಿಸ್ತಾನ ಜಿಂದಾಬಾದ್ ಘೋಷಣೆ ಕೂಗುತ್ತಾರೆ. ಮತ್ತೊಬ್ಬ ಹೆಣ್ಣು ಮಕ್ಕಳ ಮೇಲೆ ಆ್ಯಸಿಡ್ ದಾಳಿ ನಡೆಸುತ್ತಾನೆ. ಸ್ವಂತ ಅಂಗಡಿಯಲ್ಲಿ ಹನುಮಾನ್ ಚಾಲೀಸಾ ಸಿ.ಡಿ ಹಾಕಿದ್ದಕ್ಕೆ ಯುವಕನ ಮೇಲೆ ಇನ್ನೊಂದು ಗುಂಪು ಹಲ್ಲೆ ನಡೆಸುತ್ತದೆ. ಯಾರೋ ತಮಿಳುನಾಡಿನಿಂದ ಬಂದು ಬಾಂಬ್ ಇರಿಸಿ ಹೋಗುತ್ತಾರೆ. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ’ ಎಂದು ಹೇಳಿದ್ದರು.

ಈ ಹೇಳಿಕೆಯು ತಮಿಳುನಾಡಿನವರನ್ನು ಅವಮಾನಿಸುವಂತಹದ್ದು ಎಂಬ ಆಕ್ಷೇಪ ವ್ಯಕ್ತವಾಗಿತ್ತು. ಈ ಸಂಬಂಧ, ತಮಿಳುನಾಡಿನಲ್ಲಿ ದೂರು ದಾಖಲಾಗಿತ್ತು.

ತಮ್ಮ ಮಾತು ವಿವಾದದ ಸ್ವರೂಪ ಪಡೆಯುತ್ತಿದ್ದಂತೆ, ಹೇಳಿಕೆ ಹಿಂಪಡೆಯುವುದಾಗಿ ಹೇಳಿದ ಶೋಭಾ, ‘ತಮಿಳು ಸಹೋದರ, ಸಹೋದರಿಯರಿಗೆ ನನ್ನ ಮಾತಿನಿಂದ ನೋವಾಗಿದ್ದರೆ ಕ್ಷಮೆಯಾಚಿಸುತ್ತೇನೆ. ನನ್ನ ಹೇಳಿಕೆ ಕೃಷ್ಣಗಿರಿ ಅರಣ್ಯ ಪ್ರದೇಶದಲ್ಲಿ ತರಬೇತಿ ಪಡೆದವರಿಗೆ ಸೀಮಿತವಾಗಿದೆ. ರಾಮೇಶ್ವರ ಕೆಫೆ ಘಟನೆಗೂ ಆ ತರಬೇತಿಗೂ ಸಂಬಂಧ ಇದೆ. ಆದರೆ, ತಮಿಳುನಾಡಿನ ಜನರಲ್ಲಿ ನನ್ನ ಹೃದಯಾಂತರಾಳದಿಂದ ಕ್ಷಮೆ ಕೋರುತ್ತೇನೆ’ ಎಂದಿದ್ದಾರೆ.

### ‘24 ಗಂಟೆಯಲ್ಲಿ ವರದಿ’

‘ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರು ತಮಿಳರ ವಿರುದ್ಧ ಹೇಳಿಕೆ ನೀಡಿದ್ದಾರೆ ಎನ್ನಲಾಗಿರುವ ಬಗ್ಗೆ ಚುನಾವಣೆ ಆಯೋಗಕ್ಕೆ ದೂರು ನೀಡಲಾಗಿದ್ದು, ಅವರಿಂದ ತನಿಖೆ ನಡೆಸಲು ನಮಗೆ ಆದೇಶ ಬಂದಿದೆ. 24 ಗಂಟೆಗಳೊಳಗೆ ಈ ಬಗ್ಗೆ ಪರಿಶೀಲನೆ ನಡೆಸಿ, ವರದಿ ಸಲ್ಲಿಸಲಾಗುತ್ತದೆ’ ಎಂದು ಬೆಂಗಳೂರು ನಗರ ಜಿಲ್ಲಾ ಚುನಾವಣಾಧಿಕಾರಿ ತುಷಾರ್ ಗಿರಿನಾಥ್ ತಿಳಿಸಿದರು.

## ಮೊದಲ ಹಂತದ ಚುನಾವಣೆ ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ಆರಂಭ

**ನವದೆಹಲಿ (ಪಿಟಿಐ):** ದೇಶದ 21 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ 102 ಕ್ಷೇತ್ರಗಳಿಗಾಗಿ ಏಪ್ರಿಲ್ 19ರಂದು ನಡೆಯಲಿರುವ ಮೊದಲ ಹಂತದ ಲೋಕಸಭಾ ಚುನಾವಣೆಗೆ ಬುಧವಾರ ಅಧಿಸೂಚನೆ ಹೊರಡಿಸುವುದರೊಂದಿಗೆ ನಾಮಪತ್ರ ಸಲ್ಲಿಕೆ ಆರಂಭವಾಗಿದೆ.

ಚುನಾವಣಾ ಆಯೋಗ ಹೊರಡಿಸಿರುವ ಅಧಿಸೂಚನೆಯ ಪ್ರಕಾರ, ಚುನಾವಣೆಗೆ ನಾಮಪತ್ರ ಸಲ್ಲಿಸಲು ಮಾರ್ಚ್ 27 ಕೊನೆಯ ದಿನವಾಗಿದೆ. ಮಾರ್ಚ್ 28ರಂದು ನಾಮಪತ್ರಗಳ ಪರಿಶೀಲನೆ ನಡೆಯಲಿದೆ. ನಾಮಪತ್ರ ವಾಪಸ್ ಪಡೆಯಲು ಮಾರ್ಚ್ 30 ಕೊನೆಯ ದಿನವಾಗಿದೆ.

ಬಿಹಾರದಲ್ಲಿ ಮಾತ್ರ ಹಬ್ಬದ ಕಾರಣಕ್ಕೆ ಮೊದಲ ಹಂತದ ಚುನಾವಣೆ ನಡೆಯುವ ಕ್ಷೇತ್ರಗಳಲ್ಲಿ ನಾಮಪತ್ರ ಸಲ್ಲಿಕೆಗೆ ಮಾರ್ಚ್ 28 ಕೊನೆಯ ದಿನವಾಗಿದೆ. ಬಿಹಾರದಲ್ಲಿ ಮಾರ್ಚ್ 30ರಂದು ನಾಮಪತ್ರಗಳ ಪರಿಶೀಲನೆ ನಡೆಯಲಿದೆ. ಅಭ್ಯರ್ಥಿಗಳು ನಾಮಪತ್ರ ವಾಪಸ್ ಪಡೆಯಲು ಏಪ್ರಿಲ್ 2 ಕೊನೆಯ ದಿನವಾಗಿದೆ.

ಮೊದಲ ಹಂತದಲ್ಲಿ ಅರುಣಾಚಲ ಪ್ರದೇಶ (2 ಕ್ಷೇತ್ರ), ಅಸ್ಸಾಂ (5), ಬಿಹಾರ (4), ಛತ್ತೀಸಗಢ (1), ಮಧ್ಯಪ್ರದೇಶ (6), ಮಹಾರಾಷ್ಟ್ರ (5), ರಾಜಸ್ಥಾನ (12), ಮಣಿಪುರ (2), ತಮಿಳುನಾಡು (39), ಮಿಜೋರಾಂ (1), ತ್ರಿಪುರ (1), ಸಿಕ್ಕಿಂ (1) ನಾಗಾಲ್ಯಾಂಡ್ (1), ಉತ್ತರ ಪ್ರದೇಶ (8), ಉತ್ತರಾಖಂಡ (5), ಜಮ್ಮು ಮತ್ತು ಕಾಶ್ಮೀರ (1), ಲಕ್ಷದ್ವೀಪ (1), ಅಂಡಮಾನ್ ಮತ್ತು ನಿಕೋಬಾರ್ (1) ಪುದುಚೇರಿ (1) ಮತ್ತು ಪಶ್ಚಿಮ ಬಂಗಾಳದಲ್ಲಿ (3) ಮತದಾನ ನಡೆಯಲಿದೆ.

ಅರುಣಾಚಲ ಪ್ರದೇಶದ 60 ವಿಧಾನಸಭಾ ಕ್ಷೇತ್ರಗಳಿಗೆ ಮತ್ತು ಎರಡು ಲೋಕಸಭಾ ಕ್ಷೇತ್ರಗಳಿಗೆ ರಾಜ್ಯ ಚುನಾವಣಾ ಆಯೋಗವು ಪ್ರತ್ಯೇಕ ಗೆಜೆಟ್ ಅಧಿಸೂಚನೆ ಹೊರಡಿಸಿದೆ.

ಕೇಂದ್ರ ಸಚಿವ ಕಿರಣ್ ರಿಜಿಜು ಅರುಣಾಚಲ ಪಶ್ಚಿಮ ಲೋಕಸಭಾ ಕ್ಷೇತ್ರದಿಂದ ಮತ್ತು ತಾಪಿರ್ ಗಾವೊ ಅರುಣಾಚಲ ಪೂರ್ವ ಲೋಕಸಭಾ ಕ್ಷೇತ್ರದಿಂದ ಕಣಕ್ಕಿಳಿದಿದ್ದಾರೆ.

**ಪ್ರಾರ್ಥನೆ** ಲೋಕಸಭಾ ಚುನಾವಣೆಯ ಬಿಜೆಪಿ ಅಭ್ಯರ್ಥಿಯೂ ಆಗಿರುವ ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್ ಅವರು ತಿರುವನಂತಪುರದಲ್ಲಿ ಬುಧವಾರ ಕರಿಕ್ಕಮ್ ಶ್ರೀ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿದರು –ಪಿಟಿಐ ಚಿತ್ರ

# ‘ಮಹಿಳೆಯರಿಗೆ ಪ್ರತಿ ತಿಂಗಳು ₹1 ಸಾವಿರ’

## ಚುನಾವಣೆಗೆ ಪ್ರಣಾಳಿಕೆ ಬಿಡುಗಡೆ ಮಾಡಿದ ಡಿಎಂಕೆ; ಸಿಎಎ, ಅಗ್ನಿಪಥ್ ರದ್ದುಪಡಿಸುವ ಆಶ್ವಾಸನೆ

**ಚೆನ್ನೈ(ಪಿಟಿಐ):** ಈ ಬಾರಿಯ ಲೋಕಸಭೆ ಚುನಾವಣೆಯಲ್ಲಿ ಗೆದ್ದು ಕೇಂದ್ರದಲ್ಲಿ ‘ಇಂಡಿಯಾ’ ಮೈತ್ರಿಕೂಟ ಅಧಿಕಾರಕ್ಕೆ ಬಂದರೆ ದೇಶದ ಪ್ರತಿ ರಾಜ್ಯದಲ್ಲಿಯೂ ಎಲ್ಲ ಮಹಿಳೆಯರಿಗೆ ತಿಂಗಳಿಗೆ ₹1 ಸಾವಿರ ನೀಡಲಾಗುವುದು. ಅಲ್ಲದೆ, ಸಂಸತ್ತು ಮತ್ತು ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇ 33 ಮೀಸಲಾತಿಯನ್ನು ತಕ್ಷಣವೇ ಅನುಷ್ಠಾನಗೊಳಿಸಲಾಗುವುದು ಎಂದು ಡಿಎಂಕೆ ಭರವಸೆ ನೀಡಿದೆ.

‘ಇಂಡಿಯಾ’ ಮೈತ್ರಿಕೂಟದ ಪ್ರಮುಖ ಪಾಲುದಾರ ಹಾಗೂ ತಮಿಳುನಾಡಿನ ಆಡಳಿತಾರೂಢ ಪಕ್ಷವಾದ ಡಿಎಂಕೆ, ಬುಧವಾರ ಬಿಡುಗಡೆ ಮಾಡಿದ ಲೋಕಸಭೆ ಚುನಾವಣೆಯ ತನ್ನ ಪ್ರಣಾಳಿಕೆಯಲ್ಲಿ ಮಹಿಳಾ ಸಬಲೀಕರಣಕ್ಕೆ ಹಲವು ಕಲ್ಯಾಣ ಯೋಜನೆಗಳನ್ನು ಜಾರಿಗೆ ತರುವ ಆಶ್ವಾಸನೆ ನೀಡಿದೆ.

ಸಾಮಾಜಿಕ ನ್ಯಾಯದ ಆಧಾರದ ಮೇಲೆ ಶಿಕ್ಷಣ ಮತ್ತು ಉದ್ಯೋಗದಲ್ಲೂ ಮಹಿಳೆಯರಿಗೆ ಶೇ 33 ಮೀಸಲಾತಿ ನೀಡುವುದಾಗಿಯೂ ಹೇಳಿದೆ.

ಎನ್‌ಡಿಎ ಸರ್ಕಾರ ಜಾರಿಗೊಳಿಸಿರುವ ಪೌರತ್ವ ತಿದ್ದುಪಡಿ ಕಾಯ್ದೆಯನ್ನು (ಸಿಎಎ) ರದ್ದುಪಡಿಸಲಾಗುವುದು. ಜಮ್ಮು ಮತ್ತು ಕಾಶ್ಮೀರಕ್ಕೆ ರಾಜ್ಯ ಸ್ಥಾನಮಾನ ಮರುಸ್ಥಾಪನೆ ಮಾಡುವ ಜತೆಗೆ ಅಲ್ಲಿ ಚುನಾವಣೆ ನಡೆಸಲಾಗುವುದು ಎಂದೂ ಹೇಳಿದೆ.

ಅಲ್ಲದೆ, ಹೊಸ ಶಿಕ್ಷಣ ನೀತಿ 2020 ರದ್ದತಿ, ಇಂಧನ ಬೆಲೆ ಕಡಿತ, ಕಾನೂನು ಕ್ರಮದಿಂದ ರಾಜ್ಯಪಾಲರಿಗೆ ರಕ್ಷಣೆ ನೀಡುವ ಸಂವಿಧಾನದ 361ನೇ ವಿಧಿ ರದ್ದು ಮತ್ತು ಮುಖ್ಯಮಂತ್ರಿಗಳೊಂದಿಗೆ ಸಮಾಲೋಚನೆ ನಡೆಸಿದ ನಂತರ ರಾಜ್ಯಪಾಲರ ನೇಮಕಕ್ಕೆ ಕ್ರಮ ತೆಗೆದುಕೊಳ್ಳುವುದಾಗಿಯೂ ಪ್ರಕಟಿಸಿದೆ.

ಎಂ.ಎಸ್. ಸ್ವಾಮಿನಾಥನ್ ಸಮಿತಿಯ ಶಿಫಾರಸುಗಳ ಅನುಷ್ಠಾನಕ್ಕೆ ತರಲಾಗುವುದು. ಕೃಷಿ ಉತ್ಪನ್ನಗಳಿಗೆ ಎಂಎಸ್‌ಪಿ ಖಾತ್ರಿಗೆ ಕ್ರಮ ವಹಿಸಲಾಗುವುದು. ಅಲ್ಲದೆ, ಅಗ್ನಿಪಥ್ ಯೋಜನೆ ಕೈಬಿಟ್ಟು, ಸೇನಾ ಸಶಸ್ತ್ರ ಪಡೆಗಳಲ್ಲಿ ಶಾಶ್ವತ ನೇಮಕಾತಿಯನ್ನು ಪುನಃ ಆರಂಭಿಸುವುದಾಗಿಯೂ ಹೇಳಿದೆ.

ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಚೆನ್ನೈನಲ್ಲಿ ಬುಧವಾರ ಪಕ್ಷದ ಪ್ರಣಾಳಿಕೆಯನ್ನು ಬಿಡುಗಡೆ ಮಾಡಿದರು – ಎಎಫ್‌ಪಿ ಚಿತ್ರ

ಜಾತಿವಾರು ಜನಗಣತಿ ಮತ್ತು ಬಡತನ ರೇಖೆಗಿಂತ ಕೆಳಗಿರುವವರ ಆರ್ಥಿಕ ಸಮೀಕ್ಷೆ ಸೇರಿದಂತೆ ಜನಗಣತಿಯನ್ನು ಪ್ರತಿ ಐದು ವರ್ಷಗಳಿಗೊಮ್ಮೆ ಏಕಕಾಲದಲ್ಲಿ ನಡೆಸುವುದಾಗಿಯೂ ಪ್ರಕಟಿಸಿದೆ.

**ಪ್ರಣಾಳಿಕೆಯಲ್ಲಿರುವ ಪ್ರಮುಖ ಭರವಸೆಗಳು:**

- ಪೆಟ್ರೋಲ್ ಲೀಟರ್‌ಗೆ ₹75, ಡೀಸೆಲ್‌ಗೆ ₹65 ಹಾಗೂ ಅಡುಗೆ ಅನಿಲ ಸಿಲಿಂಡರ್ ಬೆಲೆಯನ್ನು ₹500ಕ್ಕೆ ನಿಗದಿಪಡಿಸಲಾಗುವುದು
- ಮಹಿಳಾ ಸ್ವಸಹಾಯ ಗುಂಪುಗಳಿಗೆ 10 ಲಕ್ಷದವರೆಗೆ ಬಡ್ಡಿ ರಹಿತ ಸಾಲ; ದೇಶದಾದ್ಯಂತ ಸ್ವಸಹಾಯ ಸಂಘಗಳ ಮಹಿಳೆಯರಿಗೆ ಒಂದು ಲಕ್ಷದವರೆಗೆ ಬಡ್ಡಿರಹಿತ ವಾಹನ ಸಾಲ
- ಲಿಂಗ ಸಮಾನತೆಗೆ ಒತ್ತು ನೀಡುವ ನೀಡುವ ಮೂಲಕ ಮಹಿಳೆಯರಿಗೆ ಮುಟ್ಟಿನ ರಜೆಯ ಕಾನೂನು ಜಾರಿಗೆ ತರಲಾಗುವುದು
- ಮನೆಗೆಲಸದ ಕಾರ್ಮಿಕರ ಹಕ್ಕುಗಳು ಮತ್ತು ಕನಿಷ್ಠ ವೇತನ ರಕ್ಷಣೆಗೆ ‘ಏಕೀಕೃತ ರಾಷ್ಟ್ರೀಯ ಕಾನೂನು’ ಜಾರಿಗೊಳಿಸಲಾಗುವುದು. ಮನೆಗೆಲಸದ ಕಾರ್ಮಿಕರ ಉದ್ಯೋಗ ಕಾಯಂ, ಅವರ ಸಾಮಾಜಿಕ ಭದ್ರತೆ ಖಾತ್ರಿಗೆ ಮತ್ತು ಅವರ ಕುಂದುಕೊರತೆಗಳನ್ನು ಪರಿಹರಿಸಲು ತ್ರಿಪಕ್ಷೀಯ ಸಮಿತಿ ರಚಿಸಲಾಗುವುದು

### ಎಐಎಡಿಎಂಕೆ ಮೊದಲ ಪಟ್ಟಿ ಬಿಡುಗಡೆ

ಪ್ರಜಾವಾಣಿ ವಾರ್ತೆ

**ಚೆನ್ನೈ:** ಲೋಕಸಭಾ ಚುನಾವಣೆಗಾಗಿ ಎಐಎಡಿಎಂಕೆ ಬುಧವಾರ ಪಕ್ಷದ 16 ಅಭ್ಯರ್ಥಿಗಳ ಮೊದಲ ಪಟ್ಟಿ ಬಿಡುಗಡೆ ಮಾಡಿದೆ. ಪಟ್ಟಿಯಲ್ಲಿ ಹೊಸ ಮುಖಗಳೇ ಹೆಚ್ಚಾಗಿವೆ.

ಉತ್ತರ ಚೆನ್ನೈ, ದಕ್ಷಿಣ ಚೆನ್ನೈ, ಅರಕ್ಕೋಣಂ, ಕಾಂಚೀಪುರಂ ಮತ್ತು ವಿಲ್‌ಪುರಂ ಸೇರಿದಂತೆ 16 ಕ್ಷೇತ್ರಗಳ ಅಭ್ಯರ್ಥಿಗಳನ್ನು ಪಕ್ಷವು ಘೋಷಿಸಿದೆ. ಪಟ್ಟಿಯಲ್ಲಿ ಮಾಜಿ ಸಂಸದ ಜೆ.ಜಯವರ್ಧನ್ ಮತ್ತು ಮಾಜಿ ಶಾಸಕ ಪಿ.ಸರವಣನ್ ಅವರು ಸ್ಥಾನ ಪಡೆದಿದ್ದಾರೆ.

ಇನ್ನೊಂದೆಡೆ, ಸುದೀರ್ಘ ಮಾತುಕತೆಯ ನಂತರ ಎಐಎಡಿಎಂಕೆ ಮತ್ತು ದಿವಂಗತ ವಿಜಯಕಾಂತ್ ಅವರ ಡಿಎಂಡಿಕೆ ನಡುವೆ ಬುಧವಾರ ಮೈತ್ರಿ ಒಪ್ಪಂದ ಏರ್ಪಟ್ಟಿದೆ. ಏಪ್ರಿಲ್ 19ರ ಚುನಾವಣೆಯಲ್ಲಿ ಡಿಎಂಡಿಕೆಗೆ ಐದು ಕ್ಷೇತ್ರಗಳನ್ನು ಬಿಟ್ಟುಕೊಡಲು ಎಐಎಡಿಎಂಕೆ ಒಪ್ಪಿದೆ. ಉಳಿದಂತೆ ಎಐಎಡಿಎಂಕೆ ತನ್ನ ಇತರ ಮಿತ್ರಪಕ್ಷಗಳಾದ ಪುತಿಯಾ ತಮಿಳಗಂ ಮತ್ತು ಎಸ್‌ಡಿಪಿಐಗೆ ತಲಾ ಒಂದು ಕ್ಷೇತ್ರ ಬಿಟ್ಟುಕೊಟ್ಟಿದೆ.

ಇದರೊಂದಿಗೆ ಎಐಎಡಿಎಂಕೆ ರಾಜ್ಯದಲ್ಲಿ ‘ಎರಡು ಎಲೆ’ ಚಿಹ್ನೆ ಅಡಿಯಲ್ಲಿ 30 ಕ್ಷೇತ್ರಗಳಲ್ಲಿ ಸ್ಪರ್ಧಿಸಲಿದೆ.

ಡಿಎಂಕೆ ನೇತೃತ್ವದ ‘ಜಾತ್ಯತೀತ ಪ್ರಗತಿಪರ ಮೈತ್ರಿಕೂಟ’ಕ್ಕೆ (ಎಸ್‌ಪಿಎ) ವಿರುದ್ಧವಾಗಿ ಎಐಎಡಿಎಂಕೆ ಮೈತ್ರಿಕೂಟ ರಚಿಸಿಕೊಂಡಿದೆ. ಡಿಎಂಡಿಕೆ ಮತ್ತು ‘ಪುರಚ್ಚಿ ಭಾರತಂ’ ಹೊರತುಪಡಿಸಿದರೆ 2019 ಮತ್ತು 2021ರಲ್ಲಿ ಎಐಎಡಿಎಂಕೆ ಮೈತ್ರಿಕೂಟದಲ್ಲಿದ್ದ ಉಳಿದೆಲ್ಲ ಪಕ್ಷಗಳು ಬಿಜೆಪಿ ಮೈತ್ರಿಕೂಟ ಸೇರುವುದರೊಂದಿಗೆ ಎಐಎಡಿಎಂಕೆ ಹಿನ್ನಡೆ ಅನುಭವಿಸಿದೆ.

‘2014ರಲ್ಲಿ ಏಕಾಂಗಿಯಾಗಿ ಚುನಾವಣೆ ಎದುರಿಸಿದ್ದ ಪಕ್ಷವು ರಾಜ್ಯದ 39 ಕ್ಷೇತ್ರಗಳ ಪೈಕಿ 37 ಸ್ಥಾನಗಳನ್ನು ಗೆದ್ದಿತ್ತು. ಅಂಥದ್ದೇ ಫಲಿತಾಂಶ ಈ ಬಾರಿಯೂ ಪುನರಾವರ್ತನೆಯಾಗಲಿದೆ’ ಎಂದು ಎಐಎಡಿಎಂಕೆ ಪ್ರಧಾನ ಕಾರ್ಯದರ್ಶಿ ಎಡಪ್ಪಾಡಿ ಕೆ. ಪಳನಿಸ್ವಾಮಿ ಹೇಳಿದ್ದಾರೆ.

‘ಇದು ಸಹಜ ಮೈತ್ರಿ’ ಎಂದಿರುವ ಡಿಎಂಡಿಕೆಯ ಪ್ರೇಮಲತಾ ವಿಜಯಕಾಂತ್, ‘2026ರ ವಿಧಾನಸಭಾ ಚುನಾವಣೆವರೆಗೂ ಮೈತ್ರಿ ಮುಂದುವರೆಯಲಿದೆ’ ಎಂದಿದ್ದಾರೆ.

# ಎಲ್‌ಡಿಎಫ್– ಬಿಜೆಪಿ ನಾಯಕರ ವ್ಯಾಪಾರ ಸಂಬಂಧ: ವ್ಯಾಪಕ ಚರ್ಚೆ

ವಿ.ಡಿ. ಸತೀಶನ್

**ತಿರುವನಂತಪುರ (ಪಿಟಿಐ):** ಕೇರಳದ ಆಡಳಿತಾರೂಢ ಎಲ್‌ಡಿಎಫ್ ಸಂಚಾಲಕ ಇ.ಪಿ. ಜಯರಾಜನ್ ಅವರ ಕುಟುಂಬ ಮತ್ತು ಬಿಜೆಪಿ ನಾಯಕ ರಾಜೀವ್ ಚಂದ್ರಶೇಖರ್ ಅವರ ಕಂಪನಿಯ ನಡುವೆ ವ್ಯಾಪಾರ ಪಾಲುದಾರಿಕೆಗೆ ಸಂಬಂಧಿಸಿದ ಆರೋಪಗಳ ಕುರಿತು ಕೇರಳದಲ್ಲಿ ವ್ಯಾಪಕ ಚರ್ಚೆ ನಡೆಯುತ್ತಿದೆ.

ಇವುಗಳ ನಡುವೆಯೇ ಜಯರಾಜನ್ ಅವರ ಪತ್ನಿ, ತಮ್ಮ ಚಿತ್ರಗಳನ್ನು ತಿರುಚಲಾಗಿದೆ ಎಂದು ಆರೋಪಿಸಿ ನೀಡಿದ ದೂರಿನ ಆಧಾರದ ಮೇಲೆ ಸ್ಥಳೀಯ ಕಾಂಗ್ರೆಸ್ ಮುಖಂಡರೊಬ್ಬರ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಇದರ ಬೆನ್ನಲ್ಲೇ ವಿಧಾನಸಭೆಯ ವಿರೋಧ ಪಕ್ಷದ ನಾಯಕ ವಿ.ಡಿ. ಸತೀಶನ್ ಅವರು ಎಲ್‌ಡಿಎಫ್ ಸಂಚಾಲಕರ ವಿರುದ್ಧ ಮಾಡಿರುವ ಆರೋಪಗಳು ಬೆಂಕಿಗೆ ತುಪ್ಪ ಸುರಿದಂತಾಗಿದೆ.

‘ಸತೀಶನ್ ಅವರು ನನ್ನ ಪತ್ನಿಯ ಫೋಟೊಗಳನ್ನು ತಿರುಚಿ ಕೊಳಕು ರಾಜಕೀಯ ಮಾಡುತ್ತಿದ್ದಾರೆ’ ಎಂಬ ಗಂಭೀರ ಆರೋಪವನ್ನು ಜಯರಾಜನ್ ಬುಧವಾರ ಮಾಡಿದ್ದಾರೆ. ಆದರೆ, ಸತೀಶನ್ ಇದನ್ನು ಅಲ್ಲಗಳೆದಿದ್ದಾರೆ.

‘ಜಯರಾಜನ್ ಕುಟುಂಬ ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್ ಅವರೊಂದಿಗೆ ವ್ಯಾಪಾರ ಸಂಬಂಧ ಹೊಂದಿದೆ ಎಂದು ನಾನು ಹೇಳಿದ್ದೆ. ಅದನ್ನು ಆರಂಭದಲ್ಲಿ ನಿರಾಕರಿಸಿದ್ದ ಅವರು, ಈಗ ತಮ್ಮ ಪತ್ನಿ, ಚಂದ್ರಶೇಖರ್ ಕಂಪನಿಗೆ ಸಂಬಂಧಿಸಿದ ರೆಸಾರ್ಟ್‌ನಲ್ಲಿ ಷೇರುಗಳನ್ನು ಹೊಂದಿದ್ದಾರೆ ಎಂದು ಒಪ್ಪಿಕೊಂಡಿದ್ದಾರೆ. ಹಾಗಾಗಿ ನಾನು ನನ್ನ ವಿಶ್ವಾಸಾರ್ಹತೆಯನ್ನು ಸಾಬೀತುಪಡಿಸಿದ್ದೇನೆ’ ಎಂದು ಸತೀಶನ್ ಹೇಳಿದ್ದಾರೆ.

ಸಿಪಿಐ ತನ್ನ ಪಕ್ಷದ ಹಿರಿಯ ಸದಸ್ಯರೊಬ್ಬರು ಬಿಜೆಪಿ ನಾಯಕರ ಜತೆಗೆ ವ್ಯಾಪಾರ ಸಂಬಂಧ ಹೊಂದಿದ್ದರಲ್ಲಿ ಏನಾದರೂ ತಪ್ಪಿದೆಯೇ ಎಂಬುದನ್ನು ಹೇಳಬೇಕು. ಮತ್ತೊಂದೆಡೆ ಸಿಪಿಐ–ಬಿಜೆಪಿ ನಾಯಕರ ನಡುವಿನ ವ್ಯಾಪಾರ ಸಂಬಂಧವನ್ನು ಹೇಗೆ ಅರ್ಥೈಸಬಹುದು ಎಂಬುದನ್ನು ಚಂದ್ರಶೇಖರ್ ಅವರೂ ಹೇಳಬೇಕು ಎಂದು ಅವರು ಪ್ರಶ್ನಿಸಿದ್ದಾರೆ.

ಚಂದ್ರಶೇಖರ್ ಅವರ ಕಂಪನಿ ಬಿಡುಗಡೆ ಮಾಡಿರುವ ಫೋಟೊಗಳು ತಮ್ಮ ಬಳಿಯಿದ್ದು, ಜಯರಾಜನ್ ಅವರ ಕುಟುಂಬದ ಸದಸ್ಯರು ಬಿಜೆಪಿ ನಾಯಕರ ಸಂಸ್ಥೆಯ ಆಡಳಿತದಲ್ಲಿ ಭಾಗಿಯಾಗಿರುವುದನ್ನು ತೋರಿಸುತ್ತದೆ ಎಂದು ಅವರು ಹೇಳಿದ್ದಾರೆ.

ತಿರುವನಂತಪುರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಚಂದ್ರಶೇಖರ್ ಅವರನ್ನು ಭೇಟಿಯಾದ ತನ್ನ ಪತ್ನಿ ಇಂದಿರಾ ಅವರ ಚಿತ್ರಗಳನ್ನು ತಿರುಚಿರುವುದರ ಹಿಂದೆ ಸತೀಶನ್ ಅವರ ಕೈವಾಡವಿದೆ ಎಂದು ಜಯರಾಜನ್ ಆರೋಪಿಸಿದ್ದಾರೆ. ಆದರೆ ಇದನ್ನು ಸತೀಶನ್ ನಿರಾಕರಿಸಿದ್ದಾರೆ.

ವಿರೋಧ ಪಕ್ಷದ ನಾಯಕರು ಈ ಹಿಂದೆಯೂ ಜಯರಾಜನ್ ಮತ್ತು ಚಂದ್ರಶೇಖರ್ ಅವರ ನಡುವೆ ವ್ಯಾಪಾರ ಸಂಬಂಧ ಇರುವುದಾಗಿ ಆರೋಪಿಸಿದ್ದರು. ಆಗ ಅವರಿಬ್ಬರೂ ಈ ಆರೋಪವನ್ನು ಅಲ್ಲಗಳೆದಿದ್ದರು.

# ‘ಕೈ’ ಹಿಡಿದ ಡ್ಯಾನಿಶ್ ಅಲಿ

**ನವದೆಹಲಿ (ಪಿಟಿಐ):** ಬಹುಜನ ಸಮಾಜವಾದಿ ಪಕ್ಷದಿಂದ (ಬಿಎಸ್‌ಪಿ) ಅಮಾನತುಗೊಂಡಿರುವ ಸಂಸದ ಡ್ಯಾನಿಶ್ ಅಲಿ ಅವರು ಬುಧವಾರ ಕಾಂಗ್ರೆಸ್ ಸೇರ್ಪಡೆಯಾದರು.

ಉತ್ತರ ಪ್ರದೇಶದ ಕಾಂಗ್ರೆಸ್ ಉಸ್ತುವಾರಿ ಅವಿನಾಶ್ ಪಾಂಡೆಯವರು ಡ್ಯಾನಿಶ್ ಅಲಿ ಅವರನ್ನು ಪಕ್ಷಕ್ಕೆ ಸ್ವಾಗತಿಸಿದರು. ಪವನ್ ಖೇರಾ ಮತ್ತಿತರ ಹಿರಿಯ ನಾಯಕರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಸಂಸದ ಡ್ಯಾನಿಶ್ ಅಲಿ ಕಾಂಗ್ರೆಸ್ ಮುಖಂಡ ಪವನ್ ಖೇರಾ ಸಮ್ಮುಖದಲ್ಲಿ ಬುಧವಾರ ನವದೆಹಲಿಯಲ್ಲಿ ಕಾಂಗ್ರೆಸ್‌ಗೆ ಸೇರ್ಪಡೆಯಾದರು –ಪಿಟಿಐ ಚಿತ್ರ

ಈ ಹಿಂದೆ ಜನತಾ ದಳ (ಜಾತ್ಯತೀತ) ಪಕ್ಷದಲ್ಲಿದ್ದು, ರಾಜ್ಯಸಭಾ ಸದಸ್ಯರೂ ಆಗಿದ್ದ ಡ್ಯಾನಿಶ್ ಅಲಿ, ನಂತರ ಬಿಎಸ್‌ಪಿ ಸೇರಿದ್ದರು.

ಕಾಂಗ್ರೆಸ್ ಸೇರಿದ ನಂತರ ಮಾತನಾಡಿದ ಅವರು, ‘ಪ್ರಸ್ತುತ ಸನ್ನಿವೇಶದಲ್ಲಿ ವಿಭಜಕ ಶಕ್ತಿಗಳ ವಿರುದ್ಧ ಹೋರಾಡಲು ದೇಶದ ಅತ್ಯಂತ ಹಳೆಯ ಪಕ್ಷವನ್ನು ಸೇರುವುದು ಮುಖ್ಯವಾಗಿದೆ’ ಎಂದು ಹೇಳಿದರು. ಸದ್ಯ ಉತ್ತರ ಪ್ರದೇಶದ ಅಮ್ರೋಹ್ ಲೋಕಸಭಾ ಕ್ಷೇತ್ರದ ಸಂಸದರಾಗಿರುವ ಅಲಿ ಅವರನ್ನು ಪಕ್ಷ ವಿರೋಧಿ ಚಟುವಟಿಕೆಗಳ ಕಾರಣಕ್ಕೆ ಬಿಎಸ್‌ಪಿಯಿಂದ ಅಮಾನತುಗೊಳಿಸಲಾಗಿತ್ತು. ಅಲಿ ಅಮ್ರೋಹ್ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸುವ ಸಾಧ್ಯತೆಗಳು ಹೆಚ್ಚಾಗಿವೆ.

# ಹೆಲಿಕಾಪ್ಟರ್‌ಗಳಿಗೆ ಭಾರಿ ಬೇಡಿಕೆ

ಪ್ರಜಾವಾಣಿ ವಾರ್ತೆ

**ಮುಂಬೈ:** ಲೋಕಸಭಾ ಚುನಾವಣೆಯ ಕಾರಣದಿಂದ ರಾಜಕೀಯ ಪಕ್ಷಗಳಲ್ಲಿ ಬಿರುಸಿನ ಚಟುವಟಿಕೆಗಳು ಕಂಡುಬರುತ್ತಿದ್ದರೆ, ಮತ್ತೊಂದೆಡೆ ಪ್ರಚಾರ ಕಾರ್ಯಕ್ಕಾಗಿ ಹೆಲಿಕಾಪ್ಟರ್‌ಗಳಿಗೆ ಬೇಡಿಕೆ ಹೆಚ್ಚುತ್ತಿದೆ.

ಅದರಲ್ಲೂ, ಎರಡು ಎಂಜಿನ್‌ಗಳ ಹೆಲಿಕಾಪ್ಟರ್‌ಗಳಿಗೆ ಹೆಚ್ಚು ಬೇಡಿಕೆ ಇದ್ದರೆ, ಪ್ರತಿ ಗಂಟೆಗೆ ಪಡೆಯುವ ಬಾಡಿಗೆ ಮೊತ್ತದಲ್ಲಿಯೂ ಗಮನಾರ್ಹ ಹೆಚ್ಚಳ ಕಂಡುಬಂದಿದೆ.

ರೋಟರಿ ವಿಂಗ್ ವಿಮಾನಗಳಿಗೆ ದಿಢೀರ್ ಬೇಡಿಕೆ ಕಂಡುಬಂದಿದೆ. ಸುಲಭವಾಗಿ ಲಭ್ಯವಾಗುವ ಜೊತೆಗೆ, ದೂರದ ಪ್ರದೇಶಗಳನ್ನು ತಲುಪಲು ಹೆಚ್ಚು ಅನುಕೂಲ ಎಂಬ ಕಾರಣಕ್ಕೆ ಇವುಗಳಿಗೆ ಬೇಡಿಕೆ ಹೆಚ್ಚು.

ದೇಶದಲ್ಲಿ, ನಾಗರಿಕ ಯಾನ ಉದ್ದೇಶಕ್ಕಾಗಿ ಹೆಲಿಕಾಪ್ಟರ್ ಸೇವೆ ಒದಗಿಸಲು ನೋಂದಣಿಯಾಗಿರುವ ಸಂಸ್ಥೆಗಳ ಸಂಖ್ಯೆ 250. ಇವುಗಳ ಪೈಕಿ, ಪೂರ್ವ ನಿಗದಿತವಲ್ಲದ ಹೆಲಿಕಾಪ್ಟರ್ ಸೇವೆ ಒದಗಿಸುವ ಸಂಸ್ಥೆಗಳ (ಎನ್‌ಎಸ್‌ಒಪಿ) ಸಂಖ್ಯೆ 181. ಸರ್ಕಾರಿ/ಸಾರ್ವಜನಿಕ ವಲಯದ ಕಂಪನಿಗಳು 26 ಇದ್ದರೆ, ಉಳಿದವು ಖಾಸಗಿ ಕಂಪನಿಗಳಾಗಿವೆ.

‘ಪ್ರಸಕ್ತ ಚುನಾವಣೆ ಸಂದರ್ಭದಲ್ಲಿ 70ರಿಂದ 100 ಹೆಲಿಕಾಪ್ಟರ್‌ಗಳು ಲಭ್ಯವಾಗಬಹುದು’ ಎಂದು ವಿಮಾನಯಾನ ಕ್ಷೇತ್ರದ ಮೂಲಗಳು ‘ಪ್ರಜಾವಾಣಿ’ಗೆ ತಿಳಿಸಿವೆ.

‘ರಾಜಕೀಯ ಪಕ್ಷಗಳು ತಮ್ಮ ಉನ್ನತ ನಾಯಕರು, ತಾರಾ ಪ್ರಚಾರಕರನ್ನು ಕರೆದೊಯ್ಯುವುದಕ್ಕಾಗಿ ಹೆಲಿಕಾಪ್ಟರ್‌ಗಳನ್ನು ಬಾಡಿಗೆಗೆ ಪಡೆಯುತ್ತವೆ. ಸಿಂಗಲ್ ಇಲ್ಲವೇ ಡಬಲ್ ಎಂಜಿನ್ ಚಾಲಿತ ಹೆಲಿಕಾಪ್ಟರ್‌ಗಳು, ಮೂರು, ಆರು ಅಥವಾ ಎಂಟರಿಂದ ಹಿಡಿದು 11 ಆಸನಗಳ ಸಾಮರ್ಥ್ಯದ ಹೆಲಿಕಾಪ್ಟರ್‌ಗಳನ್ನು ಬಾಡಿಗೆಗೆ ಪಡೆಯಲಾಗುತ್ತದೆ’ ಎಂದು ಇವೇ ಮೂಲಗಳು ಹೇಳಿವೆ.

ಸದ್ಯ ಲಭ್ಯವಿರುವ ಮಾಹಿತಿ ಪ್ರಕಾರ, ಹೆಲಿಕಾಪ್ಟರ್‌ಗಳ ಮಾದರಿ, ಅದನ್ನು ತಯಾರಿಸಿದ ಕಂಪನಿ ಆಧಾರದ ಮೇಲೆ ಪ್ರತಿ ಗಂಟೆಗೆ ₹3 ಲಕ್ಷದಿಂದ ₹5 ಲಕ್ಷ ಬಾಡಿಗೆ ವಿಧಿಸಲಾಗುತ್ತಿದೆ ಎಂದೂ ಮೂಲಗಳು ಹೇಳಿವೆ.

‘ಭಾರತದ ಚುನಾವಣೆಗಳಲ್ಲಿ ನಡೆಯುವ ಪ್ರಚಾರ ಕಾರ್ಯದ ವೈಖರಿ ಯಾವುದೇ ಬಾಲಿವುಡ್ ಚಿತ್ರಕ್ಕಿಂತಲೂ ಕಡಿಮೆಯೇನಿಲ್ಲ. ಮತ ಯಾಚನೆಯು ಬಹಳ ನಾಟಕೀಯತೆ, ಭಾವನಾತ್ಮಕತೆಗಳಿಂದ ಕೂಡಿರುತ್ತದೆ’ ಎಂದು ಮುಂಬೈ ಮೂಲದ, ಹಿರಿಯ ರಾಜಕೀಯ ವಿಶ್ಲೇಷಕ ಬಿ.ಎನ್.ಕುಮಾರ್ ಹೇಳುತ್ತಾರೆ.

# ಪಿಲಿಭಿತ್‌ನಿಂದ ವರುಣ್ ಗಾಂಧಿ ಸ್ಪರ್ಧೆ ಸಾಧ್ಯತೆ

**ಪಿಲಿಭಿತ್ (ಪಿಟಿಐ):** ಬಿಜೆಪಿ ಸಂಸದ ವರುಣ್ ಗಾಂಧಿ ಅವರ ಬೆಂಬಲಿಗರು ಬುಧವಾರ ಲೋಕಸಭೆ ಚುನಾವಣೆಯ ನಾಲ್ಕು ನಾಮಪತ್ರಗಳನ್ನು ಪಡೆದಿದ್ದಾರೆ.

ವರುಣ್ ಅವರು ಪಿಲಿಭಿತ್‌ನಿಂದಲೇ ಮತ್ತೆ ಸ್ಪರ್ಧಿಸುವ ಸಾಧ್ಯತೆ ಹೆಚ್ಚಿದೆ.

‘ವರುಣ್ ಗಾಂಧಿ ಅವರ ಸೂಚನೆ ಮೇರೆಗೆ ಎರಡು ಹಿಂದಿ ಮತ್ತು ಎರಡು ಇಂಗ್ಲಿಷ್ ಸೇರಿ ಒಟ್ಟು ನಾಲ್ಕು ನಾಮಪತ್ರಗಳನ್ನು ಪಡೆಯಲಾಗಿದೆ. ಇದರಿಂದ ವರುಣ್ ಕ್ಷೇತ್ರ ಬದಲಿಸಲಿದ್ದಾರೆ ಎಂಬ ಊಹಾಪೋಹಗಳಿಗೆ ತೆರೆಬಿದ್ದಿದೆ. ವರುಣ್ ಗಾಂಧಿ ಅವರು ಪಿಲಿಭಿತ್‌ನ ಬಿಜೆಪಿ ಅಭ್ಯರ್ಥಿಯಾಗಿರಲಿದ್ದಾರೆ’ ಎಂದು ವರುಣ್ ಪರ ವಕ್ತಾರ ಎಂ.ಆರ್. ಮಲ್ಲಿಕ್ ಅವರು ತಿಳಿಸಿದ್ದಾರೆ.

ಏಪ್ರಿಲ್ 19ರಂದು ಪಿಲಿಭಿತ್ ಕ್ಷೇತ್ರಕ್ಕೆ ಚುನಾವಣೆ ನಡೆಯಲಿದ್ದು, ಬಿಜೆಪಿ ಈವರೆಗೆ ಅಭ್ಯರ್ಥಿಯನ್ನು ಘೋಷಣೆ ಮಾಡಿಲ್ಲ. ಕಳೆದ ಕೆಲ ವರ್ಷಗಳಿಂದ ಸ್ವಪಕ್ಷದ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸುತ್ತಿದ್ದ ವರುಣ್ ಗಾಂಧಿ, ಇತ್ತೀಚೆಗೆ ಬಿಜೆಪಿ ನಾಯಕರೊಂದಿಗೆ ವೇದಿಕೆ ಹಂಚಿಕೊಂಡು ಪ್ರಧಾನಿ ನರೇಂದ್ರ ಮೋದಿ ಅವರನ್ನು ಹೊಗಳಿದ್ದರು.

ಪಿಲಿಭಿತ್ ಕ್ಷೇತ್ರಕ್ಕೆ ಬಿಜೆಪಿ ಅಭ್ಯರ್ಥಿಯನ್ನು ಇನ್ನೂ ಘೋಷಿಸಿಲ್ಲ.

### ಕೇರಳ: ಕಾಂಗ್ರೆಸ್ ಮುಖಂಡ ಬಿಜೆಪಿಗೆ

**ತಿರುವನಂತಪುರ (ಪಿಟಿಐ):** ಕೇರಳದ ಕಾಂಗ್ರೆಸ್ ಮುಖಂಡ ಮಹೇಶ್ವರನ್ ನಾಯರ್ ಅವರು ಬಿಜೆಪಿಗೆ ಬುಧವಾರ ಸೇರ್ಪಡೆಗೊಂಡರು.

ತಿರುವನಂತಪುರ ಮಹಾನಗರ ಪಾಲಿಕೆಯ ವಿರೋಧ ಪಕ್ಷದ ನಾಯಕರಾಗಿ ಕಾರ್ಯನಿರ್ವಹಿಸಿದ್ದ ಮಹೇಶ್ವರನ್ ಅವರು ಮಾಜಿ ಮುಖ್ಯಮಂತ್ರಿ ಕೆ. ಕರುಣಾಕರನ್ ಅವರಿಗೆ ನಿಷ್ಠರಾಗಿದ್ದರು.

**ಬಿಜೆಪಿ ಸೇರಿದ ತಮಿಳ್‌ಇಸೈ–(ಚೆನ್ನೈ ವರದಿ):** ತೆಲಂಗಾಣ ರಾಜ್ಯಪಾಲರ ಹುದ್ದೆಗೆ ರಾಜೀನಾಮೆ ನೀಡಿದ್ದ ತಮಿಳ್‌ಇಸೈ ಸೌಂದರರಾಜನ್ ಮರಳಿ ಬಿಜೆಪಿ ಸೇರ್ಪಡೆಗೊಂಡಿದ್ದಾರೆ.

ತಮಿಳುನಾಡು ಬಿಜೆಪಿ ಅಧ್ಯಕ್ಷ ಕೆ. ಅಣ್ಣಾಮಲೈ ಅವರ ಸಮ್ಮುಖದಲ್ಲಿ ತಮಿಳ್‌ಇಸೈ ಬುಧವಾರ ಬಿಜೆಪಿ ಸೇರಿದರು.

ರಾಹುಲ್ ನಡೆಸಿದ ಸಂವಾದಗಳ ಮೂಲಕ ಕಾಂಗ್ರೆಸ್ ನಿಲುವು ತಿಳಿಸುವ ಯತ್ನ

# ವೃತ್ತಿಪರರಿಂದ ಮನೆಮನೆಗೆ ತೆರಳಿ ಪ್ರಚಾರ

ಪ್ರಜಾವಾಣಿ ವಾರ್ತೆ

**ಮುಖ್ಯಾಂಶಗಳು**

- ನಗರದ ಪ್ರದೇಶದಲ್ಲಿನ ಮತದಾರರನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಪ್ರಚಾರ
- ಎರಡು ಬಗೆಯ ಕಾರ್ಯತಂತ್ರ ಸಿದ್ಧಪಡಿಸಿರುವ ಎಐಪಿಸಿ
- ರಾಜ್ಯ ಘಟಕಗಳ ವಿಸರ್ಜಿಸಿದ ಎಐಪಿಸಿ

**ನವದೆಹಲಿ:** ಮುಂಬರುವ ಲೋಕಸಭಾ ಚುನಾವಣೆ ಸಂದರ್ಭದಲ್ಲಿ, ಕಾಂಗ್ರೆಸ್‌ನ ವೃತ್ತಿಪರರ ಘಟಕವು ಆಯ್ದ ನಗರಗಳಲ್ಲಿರುವ ಕ್ಷೇತ್ರಗಳಲ್ಲಿ ಮನೆ ಮನೆಗೆ ತೆರಳಿ ಪಕ್ಷದ ಪರ ಪ್ರಚಾರ ನಡೆಸಲು ನಿರ್ಧರಿಸಿದೆ.

ಕೆಲ ನಿರ್ದಿಷ್ಟ ವಲಯಕ್ಕೆ ಸಂಬಂಧಪಟ್ಟಂತೆ ಕಾಂಗ್ರೆಸ್‌ನ ರಾಜಕೀಯ ವಿರೋಧಿಗಳು ರೂಪಿಸಿರುವ ಕಾರ್ಯಸೂಚಿಗೆ ತಿರುಗೇಟು ನೀಡಲು ಅಖಿಲ ಭಾರತ ವೃತ್ತಿಪರರ ಕಾಂಗ್ರೆಸ್ (ಎಐಪಿಸಿ) ನಿರ್ಧರಿಸಿದೆ.

ನಗರದ ಪ್ರದೇಶದಲ್ಲಿನ ಮತದಾರರನ್ನು ದೃಷ್ಟಿಯಲ್ಲಿಟ್ಟುಕೊಂಡು ಪ್ರಚಾರ ಕಾರ್ಯ ನಡೆಸುವುದಕ್ಕೆ ಸಂಬಂಧಿಸಿ, ಎರಡು ಬಗೆಯ ಕಾರ್ಯತಂತ್ರಗಳನ್ನು ಎಐಪಿಸಿ ಸಿದ್ಧಪಡಿಸಿದೆ.

ಮೊದಲನೇ ಕಾರ್ಯತಂತ್ರದ ಭಾಗವಾಗಿ, ಎಐಪಿಸಿ ತನ್ನ ರಾಜ್ಯ ಘಟಕಗಳನ್ನು ವಿಸರ್ಜಿಸಿದೆ. ಇದರ ಬದಲಾಗಿ, ಆಯಾ ವಿಷಯಕ್ಕೆ ಸಂಬಂಧಿಸಿದ ಘಟಕಗಳನ್ನು ರಚಿಸಿದೆ. ನಿರ್ದಿಷ್ಟ ವಿಷಯ ಕುರಿತು ಪಕ್ಷ ತಳೆದ ನಿಲುವನ್ನು ಜನರಿಗೆ ತಿಳಿಸಲು ಇದರಿಂದ ಅನುಕೂಲವಾಗಲಿದೆ.

ಎರಡನೇ ಕಾರ್ಯತಂತ್ರದಡಿ, ಪ್ರಚಾರ ಕಾರ್ಯದಲ್ಲಿ ಕಂಡುಬಂದ ವಿದ್ಯಮಾನಗಳ ಕುರಿತಂತೆ ಪಕ್ಷದ ಕೇಂದ್ರೀಯ ವಾರ್‌ರೂಮ್‌ನೊಂದಿಗೆ ಸಮನ್ವಯ ಸಾಧಿಸುವುದು ಹಾಗೂ ಕೇಂದ್ರವು ವಹಿಸುವ ನಿರ್ದಿಷ್ಟ ಕಾರ್ಯವನ್ನು ಕಾರ್ಯಗತಗೊಳಿಸುವುದಾಗಿದೆ ಎಂದು ಎಐಪಿಸಿ ಅಧ್ಯಕ್ಷ ಪ್ರವೀಣ್ ಚಕ್ರವರ್ತಿ ಅವರು ಹೇಳಿದ್ದಾರೆ.

‘ಸಂಘಟನೆಯ (ಎಐಪಿಸಿ) ಕಾರ್ಯವೈಖರಿಯಲ್ಲಿ ಕಳೆದ ನಾಲ್ಕು ತಿಂಗಳ ಅವಧಿಯಲ್ಲಿ ಈ ಬದಲಾವಣೆಗಳನ್ನು ಮಾಡಲಾಗಿದೆ. ಪ್ರಮುಖವಾಗಿ, ಚಾರ್ಟರ್ಡ್ ಅಕೌಂಟೆಂಟ್ಸ್ (ಸಿಎ), ಐಟಿ ವೃತ್ತಿಪರರು, ಶಿಕ್ಷಣ ತಜ್ಞರು, ಗಣಿ ಕಾರ್ಮಿಕರು ಸೇರಿದಂತೆ ವಿವಿಧ ಕ್ಷೇತ್ರಗಳ ವೃತ್ತಿಪರರೊಂದಿಗೆ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ನಡೆಸಿದ ಸಂವಾದಗಳ ಮೂಲಕ ಪಕ್ಷದ ಸಿದ್ಧಾಂತ–ನಿಲುವುಗಳನ್ನು ಜನರಿಗೆ ತಿಳಿಸಲಾಗುತ್ತಿದೆ’ ಎಂದು ಅವರು ಹೇಳಿದ್ದಾರೆ.

‘ನೋಟು ರದ್ದತಿ, ಜಿಎಸ್‌ಟಿ ಕುರಿತು ಕಾಂಗ್ರೆಸ್ ನಿಲುವನ್ನು ದೇಶದ ಚಾರ್ಟರ್ಡ್ ಅಕೌಂಟೆಂಟ್‌ಗಳಿಗೆ ತಿಳಿಸಬೇಕಿತ್ತು. ಇದಕ್ಕಾಗಿ, ಭಾರತ ಜೋಡೊ ನ್ಯಾಯ ಯಾತ್ರೆ ವೇಳೆ, ರಾಹುಲ್ ಗಾಂಧಿ ಅವರು ಸಿಎಗಳ ಜೊತೆ ನಡೆಸಿದ ಸಂವಾದದ ವಿಡಿಯೊಗಳನ್ನು ಸುಮಾರು 6 ಲಕ್ಷ ಚಾರ್ಟರ್ಡ್ ಅಕೌಂಟೆಂಟ್‌ಗಳೊಂದಿಗೆ ಹಂಚಿಕೊಳ್ಳಲಾಗಿದೆ’ ಎಂದು ಅವರು ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.

‘ಐಟಿ ವೃತ್ತಿಪರರೊಂದಿಗೆ ರಾಹುಲ್ ಗಾಂಧಿ ನಡೆಸಿದ ಸಂವಾದದ ವಿಡಿಯೊಗಳನ್ನು ಒಂದು ಕೋಟಿ ವೃತ್ತಿಪರರೊಂದಿಗೆ ಹಂಚಿಕೊಳ್ಳಲಾಗಿದೆ. ನಾವು ವಿಭಿನ್ನ ಶೈಲಿಯ ಪ್ರಚಾರ ಕಾರ್ಯ ಕೈಗೊಂಡಿದ್ದೇವೆ. ಪಕ್ಷದ ನಿಲುವು–ಮುನ್ನೋಟಗಳನ್ನು ದೊಡ್ಡದಾದ ರೀತಿಯಲ್ಲಿ ಜನರಿಗೆ ತಲುಪಿಸುವಲ್ಲಿ ಇದು ನೆರವಾಗುತ್ತಿದೆ’ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

# 3 ಕ್ಷೇತ್ರಗಳಿಗಾಗಿ ಎಸ್‌ಪಿ ಅಂಗಪಕ್ಷದಿಂದ ಒತ್ತಡ ತಂತ್ರ

ಪ್ರಜಾವಾಣಿ ವಾರ್ತೆ

**ಲಖನೌ:** ವಿರೋಧ ಪಕ್ಷಗಳ ‘ಇಂಡಿಯಾ’ ಮೈತ್ರಿಕೂಟಕ್ಕೆ ಉತ್ತರ ಪ್ರದೇಶದಲ್ಲಿ ಹೊಸ ಸಮಸ್ಯೆ ಎದುರಾಗಿದೆ.

2022ರ ವಿಧಾನಸಭಾ ಚುನಾವಣೆಯಲ್ಲಿ ಸಮಾಜವಾದಿ ಪಕ್ಷದ (ಎಸ್‌ಪಿ) ಅಂಗಪಕ್ಷವಾಗಿದ್ದ ಅಪ್ನಾ ದಳ (ಕೆ) ಪಕ್ಷವು ಬುಧವಾರ ಮೂರು ಸ್ಥಾನಗಳಿಗಾಗಿ ಬೇಡಿಕೆ ಇಟ್ಟಿದೆ. ತನ್ನ ಬೇಡಿಕೆ ಈಡೇರದಿದ್ದರೆ ಮೈತ್ರಿ ತೊರೆಯುವುದಾಗಿ ಬೆದರಿಕೆ ಹಾಕಿದೆ.

ಜತೆಗೆ, ತಮ್ಮ ಪಕ್ಷವು ಫೂಲ್‌ಪುರ, ಮಿರ್ಜಾಪುರ ಮತ್ತು ಕೌಶಾಂಬಿ ಕ್ಷೇತ್ರಗಳಲ್ಲಿ ಸ್ಪರ್ಧಿಸಲಿದೆ ಎಂದು ಸಹ ಅಪ್ನಾ ದಳ (ಕೆ) ಪಕ್ಷದ ಅಧ್ಯಕ್ಷೆ ಕೃಷ್ಣಾ ಪಟೇಲ್ ಅವರು ಘೋಷಿಸಿದ್ದಾರೆ.

‘ನಾವು ಇಂಡಿಯಾ ಮೈತ್ರಿಕೂಟದ ನಾಯಕರೊಂದಿಗೆ ಮಾತನಾಡುತ್ತೇವೆ. ನಮಗೆ ಈ ಮೂರು ಕ್ಷೇತ್ರಗಳು ಬೇಕು. ಮಾತುಕತೆಯ ಫಲಿತಾಂಶ ಏನೇ ಇದ್ದರೂ ನಾವು ಈ ಮೂರು ಕ್ಷೇತ್ರಗಳಲ್ಲಿ ನಮ್ಮ ಅಭ್ಯರ್ಥಿಗಳನ್ನು ನಿಲ್ಲಿಸುತ್ತೇವೆ’ ಎಂದು ಅಪ್ನಾ ದಳ (ಕೆ) ಅಧ್ಯಕ್ಷೆ ಕೃಷ್ಣಾ ಪಟೇಲ್ ಹೇಳಿದ್ದಾರೆ.

ಕೃಷ್ಣಾ ಪಟೇಲ್ ಅವರು ಅಪ್ನಾ ದಳ ಪಕ್ಷದ ಮತ್ತೊಂದು ಬಣದ ಅಧ್ಯಕ್ಷೆಯಾಗಿರುವ ಕೇಂದ್ರ ಸಚಿವೆ ಅನುಪ್ರಿಯಾ ಪಟೇಲ್ ಅವರ ತಾಯಿಯಾಗಿದ್ದಾರೆ.

ಎಸ್‌ಪಿ ರಾಜ್ಯದ 17 ಸ್ಥಾನಗಳನ್ನು ಕಾಂಗ್ರೆಸ್‌ಗೆ ಬಿಟ್ಟುಕೊಟ್ಟಿದ್ದು, ಉಳಿದ 63 ಕ್ಷೇತ್ರಗಳಲ್ಲಿ ಪಕ್ಷದ ಅಭ್ಯರ್ಥಿಗಳನ್ನು ನಿಲ್ಲಿಸಲು ತೀರ್ಮಾನಿಸಿತ್ತು. ಪ್ರಭಾವಿ ‘ಕುರ್ಮಿ’ ಸಮುದಾಯದ ಪಕ್ಷ ಎಂದೇ ಹೆಸರಾಗಿರುವ ಅಪ್ನಾ ದಳ (ಕೆ), ಪೂರ್ವ ಉತ್ತರ ಪ್ರದೇಶದ ಕೆಲವು ಜಿಲ್ಲೆಗಳಲ್ಲಿ ಪ್ರಭಾವ ಹೊಂದಿದೆ. ಕೃಷ್ಣಾ ಪಟೇಲ್ ಅವರ ಬೇಡಿಕೆಯು ಎಸ್‌ಪಿಯನ್ನು ಇಕ್ಕಟ್ಟಿಗೆ ಸಿಲುಕಿಸಿದೆ.

## ಷೇರುಪೇಟೆ ವಹಿವಾಟು

89

ಹಿಂದಿನ ಅಂತ್ಯ 72,012 — ಇಂದಿನ ಅಂತ್ಯ 72,101 (73,000 / 72,500 / 72,000 / 71,500; 10:00 12:00 14:00 16:00)

## ಎನ್‌ಎಸ್‌ಇ ನಿಫ್ಟಿ

| | |
|---|---|
| ಹಿಂದಿನ ಅಂತ್ಯ | 21,817 |
| ಇಂದಿನ ಅಂತ್ಯ | 21,839 |
| ▲ | 21 |
| ದಿನದ ಗರಿಷ್ಠ | 21,930 |

## ವಿನಿಮಯ ದರ

| | |
|---|---|
| $ ಡಾಲರ್ | 83.19 |
| £ ಪೌಂಡ್ | 105.55 |
| € ಯುರೊ | 90.14 |
| ¥ ಯೆನ್ (100ಕ್ಕೆ) | 55 |

## ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

| | |
|---|---|
| ಬೆಂಗಳೂರು | |
| 100ಕ್ಕೆ | ₹470 |
| 12 ಕ್ಕೆ | ₹63 |
| ಮೈಸೂರು | |
| 100ಕ್ಕೆ | ₹472 |

## ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ದಿನದ ದರ)

| | |
|---|---|
| ಶೇಂಗಾ (ರಿಫೈನ್ಡ್) | ₹1500 (1510) |
| ಸೋಯಾ (ರಿಫೈನ್ಡ್) | ₹1005 (1010) |
| ಸೂರ್ಯಕಾಂತಿ (ರಿಫೈನ್ಡ್) | ₹975 (985) |
| ಪಾಮೋಲಿನ್ | ₹962 (958) |

## ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

| | |
|---|---|
| ಪುತ್ತೂರು | ₹5500-8600 |
| ತಿಪಟೂರು | ₹7600-9000 |

## ಎನ್.ಆರ್.ಪುರ ರಬ್ಬರ್

| | |
|---|---|
| ಆರ್‌ಎಸ್‌ಎಸ್-4 | ₹181 |
| ಆರ್‌ಎಸ್‌ಎಸ್-5 | ₹172 |
| ಗುಡ್ ಲಾಟ್ | ₹162 |

(ಪ್ರತಿ ಕೆ.ಜಿಗೆ)

## ರಾಮನಗರ ರೇಷ್ಮೆಗೂಡು

| | |
|---|---|
| ಮಿಶ್ರತಳಿ (ಸಿ.ಬಿ) | ₹266-455 |
| ದ್ವಿತಳಿ (ಬಿ.ವಿ) | ₹285-561 |

## ಮಾರುಕಟ್ಟೆ ಧಾರಣೆ

| | |
|---|---|
| **ಬಂಟ್ವಾಳ (ಅಡಿಕೆ)** | |
| ಕೋಕ | 18000-28500 |
| ಹೊಸತು | 28500-35500 |
| ಹಳತು | 34500-44000 |
| **ಕುಮಟ** | |
| ಬೆಟ್ಟೆ | 36309-40009 |
| ಚಿಪ್ಪು | 25109-26209 |
| ಕೋಕ | 12909-23309 |
| ಹಳೆಚಾಲಿ | 36599-38000 |
| ಹೊಸಚಾಲಿ | 25809-34500 |
| **ಪುತ್ತೂರು** | |
| ಕೋಕ | 11500-26000 |
| ಹೊಸತು | 26500-35000 |
| **ಶಿವಮೊಗ್ಗ** | |
| ಬೆಟ್ಟೆ | 45069-54119 |
| ಗೊರಬಲು | 16000-32600 |
| ರಾಶಿ | 31199-48759 |
| ಸರಕು | 53109-84116 |
| **ಸಿದ್ದಾಪುರ** | |
| ಬಿಳಿಗೋಟು | 25249-29019 |
| ಚಾಲಿ | 34099-36799 |
| ಕೋಕ | 24019-27899 |
| ಹೊಸಚಾಲಿ | 31819-35399 |
| ಕೆಂಪುಗೋಟು | 28800-32369 |

## ಮುದ್ರೆಮನೆ ಕಾಫಿ

(50 ಕೆಜಿಗೆ)

| | |
|---|---|
| ಎಪಿ | ₹13750 |
| ಎಸಿ | ₹8065 |
| ಆರ್‌ಪಿ | ₹14000 |
| ಆರ್‌ಸಿ | ₹8500 |

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

# ಹಸಿರು ಸಮವಸ್ತ್ರ ಹಿಂಪಡೆದ ಜೊಮಾಟೊ

ನವದೆಹಲಿ (ಪಿಟಿಐ): ಶುದ್ಧ ಸಸ್ಯಾಹಾರ ವಿತರಣೆ ಮಾಡುವವರು ಹಸಿರು ಸಮವಸ್ತ್ರ ಧರಿಸಿ, ಹಸಿರು ಬಾಕ್ಸ್‌ಗಳಲ್ಲಿಯೇ ಆಹಾರ ಪೂರೈಸಬೇಕು ಎಂದು ಹೊರಡಿಸಿದ್ದ ಆದೇಶವನ್ನು ಜೊಮಾಟೊ ಕಂಪನಿಯು ಬುಧವಾರ ಹಿಂಪಡೆದಿದೆ.

ಕಂಪನಿಯು ಮಂಗಳವಾರ ಸಸ್ಯಾಹಾರಿಗಳಿಗೆ 'ಪ್ಯೂರ್ ವೆಜ್ ಮೋಡ್' ಸೇವೆಗೆ ಚಾಲನೆ ನೀಡಿತ್ತು. ಇದಕ್ಕಾಗಿ 'ಪ್ಯೂರ್ ವೆಜ್ ಫ್ಲೀಟ್'ನಡಿ ಸಸ್ಯಾಹಾರ ವಿತರಣೆಗೆ ಪ್ರತ್ಯೇಕ ತಂಡ ರಚಿಸಿತ್ತು. ಸಾಮಾನ್ಯವಾಗಿ ಜೊಮಾಟೊ ಡೆಲಿವರಿ ಬಾಯ್ ಕೆಂಪು ಸಮವಸ್ತ್ರ ಧರಿಸುತ್ತಾರೆ.

ಆದರೆ, ಈ ಫ್ಲೀಟ್‌ನ ತಂಡದ ಸದಸ್ಯರ ಸಮವಸ್ತ್ರವು ಹಸಿರು ಬಣ್ಣದ್ದಾಗಿದ್ದು, ಶುದ್ಧ ಸಸ್ಯಾಹಾರವನ್ನಷ್ಟೇ ವಿತರಣೆ ಮಾಡಲಿದ್ದಾರೆ ಎಂದು ಕಂಪನಿಯ ಸಿಇಒ ದೀಪಿಂದರ್ ಗೋಯಲ್ ಹೇಳಿದ್ದರು.

ಜೊಮಾಟೊ ಆರಂಭಿಸಿದ ಈ ಸೇವೆಗೆ ಸಾಮಾಜಿಕ ಜಾಲತಾಣಗಳಲ್ಲಿ ತೀವ್ರ ಟೀಕೆ ವ್ಯಕ್ತವಾಗಿತ್ತು. ಕೆಲವು ಸೊಸೈಟಿಗಳು ಹಾಗೂ ಗೃಹ ಕ್ಷೇಮಾಭಿವೃದ್ಧಿ ಸಂಘಗಳು ಆಕ್ಷೇಪ ವ್ಯಕ್ತಪಡಿಸಿದ್ದವು. ಅಲ್ಲದೆ, ಕೆಲವು ಸಂಘಗಳು ಜೊಮಾಟೊದ ಸೇವೆಯನ್ನು ತಿರಸ್ಕರಿಸುವ ಸಾಧ್ಯತೆಯಿದೆ ಎಂದು ಹೇಳಲಾಗಿತ್ತು. ಹಾಗಾಗಿ, ಹಸಿರು ಸಮವಸ್ತ್ರ ಧರಿಸುವಂತೆ ನೀಡಿದ್ದ ಸೂಚನೆಯನ್ನು ಕಂಪನಿಯು ವಾಪಸ್ ಪಡೆದಿದೆ.

'ಕಂಪನಿ ಒದಗಿಸುವ ಸೇವೆಯಲ್ಲಿ ಹಸಿರು ಸಮವಸ್ತ್ರ ನೀತಿ ಮೂಲಕ ಸಸ್ಯಾಹಾರ ಮತ್ತು ಮಾಂಸಾಹಾರವನ್ನು ಪ್ರತ್ಯೇಕಿಸುವ ಉದ್ದೇಶ ಹೊಂದಿಲ್ಲ. ಪ್ರಸ್ತುತ ಸಾಮಾನ್ಯ ಫ್ಲೀಟ್ ಹಾಗೂ ಸಸ್ಯಾಹಾರ ವಿತರಣೆ ಮಾಡುವವರು ಇನ್ನು ಮುಂದೆ ಕೆಂಪು ಸಮವಸ್ತ್ರವನ್ನೇ ಧರಿಸಲಿದ್ದಾರೆ' ಎಂದು ಗೋಯಲ್ 'ಎಕ್ಸ್'ನಲ್ಲಿ ಸ್ಪಷ್ಟಪಡಿಸಿದ್ದಾರೆ.

## ದೇಶದಲ್ಲಿ 1.25 ಲಕ್ಷ ಸ್ಟಾರ್ಟ್‌ಅಪ್: ಶೇ 45ರಷ್ಟು ಮಹಿಳೆಯರ ಒಡೆತನ

# ನವೋದ್ಯಮ: ಭಾರತಕ್ಕೆ 3ನೇ ಸ್ಥಾನ

ಪ್ರಜಾವಾಣಿ ವಾರ್ತೆ

ನವದೆಹಲಿಯ ಭಾರತ ಮಂಟಪದಲ್ಲಿ ಬುಧವಾರ ನಡೆದ 'ಸ್ಟಾರ್ಟ್‌ಅಪ್ ಮಹಾಕುಂಭ'ದ ಸಮಾರೋಪದಲ್ಲಿ ಪಾಲ್ಗೊಂಡಿದ್ದ ಪ್ರಧಾನಿ ನರೇಂದ್ರ ಮೋದಿ ಅವರು, ನವೋದ್ಯಮಿಗಳತ್ತ ಕೈಬೀಸಿದರು –ಪಿಟಿಐ ಚಿತ್ರ

**ಮುಖ್ಯಾಂಶಗಳು**
- ಜಾಗತಿಕ ಸವಾಲುಗಳಿಗೆ ಪರಿಹಾರ ಹುಡುಕಲು ಸಲಹೆ
- ದೇಶದಲ್ಲಿರುವ ಯುನಿಕಾರ್ನ್ ಸಂಖ್ಯೆ 110
- ಕೃತಕ ಬುದ್ಧಿಮತ್ತೆ ತಂತ್ರಜ್ಞಾನದ ಸದ್ಬಳಕೆ ಅಗತ್ಯ

ನವದೆಹಲಿ: 'ಜಾಗತಿಕ ಮಟ್ಟದಲ್ಲಿ ಅತಿಹೆಚ್ಚು ನವೋದ್ಯಮ (ಸ್ಟಾರ್ಟ್‌ಅಪ್) ಹೊಂದಿರುವ ದೇಶಗಳ ಪೈಕಿ ಭಾರತವು ಮೂರನೇ ಸ್ಥಾನ ಪಡೆದಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ಇಲ್ಲಿನ ಭಾರತ ಮಂಟಪದಲ್ಲಿ ಬುಧವಾರ ನಡೆದ 'ಸ್ಟಾರ್ಟ್‌ಅಪ್ ಮಹಾಕುಂಭ'ದ ಸಮಾರೋಪದಲ್ಲಿ ಪಾಲ್ಗೊಂಡು ಮಾತನಾಡಿದರು.

'ದೇಶದಲ್ಲಿ 2014ರ ವೇಳೆ ಕೇವಲ 100 ನವೋದ್ಯಮಗಳಿದ್ದವು. ಪ್ರಸ್ತುತ ಅವುಗಳ ಸಂಖ್ಯೆ 1.25 ಲಕ್ಷಕ್ಕೆ ಮುಟ್ಟಿದೆ. ಈ ಪೈಕಿ ಶೇ 45ರಷ್ಟು ನವೋದ್ಯಮಗಳನ್ನು ಮಹಿಳೆಯರು ಮುನ್ನಡೆಸುತ್ತಿದ್ದಾರೆ. 12 ಲಕ್ಷ ಯುವಜನರು ಇವುಗಳಲ್ಲಿ ತೊಡಗಿಸಿಕೊಂಡಿದ್ದಾರೆ' ಎಂದು ವಿವರಿಸಿದರು.

'ಒಂದು ಬಿಲಿಯನ್ ಅಮೆರಿಕನ್ ಡಾಲರ್‌ಗಿಂತ (ಅಂದಾಜು ₹8,300 ಕೋಟಿ) ಹೆಚ್ಚಿನ ಮಾರುಕಟ್ಟೆ ಬಂಡವಾಳ ಹೊಂದಿರುವ 110 ನವೋದ್ಯಮ ಕಂಪನಿಗಳಿವೆ (ಯೂನಿಕಾರ್ನ್). ನವೋದ್ಯಮಗಳು 12 ಸಾವಿರಕ್ಕೂ ಹೆಚ್ಚು ಪೇಟೆಂಟ್‌ಗಳಿಗೆ ಅರ್ಜಿ ಸಲ್ಲಿಸಿವೆ' ಎಂದು ತಿಳಿಸಿದರು.

'ಜಾಗತಿಕ ಮಟ್ಟದಲ್ಲಿ ಕೃತಕ ಬುದ್ಧಿಮತ್ತೆ ತಂತ್ರಜ್ಞಾನವನ್ನು ಮುನ್ನಡೆಸುವ ಶಕ್ತಿ ಭಾರತಕ್ಕಿದೆ. ಹಾಗಾಗಿ, ಜಾಗತಿಕ ಸವಾಲುಗಳಿಗೆ ಪರಿಹಾರ ಹುಡುಕುವತ್ತ ನವೋದ್ಯಮ ಹಾಗೂ ನವೋದ್ಯಮಿಗಳು ಕೆಲಸ ನಿರ್ವಹಿಸಬೇಕು' ಎಂದು ಸಲಹೆ ನೀಡಿದರು.

ಕೇಂದ್ರ ಸರ್ಕಾರವು ಕೃತಕ ಬುದ್ಧಿಮತ್ತೆ, ಸೆಮಿಕಂಡಕ್ಟರ್ ಹಾಗೂ ಕ್ವಾಂಟಮ್ ಕಂಪ್ಯೂಟಿಂಗ್‌ಗೆ ಚಾಲನೆ ನೀಡಿದೆ. ಇದರಿಂದ ಬಂಡವಾಳ ಹೂಡಲು ಜಾಗತಿಕ ಹೂಡಿಕೆದಾರರಿಗೆ ನೆರವಾಗಲಿದೆ. ಜೊತೆಗೆ, ಯುವಜನರಿಗೆ ಉದ್ಯೋಗಾವಕಾಶಗಳು ಸೃಷ್ಟಿಯಾಗಲಿವೆ ಎಂದು ಹೇಳಿದರು.

'ನಾವಿಂದು ಕೃತಕ ಬುದ್ಧಿಮತ್ತೆಯ ಯುಗದಲ್ಲಿದ್ದೇವೆ. ಭಾರತವು ಈ ತಂತ್ರಜ್ಞಾನದ ಮುಂಚೂಣಿ ಸ್ಥಾನಕ್ಕೇರಲಿದೆ ಎಂಬುದು ಇಡೀ ವಿಶ್ವಕ್ಕೆ ತಿಳಿದಿದೆ. ಇಂತಹ ಅವಕಾಶವನ್ನು ಕಳೆದುಕೊಳ್ಳಬಾರದು' ಎಂದು ತಿಳಿಸಿದರು.

**ರಾಹುಲ್ ವಿರುದ್ಧ ಟೀಕೆ:** 'ನವೋದ್ಯಮ ವಿಫಲವಾದರೆ ನೀವು ಅದನ್ನು ಮರುಸ್ಥಾಪಿಸುತ್ತೀರಿ. ಆದರೆ, ರಾಜಕೀಯದಲ್ಲಿ ಕೆಲವರು ಪದೇ ಪದೇ ಮರುಸ್ಥಾಪನೆಯಾಗುತ್ತಿದ್ದಾರೆ. ಆದರೆ, ಪ್ರತಿ ಬಾರಿಯೂ ವೈಫಲ್ಯ ಅನುಭವಿಸುತ್ತಿದ್ದಾರೆ' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ಹೆಸರನ್ನು ಉಲ್ಲೇಖಿಸದೆ ಟೀಕಿಸಿದರು.

4th YEAR ANNIVERSARY
In the ever-lasting memory of Late,
Shri, Sudheer Makki Subramanya
(20-05-1975 - 21-03-2020)
"We remember you each day.
You always live in our hearts.
Your dedication and hard work has become our benchmark to reach higher goals in times to come.
Keep us blessed always".
Deeply remembered by:-
Family, Friends and Employees of
DHRUV COMPUSOFT CONSULTANCY PVT LTD

ಮೊದಲನೇ ವರ್ಷದ ಪುಣ್ಯಸ್ಮರಣೆ

"ಸವೆದಷ್ಟು ಸವೆಯದ ಶ್ರೀಗಂಧದ ಗುಣ"
ಶ್ರೀಮತಿ ಎಮ್.ಸುಭದ್ರ ಬಾಯಿ
(ಜನನ: 02-05-1935 ನಿಧನ: 21-03-2023)
ನೀವು ನಮ್ಮನ್ನಗಲಿ ಒಂದು ವರ್ಷ ಕಳೆದರು ನಿಮ್ಮ ನೆನಪು ನಮ್ಮೆಲ್ಲರ ಮನದಲ್ಲಿ ಸದಾ ಅಮರವಾಗಿದೆ.
ಇಂತಿ ದುಃಖತಪ್ತರು:
ಕೆ.ಮೋಹನ ರಾವ್ ಮತ್ತು ಕುಟುಂಬ ವರ್ಗದವರು ಹಾಗೂ ಬಂಧು ಮಿತ್ರರು

LOOKING FOR JOB OPPORTUNITY — Refer Classifieds on Wednesday

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

# ಪಾಕಿಸ್ತಾನ: ಎಂಟು ಉಗ್ರರ ಹತ್ಯೆ

ಕರಾಚಿ (ಪಿಟಿಐ): 'ಬೃಹತ್ ಪ್ರಮಾಣದ ಶಸ್ತ್ರಾಸ್ತ್ರಗಳನ್ನು ಹೊಂದಿದ್ದ ಭಯೋತ್ಪಾದಕರು ಬುಧವಾರ ಪಾಕಿಸ್ತಾನದ ಗ್ವಾಡದ ಬಂದರು ಪ್ರಾಧಿಕಾರ ಸಂಕೀರ್ಣಕ್ಕೆ ನುಗ್ಗಿ ಗುಂಡಿನ ದಾಳಿ ನಡೆಸಿದ್ದು, ಪಾಕಿಸ್ತಾನ ಸೇನೆ ನಡೆಸಿದ ಪ್ರತಿದಾಳಿಗೆ 8 ಭಯೋತ್ಪಾದಕರು ಸಾವಿಗೀಡಾಗಿದ್ದಾರೆ' ಎಂದು ಮಾಧ್ಯಮವೊಂದು ವರದಿ ಮಾಡಿದೆ.

'ಬೃಹತ್ ಪ್ರಮಾಣದಲ್ಲಿ ಪೊಲೀಸರು ಮತ್ತು ಭದ್ರತಾ ಸಿಬ್ಬಂದಿ ಸ್ಥಳದಲ್ಲಿ ಜಮಾಯಿಸಿದ್ದು, ಗುಂಡಿನ ಚಕಮಕಿ ನಡೆಯಿತು' ಎಂದು ಡಾನ್ ಡಾಟ್ ಕಾಮ್ ವೆಬ್‌ಸೈಟ್ ವರದಿ ಮಾಡಿದೆ. 'ಬಂದರು ಸಂಕೀರ್ಣದ ಮೇಲಿನ ದಾಳಿಯನ್ನು ಭದ್ರತಾ ಸಿಬ್ಬಂದಿ ನಿಯಂತ್ರಿಸಿದ್ದು, ಭಯೋತ್ಪಾದಕರನ್ನು ಹತ್ಯೆ ಮಾಡಿದ್ದಾರೆ' ಎಂದು ಎಕ್ಸ್‌ಪ್ರೆಸ್ ಟ್ರಿಬ್ಯುನ್ ಪತ್ರಿಕೆ ತಿಳಿಸಿದೆ.

# ಬ್ರಿಟನ್: ಚಿಲ್ಲರೆ ಹಣದುಬ್ಬರ ಇಳಿಕೆ

ಲಂಡನ್ (ಎಪಿ): ಬ್ರಿಟನ್‌ನಲ್ಲಿ ಚಿಲ್ಲರೆ ಹಣದುಬ್ಬರವು ಫೆಬ್ರುವರಿಯಲ್ಲಿ ಶೇ 3.4ಕ್ಕೆ ಇಳಿಕೆಯಾಗಿದೆ. ಹಾಗಾಗಿ, ಬ್ಯಾಂಕ್ ಆಫ್ ಇಂಗ್ಲೆಂಡ್ ಮುಂಬರುವ ತಿಂಗಳುಗಳಲ್ಲಿ ಬಡ್ಡಿದರವನ್ನು ಕಡಿತಗೊಳಿಸಬಹುದು ಎಂಬ ನಿರೀಕ್ಷೆಗಳು ಗರಿಗೆದರಿವೆ.

ಗ್ರಾಹಕ ಬೆಲೆ ಸೂಚ್ಯಂಕ ಆಧಾರಿತ ಈ ಹಣದುಬ್ಬರವು ಜನವರಿಯಲ್ಲಿ ಶೇ4ರಷ್ಟು ದಾಖಲಾಗಿತ್ತು. ಹಾಗಾಗಿ, ಫೆಬ್ರುವರಿಯಲ್ಲಿ ಶೇ 3.6ಕ್ಕೆ ತಗ್ಗಲಿದೆ ಎಂದು ಹಣಕಾಸು ತಜ್ಞರು ಅಂದಾಜಿಸಿದ್ದರು. ಅವರ ನಿರೀಕ್ಷೆಯನ್ನೂ ಮೀರಿ ಇಳಿಕೆಯಾಗಿದೆ.

ಆಹಾರ ಪದಾರ್ಥಗಳ ಬೆಲೆ ಕಡಿಮೆಯಾಗಿರುವುದೇ ಹಣದುಬ್ಬರ ಇಳಿಕೆಗೆ ಕಾರಣವಾಗಿದ್ದು, 2021ರ ಸೆಪ್ಟೆಂಬರ್ ತಿಂಗಳ ಕನಿಷ್ಠ ಮಟ್ಟಕ್ಕೆ ತಲುಪಿದೆ ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿಯು ಬುಧವಾರ ತಿಳಿಸಿದೆ.

ಹಣದುಬ್ಬರವನ್ನು ಶೇ 2ರ ಮಿತಿಯಲ್ಲಿ ಕಾಯ್ದುಕೊಳ್ಳಲು ಕೇಂದ್ರೀಯ ಬ್ಯಾಂಕ್ ಪ್ರಯತ್ನಿಸುತ್ತಿದೆ. ಉಕ್ರೇನ್ ಮೇಲೆ ರಷ್ಯಾ ನಡೆಸಿದ ಆಕ್ರಮಣದ ವೇಳೆ ಇಂಧನ ವೆಚ್ಚ ದುಬಾರಿಯಾಗಿತ್ತು. ಹಾಗಾಗಿ, 2022ನೇ ಸಾಲಿನ ಅಂತ್ಯದಲ್ಲಿ ಚಿಲ್ಲರೆ ಹಣದುಬ್ಬರವು ಶೇ 11ಕ್ಕೆ ಏರಿಕೆಯಾಗಿತ್ತು.

ಸದ್ಯ ಬ್ಯಾಂಕ್ ಆಫ್ ಇಂಗ್ಲೆಂಡ್ ಶೇ5.25ರಷ್ಟು ಬಡ್ಡಿದರವನ್ನು ಕಾಯ್ದುಕೊಂಡಿದ್ದು, ಇದು 16 ವರ್ಷಗಳ ಗರಿಷ್ಠ ಮಟ್ಟವಾಗಿದೆ.

ಬ್ರಿಟನ್‌ನಲ್ಲಿ ಮುಂದಿನ ವರ್ಷದ ಜನವರಿಯಲ್ಲಿ ಸಾರ್ವತ್ರಿಕ ಚುನಾವಣೆ ನಡೆಯಲಿದೆ. ಹಾಗಾಗಿ, ಹಣದುಬ್ಬರ ನಿಯಂತ್ರಿಸುವುದು ಪ್ರಧಾನಿ ರಿಷಿ ಸುನಕ್ ನೇತೃತ್ವದ ಆಡಳಿತಾರೂಢ ಕನ್ಸರ್ವೇಟಿವ್ ಪಕ್ಷಕ್ಕೆ ಸವಾಲಾಗಿ ಪರಿಣಮಿಸಿದೆ.

ವಿರೋಧ ಪಕ್ಷವಾದ ಲೇಬರ್ ಪಾರ್ಟಿಯು ಚುನಾವಣೆಯಲ್ಲಿ ಈ ವಿಷಯವನ್ನೇ ಅಸ್ತ್ರವಾಗಿ ಬಳಸಲು ಮುಂದಾಗಿತ್ತು. ಈಗ ಹಣದುಬ್ಬರವು ಇಳಿಕೆಯತ್ತ ಸಾಗಿರುವುದು ಸುನಕ್ ಸರ್ಕಾರಕ್ಕೆ ತುಸು ಸಮಾಧಾನ ತಂದಿದೆ ಎಂದು ರಾಜಕೀಯ ವಿಶ್ಲೇಷಕರು ಹೇಳಿದ್ದಾರೆ.

## ಮುಂಬೈ ಧಾರಣೆ

ಶೇಂಗಾ

20-03-2024

| | |
|---|---|
| ಜಾವಾ 70/80(ಹೊಸ) | 11200-11300 |
| ಜಾವಾ 80/90(ಹೊಸ) | 10800-10900 |
| ದಪ್ಪ ಮಧ್ಯಪ್ರದೇಶ(ಹೊಸ) | 9800-9900 |
| ದಪ್ಪ ಗುಜರಾತ್(ಹೊಸ) | 10600-10700 |

**ಶೇಂಗಾ ಎಣ್ಣೆ (10 ಕೆಜಿಗೆ)**

| | |
|---|---|
| ಕಚ್ಚಾ (ತೆರಿಗೆ ಬಿಟ್ಟು) | 1510 (1520) |
| ಒಂದು ವಾರದ ಡೆಲಿವರಿ | 1505 (1515) |
| ಸೋಯಾ ಕಚ್ಚಾ | 975 (990) |
| ಪಾಮ್ ವಾರದ ಡೆಲಿವರಿ | 960 (956) |
| ಸೂರ್ಯಕಾಂತಿ ಎಣ್ಣೆ ಕಚ್ಚಾ | 925 (930) |

**ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)**

ಅಪರಂಜಿ ಚಿನ್ನ 10ಗ್ರಾಂ ₹65,400 (65,200)

ಬೆಳ್ಳಿ ಕೆ.ಜಿ ₹73,900 (73,750)

ಆವರಣದಲ್ಲಿ ಹಿಂದಿನ ದಿನದ ಧಾರಣೆ

# ನಿರ್ಮಲಾ, ಶಕ್ತಿಕಾಂತ ಚರ್ಚೆ

ನವದೆಹಲಿ (ಪಿಟಿಐ): 2024–25ನೇ ಹಣಕಾಸು ವರ್ಷದಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್‌ನ ಹಣಕಾಸು ನೀತಿ ಸಮಿತಿ (ಎಂಪಿಸಿ) ಸಭೆಯು ಏಪ್ರಿಲ್ 3ರಿಂದ 5ರ ವರೆಗೆ ನಡೆಯಲಿದೆ.

ಇದರ ಬೆನ್ನಲ್ಲೇ ಗವರ್ನರ್ ಶಕ್ತಿಕಾಂತ ದಾಸ್ ಅವರು, ಬುಧವಾರ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಭೇಟಿ ಮಾಡಿ ಚರ್ಚಿಸಿದರು.

ಸಚಿವೆ ನಿರ್ಮಲಾ ಅವರನ್ನು ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯ (ಸೆಬಿ) ಅಧ್ಯಕ್ಷೆ ಮಾಧವಿ ಪುರಿ ಬುಚ್ ಕೂಡ ಪ್ರತ್ಯೇಕವಾಗಿ ಭೇಟಿ ಚರ್ಚಿಸಿದ್ದಾರೆ ಎಂದು ಹಣಕಾಸು ಸಚಿವರ ಕಚೇರಿಯು 'ಎಕ್ಸ್'ನಲ್ಲಿ ತಿಳಿಸಿದೆ.

ಈ ಇಬ್ಬರ ಭೇಟಿಯ ಸಂದರ್ಭದಲ್ಲಿ ನಿರ್ಮಲಾ ಅವರು, ರೆಪೊ ದರ ಕಡಿತ ಮತ್ತು ಷೇರು ಸೂಚ್ಯಂಕಗಳು ಕುಸಿಯುತ್ತಿರುವ ಕುರಿತು ಚರ್ಚಿಸಿದರು ಎಂದು ಮೂಲಗಳು ತಿಳಿಸಿವೆ.

# ಹುಣಸೆ ಹಣ್ಣು ಧಾರಣೆ ಕುಸಿತ

## ಹಣ್ಣಿನ ಸಂಸ್ಕರಣೆಗೆ ಕೂಲಿ ದುಬಾರಿ: ರೈತರು ಕಂಗಾಲು

• ಎ.ಎಂ.ಸೋಮಶೇಖರಯ್ಯ

ಕೂಡ್ಲಿಗಿ (ವಿಜಯನಗರ ಜಿಲ್ಲೆ): ತಾಲ್ಲೂಕಿನಲ್ಲಿ ಈ ಬಾರಿ ಹುಣಸೆ ಹಣ್ಣಿನ ಇಳುವರಿ ಕುಂಠಿತಗೊಂಡಿದೆ. ಜೊತೆಗೆ, ಧಾರಣೆಯೂ ಕುಸಿದಿದೆ. ಇದು ರೈತರು ಮತ್ತು ಹುಣಸೆ ಮರಗಳನ್ನು ಗುತ್ತಿಗೆ ಪಡೆದಿರುವ ವ್ಯಾಪಾರಿಗಳನ್ನು ಕಂಗೆಡಿಸಿದೆ.

ಜಮೀನಿನ ಬದು, ತೋಟಗಳು, ಮನೆಯ ಅಕ್ಕಪಕ್ಕ ದಲ್ಲಿರುವ ಹುಣಸೆ ಮರಗಳು ರೈತರ ಆದಾಯದ ಮೂಲಗಳಾಗಿವೆ. ತಾಲ್ಲೂಕಿನಲ್ಲಿ ಐದು ಸಾವಿರಕ್ಕೂ ಹೆಚ್ಚು ಮರಗಳಿವೆ. ಆದರೆ, ಈ ಬಾರಿ ಮಳೆ ಕೊರತೆ ಕಾರಣ ಇಳುವರಿ ಕುಸಿದಿದೆ.

ಕೂಡ್ಲಿಗಿಯಲ್ಲಿ ಹುಣಸೆ ಹಣ್ಣಿನ ಸಂಸ್ಕರಣೆಯಲ್ಲಿ ತೊಡಗಿರುವ ಮಹಿಳೆಯರು

'ಒಂದು ತಿಂಗಳ ಹಿಂದೆ ಪ್ರತಿ ಕ್ವಿಂಟಲ್‌ಗೆ ₹9 ಸಾವಿರ ಇದ್ದ ಬೆಲೆ ಈಗ ₹6 ಸಾವಿರಕ್ಕೆ ಇಳಿಕೆಯಾಗಿದೆ. ಮರಗಳಲ್ಲಿನ ಹಣ್ಣನ್ನು ಕೀಳಲು ಒಬ್ಬ ಕೂಲಿಯಾಳುಗೆ ₹500 ನೀಡಬೇಕು. ಮರದಿಂದ ಕೆಳಗೆ ಬಿದ್ದ ಹಣ್ಣನ್ನು ಸಂಗ್ರಹಿಸುವವರಿಗೆ ₹250 ಕೊಡಬೇಕು. ಹಣ್ಣಿನಿಂದ ಬೀಜ, ನಾರು ಬೇರ್ಪಡಿಸಲು ಕೆ.ಜಿಗೆ ₹10 ನೀಡಬೇಕು. ಇದರ ಜೊತೆಗೆ ಬೆಳಿಗ್ಗಿನ ಉಪಾಹಾರ, ಚಹಾ ಸೇರಿ ಇತರೆ ಖರ್ಚನ್ನು ನೋಡಿಕೊಳ್ಳಬೇಕು' ಎಂದು ಗುತ್ತಿಗೆದಾರ ಮ್ಯಾಕಲ್ ಭೀಮಣ್ಣ ತಿಳಿಸಿದರು.

'ಎಲ್ಲಾ ವೆಚ್ಚ ಸೇರಿ ಪ್ರತಿ ಕ್ವಿಂಟಲ್ ಹಣ್ಣನ್ನು ಮಾರುಕಟ್ಟೆಗೆ ಸಾಗಿಸುವ ವೇಳೆಗೆ ₹5 ಸಾವಿರಕ್ಕೂ ಹೆಚ್ಚು ವೆಚ್ಚವಾಗುತ್ತದೆ. ಇದೆಲ್ಲವನ್ನು ಸರಿದೂಗಿಸಿಕೊಂಡು ರೈತರು, ಗುತ್ತಿಗೆದಾರರು ಆದಾಯ ಮಾಡಿಕೊಳ್ಳಬೇಕು. ಅಲ್ಲದೆ, ವರ್ಷದ ಮುಂಚೆಯೇ ಮುಂಗಡ ನೀಡಿ ಮರಗಳನ್ನು ಗುತ್ತಿಗೆ ಪಡೆದಿರುವ ಗುತ್ತಿಗೆದಾರರು ಕೂಲಿ ಕಾರ್ಮಿಕರ ಕೊರತೆಯಿಂದ ಮರಗಳಲ್ಲಿನ ಹಣ್ಣನ್ನು ಬಿಡಿಸುವ ಗೋಜಿಗೆ ಹೋಗಿಲ್ಲ. ಕೆಲವು ರೈತರು ಸಹ ಅವುಗಳನ್ನು ಬಿಡಿಸಲು ಸಾಧ್ಯವಾಗದೆ ಕೈಚೆಲ್ಲಿದ್ದಾರೆ' ಎಂದು ತಿಳಿಸಿದರು.

'ತಾಲ್ಲೂಕಿನಾದ್ಯಂತ ಹೇರಳವಾಗಿ ಹುಣಸೆ ಹಣ್ಣನ್ನು ಬೆಳೆಯಲಾಗುತ್ತದೆ. ಆದರೆ, ಇಲ್ಲಿ ಮಾರುಕಟ್ಟೆ ಇರದ ಕಾರಣ ಹೊಸಪೇಟೆ, ಚಳ್ಳಕೆರೆ, ಚಿತ್ರದುರ್ಗದ ಮಾರುಕಟ್ಟೆಗೆ ಹಣ್ಣನ್ನು ಸಾಗಿಸಬೇಕು. ಅಲ್ಲದೆ, ಹಣ್ಣು ಸಂಗ್ರಹಿಸಿಡಲು ಅಲ್ಲಿ ಶೈತ್ಯಾಗಾರಗಳಿಲ್ಲ' ಎಂದು ರೈತ ಹನಸಿ ಶಿವಣ್ಣ ತಿಳಿಸಿದರು.

'ಪಟ್ಟಣದಲ್ಲಿ ಮಾರುಕಟ್ಟೆ ಹಾಗೂ ಶೈತ್ಯಾಗಾರ ನಿರ್ಮಿಸುವಂತೆ ಎರಡು ದಶಕಗಳಿಂದ ಕೋರುತ್ತಿದ್ದೇವೆ. ಆದರೆ, ಈವರೆಗೆ ನಮ್ಮ ಬೇಡಿಕೆಗೆ ಸ್ಪಂದನೆ ಸಿಕ್ಕಿಲ್ಲ' ಎಂದರು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Manager

ವಿಮೆ ಯಲ್ಲಿ ಉದ್ಯೋಗ ಅವಕಾಶಗಳು
mahindra paybima ಎದುರು ನೋಡುತ್ತಿರುವ
Branch Manager (Exp. 3-5 Years)
Business Development Manager (Exp. 1-3 Years)
Customer Service Manager (Exp. 2-4 Years)
ಏಜೆನ್ಸಿ ಅಥವಾ ನೇರವಾಗಿ ಆರೋಗ್ಯ ಮತ್ತು ಜೀವಾ ವಿಮೆಯಲ್ಲಿ ದೃಢವಾದ ಅನುಭವ ಹೊಂದಿರಬೇಕು
ವಯೋಮಿತಿ 25 ರಿಂದ 35 ವರ್ಷಗಳು
Date: 22nd & 23rd March
ಸಮಯ ಬೆಳಗ್ಗೆ 11 ಘಂಟೆಯಿಂದ ಸಂಜೆ 5 ಘಂಟೆವರೆಗೂ
ವಿಳಾಸ
ಮಹಿಂದ್ರಾ ಫೈನಾನ್ಸ್, ಮೊದಲನೇ ಮಹಡಿ, ಔರಾ ಪ್ಯಾಲೇಸ್, ಲೇಡಿ ಹಿಲ್, ಕೊಟ್ಟಾರ ಮುಖ್ಯ ರಸ್ತೆ, ಆಕ್ಸಿಸ್ ಬ್ಯಾಂಕ್ ಮೇಲೆ, ಚಿಲಿಂಬಿ, ಊರವ್ವಾ ಸ್ಟೋರ್, ಮಂಗಳೂರು, ಕರ್ನಾಟಕ-575006

Wanted

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತಊಟ ವಸತಿ ಸಂಬಳ 15,000/- ರಿಂದ 20,000/- ESI, PF ಸೌಲಭ್ಯವಿರುತ್ತದೆ. ಬೆಂಗಳೂರು-56. ಸಂಪರ್ಕಿಸಿ: 9606385001, 9606523337

Part-Time Jobs

WORK FROM Home: ಮನೆಯಲ್ಲಿ ಕುಳಿತು 10,000–20,000 ದುಡಿಯಬಹುದು. ವಯೋಮಿತಿ ಇರುವುದಿಲ್ಲ. ಮೊದಲು ಬಂದವರಿಗೆ ಆದ್ಯತೆ. 8861041526, 9945791526

ಮನೆಯಿಂದಲೇ ಕುಳಿತು ಪುಸ್ತಕ ಬರೆಯುವ, ಫಾರಂ ತುಂಬುವ ಮೂಲಕ, ತಿಂಗಳಿಗೆ, 18,000-20,000.ವರೆಗೆ ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 8050064327, 8050064328.

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

General

ಕಂಪನಿಗಳಿಗೆ ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟಾರ್ಸ್, ಬ್ರಿಟಾನಿಯಾ,TVS, ಕಂಪನಿಗಳಿಗೆ ಎಸ್.ಎಸ್.ಎಲ್.ಸಿ, ಪಿಯುಸಿ,ಡಿಗ್ರಿ, ITIನವರುಗಳು 18,000- 76,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 7259552930

Cook

CONTINENTAL CHEF required for our restaurant in Vidyanagar Hubli, Contact no: 7760388434 8310253978

ವೈವಾಹಿಕ

Matrimonial Bureaus

ಎಲ್ಲಾ ಜಾತಿಗಳ ವಧು ವರರಿಗೆ ಮತ್ತು ಮರು ಮದುವೆಯಾಗಿ Widow, Divorcee ವೈವಾಹಿಕ ಮಾಹಿತಿಗಾಗಿ ವಿವರ, ಫೋಟೋ ವಾಟ್ಸಪ್ಪ್ ಮಾಡಿ 9019566555

ವೈಯಕ್ತಿಕ

Change of Name

ನಾನು, ಕೃಷ್ಣನ್ ವರ್ಧಿನಿ, ಸಾರಾನಾಥನ್ ಶ್ರೀಧರ್ ಅವರ ಪತ್ನಿ, ಡಿ- 812, ಜಾರ್ಡಿನ್ ಬ್ಲಾಕ್,ಬ್ರಿಗೇಡ್ ಗಾರ್ಡೇನಿಯಾ, ಜೆಪಿ ನಗರ ಹಂತ 7, ಬೆಂಗಳೂರು 560078ರ ನಿವಾಸಿ, ನನ್ನ ಹೆಸರನ್ನು ವರ್ಧಿನಿ ಶ್ರೀಧರ್‌ನಿಂದ ಕೃಷ್ಣನ್ ವರ್ಧಿನಿ ಎಂದು ಎಲ್ಲಾ ಉದ್ದೇಶಗಳಿಗಾಗಿ ಬದಲಾಯಿಸಿಕೊಂಡಿದ್ದೇನೆ.

I, KRISHNAN Vardhini w/o Saranathan Sridhar, resident of D-812, Jardine Block, Brigade Gardenia, JP.Nagar Phase 7, Bangalore 560078, I have changed my name from Vardhini Sridhar to Krishnan Vardhini for all purposes.

ಪ್ರವಾಸ

Travel

★ಶ್ರೀಶ್ರೇಯಸ್ ಟೂರ್ಸ್★ 12.04.2024 6ದಿನಗಳು ಊಟಿ ವಾಲ್‌ವರ್ೈ,ಇಷಾಫೌಂಡೇಷನ್, 12.04.2024 5ದಿನಗಳು ಕಾಶಿ, ಅಯೋದ್ಯಾ,ಗಯಾ, ಅಲಹಾಬಾದ್.27.04.2024, 18.05.2024 12/15/21ದಿನಗಳು ಈಶಾನ್ಯರಾಜ್ಯಗಳ (ಸೆವೆನ್ ಸಿಸ್ಟರ್ಸ್)ನ 6ರಾಜ್ಯಗಳು ಅಸ್ಸಾಂ, ಅರುಣಾಚಲ,ಮೇಘಾಲಯ, ನಾಗಲ್ಯಾಂಡ್,ತ್ರಿಪುರ, ಮಿಝೋರಾಂ.28.04.2024 ನರ್ಮದಾಪುಷ್ಕರಾಲು, ಪ್ರತಿ 5ದಿನಕ್ಕೊಮ್ಮೆ ವೋಲ್ವೋ ಬಸ್ಸಿನಲ್ಲಿ ಉಜ್ಜಯಿನಿ,ಓಂಕಾರೇಶ್ವರ, ಮಹೇಶ್ವರ.12.05.2024 10ದಿನಗಳು ಅಖಂಡ ಕೇರಳರಾಜ್ಯ ಪ್ರವಾಸ.18.05.2024 10ದಿನಗಳು ಅಯೋಧ್ಯೆ,ಅಖಂಡ ನೇಪಾಳ ರಾಷ್ಟ್ರ (ಮುಕ್ತಿನಾಥ ಸಹಿತ)ಪ್ರವಾಸ. 8073824856/ 9206979202

★ವಿಮಾನದಲ್ಲಿ 29.04.2024★ 4ದಿನಗಳು ಒರಿಸ್ಸಾ, ಪೂರಿಜಗನ್ನಾಥ,ಭುವನೇಶ್ವರ 24.04.2024 5ದಿನಗಳು ಶಿಮ್ಲಾ,ಮನಾಲಿ'ಪ್ರವಾಸ 06.05.2024 11ದಿನಗಳು ಅಯೋಧ್ಯೆ,ನೇಪಾಳ,ಮುಕ್ತಿನಾಥ ಕಾಶಿ,10.05.2024 6ದಿನಗಳು ಕಾಶಿ.ಅಯೋಧ್ಯೆ,ಗಯಾ,ಪ್ರಯಾಗ 'ಆರ್.ಗಾಂಧಿ ಟೂರ್ಸ್' 8861545809/ 9945445809

Holiday Package Tours

15.04.2024, 4ದಿನಗಳು ಎ/ಸಿ ಬಸ್ಸಿನಲ್ಲಿ ಮಂತ್ರಾಲಯ, ಶ್ರೀಶೈಲಾ, ಅಹೋಬಲ, ಮಹಾನಂದಿ ಇತ್ಯಾದಿ. 27-04-2024, 2ದಿನಗಳು ಕೆಮ್ಮಣ್ಣುಗುಂಡಿ, ಮುಳ್ಳಯ್ಯನಗಿರಿ, ಬಾಬಾಬುಡನಗಿರಿ, ಹೆಬ್ಬೆಫಾಲ್ಸ್, ಕಲ್ಹತ್ತಿಫಾಲ್ಸ್ ಇತ್ಯಾದಿ. 9481433157

ಭವಿಷ್ಯ

Astrology

★ಓಂದುರ್ಗ ಆಂಜನಂ★ ನಿಮ್ಮ ಯಾವುದೇ ಧೀರ್ಘಕಾಲದ ಎಲ್ಲೂ ಪರಿಹಾರವಾಗದ ಸ್ತ್ರೀಪುರುಷ ಸಂಬಂಧಿತ ಸರ್ವಸಮಸ್ಯೆಗಳಿಗೆ 3 ದಿನಗಳಲ್ಲಿ ಪರಿಹಾರ. ಶ್ರೀ.ದೇವಾನಂದನ್. 9845005009

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
ರಿಯಲ್ ಎಸ್ಟೇಟ್
ಪ್ರತಿ ಶನಿವಾರ + ಭಾನುವಾರ
ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
@ 2244/-* FOR 15 WORDS
www.dhclassifieds.com ಬುಕ್ ಮಾಡಿ
*Conditions apply
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9845114560 | +91 9901641752 | 080-45557163/164

## ಸಂಕ್ಷಿಪ್ತ ಸುದ್ದಿ

### ಪಾಕ್: ವೇತನ ಪಡೆಯದಿರಲು ಪ್ರಧಾನಿ ನಿರ್ಧಾರ

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನವು ಆರ್ಥಿಕ ಬಿಕ್ಕಟ್ಟಿಗೆ ಸಿಲುಕಿರುವುದರಿಂದ ಪ್ರಧಾನಿ ಶೆಹಬಾಜ್ ಷರೀಫ್ ಮತ್ತು ಅವರ ಸಂಪುಟ ಸದಸ್ಯರು ತಮಗೆ ಲಭ್ಯವಾಗುವ ವೇತನ ಮತ್ತಿತರ ಸೌಲಭ್ಯಗಳನ್ನು ಪಡೆಯದೇ ಇರಲು ನಿರ್ಧರಿಸಿದ್ದಾರೆ.

ಅನಗತ್ಯ ವೆಚ್ಚಗಳನ್ನು ಕಡಿತಗೊಳಿಸುವ ಉದ್ದೇಶದಿಂದ ಕಠಿಣ ಕ್ರಮ ಜಾರಿ ಮಾಡುವ ಸಲುವಾಗಿ ಬುಧವಾರ ಕರೆದಿದ್ದ ಸಂಪುಟ ಸಭೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಯಿತು ಎಂದು ಪ್ರಧಾನ ಮಂತ್ರಿ ಕಾರ್ಯಾಲಯವು ತಿಳಿಸಿದೆ.

### ವಿಯೆಟ್ನಾಂ ಅಧ್ಯಕ್ಷ ವೊ ವಾನ್ ಥೌಂಗ್ ರಾಜೀನಾಮೆ

ಹನೋಯಿ(ಎಪಿ): ವಿಯೆಟ್ನಾಂ ಅಧ್ಯಕ್ಷ ವೊ ವಾನ್ ಥೌಂಗ್ ರಾಜೀನಾಮೆ ನೀಡಿದ್ದಾರೆ ಎಂದು ಕಮ್ಯುನಿಸ್ಟ್ ಪಾರ್ಟಿ ಬುಧವಾರ ತಿಳಿಸಿದೆ.

ಭ್ರಷ್ಟಾಚಾರ ವಿರೋಧಿ ಆಂದೋಲನವು ತೀವ್ರಗೊಂಡ ಬೆನ್ನಲ್ಲೇ ಅವರು ರಾಜೀನಾಮೆ ಸಲ್ಲಿಸಿದ್ದಾರೆ.

ಪಕ್ಷದ ಕೇಂದ್ರ ಸಮಿತಿಯು ರಾಜೀನಾಮೆಯನ್ನು ಒಪ್ಪಿದ್ದು, 'ವೊ ವಾನ್ ಥೌಂಗ್ ಅವರಿಂದಾದ ಈ ಉಲ್ಲಂಘನೆಯು ಕಮ್ಯುನಿಸ್ಟ್ ಪಕ್ಷದ ಘನತೆಗೆ ಕಪ್ಪುಚುಕ್ಕೆ' ಎಂದು ಹೇಳಿದೆ. ಥೌಂಗ್, 2023ರ ಮಾರ್ಚ್‌ನಲ್ಲಿ ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು.

### 50 ಹಮಾಸ್ ಬಂಡುಕೋರರ ಹತ್ಯೆ: ಇಸ್ರೇಲ್

ರಫಾ(ಗಾಜಾ ಪಟ್ಟಿ)(ಎಪಿ): ಗಾಜಾ ಪಟ್ಟಿಯ ದೊಡ್ಡ ಆಸ್ಪತ್ರೆಯಾದ ಶಿಫಾ ವೈದ್ಯಕೀಯ ಸಂಕೀರ್ಣದ ಬಳಿ ಹಾಗೂ ಸುತ್ತಮುತ್ತ ಇಸ್ರೇಲ್ ಪಡೆಗಳು ಮಂಗಳವಾರವೂ ಭಾರಿ ದಾಳಿ ನಡೆಸಿವೆ.

ಆಸ್ಪತ್ರೆಯಲ್ಲಿ ನಡೆದ ಗುಂಡಿನ ಕಾಳಗದಲ್ಲಿ ಹಮಾಸ್ ಸಂಘಟನೆಯ 50 ಬಂಡುಕೋರರನ್ನು ಹತ್ಯೆ ಮಾಡಿರುವುದಾಗಿ ಇಸ್ರೇಲ್ ಪಡೆಗಳು ಹೇಳಿವೆ. ಇಸ್ರೇಲ್ ನಡೆಸಿದ ದಾಳಿಯಲ್ಲಿ ನಾಗರಿಕರು ಮೃತಪಟ್ಟಿದ್ದಾರೆ ಎಂದು ಹಮಾಸ್ ಮಾಧ್ಯಮ ಕಚೇರಿ ಹೇಳಿದೆ. ಆದರೆ, ಈ ಗುಂಡಿನ ಕಾಳಗದಲ್ಲಿ ಮೃತಪಟ್ಟವರ ಸಂಖ್ಯೆ ಎಷ್ಟು ಎಂಬುದು ದೃಢಪಟ್ಟಿಲ್ಲ ಎಂದು ಅಸೋಸಿಯೇಟೆಡ್ ಪ್ರೆಸ್ (ಎಪಿ) ಹೇಳಿದೆ.

# ಶೇ 1ರಷ್ಟು ಸಿರಿವಂತರಲ್ಲಿ ದೇಶದ ಸಂಪತ್ತಿನ ಕೇಂದ್ರೀಕರಣ

ಪ್ರಜಾವಾಣಿ ವಾರ್ತೆ

ನವದೆಹಲಿ: ಪ್ರಸ್ತುತ ಭಾರತದಲ್ಲಿ ಸಂಪತ್ತಿನ ಕೇಂದ್ರೀಕರಣಕ್ಕೆ ಸಂಬಂಧಿಸಿದಂತೆ ಬ್ರಿಟಿಷ್ ವಸಾಹತುಶಾಹಿ ಕಾಲಕ್ಕಿಂತಲೂ ಅಸಮಾನತೆಯ ಪ್ರಮಾಣ ಹೆಚ್ಚಿದೆ ಎಂದು ಪ್ಯಾರಿಸ್ ಮೂಲದ ವಿಶ್ವ ಅಸಮಾನತೆ ಲ್ಯಾಬ್‌ನ ವರದಿ ಹೇಳಿದೆ. 2022–23ನೇ ಸಾಲಿನಡಿ ದೇಶದ ಶೇ 40.1ರಷ್ಟು ಸಂಪತ್ತಿನ ಒಡೆತನವು ಶೇ 1ರಷ್ಟು ಇರುವ ಸಿರಿವಂತರ ಹಿಡಿತದಲ್ಲಿದೆ. ಸ್ವಾತಂತ್ರ್ಯ ಪೂರ್ವ ಕಾಲಘಟ್ಟದಲ್ಲಿ ಈ ಸಿರಿವಂತರ ಪ್ರಮಾಣ ಶೇ 15ಕ್ಕಿಂತಲೂ ಕಡಿಮೆ ಇತ್ತು. 2022–23ನೇ ಸಾಲಿನಲ್ಲಿ ಶೇ 1ರಷ್ಟು ಸಿರಿವಂತರ ಆದಾಯವು ಶೇ 22.6ರಷ್ಟು ಏರಿಕೆಯಾಗಿದೆ ಎಂದು ವಿವರಿಸಿದೆ.

ದೇಶದಲ್ಲಿ ಸ್ವಾತಂತ್ರ್ಯ ನಂತರದಿಂದ 1980ರ ವರೆಗೆ ಅಸಮಾನತೆ ಪ್ರಮಾಣ ತಗ್ಗಿತ್ತು. ಆ ನಂತರದ ವರ್ಷದಿಂದ 2000ರ ವರೆಗೆ ಗಗನಕ್ಕೇರಿದೆ ಎಂದು '1922ರಿಂದ 2023ರ ವರೆಗೆ ಭಾರತದಲ್ಲಿ ಆದಾಯ ಮತ್ತು ಸಂಪತ್ತಿನ ಅಸಮಾನತೆ' ಶೀರ್ಷಿಕೆಯಡಿ ಸಿದ್ಧಪಡಿಸಿರುವ ವರದಿಯಲ್ಲಿ ಹೇಳಲಾಗಿದೆ. 2014–15ರಿಂದ 2022–23ರ ನಡುವೆ ಅಸಮಾನತೆ ಪ್ರಮಾಣ ಅತಿಹೆಚ್ಚಿದೆ. 2022–23ರಲ್ಲಿ ಶೇ 1ರಷ್ಟು ಸಿರಿವಂತರ ಆದಾಯ ಮತ್ತು ಸಂಪತ್ತಿನ ಪಾಲಿನ ಏರಿಕೆಯು ಚಾರಿತ್ರಿಕ ಮಟ್ಟಕ್ಕೆ ತಲುಪಿದೆ. ದಕ್ಷಿಣ ಆಫ್ರಿಕಾ, ಬ್ರೆಜಿಲ್ ಹಾಗೂ ಅಮೆರಿಕಕ್ಕೆ ಹೋಲಿಸಿದರೆ ಭಾರತೀಯ ಸಿರಿವಂತರ ಆದಾಯದ ಪಾಲು ದುಪ್ಪಟ್ಟಾಗಿದೆ ಎಂದು ವಿವರಿಸಿದೆ.

ಸಂಪತ್ತಿನ ಅಸಮಾನತೆ ವಿಷಯದಲ್ಲಿ ಭಾರತವು ಪೆರು, ಯೆಮನ್ ಹಾಗೂ ಇತರೆ ಕೆಲವು ಸಣ್ಣ ರಾಷ್ಟ್ರಗಳನ್ನು ಹಿಂದಿಕ್ಕಿದೆ. ಭಾರತದ ತೆರಿಗೆ ವ್ಯವಸ್ಥೆಯನ್ನು ನಿವ್ವಳ ಸಂಪತ್ತಿನ ಮಸೂರದಿಂದ ನೋಡಿದಾಗ ಹಿಂಜರಿತವಾಗಿರುವ ಪುರಾವೆಗಳು ಸ್ಪಷ್ಟವಾಗಿ ಗೋಚರಿಸುತ್ತವೆ ಎಂದು ಹೇಳಿದೆ.

'ಭಾರತದಲ್ಲಿರುವ ಆಧುನಿಕ ಮಧ್ಯಮ ವರ್ಗವು ಬ್ರಿಟಿಷ್ ಕಾಲಘಟ್ಟಕ್ಕಿಂತಲೂ ಹೆಚ್ಚಿನ ಅಸಮಾನತೆಗೆ ಒಳಗಾಗಿದ್ದು, ಬಿಲಿಯನೇರ್ ರಾಜ್ ವ್ಯವಸ್ಥೆಯಡಿ ಸಿಲುಕಿದೆ' ಎಂದು ಅರ್ಥಶಾಸ್ತ್ರಜ್ಞ ನಿತಿನ್ ಕುಮಾರ್ ಭಾರತಿ ಹೇಳಿದ್ದಾರೆ.

ಚುನಾವಣಾ ಆಯುಕ್ತರ ಆಯ್ಕೆಗೆ ಸಮಿತಿ: ಪ್ರಮಾಣಪತ್ರ ಸಲ್ಲಿಸಿರುವ ಕೇಂದ್ರ ಸರ್ಕಾರ

# ಸಿಜೆಐ ಕೈಬಿಟ್ಟಿದ್ದಕ್ಕೆ ಕೇಂದ್ರ ಸಮರ್ಥನೆ

**ನವದೆಹಲಿ (ಪಿಟಿಐ):** ಚುನಾವಣಾ ಆಯುಕ್ತರನ್ನು ಆಯ್ಕೆ ಮಾಡುವ ಸಮಿತಿಯಲ್ಲಿ ನ್ಯಾಯಾಂಗದ ಸದಸ್ಯರೊಬ್ಬರು ಇದ್ದರು ಎನ್ನುವುದೇ ಚುನಾವಣಾ ಆಯೋಗವು ಸ್ವತಂತ್ರ ಎನ್ನಲು ಆಧಾರವಲ್ಲ ಎಂದು ಕೇಂದ್ರ ಸರ್ಕಾರ ಹೇಳಿದೆ.

ಸುಪ್ರೀಂ ಕೋರ್ಟ್‌ಗೆ ಪ್ರಮಾಣಪತ್ರವೊಂದನ್ನು ಸಲ್ಲಿಸಿರುವ ಕೇಂದ್ರ ಕಾನೂನು ಸಚಿವಾಲಯವು, ಮಾರ್ಚ್ 14ರಂದು ಇಬ್ಬರು ಚುನಾವಣಾ ಆಯುಕ್ತರನ್ನು ಅವಸರದಲ್ಲಿ ನೇಮಕ ಮಾಡಲಾಗಿದೆ ಎಂಬ ವಾದವನ್ನು ಅಲ್ಲಗಳೆದಿದೆ.

ಚುನಾವಣಾ ಆಯುಕ್ತರ ಆಯ್ಕೆಗೆ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಇಲ್ಲದ ಸಮಿತಿಯನ್ನು ರಚಿಸಲು ಅವಕಾಶ ಕಲ್ಪಿಸಿದ 2023ರ ಕಾಯ್ದೆಯನ್ನು ಪ್ರಶ್ನಿಸಿ ಸಲ್ಲಿಸಿರುವ ಅರ್ಜಿಗಳ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಮಾರನೆಯ ದಿನ (ಮಾರ್ಚ್ 15) ನಡೆಸಬೇಕಿತ್ತು.

ಮುಖ್ಯ ಚುನಾವಣಾ ಆಯುಕ್ತರು ಮತ್ತು ಇತರ ಚುನಾವಣಾ ಆಯುಕ್ತರ (ನೇಮಕ, ಸೇವಾ ನಿಯಮಗಳು ಹಾಗೂ ಸೇವಾವಧಿ) ಕಾಯ್ದೆ–2023ನ್ನು ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್) ಪ್ರಶ್ನಿಸಿದೆ.

'ಆಯ್ಕೆ ಸಮಿತಿಯು ನಿರ್ದಿಷ್ಟ ಸ್ವರೂಪವನ್ನು ಹೊಂದಿದ್ದರೆ ಮಾತ್ರ ಪ್ರಾಧಿಕಾರವೊಂದರ ಸ್ವಾತಂತ್ರ್ಯವನ್ನು ಕಾಯ್ದುಕೊಳ್ಳಬಹುದು ಎಂಬ ತಪ್ಪು ನೆಲೆಯಲ್ಲಿ ಅರ್ಜಿದಾರರು ವಾದಿಸಿದ್ದಾರೆ' ಎಂದು ಕೇಂದ್ರ ಹೇಳಿದೆ.

**ಮುಖ್ಯಾಂಶಗಳು**

- ನ್ಯಾಯಾಂಗ ಸದಸ್ಯರ ಉಪಸ್ಥಿತಿಯಷ್ಟೇ ಸ್ವಾತಂತ್ರ್ಯ ಎನ್ನಲಾಗದು
- ಆಯುಕ್ತರ ನೇಮಕ ತರಾತುರಿಯದ್ದು ಎಂಬ ವಾದ ಅಲ್ಲಗಳೆದ ಕೇಂದ್ರ ಸರ್ಕಾರ

ಆಯ್ಕೆ ಸಮಿತಿಯಲ್ಲಿ ನ್ಯಾಯಾಂಗದ ಒಬ್ಬ ಸದಸ್ಯ ಇರುವುದೇ ಚುನಾವಣಾ ಆಯೋಗದ ಅಥವಾ ಇತರ ಯಾವುದೇ ಸಂಸ್ಥೆಯ ಸ್ವಾತಂತ್ರ್ಯಕ್ಕೆ ಮೂಲ, ನ್ಯಾಯಾಂಗದ ಸದಸ್ಯರ ಉಪಸ್ಥಿತಿಯಿಂದ ಮಾತ್ರವೇ ಸ್ವಾತಂತ್ರ್ಯ ಎಂದು ಹೇಳಲಾಗದು ಎಂದು ಕೂಡ ಕೇಂದ್ರವು ವಿವರಿಸಿದೆ.

ಶೋಧ ಸಮಿತಿಯು ಚುನಾವಣಾ ಆಯುಕ್ತ ಸ್ಥಾನಕ್ಕೆ ಆರು ಜನರ ಹೆಸರನ್ನು ಅಂತಿಮಗೊಳಿಸಿದ ನಂತರ, ಅವುಗಳನ್ನು ಲೋಕಸಭೆಯಲ್ಲಿನ ಅತಿದೊಡ್ಡ ವಿರೋಧ ಪಕ್ಷದ ನಾಯಕ ಅಧೀರ್ ರಂಜನ್ ಚೌಧರಿ ಅವರಿಗೆ ಮಾರ್ಚ್ 13ರಂದು ನೀಡಲಾಗಿತ್ತು ಎಂದು ಕೇಂದ್ರವು ತಿಳಿಸಿದೆ.

ಚುನಾವಣಾ ಆಯುಕ್ತರಾಗಿ ನೇಮಕಗೊಂಡವರ ವಿಶ್ವಾಸಾರ್ಹತೆಯನ್ನು ಯಾವ ಸಂದರ್ಭದಲ್ಲಿಯೂ ಪ್ರಶ್ನಿಸಲಾಗಿಲ್ಲ. ಶೋಧ ಸಮಿತಿಯು ನೀಡಿದ್ದ ಪಟ್ಟಿಯಲ್ಲಿದ್ದವರ ಅರ್ಹತೆಯ ಬಗ್ಗೆ, ದಕ್ಷತೆಯ ಬಗ್ಗೆ ಯಾವ ಸಂದರ್ಭದಲ್ಲಿಯೂ ದೂರುಗಳು ಬಂದಿಲ್ಲ ಎಂದು ಕೂಡ ಕೇಂದ್ರವು ವಿವರಣೆ ನೀಡಿದೆ.

2023ರ ಕಾಯ್ದೆಯು ಚುನಾವಣಾ ಆಯುಕ್ತರು ಹಾಗೂ ಮುಖ್ಯ ಚುನಾವಣಾ ಆಯುಕ್ತರ ನೇಮಕ ಪ್ರಕ್ರಿಯೆಯಲ್ಲಿ ಹೆಚ್ಚು ಪ್ರಜಾಸತ್ತಾತ್ಮಕವಾದ, ಹೆಚ್ಚಿನ ಭಾಗೀದಾರಿಕೆಯ ಹಾಗೂ ಹೆಚ್ಚು ಒಳಗೊಳ್ಳುವಿಕೆಯ ಪ್ರಕ್ರಿಯೆಯನ್ನು ರೂಪಿಸುವ ಕೆಲಸ ಮಾಡಿದೆ ಎಂದು ಪ್ರತಿಪಾದಿಸಿದೆ.

'ನ್ಯಾಯಾಂಗದ ಸದಸ್ಯರು ಇಲ್ಲದಿರುವ ಆಯ್ಕೆ ಸಮಿತಿಯು ಪಕ್ಷಪಾತಿಯಾಗಿ ಇರುತ್ತದೆ ಎಂದು ಹೇಳುವುದು ತಪ್ಪಾಗುತ್ತದೆ' ಎಂದು ಕೇಂದ್ರ ವಾದಿಸಿದೆ. ನೇಮಕಾತಿಯಲ್ಲಿ ಕಾರ್ಯಾಂಗದ ಪರಮಾಧಿಕಾರ ಇದ್ದ ಸಂದರ್ಭದಲ್ಲಿಯೂ ಚುನಾವಣಾ ಆಯುಕ್ತರು ನಿಷ್ಪಕ್ಷಪಾತವಾಗಿ ಹಾಗೂ ಪರಿಣಾಮಕಾರಿಯಾಗಿ ಕೆಲಸ ಮಾಡಲು ಆಗಿದೆ ಎಂದು ಹೇಳಿದೆ.

ಈ ಕಾಯ್ದೆಯ ಅಡಿಯಲ್ಲಿ ಚುನಾವಣಾ ಆಯುಕ್ತರ ನೇಮಕಕ್ಕೆ ತಡೆ ನೀಡಲು ಸುಪ್ರೀಂ ಕೋರ್ಟ್ ಶುಕ್ರವಾರ ನಿರಾಕರಿಸಿತ್ತು. ನಿವೃತ್ತ ಐಎಎಸ್ ಅಧಿಕಾರಿಗಳಾದ ಜ್ಞಾನೇಶ್ ಕುಮಾರ್ ಮತ್ತು ಸುಖಬೀರ್ ಸಿಂಗ್ ಸಂಧು ಅವರನ್ನು ಚುನಾವಣಾ ಆಯುಕ್ತರನ್ನಾಗಿ ನೇಮಕ ಮಾಡಲಾಗಿದೆ.

2023ರ ಕಾಯ್ದೆಯ ಅನ್ವಯ, ಪ್ರಧಾನಿ, ಪ್ರಧಾನಿ ನೇಮಕ ಮಾಡುವ ಕೇಂದ್ರದ ಒಬ್ಬ ಸಚಿವ ಹಾಗೂ ವಿರೋಧ ಪಕ್ಷದ ನಾಯಕ ಇರುವ ಸಮಿತಿಯು ಚುನಾವಣಾ ಆಯುಕ್ತರನ್ನು ಆಯ್ಕೆ ಮಾಡುತ್ತದೆ. 2023ರ ಮಾರ್ಚ್‌ನಲ್ಲಿ ತೀರ್ಪೊಂದನ್ನು ನೀಡಿದ್ದ ಸುಪ್ರೀಂ ಕೋರ್ಟ್‌ನ ಸಂವಿಧಾನ ಪೀಠವು, ಸಿಜೆಐ, ಪ್ರಧಾನಿ ಮತ್ತು ಲೋಕಸಭೆಯ ವಿರೋಧ ಪಕ್ಷದ ನಾಯಕ ಇರುವ ಸಮಿತಿಯ ಸಲಹೆ ಆಧರಿಸಿ ಚುನಾವಣಾ ಆಯುಕ್ತರನ್ನು ನೇಮಿಸಬೇಕು ಎಂದು ಹೇಳಿತ್ತು.

## ಉಚಿತ ಕೊಡುಗೆ: ವಿಚಾರಣೆಗೆ ಸಮ್ಮತಿ

**ನವದೆಹಲಿ (ಪಿಟಿಐ):** ರಾಜಕೀಯ ಪಕ್ಷಗಳು ಚುನಾವಣೆಯ ಸಂದರ್ಭದಲ್ಲಿ ಉಚಿತ ಕೊಡುಗೆಗಳನ್ನು ಘೋಷಿಸುವುದನ್ನು ಪ್ರಶ್ನಿಸಿ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ಗುರುವಾರ ವಿಚಾರಣೆಗೆ ಕೈಗೆತ್ತಿಕೊಳ್ಳುವ ಪ್ರಕರಣಗಳ ಪಟ್ಟಿಗೆ ಸೇರಿಸಲು ಸುಪ್ರೀಂ ಕೋರ್ಟ್ ಒಪ್ಪಿಗೆ ನೀಡಿದೆ.

ಈ ರೀತಿ ಮಾಡುವ ರಾಜಕೀಯ ಪಕ್ಷಗಳ ನೋಂದಣಿಯನ್ನು ರದ್ದುಪಡಿಸಲು ಚುನಾವಣಾ ಆಯೋಗಕ್ಕೆ ನಿರ್ದೇಶನ ನೀಡಬೇಕು ಎಂದು ಕೂಡ ಅರ್ಜಿಯಲ್ಲಿ ಕೋರಲಾಗಿದೆ. 'ಇದು ಮುಖ್ಯವಾದುದು, ಇದನ್ನು ನಾವು ಗುರುವಾರಕ್ಕೆ ಪಟ್ಟಿಮಾಡಿಕೊಳ್ಳುತ್ತೇವೆ' ಎಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್, ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಮತ್ತು ಮನೋಜ್ ಮಿಶ್ರಾ ಅವರು ಇದ್ದ ಪೀಠವು ಹೇಳಿದೆ.

ವಕೀಲ ಅಶ್ವಿನಿ ಉಪಾಧ್ಯಾಯ ಅವರು ಈ ಅರ್ಜಿಯನ್ನು ಸಲ್ಲಿಸಿದ್ದಾರೆ. 'ಚುನಾವಣೆಗೂ ಮೊದಲೇ ರಾಜಕೀಯ ಪಕ್ಷಗಳು ಉಚಿತ ಕೊಡುಗೆಗಳನ್ನು ಘೋಷಿಸುವ ಕ್ರಮವು ಮತದಾರರ ಮೇಲೆ ಅನಗತ್ಯ ಪ್ರಭಾವ ಬೀರುತ್ತದೆ, ಪ್ರಜಾತಾಂತ್ರಿಕ ಮೌಲ್ಯಗಳ ಉಳಿವಿಗೆ ಎದುರಾಗಿರುವ ಅತಿದೊಡ್ಡ ಬೆದರಿಕೆ. ಇದು ಸಂವಿಧಾನದ ಆಶಯಗಳಿಗೆ ಹಾನಿ ಉಂಟುಮಾಡುತ್ತದೆ' ಎಂದು ಅರ್ಜಿಯಲ್ಲಿ ಹೇಳಲಾಗಿದೆ.

'ಈ ಅನೈತಿಕ ಪದ್ಧತಿಯು ಅಧಿಕಾರದಲ್ಲಿ ಉಳಿದುಕೊಳ್ಳಲು ಮತದಾರರಿಗೆ ಲಂಚ ಕೊಡುವುದಕ್ಕೆ ಸಮ' ಎಂದು ಅದರಲ್ಲಿ ಹೇಳಲಾಗಿದೆ. 'ಅತಾರ್ಕಿಕವಾದ ರೀತಿಯಲ್ಲಿ ಉಚಿತ ಕೊಡುಗೆಗಳನ್ನು ರಾಜಕೀಯ ಪಕ್ಷಗಳು ಸಾರ್ವಜನಿಕರ ಹಣ ಬಳಸಿ ಚುನಾವಣೆಗೆ ಮೊದಲು ನೀಡಬಾರದು ಎಂಬ ನಿಯಮವನ್ನು ರೂಪಿಸುವಂತೆ ಚುನಾವಣಾ ಆಯೋಗಕ್ಕೆ ಸೂಚಿಸಬೇಕು' ಎಂಬ ಕೋರಿಕೆ ಕೂಡ ಅರ್ಜಿಯಲ್ಲಿ ಇದೆ.

# '10 ಲಕ್ಷ ಸಂಭಾಷಣೆಗಳ ಧ್ವನಿಮುದ್ರಣ'

## ಫೋನ್ ಕದ್ದಾಲಿಕೆ: 3 ಖಾಸಗಿ ವಾರ್‌ರೂಮ್‌ಗಳ ಸ್ಥಾಪನೆ

ಪ್ರಜಾವಾಣಿ ವಾರ್ತೆ

**ಹೈದರಾಬಾದ್:** ಫೋನ್ ಕದ್ದಾಲಿಕೆ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿರುವ, ತೆಲಂಗಾಣ ಪೊಲೀಸ್‌ನ ವಿಶೇಷ ಗುಪ್ತಚರ ಘಟಕದ (ಎಸ್‌ಐಬಿ) ಡಿಎಸ್‌ಪಿ ದುಗ್ಯಾಲ ಪ್ರಣೀತ್‌ರಾವ್, ಕನಿಷ್ಠ 10 ಲಕ್ಷದಷ್ಟು ಸಂಭಾಷಣೆಗಳ ಧ್ವನಿಮುದ್ರಣ ಮಾಡಿದ್ದು, ಬೃಹತ್ ಪ್ರಮಾಣದ ದತ್ತಾಂಶವನ್ನು ಹೊಂದಿದ್ದಾಗಿ ತಿಳಿಸಿದ್ದಾರೆ.

'ದುಗ್ಯಾಲ ಪ್ರಣೀತ್ ರಾವ್ ಮೂರು ಖಾಸಗಿ ವಾರ್‌ರೂಮ್‌ಗಳ ಕಾರ್ಯಾಚರಣೆ ನೋಡಿಕೊಳ್ಳುತ್ತಿದ್ದ. ಫೋನ್ ಕದ್ದಾಲಿಕೆ ಮಾಡುವುದಕ್ಕಾಗಿಯೇ ಖಾಸಗಿ ಸರ್ವರ್‌ಗಳನ್ನು ಹೊಂದಿದ್ದ' ಎಂದು ಹೈದರಾಬಾದ್ ಪೊಲೀಸರು ತಿಳಿಸಿದ್ದಾರೆ.

ಬಿಆರ್‌ಎಸ್ ಆಡಳಿತವಿದ್ದ ಅವಧಿಯಲ್ಲಿ ವಿರೋಧ ಪಕ್ಷಗಳ ನಾಯಕರ ಫೋನ್‌ಗಳ ಕದ್ದಾಲಿಕೆ ಮಾಡಿದ ಆರೋಪದಡಿ ಡಿಎಸ್‌ಪಿ ಪ್ರಣೀತ್ ರಾವ್ ಅವರನ್ನು ಬಂಧಿಸಲಾಗಿದೆ.

ಆಗ ವಿಪಕ್ಷ ನಾಯಕರಾಗಿದ್ದ ಹಾಗೂ ಹಾಲಿ ಮುಖ್ಯಮಂತ್ರಿ ರೇವಂತ ರೆಡ್ಡಿ, ರಿಯಲ್ ಎಸ್ಟೇಟ್ ಉದ್ಯಮಿಗಳು, ಅಧಿಕಾರಿಗಳು, ಕೆಲ ಮಾಧ್ಯಮ ಪ್ರತಿನಿಧಿಗಳ ಸಂಭಾಷಣೆಗಳನ್ನು ಕದ್ದಾಲಿಸಲಾಗಿದೆ ಎಂಬ ಆರೋಪವನ್ನು ರಾವ್ ಎದುರಿಸುತ್ತಿದ್ದಾರೆ.

ಕಳೆದ ಡಿಸೆಂಬರ್ 3ರಂದು ವಿಧಾನಸಭೆ ಚುನಾವಣೆಯ ಫಲಿತಾಂಶ ಪ್ರಕಟಗೊಂಡ ಬೆನ್ನಲ್ಲೇ, ರಾವ್ ಅವರು ಹಾರ್ಡ್ ಡ್ರೈವ್‌ಗಳನ್ನು ಸುಟ್ಟು ಹಾಕುವ ಮೂಲಕ ದತ್ತಾಂಶ ಹಾಳು ಮಾಡಿದ್ದಾರೆ ಎನ್ನಲಾಗಿದೆ.

ಸಿ.ಸಿ.ಟಿವಿ ಕ್ಯಾಮೆರಾಗಳನ್ನು ಸ್ವಿಚ್ ಆಫ್ ಮಾಡುವ ಮೂಲಕ ಈ ಕೃತ್ಯಗಳನ್ನು ಎಸಗಿದ್ದಾರೆ. ತಮ್ಮ ಈ ಕೃತ್ಯವನ್ನು ಮರೆಮಾಚುವುದಕ್ಕಾಗಿ, ಹೊಸ ಹಾರ್ಡ್ ಡಿಸ್ಕ್‌ಗಳನ್ನು ರಾವ್ ಅಳವಡಿಸಿದ್ದರು ಎಂದೂ ಆರೋಪಿಸಲಾಗಿದೆ.

ಎಸ್‌ಐಬಿ ಹೆಚ್ಚುವರಿ ಎಸ್ಪಿ ಡಿ.ರಮೇಶ್ ನೀಡಿರುವ ದೂರಿನನ್ವಯ, ಪ್ರಣೀತ್ ರಾವ್ ಅವರನ್ನು ಇತ್ತೀಚೆಗೆ ಬಂಧಿಸಿ, ನ್ಯಾಯಾಲಯದ ಮುಂದೆ ಹಾಜರುಪಡಿಸಲಾಗಿತ್ತು. ಏಳು ದಿನಗಳ ಕಾಲ ಪೊಲೀಸ್ ಕಸ್ಟಡಿಗೆ ನೀಡಲಾಗಿದೆ.

# ಸರ್ಕಾರದಿಂದ ಕಿರುಕುಳ– ಮೂಸೆವಾಲಾ ತಂದೆ

**ಚಂಡೀಗಢ (ಪಿಟಿಐ):** ಪಂಜಾಬಿ ಗಾಯಕ ದಿವಂಗತ ಸಿಧು ಮೂಸೆವಾಲಾ ಅವರ ತಂದೆ ಬಲಕೌರ್ ಸಿಂಗ್ ಅವರು, ತಮ್ಮ ಎರಡನೇ ಮಗನ ಜನನಕ್ಕೆ ಸಂಬಂಧಿಸಿದಂತೆ ಪಂಜಾಬ್ ಸರ್ಕಾರ ಕಿರುಕುಳ ನೀಡುತ್ತಿದೆ ಎಂದು ಆರೋಪಿಸಿದ್ದಾರೆ.

ಸಿಂಗ್ ಮತ್ತು ಅವರ ಪತ್ನಿ ಚರಣ್ ಕೌರ್ ಅವರಿಗೆ ಮಾರ್ಚ್ 17ರಂದು ಗಂಡು ಮಗು ಜನಿಸಿತ್ತು. ಅವರು ಐವಿಎಫ್ ನೆರವಿನಿಂದ ಎರಡನೇ ಮಗು ಪಡೆದಿದ್ದಾರೆ. ಗಾಯಕ ಸಿಧು ಅವರು ಎರಡು ವರ್ಷಗಳ ಹಿಂದೆ ಹಂತಕರ ಗುಂಡಿಗೆ ಬಲಿಯಾಗಿದ್ದರು.

'ಮಗು ಕಾನೂನುಬದ್ಧವಾಗಿದೆ ಎಂಬುದನ್ನು ಸಾಬೀತುಪಡಿಸುವಂತೆ ಪಂಜಾಬ್ ಸರ್ಕಾರ ಕೇಳುತ್ತಿದೆ. ಈ ಕುರಿತು ಬೆಳಿಗ್ಗೆಯಿಂದ ನನಗೆ ಕಿರುಕುಳ ನೀಡಲಾಗುತ್ತಿದೆ. ಮಗುವಿನ ದಾಖಲೆಗಳನ್ನು ಒದಗಿಸುವಂತೆ ಕೇಳುತ್ತಿದೆ' ಎಂದು ಆರೋಪಿಸಿ ಅವರು ಮಂಗಳವಾರ ಇನ್‌ಸ್ಟಾಗ್ರಾಮ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

**ವರದಿ ಕೇಳಿದ ಕೇಂದ್ರ:** 58ನೇ ವಯಸ್ಸಿನಲ್ಲಿ ಚರಣ್ ಕೌರ್ ಅವರು ಐವಿಎಫ್ ಚಿಕಿತ್ಸೆ ಪಡೆದಿರುವ ಕುರಿತ ಮಾಧ್ಯಮ ವರದಿಯನ್ನು ಉಲ್ಲೇಖಿಸಿ, ಕೇಂದ್ರ ಆರೋಗ್ಯ ಸಚಿವಾಲಯವು ಪಂಜಾಬ್ ಸರ್ಕಾರಕ್ಕೆ ಪತ್ರ ಬರೆದು ವಿಸ್ತೃತ ವರದಿ ಸಲ್ಲಿಸುವಂತೆ ಸೂಚಿಸಿದೆ.

'ಅಸಿಸ್ಟೆಡ್ ರಿಪ್ರೊಡಕ್ಟಿವ್ ಟೆಕ್ನಾಲಜಿ (ರೆಗ್ಯುಲೇಷನ್) ಕಾಯ್ದೆ–2021'ರ ಪ್ರಕಾರ ಮಹಿಳೆಗೆ ನಿಗದಿಪಡಿಸಲಾದ ವಯಸ್ಸಿನ ಮಿತಿಯು 21ರಿಂದ 50 ವರ್ಷಗಳ ನಡುವೆ ಇರಬೇಕು ಎಂದು ಪತ್ರದಲ್ಲಿ ಸೂಚಿಸಲಾಗಿದೆ ಎಂದು ಮೂಲಗಳು ಹೇಳಿವೆ. ಬಲಕೌರ್ ಅವರಿಗೆ 60 ಮತ್ತು ಚರಣ್ ಕೌರ್ ಅವರಿಗೆ 58 ವರ್ಷಗಳಾಗಿವೆ.

ಮೂಸೆವಾಲಾ ಅವರ ತಂದೆ ಮಾಡಿದ ಆರೋಪಗಳ ಬಗ್ಗೆ ಪಂಜಾಬ್ ಕಾಂಗ್ರೆಸ್ ಮುಖ್ಯಸ್ಥ ಅಮರಿಂದರ್ ಸಿಂಗ್ ರಾಜಾ ವಾರಿಂಗ್ ಮತ್ತು ಶಿರೋಮಣಿ ಅಕಾಲಿದಾಳದ ನಾಯಕ ಬಿಕ್ರಮ್ ಸಿಂಗ್ ಮಜಿಥಿಯಾ ಅವರು ಪಂಜಾಬ್ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

# 'ಕಾನೂನುಬದ್ಧವಾಗಿಯೇ ಬಾಂಡ್ ಖರೀದಿ'

**ಕೊಚ್ಚಿ (ಪಿಟಿಐ):** 'ದೇಶದಲ್ಲಿ ಪ್ರಸ್ತುತ ಇರುವ ಕಾನೂನುಗಳಿಗೆ ಅನುಗುಣವಾಗಿಯೇ ನನ್ನ ಕಂಪನಿಯು ಚುನಾವಣಾ ಬಾಂಡ್‌ಗಳನ್ನು ಖರೀದಿಸಿದೆ. ಆದರೆ ಇದಕ್ಕೆ ಪ್ರತಿಯಾಗಿ ಯಾವುದೇ ಸರ್ಕಾರದಿಂದ ಒಂದು ರೂಪಾಯಿ ನೆರವನ್ನೂ ಪಡೆದಿಲ್ಲ' ಎಂದು ಪ್ರಸಿದ್ಧ ಕೈಗಾರಿಕೋದ್ಯಮಿ ಸಾಬು ಎಂ ಜೇಕಬ್ ತಿಳಿಸಿದರು.

'ಯಾವುದೇ ರಾಜ್ಯ ಅಥವಾ ಕೇಂದ್ರ ಸರ್ಕಾರದಿಂದ ಯಾವುದೇ ರೀತಿಯಲ್ಲಿ ಕಾನೂನು ಬಾಹಿರ ಕೊಡುಗೆ ಸ್ವೀಕರಿಸಿರುವುದು ಕಂಡುಬಂದರೆ, ನಾನು ಸ್ಥಾಪಿಸಿರುವ 'ಟ್ವೆಂಟಿ20' ರಾಜಕೀಯ ಪಕ್ಷದ ಎಲ್ಲ ಚಟುವಟಿಕೆಗಳನ್ನು ಕೊನೆಗೊಳಿಸುತ್ತೇನೆ' ಎಂದು ಅವರು ಘೋಷಿಸಿದರು.

ತನ್ನ ಒಡೆತನದ, ಉಡುಪುಗಳ ತಯಾರಿಕಾ ಕಂಪನಿಯಾದ 'ಕಿಟೆಕ್ಸ್ ಗ್ರೂಪ್' ವಿವಿಧ ರಾಜಕೀಯ ಪಕ್ಷಗಳಿಗೆ



SBI
भारतीय स्टेट बैंक STATE BANK OF INDIA
इलेक्टोरल बॉन्ड/ELECTORAL BOND
SAMPLE

ಚುನಾವಣಾ ಬಾಂಡ್‌ಗಳನ್ನು ಖರೀದಿಸಿದೆ ಎಂಬುದನ್ನು ಒಪ್ಪಿಕೊಂಡ ಜೇಕಬ್ ಅವರು, ಈ ಕುರಿತು ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆ ನಡೆಯುತ್ತಿರುವ ಕಾರಣ ಹೆಚ್ಚಿನ ವಿವರಗಳನ್ನು ಬಹಿರಂಗಪಡಿಸುವುದಿಲ್ಲ ಎಂದು ಹೇಳಿದರು.

'ನಾನು ರಾಜಕೀಯ ಪಕ್ಷದ ಮುಖ್ಯಸ್ಥನಾಗಿದ್ದರೂ, ನನ್ನ ವ್ಯಾಪಾರ ಸಂಸ್ಥೆಯಿಂದ ಇತರ ರಾಜಕೀಯ ಪಕ್ಷಗಳಿಗೆ ಕೊಡುಗೆಗಳನ್ನು ನೀಡುವುದರಿಂದ ನನ್ನ ರಾಜಕೀಯ ಮತ್ತು ಸಿದ್ಧಾಂತ ಬದಲಾದಂತೆ ಆಗುವುದಿಲ್ಲ' ಎಂದು ಅವರು ಪ್ರತಿಕ್ರಿಯಿಸಿದರು.

'ನನ್ನ ಕಂಪನಿಯು ಚುನಾವಣಾ ಬಾಂಡ್‌ಗಳ ಖರೀದಿ ಸೇರಿದಂತೆ ಎಲ್ಲ ಚಟುವಟಿಕೆಗಳನ್ನು ಪಾರದರ್ಶಕವಾಗಿ ಮಾಡಿದೆ. ಲೆಕ್ಕ ಪರಿಶೋಧನೆಯ ಬಳಿಕ ಕಂಪನಿಯು ಬ್ಯಾಲೆನ್ಸ್ ಶೀಟ್ ಅನ್ನು ಪ್ರಕಟಿಸಲಾಗುತ್ತದೆ. ಈ ವಿಷಯದಲ್ಲಿ ಮುಚ್ಚಿಡಲು ಏನೂ ಇಲ್ಲ' ಎಂದು ಅವರು ಹೇಳಿದರು.

'ಟ್ವೆಂಟಿ20' ಪಕ್ಷವು 2015ರಲ್ಲಿ ರಚನೆಯಾಗಿದ್ದು, ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಚಾಲಕುಡಿ, ಎರ್ನಾಕುಲಂ ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಘೋಷಿಸಿದೆ.

**ರೈತರ ಪ್ರತಿಭಟನೆ** ಪಂಜಾಬ್‌ನ ಅಮೃತಸರ ರೈಲು ನಿಲ್ದಾಣದಲ್ಲಿ ಬುಧವಾರ ಪ್ರತಿಭಟನೆ ನಡೆಸಿದ ರೈತರು ತಮ್ಮ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ ನೀಡಬೇಕು ಎಂದು ಆಗ್ರಹಿಸಿದರು

# 'ಜಾಮೀನು ಹಕ್ಕು ನಿರಾಕರಣೆ ತಪ್ಪು'

ಒಂದನೇ ಪುಟದಿಂದ

ನಾಲ್ಕು ಹೆಚ್ಚುವರಿ ದೋಷಾರೋಪ ಪಟ್ಟಿ ಸಲ್ಲಿಕೆಯಾದ ನಂತರವೂ ಈ ಪ್ರಕರಣದಲ್ಲಿ ತನಿಖೆಯು ಇನ್ನೂ ಮುಂದುವರಿಯುತ್ತಿದೆ ಎಂದು ಪೀಠವು ಇ.ಡಿ ಪರವಾಗಿ ಹಾಜರಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ. ರಾಜು ಅವರಿಗೆ ಹೇಳಿತು.

'ವಿಚಾರಣೆ ಶುರುವಾಗದ ಹೊರತು ವ್ಯಕ್ತಿಯನ್ನು ವಶಕ್ಕೆ ತೆಗೆದುಕೊಳ್ಳುವಂತಿಲ್ಲ. ಹಾಗೆ ಮಾಡುವುದು ಬಂಧನಕ್ಕೆ ಸಮ ಆಗುತ್ತದೆ, ಅದು ವ್ಯಕ್ತಿಯ ಸ್ವಾತಂತ್ರ್ಯದ ಮೇಲೆ ಪರಿಣಾಮ ಉಂಟುಮಾಡುತ್ತದೆ' ಎಂದು ಪೀಠವು ಹೇಳಿತು. ಪೂರಕ ದೋಷಾರೋಪಪಟ್ಟಿ ಸಲ್ಲಿಸುವ ಮೂಲಕ ವ್ಯಕ್ತಿಯ ಜಾಮೀನಿನ ಹಕ್ಕನ್ನು ನಿರಾಕರಿಸಲು ಆಗದು ಎಂದು ನ್ಯಾಯಮೂರ್ತಿ ಖನ್ನಾ ಹೇಳಿದರು.

ಆರೋಪಿಯು 18 ತಿಂಗಳುಗಳಿಂದ ಜೈಲಿನಲ್ಲಿ ಇದ್ದಾರೆ. ಪೂರಕ ದೋಷಾರೋಪ ಪಟ್ಟಿಯನ್ನು ಒಂದಾದ ನಂತರ ಒಂದರಂತೆ ಸಲ್ಲಿಸಲಾಗುತ್ತಿದೆ. ಇದರ ಪರಿಣಾಮವಾಗಿ ವಿಚಾರಣೆಯು ವಿಳಂಬವಾಗುತ್ತಿದೆ ಎಂದು ಅವರು ಹೇಳಿದರು.

'ನಮ್ಮನ್ನು ಚಿಂತೆಗೀಡುಮಾಡಿರುವುದೇ ಇದು. ಕಾಲಮಿತಿಯಲ್ಲಿ ದೋಷಾರೋಪ ಪಟ್ಟಿ ಸಲ್ಲಿಕೆಯಾಗದಿದ್ದಾಗ ಜಾಮೀನು ಪಡೆಯುವುದು ಆರೋಪಿಯ ಹಕ್ಕು. ಪೂರಕ ಆರೋಪಪಟ್ಟಿಗಳನ್ನು ಸಲ್ಲಿಸುತ್ತ ಈ ಹಕ್ಕನ್ನು ನಿರಾಕರಿಸಲು ಆಗದು' ಎಂದು ನ್ಯಾಯಮೂರ್ತಿ ಖನ್ನಾ ಹೇಳಿದರು.

'ನಾವು ಇದನ್ನು ಮನೀಶ್ ಸಿಸೋಡಿಯಾ ಪ್ರಕರಣದಲ್ಲಿಯೂ ಹೇಳಿದ್ದೇವೆ. ಜೈಲುವಾಸ ಸುದೀರ್ಘವಾದಾಗ, ವಿಚಾರಣೆ ಆರಂಭವಾಗುವುದು ಅನಗತ್ಯವಾಗಿ ವಿಳಂಬವಾದಾಗ ನ್ಯಾಯಾಲಯವು ಜಾಮೀನು ಮಂಜೂರು ಮಾಡಬಹುದು' ಎಂದು ಅವರು ವಿವರಿಸಿದರು. ವಿಚಾರಣೆಯನ್ನು ಏಪ್ರಿಲ್ 29ಕ್ಕೆ ಮುಂದೂಡಲಾಗಿದೆ.

# ಅಮೆರಿಕದಲ್ಲಿ ಹೈದರಾಬಾದ್‌ನ ವಿದ್ಯಾರ್ಥಿ ನಾಪತ್ತೆ: ಹಣಕ್ಕೆ ಬೇಡಿಕೆ

**ಹೈದರಾಬಾದ್ (ಪಿಟಿಐ):** ಅಮೆರಿಕದಲ್ಲಿ ವ್ಯಾಸಂಗ ಮಾಡುತ್ತಿರುವ ಹೈದರಾಬಾದ್ ಮೂಲದ 25 ವರ್ಷದ ವಿದ್ಯಾರ್ಥಿ ಮಾರ್ಚ್ 7ರಂದು ನಾಪತ್ತೆಯಾಗಿದ್ದು, ಆತನ ಬಿಡುಗಡೆಗೆ 1200 ಡಾಲರ್ (₹1 ಲಕ್ಷ) ನೀಡುವಂತೆ ವಿದ್ಯಾರ್ಥಿ ಕುಟುಂಬದವರಿಗೆ ಕರೆ ಬಂದಿದೆ.

ಇಲ್ಲಿನ ನಾಚಾರಂನ ನಿವಾಸಿ ಮೊಹಮ್ಮದ್ ಅಬ್ದುಲ್ ಅವರು ಅಮೆರಿಕದ ಕ್ಲೀವ್‌ಲ್ಯಾಂಡ್ ವಿಶ್ವವಿದ್ಯಾಲಯದಲ್ಲಿ ಐ.ಟಿ ಸ್ನಾತಕೋತ್ತರ ಪದವಿ ವ್ಯಾಸಂಗಕ್ಕಾಗಿ 2023ರ ಮೇ ತಿಂಗಳಿನಲ್ಲಿ ಹೋಗಿದ್ದರು. ಅವರು ಕ್ಲೀವ್‌ಲ್ಯಾಂಡ್‌ನಲ್ಲಿ ನೆಲೆಸಿದ್ದರು ಎಂದು ಅವರ ಕುಟುಂಬದವರು ತಿಳಿಸಿದರು.

'ನನ್ನ ಮಗನ ಜತೆಗೆ ಮಾರ್ಚ್ 7ರಂದು ಕೊನೆಯದಾಗಿ ಮಾತನಾಡಿದ್ದೇನೆ. ನಂತರ ಅವನು ಕುಟುಂಬದವರೊಂದಿಗೆ ಸಂಪರ್ಕದಲ್ಲಿ ಇಲ್ಲ. ಅವನ ಮೊಬೈಲ್ ಸ್ವಿಚ್ಡ್‌ಆಫ್ ಆಗಿದೆ' ಎಂದು ಅಬ್ದುಲ್ ಅವರ ತಂದೆ ಮೊಹಮ್ಮದ್ ಸಲೀಂ ಹೇಳಿದರು.

ಅಮೆರಿಕದಲ್ಲಿ ಅಬ್ದುಲ್ ಅವರ ಜತೆಯಲ್ಲಿ ವಾಸವಿರುವವರು ಕ್ಲೀವ್‌ಲ್ಯಾಂಡ್ ಪೊಲೀಸರಿಗೆ, ಅಬ್ದುಲ್ ಕಾಣೆಯಾದ ಕುರಿತು ದೂರು ದಾಖಲಿಸಿದ್ದಾರೆ ಎಂದು ಅವರು ತಿಳಿಸಿದರು.

'ಅಪರಿಚಿತ ಸಂಖ್ಯೆಯಿಂದ ಮಾರ್ಚ್ 19ರಂದು ನನಗೆ ಕರೆ ಬಂದಿತು. ಕರೆ ಮಾಡಿದವರು ಅಬ್ದುಲ್‌ನನ್ನು ಡ್ರಗ್ಸ್ ಮಾರಾಟ ಮಾಡುವ ಗ್ಯಾಂಗ್ ಅಪಹರಿಸಿದೆ. ಬಿಡುಗಡೆಗೆ 1,200 ಡಾಲರ್ ನೀಡಬೇಕು ಎಂದು ಕೇಳಿದರು' ಎಂದು ಸಲೀಂ ಮಾಹಿತಿ ನೀಡಿದರು.

'ಮಗನ ಜತೆ ಮಾತನಾಡಬೇಕು ಎಂದು ನಾನು ಕೇಳಿದಾಗ, ಅದನ್ನು ಅವರು ನಿರಾಕರಿಸಿದರು. ಅಲ್ಲದೆ ಹಣ ನೀಡದಿದ್ದರೆ ಅಬ್ದುಲ್‌ನ ಕಿಡ್ನಿ ಮಾರಾಟ ಮಾಡುವುದಾಗಿ, ಕರೆ ಮಾಡಿದ ವ್ಯಕ್ತಿ ಬೆದರಿಕೆ ಹಾಕಿದ್ದಾನೆ' ಎಂದು ಅವರು ಆತಂಕದಿಂದ ಹೇಳಿದರು.

ಮಗನನ್ನು ಪತ್ತೆ ಹಚ್ಚಿ, ಸುರಕ್ಷಿತವಾಗಿ ಕರೆತರಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವಂತೆ ಅಬ್ದುಲ್ ಅವರ ಪೋಷಕರು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದ್ದಾರೆ. ಈ ಸಂಬಂಧ ಸಲೀಂ ಅವರು ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರಿಗೆ ಪತ್ರ ಬರೆದು ಕೋರಿದ್ದಾರೆ.

# ಎ.ಸಿ. ಬೋಗಿಯ ಅವ್ಯವಸ್ಥೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ದೆಹಲಿಯ ಸರ್ರೈ ರೋಹಿಲ್ಲಾ ಮತ್ತು ಉದಯಪುರ ನಡುವೆ ಸಂಚರಿಸುವ 'ಚೇತಕ್ ಎಕ್ಸ್‌ಪ್ರೆಸ್' ರೈಲಿನ ಹವಾನಿಯಂತ್ರಿತ ಬೋಗಿಯಲ್ಲಿ (ಎ.ಸಿ) ಪ್ರಯಾಣಿಕರು ಕಿಕ್ಕಿರಿದು ತುಂಬಿರುವ ಫೋಟೊವನ್ನು ಪ್ರಯಾಣಿಕಯೊಬ್ಬರು 'ಎಕ್ಸ್' ಮಾಧ್ಯಮದಲ್ಲಿ ಹಂಚಿಕೊಂಡಿದ್ದು, ಇದಕ್ಕೆ ಸಾಮಾಜಿಕ ಮಾಧ್ಯಮದಲ್ಲಿ ಭಾರಿ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಭಾರತೀಯ ರೈಲ್ವೆ, ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರಿಗೂ ಈ ಫೋಟೊವನ್ನು ಮಹಿಳೆ ಟ್ಯಾಗ್ ಮಾಡಿದ್ದು, ಎಕ್ಸ್ ಮಾಧ್ಯಮದಲ್ಲಿ ಹಂಚಿಕೊಂಡ 24 ಗಂಟೆಗಳಲ್ಲಿ 16 ಲಕ್ಷ ವೀಕ್ಷಣೆಗಳನ್ನು ಪಡೆದುಕೊಂಡಿದೆ.

'ತ್ರಿ ಟೈರ್' ಎ.ಸಿ. ಕೋಚ್‌ನಲ್ಲಿ ಹಲವು ಮಂದಿ ಪ್ರಯಾಣಿಕರು ನಿಂತುಕೊಂಡೇ ಪ್ರಯಾಣಿಸುತ್ತಿರುವ ಫೋಟೊವನ್ನು ಹಂಚಿಕೊಂಡಿರುವ ಮಹಿಳೆಯು, 'ಎ.ಸಿ. ಬೋಗಿಯಲ್ಲಿ ಪ್ರಯಾಣಿಸಲು ಹಣ ಪಾವತಿಸಿ, ಸಾಮಾನ್ಯ ಬೋಗಿಯಲ್ಲಿ ಪ್ರಯಾಣಿಸುವವರಂತೆ ತೊಂದರೆ

'ಎಕ್ಸ್' ವೇದಿಕೆಯಲ್ಲಿ ಮಹಿಳೆ ಹಂಚಿಕೊಂಡಿರುವ ಚಿತ್ರ

ಅನುಭವಿಸಬೇಕೆ ಎಂದು ಪ್ರಶ್ನಿಸಿದ್ದಾರೆ.

ಎ.ಸಿ. ಬೋಗಿಯಲ್ಲಿ ಸರಿಯಾಗಿ ಕುಳಿತುಕೊಳ್ಳಲೂ ಸಾಧ್ಯವಾಗದ ಸ್ಥಿತಿ ಇದೆ ಎಂದೂ ಅವರು ಅಳಲು ತೋಡಿಕೊಂಡಿದ್ದಾರೆ ಎಂದು 'ಎನ್‌ಡಿಟಿವಿ' ವರದಿ ಮಾಡಿದೆ. ಮಹಿಳೆಯ ಪೋಸ್ಟ್‌ಗೆ ಪ್ರತಿಕ್ರಿಯಿಸಿರುವ ರೈಲ್ವೆಯು, ಪಿಎನ್‌ಆರ್ ಸಂಖ್ಯೆ, ಮೊಬೈಲ್ ಸಂಖ್ಯೆ ಮತ್ತು ವಿಳಾಸವನ್ನು ಕೇಳಿದೆ.

'ಚಿತ್ರದಲ್ಲಿರುವುದು ಎ.ಸಿ. ಬೋಗಿಯಾದರೆ ಅದರಲ್ಲಿ ಫ್ಯಾನ್ ಕಾಣಿಸುತ್ತಿದೆಯಲ್ಲಾ' ಎಂದು ಎಕ್ಸ್ ಬಳಕೆದಾರರೊಬ್ಬರು ಮಹಿಳೆಯನ್ನು ಪ್ರಶ್ನಿಸಿದ್ದರು. ಇದಕ್ಕೆ ಪ್ರತಿಕ್ರಿಯೆಯಾಗಿ, ಎ.ಸಿ. ಬೋಗಿಗೆ ಇರುವ ಗಾಜಿನ ಕಿಟಕಿ ಚಿತ್ರವನ್ನೂ ಮಹಿಳೆ ಹಂಚಿಕೊಂಡಿದ್ದಾರೆ.

'ಸಂಬಂಧಪಟ್ಟವರು ವಂದೇ ಭಾರತ್ ಮತ್ತು ಬುಲೆಟ್ ಟ್ರೈನ್ ಸೇವೆ ಒದಗಿಸುವಲ್ಲಿ ನಿರತರಾಗಿದ್ದಾರೆ. ಇದರಿಂದಾಗಿ ಇಂತಹ ಮೂಲ ಸೌಕರ್ಯಗಳನ್ನು ನಿರ್ಲಕ್ಷಿಸುತ್ತಿದ್ದಾರೆ' ಎಂದು ಮತ್ತೊಬ್ಬರು ಪ್ರತಿಕ್ರಿಯಿಸಿದ್ದಾರೆ.

# ಸದ್ಗುರುಗೆ ಮಿದುಳು ಶಸ್ತ್ರಚಿಕಿತ್ಸೆ



**ನವದೆಹಲಿ (ಪಿಟಿಐ):** ಸದ್ಗುರು ಜಗ್ಗಿ ವಾಸುದೇವ್ ಅವರು ಮಿದುಳು ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದಾರೆ. ಮಿದುಳಿಗೆ ರಕ್ಷಾ ಕವಚದಂತಿರುವ ಸ್ನಾಯುವಿನಲ್ಲಿ ರಕ್ತ ಸಂಗ್ರಹಗೊಂಡಿದ್ದರಿಂದ ಬಳಲುತ್ತಿದ್ದ ಸದ್ಗುರು ಅವರಿಗೆ ಮಾರ್ಚ್ 17ರಂದು ಶಸ್ತ್ರಚಿಕಿತ್ಸೆ ನೆರವೇರಿಸಲಾಗಿದೆ ಎಂದು ದೆಹಲಿಯ ಇಂದ್ರಪ್ರಸ್ಥ ಅಪೊಲೊ ಆಸ್ಪತ್ರೆ ಬುಧವಾರ ತಿಳಿಸಿದೆ.

ಚಿಕಿತ್ಸೆ ಬಳಿಕ, ಸದ್ಗುರು ಅವರಿಗೆ ವೆಂಟಿಲೇಟರ್ ಅಳವಡಿಸಿ ಚಿಕಿತ್ಸೆ ಮುಂದುವರಿಸಲಾಗಿತ್ತು. ಈಗ, ಅವರ ಆರೋಗ್ಯ ಸುಧಾರಿಸುತ್ತಿದೆ ಎಂದು ವೈದ್ಯರು ತಿಳಿಸಿದ್ದಾರೆ.

ನಾಲ್ಕು ವಾರಗಳಿಂದ ತೀವ್ರ ತಲೆ ನೋವಿನಿಂದ ಬಳಲುತ್ತಿದ್ದರೂ, ಸದ್ಗುರು ಅವರು ತಮ್ಮ ದೈನಂದಿನ ಚಟುವಟಿಕೆಗಳಲ್ಲಿ ನಿರತರಾಗಿರುತ್ತಿದ್ದರು. ಮಾರ್ಚ್ 8ರಂದು ಮಹಾಶಿವರಾತ್ರಿ ಅಂಗವಾಗಿ ಕಾರ್ಯಕ್ರಮವನ್ನೂ ಆಯೋಜಿಸಿದ್ದರು.

'ಮಾರ್ಚ್ 15ರ ವೇಳೆಗೆ ತಲೆ ನೋವು ತೀವ್ರಗೊಂಡಾಗ, ಆಸ್ಪತ್ರೆಯ ಹಿರಿಯ ನರರೋಗ ತಜ್ಞ ಡಾ.ವಿನೀತ್ ಸೂರಿ ಅವರನ್ನು ದೂರವಾಣಿ ಮೂಲಕ ಸಂಪರ್ಕಿಸಿ, ತೊಂದರೆ ವಿವರಿಸಿದರು. ಕೂಡಲೇ ಎಂಆರ್‌ಐ ಸ್ಕ್ಯಾನಿಂಗ್ ಮಾಡಿಸುವಂತೆ ಡಾ.ಸೂರಿ ಸಲಹೆ ನೀಡಿದರು. ನಂತರ, ಅವರಿಗೆ ಶಸ್ತ್ರಚಿಕಿತ್ಸೆ ನೆರವೇರಿಸಲಾಯಿತು' ಎಂದು ಆಸ್ಪತ್ರೆಯ ಪ್ರಕಟಣೆ ತಿಳಿಸಿದೆ.

## 'ಐಎಸ್ ಇಂಡಿಯಾ' ಮುಖ್ಯಸ್ಥನ ಸೆರೆ

**ಗುವಾಹಟಿ (ಪಿಟಿಐ):** ಉಗ್ರ ಸಂಘಟನೆ ಇಸ್ಲಾಮಿಕ್ ಸ್ಟೇಟ್‌ನ (ಐಎಸ್) ಭಾರತ ಘಟಕದ ಮುಖ್ಯಸ್ಥ ಹಾಗೂ ಆತನ ಒಬ್ಬ ಸಹಚರನನ್ನು ಅಸ್ಸಾಂನ ಧುಬ್ರಿ ಜಿಲ್ಲೆಯಲ್ಲಿ ಬುಧವಾರ ಬಂಧಿಸಲಾಗಿದೆ.

ಉಗ್ರ ಸಂಘಟನೆಯ ಭಾರತ ಘಟಕದ ಮುಖ್ಯಸ್ಥ ಹ್ಯಾರಿಸ್ ಫಾರೂಕಿ ಅಲಿಯಾಸ್ ಹರೀಶ್ ಅಜ್ಮಲ್ ಫಾರೂಕಿ ಹಾಗೂ ಆತನ ಸಹಚರ ಅನುರಾಗ್ ಸಿಂಗ್ ಅಲಿಯಾಸ್ ರೇಹಾನ್ ಬಂಧಿತರು.

ಬಾಂಗ್ಲಾದೇಶ ಗಡಿ ದಾಟಿ, ದೇಶದೊಳಗೆ ನುಗ್ಗುತ್ತಿದ್ದಂತೆಯೇ ಈ ಇಬ್ಬರನ್ನು ಬಂಧಿಸಲಾಯಿತು ಎಂದು ಅಸ್ಸಾಂ ಪೊಲೀಸ್‌ನ ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ ಪ್ರಣವಜ್ಯೋತಿ ಗೋಸ್ವಾಮಿ ತಿಳಿಸಿದ್ದಾರೆ.

'ಅನುರಾಗ್ ಸಿಂಗ್ ಇಸ್ಲಾಮ್‌ಗೆ ಮತಾಂತರಗೊಂಡಿದ್ದರೆ, ಆತನ ಪತ್ನಿ ಬಾಂಗ್ಲಾದೇಶಿ ಪ್ರಜೆ' ಎಂದರು.

'ಬಂಧಿತರು ದೇಶದಲ್ಲಿ ಐಎಸ್‌ನ ಚಟುವಟಿಕೆ ವಿಸ್ತರಿಸಲು ಪಿತೂರಿ ನಡೆಸುತ್ತಿದ್ದರು. ಉಗ್ರ ಸಂಘಟನೆಗೆ ನೇಮಕಾತಿ, ಹಣಕಾಸು ನೆರವು, ಕಚ್ಚಾಬಾಂಬ್ ಬಳಸಿ ವಿಧ್ವಂಸಕ ಕೃತ್ಯ ನಡೆಸಲು ಸಂಚು ರೂಪಿಸುತ್ತಿದ್ದರು' ಎಂದಿದ್ದಾರೆ.

# ಚುನಾವಣೆ: ಸಿಎ ಪರೀಕ್ಷಾ ವೇಳಾಪಟ್ಟಿ ಪರಿಷ್ಕರಣೆ

**ನವದೆಹಲಿ (ಪಿಟಿಐ):** ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಭಾರತೀಯ ಲೆಕ್ಕ ಪರಿಶೋಧಕ ಸಂಸ್ಥೆಯು (ಐಸಿಎಐ) ತನ್ನ ಪರೀಕ್ಷೆಗಳ ವೇಳಾಪಟ್ಟಿಯನ್ನು ಪರಿಷ್ಕರಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಚಾರ್ಟೆಡ್ ಅಕೌಂಟೆಂಟ್ (ಸಿಎ) ಪರೀಕ್ಷೆಗಳನ್ನು ಈ ಹಿಂದೆ ನಿರ್ಧರಿಸಿದಂತೆ ಮೇ ತಿಂಗಳಲ್ಲಿನಲ್ಲಿಯೇ ನಡೆಸಲಾಗುವುದು. ಆದರೆ ಕೆಲ ದಿನಾಂಕಗಳನ್ನು ಪರಿಷ್ಕರಿಸಲಾಗಿದೆ ಎಂದು ಐಸಿಎಐ ತಿಳಿಸಿದೆ.

ಪರಿಷ್ಕೃತ ವೇಳಾಪಟ್ಟಿಯ ಪ್ರಕಾರ, ಗ್ರೂಪ್ 1ರ ಇಂಟರ್‌ಮೀಡಿಯೇಟ್ ಕೋರ್ಸ್ ಪರೀಕ್ಷೆಯು ಮೇ 3, 5 ಮತ್ತು 9ರಂದು ನಡೆಯಲಿದೆ. ಮೊದಲು ಈ ಪರೀಕ್ಷೆಗಳನ್ನು ಮೇ 3, 5 ಮತ್ತು 7ರಂದು ನಿಗದಿಪಡಿಸಲಾಗಿತ್ತು.

ಗ್ರೂಪ್ 2ರ ಇಂಟರ್‌ಮೀಡಿಯೇಟ್ ಕೋರ್ಸ್ ಪರೀಕ್ಷೆಯು ಮೇ 11, 15 ಮತ್ತು 17ರಂದು ನಡೆಯಲಿದೆ. ಈ ಮೊದಲು ಮೇ 9, 11 ಮತ್ತು 13ರಂದು ಪರೀಕ್ಷೆಯನ್ನು ನಿಗದಿಪಡಿಸಲಾಗಿತ್ತು.

ಗ್ರೂಪ್ 1ರ ಅಂತಿಮ ಪರೀಕ್ಷೆಯನ್ನು ಮೇ 2, 4 ಮತ್ತು 8ರಂದು ನಡೆಸಲಾಗುತ್ತದೆ. ಈ ಪರೀಕ್ಷೆಗಳನ್ನು ಈ ಹಿಂದೆ ಮೇ 2,4 ಮತ್ತು 6ರಂದು ನಡೆಸಲು ನಿಗದಿಪಡಿಸಲಾಗಿತ್ತು. ಗ್ರೂಪ್ 2ರ ಅಂತಿಮ ಪರೀಕ್ಷೆಯನ್ನು ಮೇ 10, 14 ಮತ್ತು 16ರಂದು ನಡೆಸಲಾಗುತ್ತದೆ. ಈ ಪರೀಕ್ಷೆಗಳನ್ನು ಈ ಮೊದಲು ಮೇ 8, 10 ಮತ್ತು 12ರಂದು ನಡೆಸಲು ನಿಗದಿಪಡಿಸಲಾಗಿತ್ತು.

ಮೂರನೇ ಮಗು ಕೊಲೆಗಾರರಿಂದ ಪಾರು • ಒಬ್ಬಾತ ಎನ್‌ಕೌಂಟರ್‌ಗೆ ಬಲಿ

# ಇಬ್ಬರು ಮಕ್ಕಳನ್ನು ಕೊಂದ ಕ್ಷೌರಿಕರು

ಪ್ರಜಾವಾಣಿ ವಾರ್ತೆ

**ಲಖನೌ:** ಕ್ಷೌರಿಕ ವೃತ್ತಿ ನಡೆಸುತ್ತಿದ್ದ ಇಬ್ಬರು ಸಹೋದರರು ತಮ್ಮ ಸಲೂನ್ ಶಾಪ್ ಸಮೀಪದ ಪರಿಚಿತರ ಮನೆಯ ಇಬ್ಬರು ಮಕ್ಕಳನ್ನು ಚಾಕುವಿನಿಂದ ಇರಿದು ಹತ್ಯೆ ಮಾಡಿರುವ ಆಘಾತಕಾರಿ ಘಟನೆ ಉತ್ತರಪ್ರದೇಶದ ಬದೌನ್ ಪಟ್ಟಣದಲ್ಲಿ ನಡೆದಿದೆ.

ಕೊಲೆಯಾದ 13 ವರ್ಷ ಮತ್ತು 6 ವರ್ಷದ ಮಕ್ಕಳು ಇಬ್ಬರು ಸಹೋದರರು. ಮೂರನೇ ಮಗು ಕೊಲೆಗಾರರಿಂದ ತಪ್ಪಿಸಿಕೊಳ್ಳುವಲ್ಲಿ ಯಶಸ್ವಿಯಾಗಿದೆ.

ಮಂಗಳವಾರ ರಾತ್ರಿ ಈ ಘಟನೆ ನಡೆದ ಕೆಲವೇ ತಾಸುಗಳಲ್ಲಿ ಆರೋಪಿ ಸಾಜಿದ್ ಎಂಬಾತ ಪೊಲೀಸರ ಎನ್‌ಕೌಂಟರ್‌ಗೆ ಬಲಿಯಾಗಿದ್ದಾನೆ. ಇತರ ಆರೋಪಿಗಳಾದ ಜಾವೇದ್ ಮತ್ತು ಅವರ ತಂದೆ ಹಾಗೂ ಚಿಕ್ಕಪ್ಪನನ್ನು ಬಂಧಿಸಲಾಗಿದೆ. ಇನ್ನಿಬ್ಬರ ಬಂಧನಕ್ಕೆ ತೀವ್ರ ಶೋಧ ಮುಂದುವರಿದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮಕ್ಕಳ ಹತ್ಯೆಯಿಂದ ಪಟ್ಟಣದಲ್ಲಿ ಕೋಮು ಉದ್ವಿಗ್ನತೆಯ ಪರಿಸ್ಥಿತಿ ನಿರ್ಮಾಣವಾಗಿದೆ. ಆಕ್ರೋಶಿತ ಜನರ ಗುಂಪು ಆರೋಪಿಗಳ ಸಲೂನ್ ಶಾಪ್ ಸೇರಿದಂತೆ ಕೆಲವು ಅಂಗಡಿ ಮುಂಗಟ್ಟುಗಳಿಗೆ ಬೆಂಕಿ ಹಚ್ಚಿದ್ದಾರೆ. ಸ್ಥಳೀಯ ಪೊಲೀಸ್ ಠಾಣೆಯ ಎದುರು ಗಲಾಟೆ ನಡೆಸಿ, ಉಳಿದಿಬ್ಬರು ಆರೋಪಿಗಳ ಬಂಧನಕ್ಕೆ ಆಗ್ರಹಿಸಿದ್ದಾರೆ. ಅಹಿತಕರ ಘಟನೆ ನಡೆಯದಂತೆ ಸ್ಥಳದಲ್ಲಿ ಭದ್ರತಾ ಸಿಬ್ಬಂದಿ ನಿಯೋಜಿಸಲಾಗಿದೆ.

**ಘಟನೆ ವಿವರ:** ಪೊಲೀಸ್ ಮೂಲಗಳ ಪ್ರಕಾರ, ಸಲೂನ್ ಶಾಪ್ ನಡೆಸುತ್ತಿದ್ದ ಸಾಜಿದ್ ಮತ್ತು ಆತನ ಸಹೋದರ ಜಾವೇದ್ ಹಾಗೂ ಸಹಚರರು ಮಂಗಳವಾರ ಸಂಜೆ, ಸಂತ್ರಸ್ತ ಮಕ್ಕಳ ಮನೆಗೆ ಹೋಗಿದ್ದಾರೆ. ಸಾಜಿದ್ ಮನೆಯೊಳಗೆ ಹೋದರೆ, ಜಾವೇದ್ ಮತ್ತು ಸಹಚರರು ಹೊರಗೆ ಕಾಯುತ್ತಿದ್ದರು. ಈ ಮಕ್ಕಳ ಕುಟುಂಬಕ್ಕೆ ಆತ್ಮೀಯನಾಗಿದ್ದ ಸಾಜಿದ್, ಮಕ್ಕಳ ತಾಯಿಯಿಂದ ₹5 ಸಾವಿರ ಸಾಲ ಕೇಳಿ ಪಡೆದುಕೊಂಡಿದ್ದು, ಆ ಇಬ್ಬರು ಮಕ್ಕಳೊಂದಿಗೆ ಮನೆಯ ಮಹಡಿಗೆ ಹೋಗಿದ್ದಾನೆ. ಅಲ್ಲಿ ಅವರನ್ನು ಚಾಕುವಿನಿಂದ ಹತ್ಯೆ ಮಾಡಿದ್ದಾನೆ. ಸಾಜಿದ್‌ಗೆ ನೀರು ಕೊಡಲು ಮಹಡಿಗೆ ಹೋದ ಇದೇ ಮನೆಯ ಇನ್ನೊಂದು ಮಗು ಘಟನೆಗೆ ಸಾಕ್ಷಿಯಾಗಿದೆ. ಆಗ, ಸಾಜಿದ್ ಆ ಮಗುವಿನ ಕೊಲೆಗೂ ಯತ್ನಿಸಿದ್ದಾನೆ. ಆದರೆ, ಆ ಮಗು ಆರೋಪಿಯನ್ನು ತಳ್ಳಿ ತಪ್ಪಿಸಿಕೊಂಡಿದೆ. ನಂತರ ಸಾಜಿದ್, ಜಾವೇದ್ ಮತ್ತು ಸಹಚರರೂ ಸ್ಥಳದಿಂದ ಪರಾರಿಯಾಗಿದ್ದಾರೆ.

'ಆರೋಪಿಗಳಿಗಾಗಿ ಹುಡುಕಾಟ ಆರಂಭಿಸಿದಾಗ ಸಮೀಪದ ಕಾಡಿನಲ್ಲಿ ಸಾಜಿದ್ ಪತ್ತೆಯಾದ. ಆರೋಪಿಗೆ ಶರಣಾಗಲು ಸೂಚಿಸಿದರೆ, ಆತ ಪೊಲೀಸರ ಮೇಲೆ ಗುಂಡು ಹಾರಿಸಿದ. ಆತ್ಮರಕ್ಷಣೆಗಾಗಿ ಪೊಲೀಸರು ನಡೆಸಿದ ಪ್ರತಿ ಗುಂಡಿನ ದಾಳಿಯಲ್ಲಿ ಸಾಜಿದ್ ಸತ್ತಿದ್ದಾನೆ. ಘಟನೆಯಲ್ಲಿ ಪೊಲೀಸ್ ಇನ್‌ಸ್ಪೆಕ್ಟರ್ ಕೂಡ ಗಾಯಗೊಂಡಿದ್ದು, ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಈ QR ಕೋಡ್ ಸ್ಕ್ಯಾನ್ ಮಾಡಿ, ಪ್ರಕಟವಾಗುವ ಅರ್ಜಿ ಭರ್ತಿ ಮಾಡಿ, ಚಂದಾದಾರರಾಗಿ ನೋಂದಣಿ ಮಾಡಿಕೊಳ್ಳಿ

ಪ್ರಜಾವಾಣಿ ಸ್ಪರ್ಧಾವಾಣಿ MASTERMIND

ಈ ಸಂಚಿಕೆಯಲ್ಲಿ 200ಕ್ಕೂ ಹೆಚ್ಚು ಅಭ್ಯಾಸ ಪ್ರಶ್ನೆಗಳು!

### ವಿರಾಟ್ ಕೊಹ್ಲಿ ಬಗ್ಗೆ ಕ್ರಿಕೆಟ್ ದಂತಕಥೆ ಎ.ಬಿ. ಡಿವಿಲಿಯರ್ಸ್ ಭರವಸೆಯ ಮಾತು

# ‘ಗೆಳೆಯ ಲಯಕ್ಕೆ ಮರಳುವುದು ಖಚಿತ’

**ಚೆನ್ನೈ (ಪಿಟಿಐ):** ಈ ಬಾರಿಯ ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯಲ್ಲಿ ತಮ್ಮ ಆಪ್ತಮಿತ್ರ ವಿರಾಟ್ ಕೊಹ್ಲಿ ಅವರು ಮತ್ತೆ ತಮ್ಮ ಹಳೆಯ ವೈಭವಕ್ಕೆ ಮರಳಲಿದ್ದಾರೆ ಎಂದು ದಕ್ಷಿಣ ಆಫ್ರಿಕಾದ ಕ್ರಿಕೆಟ್ ದಂತಕಥೆ ಎ.ಬಿ. ಡಿವಿಲಿಯರ್ಸ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ವಿರಾಟ್ ಅವರು ಕಳೆದ ಎರಡು ತಿಂಗಳುಗಳಿಂದ ಸ್ಪರ್ಧಾತ್ಮಕ ಕ್ರಿಕೆಟ್‌ನಿಂದ ದೂರವಿದ್ದರು. ವೈಯಕ್ತಿಕ ಕಾರಣಕ್ಕೆ ರಜೆ ಪಡೆದಿದ್ದ ಅವರು ಇಂಗ್ಲೆಂಡ್ ವಿರುದ್ಧದ ಟೆಸ್ಟ್ ಸರಣಿಯಲ್ಲಿ ಆಡಿರಲಿಲ್ಲ. ಎಬಿಡಿ ಅವರು ತಮ್ಮ ಯೂಟ್ಯೂಬ್ ನಲ್ಲಿ ಹಾಕಿರುವ ವಿಡಿಯೊದಲ್ಲಿ ತಮ್ಮ ಗೆಳೆಯ ಕೊಹ್ಲಿ ಕುರಿತು ಮೆಚ್ಚುಗೆಯ ಮಳೆಗರೆದಿದ್ದಾರೆ.

‘ಕಿಂಗ್ ಕೊಹ್ಲಿ ದಿಗ್ಗಜ. ಐಪಿಎಲ್‌ನಲ್ಲಿ 200 ಪಂದ್ಯಗಳಿಂದ ಏಳು ಸಾವಿರ ರನ್ ಗಳಿಸಿದ್ದಾರೆ. ಇದಕ್ಕಿಂತ ದೊಡ್ಡ ಸಾಧನೆ ಏನು ಬೇಕು. ಅವರು ಮರಳಿ ಅರಳುತ್ತಾರೆ’ ಎಂದು ಎಬಿಡಿ ಹೇಳಿದ್ದಾರೆ.

ಸದ್ಯ ಆರ್‌ಸಿಬಿ ನಾಯಕರೂ ಆಗಿರುವ ತಮ್ಮದೇ ದೇಶದ ಫಫ್ ಡುಪ್ಲೆಸಿ ಅವರ ಬಗ್ಗೆಯೂ ಭರವಸೆ ವ್ಯಕ್ತಪಡಿಸಿದ್ದಾರೆ.

‘ಫಫ್ ಫಾರ್ಮ್ ತುಸು ಕಡಿಮೆ ಇದೆ. ಸೌತ್ ಆಫ್ರಿಕಾ ಟಿ20 ಲೀಗ್ ಟೂರ್ನಿಯ ಅಂತ್ಯದಲ್ಲಿ ಅವರು ಮಿಂಚಿದ್ದರು. ಅವರ ಆಟ ಆರ್‌ಸಿಬಿಯಲ್ಲಿಯೂ ಮುಂದುವರಿಯಲಿದೆ’ ಎಂದು ಎಬಿಡಿ ಹೇಳಿದ್ದಾರೆ.

ಲಾಕಿ ಫರ್ಗ್ಯುಸನ್, ರೀಸ್ ಟಾಪ್ಲಿ, ಮೊಹಮ್ಮದ್ ಸಿರಾಜ್, ಅಲ್ಜರಿ ಜೊಸೆಫ್ ಮತ್ತು ಕರ್ಣ ಶರ್ಮಾ, ಆಕಾಶ್ ದೀಪ್, ವೈಶಾಖ ವಿಜಯಕುಮಾರ್, ಯಶ್ ದಯಾಳ್, ಮಯಂಕ್ ದಾಗರ್ ಮತ್ತು ಹಿಮಾಂಶು ಶರ್ಮಾ, ಆಲ್‌ರೌಂಡರ್‌ಗಳಾದ ಗ್ಲೆನ್ ಮ್ಯಾಕ್ಸ್‌ವೆಲ್, ಸುಯಶ್ ಪ್ರಭುದೇಸಾಯಿ, ಕ್ಯಾಮರಾನ್ ಗ್ರೀನ್ ಮತ್ತು ಮಹಿಪಾಲ್ ಲೊಮ್ರೊರ್ ಅವರು ಇರುವ ಆರ್‌ಸಿಬಿ ತಂಡವು ಉತ್ತಮ ಆಟವಾಡುವ ಭರವಸೆಯನ್ನೂ ಎಬಿಡಿ ವ್ಯಕ್ತಪಡಿಸಿದ್ದಾರೆ. ರಾಜಸ್ಥಾನ್ ರಾಯಲ್ಸ್ ತಂಡದ 22 ವರ್ಷದ ಯಶಸ್ವಿ ಜೈಸ್ವಾಲ್ ಅವರ ಬಗ್ಗೆಯೂ ಎಬಿಡಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

‘ಜೈಸ್ವಾಲ್ ಟೆಸ್ಟ್ ಮಾದರಿಯಲ್ಲಿ ತೋರಿದ ಸಾಧನೆಯು ಉತ್ತಮವಾಗಿದೆ. ಅವರು ಈ ಹಿಂದೆಯೂ ಟಿ20 ಮಾದರಿಯಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ. ಈಗಲೂ ಅವರು ಮಿಂಚುವ ಸಾಮರ್ಥ್ಯ ಹೊಂದಿದ್ದಾರೆ. ಅವರ ಬಗ್ಗೆಯೂ ಅಪಾರ ನಿರೀಕ್ಷೆ ಇದೆ’ ಎಂದಿದ್ದಾರೆ.

‘ಟೆಸ್ಟ್ ಸರಣಿಯಲ್ಲಿಯೇ 600ಕ್ಕೂ ಹೆಚ್ಚು ರನ್ ಗಳಿಸಿರುವ ಈ ಹುಡುಗ (ಜೈಸ್ವಾಲ್) ಪಟಾಕಿಯಂತೆ ಸಿಡಿಯುವ ಭರವಸೆ ಇದೆ’ ಎಂದಿದ್ದಾರೆ.

ಎ.ಬಿ. ಡಿವಿಲಿಯರ್ಸ್ ಮತ್ತು ವಿರಾಟ್ ಕೊಹ್ಲಿ

## ಚೆನ್ನೈ ತಲುಪಿದ ಆರ್‌ಸಿಬಿ ತಂಡ

ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಬುಧವಾರ ಚೆನ್ನೈ ತಲುಪಿತು. ಆರ್‌ಸಿಬಿ ತಂಡವು ಶುಕ್ರವಾರ ಇಂಡಿಯನ್ ಪ್ರೀಮಿಯರ್ ಲೀಗ್‌ನ 17ನೇ ಆವೃತ್ತಿಯ ಮೊದಲ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು ಎದುರಿಸಲಿದೆ.

ಆರ್‌ಸಿಬಿ ತಂಡದ ನಾಯಕ ಫಫ್ ಡು ಪ್ಲೆಸಿ, ವಿರಾಟ್ ಕೊಹ್ಲಿ, ಗ್ಲೆನ್ ಮ್ಯಾಕ್ಸ್‌ವೆಲ್ ಸೇರಿದಂತೆ ಎಲ್ಲಾ ಆಟಗಾರರು ಚಾರ್ಟರ್ಡ್ ಫ್ಲೈಟ್ ಮೂಲಕ ಚೆನ್ನೈ ತಲುಪಿದರು. ಉದ್ಘಾಟನಾ ಪಂದ್ಯದಲ್ಲಿ ಉಭಯ ತಂಡಗಳು ಗೆಲುವಿನ ಖಾತೆ ತೆರೆಯಲು ಸಿದ್ಧತೆ ನಡೆಸಿವೆ.

## ಟೈಟನ್ಸ್: ಶಮಿ ಬದಲು ಸಂದೀಪ್

**ಅಹಮದಾಬಾದ್ (ಪಿಟಿಐ):** ಗಾಯಾಳಾಗಿರುವ ಭಾರತ ತಂಡದ ವೇಗದ ಬೌಲರ್ ಮೊಹಮ್ಮದ್ ಶಮಿ ಬದಲಿಗೆ ಕೇರಳದ ಮಧ್ಯಮ ವೇಗದ ಬೌಲರ್ ಸಂದೀಪ್ ವಾರಿಯರ್ ಅವರನ್ನು ಗುಜರಾತ್ ಟೈಟನ್ಸ್ ಬುಧವಾರ ತಂಡಕ್ಕೆ ಸೇರ್ಪಡೆ ಮಾಡಿಕೊಂಡಿದೆ ಎಂದು ಐಪಿಎಲ್ ಪ್ರಕಟಣೆ ತಿಳಿಸಿದೆ.

ಶಮಿ ಇತ್ತೀಚೆಗೆ ಲಂಡನ್‌ನಲ್ಲಿ ಬಲಗಾಲಿನ ಹಿಮ್ಮಡಿ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು. ಅವರು ಪುನಶ್ಚೇತನ ಶಿಬಿರಕ್ಕೆ ತೆರಳುವ ನಿರೀಕ್ಷೆಯಿದ್ದು, ಇಡೀ ಐಪಿಎಲ್ ಟೂರ್ನಿ ಕಳೆದುಕೊಳ್ಳಲಿದ್ದಾರೆ.

ಕಳೆದ ವರ್ಷ ನವೆಂಬರ್‌ನಲ್ಲಿ ವಿಶ್ವಕಪ್ ಫೈನಲ್ ಪಂದ್ಯದ ನಂತರ ಶಮಿ ಯಾವುದೇ ಟೂರ್ನಿಯಲ್ಲಿ ಆಡಿಲ್ಲ. ಭಾರತ ಫೈನಲ್‌ನಲ್ಲಿ ಸೋತಿತ್ತು.

## ಮಿಂಚಿದರೆ ರಾಹುಲ್‌ಗೆ ‘ಪುರಸ್ಕಾರ’

**ನವದೆಹಲಿ (ಪಿಟಿಐ):** ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯಲ್ಲಿ ಕೆ.ಎಲ್. ರಾಹುಲ್ ಅವರು ಉತ್ತಮವಾಗಿ ಆಡಿದರೆ ಪುರಸ್ಕಾರ ರೂಪವಾಗಿ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಆಡುವ ಅವಕಾಶ ಗಳಿಸುವರು ಎಂದು ಲಖನೌ ಸೂಪರ್ ಜೈಂಟ್ಸ್ ತಂಡದ ಮುಖ್ಯ ಕೋಚ್ ಜಸ್ಟಿನ್ ಲ್ಯಾಂಗರ್ ಹೇಳಿದ್ದಾರೆ.

ತೊಡೆಯ ಸ್ನಾಯುವಿನ ಗಾಯದ ಚಿಕಿತ್ಸೆಯ ನಂತರ ಕಣಕ್ಕೆ ಮರಳುತ್ತಿರುವ ರಾಹುಲ್ ಅವರು ಐಪಿಎಲ್‌ನಲ್ಲಿ ಮಿಂಚುವ ನಿರೀಕ್ಷೆ ಇದೆ.

‘ಒಂದೊಮ್ಮೆ ತಂಡವು ಉತ್ತಮವಾಗಿ ಆಡಿದರೆ ಎಲ್ಲರಿಗೂ ಪುರಸ್ಕಾರ ಲಭಿಸುತ್ತದೆ. ಆದರೆ ನಾಯಕನಾಗಿ ರಾಹುಲ್ ತಂಡವನ್ನು ಐಪಿಎಲ್ ಪ್ರಶಸ್ತಿ ಗೆಲುವಿನತ್ತ ಮುನ್ನಡೆಸಿದರೆ ಸಂಪೂರ್ಣ ಶ್ರೇಯ ಪಡೆಯುತ್ತಾರೆ. ಅಲ್ಲದೇ ಅವರು ಬ್ಯಾಟಿಂಗ್‌ನಲ್ಲಿಯೂ ಉತ್ತಮ ಸಾಧನೆ ಮಾಡಿ, ಕೀಪಿಂಗ್‌ನಲ್ಲಿಯೂ ಉಪಯುಕ್ತ ಆಟವಾಡಿದರೆ ದೊಡ್ಡ ಅವಕಾಶ ಅವರ ಪಾಲಿಗೆ ಒಲಿದು ಬರುತ್ತದೆ’ ಎಂದು ಲ್ಯಾಂಗರ್ ಸುದ್ದಿಸಂಸ್ಥೆಗೆ ನೀಡಿರುವ ಸಂದರ್ಶನದಲ್ಲಿ ಹೇಳಿದ್ದಾರೆ. ‘ರಾಹುಲ್ ಅವರ ಜೊತೆಗೆ ರವಿ ಬಿಷ್ಣೋಯಿ ಕೂಡ ಚೆನ್ನಾಗಿ ಆಡಿದರೆ ಟಿ20 ವಿಶ್ವಕಪ್‌ನಲ್ಲಿ ಆಡುವ ಅವಕಾಶ ಪಡೆಯಬಹುದು’ ಎಂದೂ ಹೇಳಿದ್ದಾರೆ.

ಜಸ್ಟಿನ್ ಲ್ಯಾಂಗರ್

## ವಿರಾಟ್ ಭೇಟಿಯಾಗಿದ್ದು ಅವಿಸ್ಮರಣೀಯ ಕ್ಷಣ: ಶ್ರೇಯಾಂಕ

**ಬೆಂಗಳೂರು:** ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಈಚೆಗೆ ಮಹಿಳಾ ಪ್ರೀಮಿಯರ್ ಲೀಗ್ ಟೂರ್ನಿಯ ಪ್ರಶಸ್ತಿ ಜಯಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ ಕನ್ನಡತಿ ಶ್ರೇಯಾಂಕ ಪಾಟೀಲ ಅವರ ಮತ್ತೊಂದು ಕನಸೂ ಈಗ ನನಸಾಗಿದೆ.

ಮಂಗಳವಾರ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ‘ಆರ್‌ಸಿಬಿ ಅನ್‌ಬಾಕ್ಸ್’ ಕಾರ್ಯಕ್ರಮದಲ್ಲಿ ಪ್ರಶಸ್ತಿ ವಿಜೇತ ಮಹಿಳಾ ತಂಡವನ್ನೂ ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಶ್ರೇಯಾಂಕ ಅವರಿಗೆ ಅಭಿಮಾನಿಗಳಿಂದ ಮೆಚ್ಚುಗೆಯ ಮಹಾಪೂರವೇ ಹರಿಯಿತು. ಇದೇ ಸಂದರ್ಭದಲ್ಲಿ ತಮ್ಮ ನೆಚ್ಚಿನ ಆಟಗಾರ ವಿರಾಟ್ ಕೊಹ್ಲಿ ಅವರೊಂದಿಗೆ ಮಾತನಾಡುವ ಅವಕಾಶ ಶ್ರೇಯಾಂಕಗೆ ಲಭಿಸಿತು.

‘ನಾನು ಕ್ರಿಕೆಟ್ ನೋಡಲು ಆರಂಭಿಸಿದ್ದೇ ವಿರಾಟ್ ಕೊಹ್ಲಿ ಅವರಿಂದಾಗಿ. ಅವರಂತೇ ಆಗುವ ಕನಸು ಕಾಣುತ್ತ ಬೆಳೆದೆ. ಕಳೆದ ಸಂಜೆ ಅವರನ್ನು ಭೇಟಿಯಾಗಿದ್ದು ಜನ್ನ ಜೀವನದ ಅವಿಸ್ಮರಣೀಯ ಕ್ಷಣ’ ಎಂದು 21 ವರ್ಷದ ಶ್ರೇಯಾಂಕಾ ‘ಎಕ್ಸ್’ ಜಾಲತಾಣದಲ್ಲಿ ಸಂದೇಶ ಹಾಕಿದ್ದಾರೆ.

‘ಹಾಯ್ ಶ್ರೇಯಾಂಕ, ವೆಲ್ ಬೌಲ್ಡ್ ಎಂದು ವಿರಾಟ್ ನನ್ನನ್ನು ಹೇಳಿದರು. ಅವರಿಗೆ ನನ್ನ ಹೆಸರು ಗೊತ್ತು’ ಎಂದು ಆಫ್‌ಸ್ಪಿನ್ನರ್ ಶ್ರೇಯಾಂಕ ಸಂತಸ ವ್ಯಕ್ತಪಡಿಸಿದ್ದಾರೆ.

ವಿರಾಟ್ ಕೊಹ್ಲಿ ಮತ್ತು ಶ್ರೇಯಾಂಕ ಪಾಟೀಲ

# ಲಕ್ಷ್ಯ ಸೇನ್, ಶ್ರೀಕಾಂತ್ ಮುನ್ನಡೆ

### ಸ್ವಿಸ್ ಓಪನ್ ಬ್ಯಾಡ್ಮಿಂಟನ್: ಎರಡನೇ ಸುತ್ತಿಗೆ ಪಿ.ವಿ. ಸಿಂಧು

**ಬಾಸೆಲ್ (ಸ್ವಿಜರ್ಲೆಂಡ್), (ಪಿಟಿಐ):** ಮಾಜಿ ಚಾಂಪಿಯನ್ ಕಿದಂಬಿ ಶ್ರೀಕಾಂತ್ ಮತ್ತು ಉತ್ತಮ ಲಯದಲ್ಲಿರುವ ಲಕ್ಷ್ಯ ಸೇನ್ ಅವರು ಬುಧವಾರ ಸ್ಫೂರ್ತಿಯುತ ಪ್ರದರ್ಶನ ನೀಡಿ, ಸ್ವಿಸ್ ಓಪನ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಸಿಂಗಲ್ಸ್ ಎರಡನೆ ಸುತ್ತಿಗೆ ಮುನ್ನಡೆದರು.

2015ರಲ್ಲಿ ಇಲ್ಲಿ ವಿಜೇತರಾಗಿದ್ದ ಶ್ರೀಕಾಂತ್ 21–17, 21–18 ರಿಂದ 24ನೇ ಕ್ರಮಾಂಕದ ವಾಂಗ್ ತ್ಸು ವೀ (ಚೀನಾ ತೈಪಿ) ಅವರನ್ನು ಸೋಲಿಸಿದರು. ವಿಶ್ವದ ಮಾಜಿ ಅಗ್ರಮಾನ್ಯ ಆಟಗಾರ ಶ್ರೀಕಾಂತ್ ಗೆಲ್ಲಲು ತೆಗೆದುಕೊಂಡಿದ್ದು 43 ನಿಮಿಷಗಳನ್ನು. ಅವರ ಮುಂದಿನ ಎದುರಾಳಿ ಮಲೇಷ್ಯಾದ ಅಗ್ರಮಾನ್ಯ ಆಟಗಾರ ಲೀ ಝೀ ಜಿಯಾ.

ಎರಡು ವಾರ ಅವಧಿಯಲ್ಲಿ ಫ್ರೆಂಚ್ ಓಪನ್ ಮತ್ತು ಆಲ್ ಇಂಗ್ಲೆಂಡ್ ಚಾಂಪಿಯನ್‌ಷಿಪ್‌ನಲ್ಲಿ ಸೆಮಿಫೈನಲ್ ತಲುಪಿದ್ದ ಸೇನ್ 21–19, 15–21, 21–11ರಿಂದ ಮಲೇಷ್ಯಾದ ಲಿಯಾಂಗ್ ಜುನ್ ಹಾವೊ ಅವರನ್ನು ಮಣಿಸಿದರು. ಎರಡನೇ ಸುತ್ತಿನಲ್ಲಿ ಎದುರಾಳಿ ಚೀನಾ ತೈಪೆಯ ಚಿಯಾ ಹಾವೊ ಲೀ.

ಮಹಿಳೆಯರ ಸಿಂಗಲ್ಸ್‌ನಲ್ಲಿ ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಪಿ.ವಿ. ಸಿಂಧು ಶುಭಾರಂಭ ಮಾಡಿದರು. ಅವರು ಮೊದಲ ಸುತ್ತಿನಲ್ಲಿ 21–12, 21–13ರಿಂದ ಥಾಯ್ಲೆಂಡ್‌ನ ಪೋರ್‌ನ್ಪಿಚಾ ಚೋಯಿಕೀವಾಂಗ್ ಅವರನ್ನು ಮಣಿಸಿದರು. ಮುಂದಿನ ಸುತ್ತಿನಲ್ಲಿ ವಿಶ್ವದ 27ನೇ ರ‍್ಯಾಂಕ್‌ನ ಟೊಮೊಕಾ ಮಿಯಾಜಾಕಿ (ಜಪಾನ್) ಅವರನ್ನು ಎದುರಿಸುವರು.

**ತನಿಶಾ-ಅಶ್ವಿನಿ ಮುನ್ನಡೆ:** ಮಹಿಳಾ ಡಬಲ್ಸ್‌ನಲ್ಲಿ ಆರನೇ ಶ್ರೇಯಾಂಕದ ತನಿಶಾ ಕ್ರಾಸ್ಟೊ- ಅಶ್ವಿನಿ ಪೊನ್ನಪ್ಪ ಜೋಡಿ ತೀವ್ರ ಹೋರಾಟದ ನಂತರ 21–18, 12–21, 21–19 ರಿಂದ ಮೀಲಿಸಾ ತ್ರಿಯಾಸ್ ಪುಸ್ಪಿತಾಸರಿ- ರಚೆಲ್ ಎ.ರೋಸ್ ಜೋಡಿಯನ್ನು ಸೋಲಿಸಿ ಎರಡನೇ ಸುತ್ತನ್ನು ತಲುಪಿತು. ವಿಶ್ವ ಕ್ರಮಾಂಕದಲ್ಲಿ 20ನೇ ಸ್ಥಾನದಲ್ಲಿರುವ ಭಾರತದ ಆಟಗಾರ್ತಿಯರು ಮುಂದಿನ ಸುತ್ತಿನಲ್ಲಿ ಜಪಾನ್‌ನ ರುಯಿ ಹಿರೊಕಮಿ-ಯುನಾ ಕಟೊ ಅವರನ್ನು ಎದುರಿಸಲಿದ್ದಾರೆ.

ಭಾರತದ ಪ್ರಿಯಾ ಕೊಂಜೆಂಗ್‌ಬಾಮ್- ಶ್ರುತಿ ಮಿಶ್ರಾ ಜೋಡಿ 21–13, 21–19 ರಿಂದ ಚೀನಾ ತೈಪಿಯ ಹುವಾಂಗ್ ಯು ಸುನ್ -ಲಿಯಾಂಗ್ ಜೋಡಿಯನ್ನು ಸೋಲಿಸಿತು.



ಲಕ್ಷ್ಯ ಸೇನ್

## ರ‍್ಯಾಂಕಿಂಗ್: ಅಗ್ರಸ್ಥಾನ ಉಳಿಸಿಕೊಂಡ ಸೂರ್ಯ

**ದುಬೈ (ಪಿಟಿಐ):** ಗಾಯದಿಂದಾಗಿ ಕಳೆದ ಮೂರು ತಿಂಗಳುಗಳಿಂದ ಕ್ರಿಕೆಟ್‌ನಿಂದ ದೂರವೇ ಇರುವ ಭಾರತ ಕ್ರಿಕೆಟ್ ತಂಡದ ಬ್ಯಾಟರ್ ಸೂರ್ಯಕುಮಾರ್ ಯಾದವ್ ಐಸಿಸಿ ಟಿ20 ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನ ಕಾಯ್ದುಕೊಂಡಿದ್ದಾರೆ.

ಐಸಿಸಿ ಬುಧವಾರ ಬಿಡುಗಡೆ ಮಾಡಿರುವ ಪಟ್ಟಿಯಲ್ಲಿ ಬ್ಯಾಟಿಂಗ್ ವಿಭಾಗದಲ್ಲಿ ಸೂರ್ಯ ಮೊದಲ ಸ್ಥಾನದಲ್ಲಿದ್ದಾರೆ. ಬೌಲಿಂಗ್ ವಿಭಾಗದಲ್ಲಿ ಅಫ್ಘಾನಿಸ್ತಾನದ ಸ್ಪಿನ್ನರ್ ರಶೀದ್ ಖಾನ್ ಅಗ್ರ ಹತ್ತರಲ್ಲಿ ಸ್ಥಾನ ಪಡೆದಿದ್ದಾರೆ. ಇಂಗ್ಲೆಂಡ್‌ನ ಸ್ಪಿನ್ನರ್ ಅದಿಲ್ ರಶೀದ್ ಅಗ್ರಸ್ಥಾನದಲ್ಲಿದ್ದಾರೆ.

ಸೂರ್ಯಕುಮಾರ್ ಒಟ್ಟು 861 ರೇಟಿಂಗ್ ಅಂಕಗಳನ್ನು ಹೊಂದಿದ್ದಾರೆ. ಇಂಗ್ಲೆಂಡ್‌ನ ಫಿಲ್ ಸಾಲ್ಟ್ (802) ಎರಡನೇ ಸ್ಥಾನದಲ್ಲಿದ್ದಾರೆ.

ಪಾಕಿಸ್ತಾನದ ಮೊಹಮ್ಮದ್ ರಿಜ್ವಾನ್ ಹಾಗೂ ಬಾಬರ್ ಆಜಂ ಅವರು ಕ್ರಮವಾಗಿ ಮೂರು ಮತ್ತು ನಾಲ್ಕನೇ ಸ್ಥಾನದಲ್ಲಿದ್ದಾರೆ. ಭಾರತದ ಯುವ ಬ್ಯಾಟರ್ ಯಶಸ್ವಿ ಜೈಸ್ವಾಲ್ ಅವರು ಆರನೇ ಸ್ಥಾನದಲ್ಲಿದ್ದಾರೆ. ಋತುರಾಜ್ ಗಾಯಕವಾಡ ಅವರೂ 12ನೇ ಕ್ರಮಾಂಕದಲ್ಲಿದ್ದಾರೆ.

ರಶೀದ್ ಖಾನ್ ಕೂಡ ಗಾಯಗೊಂಡು ದೀರ್ಘ ಸಮಯ ಆಟದಿಂದ ಹೊರಗುಳಿದಿದ್ದರು. ಈಚೆಗೆ ಐರ್ಲೆಂಡ್ ವಿರುದ್ಧ ಸರಣಿಯಲ್ಲಿ ಕ್ರಿಕೆಟ್ ಮರಳಿದ್ದರು. ಆಲ್‌ರೌಂಡರ್ ವಿಭಾಗದಲ್ಲಿ ಬಾಂಗ್ಲಾದೇಶದ ಶಕೀಬ್ ಅಲ್ ಹಸನ್ ಅಗ್ರ ಸ್ಥಾನದಲ್ಲಿದ್ದಾರೆ. ಭಾರತದ ಹಾರ್ದಿಕ್ ಪಾಂಡ್ಯ ಏಳನೇ ಸ್ಥಾನದಲ್ಲಿದ್ದಾರೆ.

ಸೂರ್ಯಕುಮಾರ್ ಯಾದವ್

## ಹಾಕಿ ಫೈವ್ಸ್ ರ‍್ಯಾಂಕ್: ಎರಡನೇ ಸ್ಥಾನದಲ್ಲಿ ಭಾರತ ತಂಡಗಳು

**ಲೂಸಾನ್ (ಪಿಟಿಐ):** ಭಾರತ ಪುರುಷರ ಮತ್ತು ಮಹಿಳೆಯರ ಹಾಕಿ ಫೈವ್ಸ್ ತಂಡಗಳು ಎಫ್‌ಐಎಚ್ ರ‍್ಯಾಂಕಿಂಗ್ ಪಟ್ಟಿಯಲ್ಲಿ ಎರಡನೇ ಸ್ಥಾನ ಪಡೆದಿವೆ.

ತಲಾ 1400 ಪಾಯಿಂಟ್ಸ್‌ನೊಂದಿಗೆ ಭಾರತ ಪುರುಷರ ತಂಡವು ಒಮಾನ್ ಮತ್ತು ಮಲೇಷ್ಯಾದೊಂದಿಗೆ ಜಂಟಿಯಾಗಿ ಎರಡನೇ ಸ್ಥಾನ ಹಂಚಿಕೊಂಡಿದೆ.

ಏಷ್ಯನ್ ಚಾಂಪಿಯನ್‌ಷಿಪ್ ಪ್ರಶಸ್ತಿ ಗೆದ್ದ ಭಾರತ ಪುರುಷರ ತಂಡವು ಜನವರಿಯಲ್ಲಿ ನಡೆದ ವಿಶ್ವಕಪ್ ಟೂರ್ನಿಯಲ್ಲಿ ಐದನೇ ಸ್ಥಾನ ಗಳಿಸಿತ್ತು. ನೆದರ್ಲೆಂಡ್ಸ್ ತಂಡವು 1750 ಪಾಯಿಂಟ್ಸ್‌ನೊಂದಿಗೆ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನ ಪಡೆದಿದೆ.

ಮಹಿಳಾ ವಿಭಾಗದಲ್ಲೂ ನೆದರ್ಲೆಂಡ್ಸ್ ತಂಡವು (1750 ಪಾಯಿಂಟ್ಸ್) ಅಗ್ರಸ್ಥಾನ ಪಡೆದಿವೆ.

ವಿಶ್ವಕಪ್ ಟೂರ್ನಿಯಲ್ಲಿ ರನ್ನರ್ಸ್ ಅಪ್ ಹಾಗೂ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಗೆದ್ದಿದ್ದ ಭಾರತ ತಂಡವು 1550 ಪಾಯಿಂಟ್ಸ್‌ನೊಂದಿಗೆ ಎರಡನೇ ಸ್ಥಾನ ಪಡೆದುಕೊಂಡಿದೆ.

### ಜುಲೈ 26ರಂದು ಪ್ಯಾರಿಸ್ ಒಲಿಂಪಿಕ್ಸ್ ಉದ್ಘಾಟನಾ ಸಮಾರಂಭ

# ರಷ್ಯಾ, ಬೆಲಾರಸ್ ಅಥ್ಲೀಟುಗಳಿಗೆ ನಿರ್ಬಂಧ

**ಜಿನೇವಾ (ಎಪಿ):** ಜುಲೈ 26ರಂದು ನಡೆಯಲಿರುವ ಪ್ಯಾರಿಸ್ ಒಲಿಂಪಿಕ್ಸ್‌ನ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗಿಯಾಗಲು ರಷ್ಯಾ ಮತ್ತು ಬೆಲಾರಸ್ ಅಥ್ಲೀಟುಗಳಿಗೆ ಅವಕಾಶ ನೀಡುವುದಿಲ್ಲ ಎಂದು ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ (ಐಒಸಿ) ಹೇಳಿದೆ.

ಉದ್ಘಾಟನಾ ಸಮಾರಂಭ ಈ ಬಾರಿ ವಿಭಿನ್ನವಾಗಿರಲಿದೆ. ಭಾಗವಹಿಸುವ ದೇಶಗಳ ಅಥ್ಲೀಟುಗಳು ಕ್ರೀಡಾಂಗಣದಲ್ಲಿ ಪಥಸಂಚಲನದ ಮೂಲಕ ಸಾಗಿ ಸಮಾವೇಶಗೊಳ್ಳುವುದು ಸಂಪ್ರದಾಯ. ಆದರೆ ಈ ಬಾರಿ ಸಾವಿರಾರು ಅಥ್ಲೀಟುಗಳು ಸೆನ್ ನದಿಯಲ್ಲಿ ದೋಣಿಗಳ ಮುಖಾಂತರ ಐಫೆಲ್ ಟವರ್ ದಿಕ್ಕಿನತ್ತ ಕೆಲವು ಮೈಲು ದೂರ ಕ್ರಮಿಸಲಿದ್ದಾರೆ.

ರಷ್ಯಾ, ಬೆಲಾರಸ್ ದೇಶಗಳ ಅಥ್ಲೀಟುಗಳಿಗೆ ಒಲಿಂಪಿಕ್ಸ್‌ನಲ್ಲಿ ತಟಸ್ಥ ಅಥ್ಲೀಟುಗಳಾಗಿ ಸ್ಪರ್ಧಿಸಲು ಅವಕಾಶ ನೀಡಲಾಗಿದೆ. ಅವರು ಸಮಾರಂಭದ ಅನುಭವ ಪಡೆಯುವುದಕ್ಕಷ್ಟೇ ಅವಕಾಶ ನೀಡಲಾಗುವುದು ಎಂದು ಐಒಸಿ ಹೇಳಿದೆ. ಹೀಗಾಗಿ ಉದ್ಘಾಟನಾ ದಿನ ನದಿಯ ಬಳಿ ಪ್ರೇಕ್ಷಕರಾಗಿರುವುದಕ್ಕೆ ಮಾತ್ರ ಅವಕಾಶ ನೀಡುವ ಸಾಧ್ಯತೆಯಿದೆ.

ಅಂತರರಾಷ್ಟ್ರೀಯ ಪ್ಯಾರಾಲಿಂಪಿಕ್ಸ್ ಸಮಿತಿ ಕೂಡ ಆಗಸ್ಟ್ 28ರ ಪ್ಯಾರಿಸ್‌ನ ಉದ್ಘಾಟನಾ ಸಮಾರಂಭಕ್ಕೆ ಈ ಎರಡು ದೇಶಗಳ ಅಥ್ಲೀಟುಗಳಿಗೆ ನಿರ್ಬಂಧ ವಿಧಿಸಿದೆ. ಉಕ್ರೇನ್ ಮೇಲೆ ಯುದ್ಧ ನಡೆಸಿದ ಕಾರಣಕ್ಕೆ ಈ ಎರಡು ದೇಶಗಳು ತಂಡಗಳನ್ನು ಕಳುಹಿಸುವಂತಿಲ್ಲ. ಆದರೆ ವೈಯಕ್ತಿಕ ಸ್ಪರ್ಧೆಯಲ್ಲಿ ಭಾಗವಹಿಸಲು ಅವಕಾಶವಿದೆ. ಆದರೆ ಇದಕ್ಕೂ ಎರಡು ಹಂತದ ಅನುಮತಿ ಅಗತ್ಯ. ತಾವು ಭಾಗವಹಿಸುವ ಕ್ರೀಡಾ ಮಂಡಳಿಯಿಂದ ಅನುಮತಿ ಪಡೆಯಬೇಕು. ನಂತರ ಐಒಸಿಯಿಂದ ನೇಮಕಗೊಂಡ ಪರಿಶೀಲನಾ ಸಮಿತಿಯಿಂದ ಒಪ್ಪಿಗೆ ಪಡೆಬೇಕಾಗುತ್ತದೆ.

ತಟಸ್ಥ ಅಥ್ಲೀಟುಗಳು ಉಕ್ರೇನ್ ಮೇಲಿನ ಯುದ್ಧವನ್ನು ಬೆಂಬಲಿಸಿ ಮಾತನಾಡುವಂತಿಲ್ಲ. ಆ ದೇಶದ ಸೇನೆ, ಭದ್ರತಾ ಪಡೆಗಳಲ್ಲಿ, ಅರೆ ಸೇನಾ ಪಡೆಯಲ್ಲಿ ಕೆಲಸ ಮಾಡುವಂತಿಲ್ಲ. ಒಲಿಂಪಿಕ್ಸ್‌ಗೆ ರಷ್ಯಾದ ಪಾಸ್‌ಪೋರ್ಟ್ ಹೊಂದಿರುವ 36 ಅಥ್ಲೀಟುಗಳು, ಬೆಲಾರಸ್ ಪಾಸ್‌ಪೋರ್ಟ್ ಹೊಂದಿರುವ 22 ಅಥ್ಲೀಟುಗಳು ತಟಸ್ಥ ಕ್ರೀಡಾಪಟುಗಳಾಗಿ ಪಾಲ್ಗೊಳ್ಳುವ ನಿರೀಕ್ಷೆಯಿದೆ ಎಂದು ಐಒಸಿ ಮಂಗಳವಾರ ತಿಳಿಸಿದೆ.

ಇಂಥ ಅಥ್ಲೀಟುಗಳು ಗೆಲ್ಲುವ ಪದಕಗಳನ್ನು ಪದಕ ಪಟ್ಟಿಯಲ್ಲಿ ಸೇರಿಸುವುದಿಲ್ಲ. ಪದಕ ಪ್ರದಾನ ಸಮಾರಂಭದಲ್ಲಿ ಪಚ್ಚೆ ಹರಳಿನ (ಜೇಡ್) ಬಣ್ಣದ ಧ್ವಜ ಬಳಕೆಯಾಗಲಿದೆ. ವಿಶೇಷವಾಗಿ ರಚಿಸಿದ ಸಂಗೀತ ನುಡಿಸಲಾಗುವುದು. ಇದಕ್ಕೆ ಸಾಹಿತ್ಯ ಇರುವುದಿಲ್ಲ.

**ಅಮಾನತು ತೆರವು:** ಗ್ವಾಟೆಮಾಲಾ ಮೇಲೆ 18 ತಿಂಗಳ ಹಿಂದೆ ವಿಧಿಸಲಾಗಿದ್ದ ಅಮಾನತನ್ನು ಐಒಸಿ ಹಿಂಪಡೆದುಕೊಂಡಿದೆ. ಒಲಿಂಪಿಕ್ ಸಂಸ್ಥೆಯ ಚಟುವಟಿಕೆಯಲ್ಲಿ ಸರ್ಕಾರದ ಹಸ್ತಕ್ಷೇಪ ವಿರೋಧಿಸಿ ಈ ಅಮಾನತು ವಿಧಿಸಲಾಗಿತ್ತು

## ಜನಾಂಗೀಯ ಭೇದದ ಕ್ರಮ: ರಷ್ಯಾ ಆಕ್ರೋಶ

**ಮಾಸ್ಕೊ:** ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿಯು ತನ್ನ ಅಥ್ಲೀಟುಗಳಿಗೆ ಹೇರಿರುವ ತಟಸ್ಥ ನಿಯಮಗಳ ಬಗ್ಗೆ ರಷ್ಯಾ ಆಕ್ರೋಶ ವ್ಯಕ್ತಪಡಿಸಿದೆ. ಇದು ‘ಜನಾಂಗೀಯ ಭೇದ ಮತ್ತು ನವನಾಝಿತನ’ದ ಕ್ರಮ ಎಂದು ಟೀಕಿಸಿದೆ.

ತನ್ನ ಮೂಲತತ್ವಗಳಿಂದ ಐಒಸಿ ದೂರ ಸರಿಯುತ್ತಿದೆ ಎಂಬುದನ್ನು ಇಂಥ ನಿರ್ಧಾರಗಳು ಸಾಬೀತುಪಡಿಸುತ್ತಿವೆ ಎಂದು ವಿದೇಶಾಂಗ ಸಚಿವಾಲಯದ ವಕ್ತಾರರಾದ ಮರಿಯಾ ಝಕಾರೋವಾ ತಿಳಿಸಿದ್ದಾರೆ.

ಒಲಿಂಪಿಕ್ಸ್ ಆದರ್ಶಗಳಿಗೆ ಐಒಸಿ ಕೊಳ್ಳಿಯಿಟ್ಟಿದೆ ಎಂದು ಕ್ರೆಮ್ಲಿನ್ ವಕ್ತಾರ ದಿಮಿತ್ರಿ ಪೆಸ್ಕೋವ್ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ್ದಾರೆ.

## 2.20 ಲಕ್ಷ ಕಾಂಡೋಮ್ ಉಚಿತ ವಿತರಣೆ

**ಪ್ಯಾರಿಸ್ (ಎಎಫ್‌ಪಿ):** ‘ಸಿಟಿ ಆಫ್ ಲವ್’ ಖ್ಯಾತಿಯ ಪ್ಯಾರಿಸ್‌ನಲ್ಲಿ ನಡೆಯುವ ಒಲಿಂಪಿಕ್ಸ್ ವೇಳೆ ರೋಮ್ಯಾಂಟಿಕ್ ಆಗಬಯಸುವ ಕ್ರೀಡಾಪಟುಗಳಿಗಾಗಿ 2.20 ಲಕ್ಷ ಕಾಂಡೋಮ್‌ಗಳನ್ನು ಉಚಿತವಾಗಿ ವಿತರಿಸಲು ಸಂಘಟಕರು ನಿರ್ಧರಿಸಿದ್ದಾರೆ.

ಅಥ್ಲೀಟ್‌ಗಳು ತಮ್ಮ ಗಮನವನ್ನು ಕ್ರೀಡೆಯ ಮೇಲೆ ಕೇಂದ್ರೀಕರಿಸಬಹುದಾದರೂ, ಅವರು ಬಯಸಿದಲ್ಲಿ ಲೈಂಗಿಕತೆಯಲ್ಲಿ ತೊಡಗಲು ಮುಕ್ತರಾಗಿರುತ್ತಾರೆ. ಟೋಕಿಯೊ ಒಲಿಂಪಿಕ್ಸ್ ವೇಳೆ ಕೋವಿಡ್ ಆತಂಕ ಇದ್ದ ಕಾರಣ ಕಾಂಡೋಮ್ ವಿತರಣೆ ನಡೆದಿರಲಿಲ್ಲ.

ಜುಲೈ 26ರಿಂದ ಆಗಸ್ಟ್ 11 ರವರೆಗೆ ಒಲಿಂಪಿಕ್ಸ್ ನಡೆಯಲಿದ್ದು, ಈ ವೇಳೆ ಪುರುಷರಿಗೆ ಸುಮಾರು 2 ಲಕ್ಷ ಮತ್ತು ಮಹಿಳೆಯರಿಗೆ 20 ಸಾವಿರ ಕಾಂಡೋಮ್‌ಗಳು ಲಭ್ಯವಾಗಲಿವೆ. ನಂತರದಲ್ಲಿ ಬೇಡಿಕೆಗೆ ಅನುಗುಣವಾಗಿ ಸ್ಪಂದಿಸಲಾಗುವುದು ಎಂದು ಪ್ಯಾರಿಸ್ ಒಲಿಂಪಿಕ್ಸ್‌ನ ಪ್ರಥಮ ಚಿಕಿತ್ಸೆ ಮತ್ತು ಆರೋಗ್ಯ ಸೇವೆಗಳ ಉಸ್ತುವಾರಿ ಲಾರೆಂಟ್ ದಲಾರ್ಡ್ ಮಾಹಿತಿ ನೀಡಿದ್ದಾರೆ.

ಸುರಕ್ಷಿತ ಲೈಂಗಿಕತೆಯನ್ನು ಉತ್ತೇಜಿಸಲು ಮತ್ತು ಎಚ್‌ಐವಿ- ಏಡ್ಸ್ ಸಾಂಕ್ರಾಮಿಕದ ಬಗ್ಗೆ ಜಾಗೃತಿ ಮೂಡಿಸಲು ಮೊದಲ ಬಾರಿ 1988ರಲ್ಲಿ ಸೋಲ್ ಒಲಿಂಪಿಕ್ಸ್‌ನಲ್ಲಿ ಕ್ರೀಡಾಪಟುಗಳಿಗೆ ಕಾಂಡೋಮ್‌ಗಳನ್ನು ಉಚಿತವಾಗಿ ವಿತರಿಸಲಾಯಿತು. ನಂತರ ಪ್ರತಿ ಕೂಟದಲ್ಲೂ ಈ ಸಂಪ್ರದಾಯ ಮುಂದುವರಿದಿದೆ. 2016ರ ರಿಯೊ ಒಲಿಂಪಿಕ್ಸ್ ವೇಳೆ 4.50 ಲಕ್ಷ ಕಾಂಡೋಮ್‌ಗಳನ್ನು ವಿತರಿಸಲಾಗಿತ್ತು.

## 27ರಿಂದ ರಾಷ್ಟ್ರೀಯ ಕುಸ್ತಿ ಶಿಬಿರ

**ನವದೆಹಲಿ (ಪಿಟಿಐ):** ಭಾರತ ಕುಸ್ತಿ ಫೆಡರೇಷನ್, ಮುಂಬರುವ ಗುಜರಾತ್, ತೆಲಂಗಾಣ, ಉತ್ತರಾಖಂಡ ರಾಜ್ಯಗಳ ಕುಸ್ತಿ ಸಂಸ್ಥೆ ಚುನಾವಣೆಗಳಲ್ಲಿ ಕ್ರೀಡಾಸಂಹಿತೆಯನ್ನು ಕಟ್ಟುನಿಟ್ಟಾಗಿ ಪಾಲಿಸುವುದನ್ನು ಖಚಿತ ಪಡಿಸಲಿದೆ. ಜೊತೆಗೆ ರಾಷ್ಟ್ರೀಯ ಕುಸ್ತಿ ಶಿಬಿರವನ್ನು ಮಾರ್ಚ್ 27 ರಿಂದ ನಡೆಸಲು ನಿರ್ಧರಿಸಿದೆ.

ಕೆಲವು ರಾಜ್ಯಗಳಲ್ಲಿ ಇತ್ತೀಚಿನವರೆಗೂ 70 ವರ್ಷಗಳ ಗರಿಷ್ಠ ವಯೋಮಿತಿಯ ನಂತರವೂ ಕೆಲವರು ಪದಾಧಿಕಾರಿಗಳು ಕಾರ್ಯನಿರ್ವಹಿಸಿದ್ದರು.

16 ತಿಂಗಳ ನಂತರ ಪುರುಷ ಮತ್ತು ಮಹಿಳಾ ಕುಸ್ತಿಪಟುಗಳಿಗೆ ಕ್ರಮವಾಗಿ ಸೋನಿಪತ್ ಮತ್ತು ಗಾಂಧಿನಗರದಲ್ಲಿ ಮಾರ್ಚ್ 27ರಿಂದ ರಾಷ್ಟ್ರೀಯ ಶಿಬಿರ ನಡೆಸಲಾಗುವುದು. ಡಬ್ಲ್ಯುಎಫ್‌ಐನಿಂದ ಜನವರಿ 2023ರಲ್ಲಿ ಕೊನೆಯ ಬಾರಿ ಶಿಬಿರ ನಡೆದಿತ್ತು. ನಂತರ ದೇಶದ ಮೂವರು ಪ್ರಮುಖ ಕುಸ್ತಿಪಟುಗಳು, ಕುಸ್ತಿ ಫೆಡರೇಷನ್‌ನ ಆಗಿನ ಅಧ್ಯಕ್ಷ ಬ್ರಿಜ್‌ಭೂಷಣ್ ಶರಣ್ ಸಿಂಗ್ ವಿರುದ್ಧ ಪ್ರತಿಭಟನೆ ಆರಂಭಿಸಿದ್ದರು.

# ಹೈಜಂಪ್: ಜೆಸ್ಸಿ ಸಂದೇಶ್‌ಗೆ ಚಿನ್ನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕರ್ನಾಟಕದ ಜೆಸ್ಸಿ ಸಂದೇಶ್ ಅವರು ಇಲ್ಲಿನ ಅಂಜು ಬಾಬಿ ಹೈ ಪರ್ಫಾರ್ಮೆನ್ಸ್ ಸೆಂಟರ್‌ನಲ್ಲಿ ಬುಧವಾರ ನಡೆದ ಮೂರನೇ ಇಂಡಿಯನ್ ಓಪನ್ ಜಂಪ್ ಸ್ಪರ್ಧೆಯ ಪುರುಷರ ಹೈಜಂಪ್ ಸ್ಪರ್ಧೆಯಲ್ಲಿ ಚಿನ್ನದ ಪದಕ ಗೆದ್ದರು.

28 ವರ್ಷದ ಜೆಸ್ಸಿ 2.20 ಮೀಟರ್ ಎತ್ತರ ಜಿಗಿದರು. ತಮಿಳುನಾಡಿನ ಆದರ್ಶ್ ರಾಮ್ ಮತ್ತು ಒಡಿಶಾದ ಸ್ವಾಧಿನ್ ಕುಮಾರ್ ಮಝಿ (2.10 ಮೀ) ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಜಯಿಸಿದರು.

ಮಹಿಳೆಯರ ಪೋಲ್ ವಾಲ್ಟ್‌ನಲ್ಲಿ ಆತಿಥೇಯ ಕರ್ನಾಟಕದ ಸಿಂಧುಶ್ರೀ ಜಿ. (3.80 ಮೀ) ಕಂಚಿನ ಪದಕ ಗೆದ್ದುಕೊಂಡರು. ತಮಿಳುನಾಡಿನ ಪವಿತ್ರಾ ವೆಂಕಟೇಶ್ (4.15 ಮೀ) ಚಿನ್ನ ಗೆದ್ದರೆ, ಕೇರಳದ ಮರಿಯಾ ಜೈಸನ್ (3.80 ಮೀ) ಬೆಳ್ಳಿ ತನ್ನದಾಗಿಸಿಕೊಂಡರು.

**ಫಲಿತಾಂಶ: ಪುರುಷರು: ಹೈಜಂಪ್:** ಜೆಸ್ಸಿ ಸಂದೇಶ್ (ಕರ್ನಾಟಕ)–1; ಆದರ್ಶ್ ರಾಮ್ (ತಮಿಳುನಾಡು)–2; ಸ್ವಾಧಿನ್ ಕುಮಾರ್ ಮಝಿ (ಒಡಿಶಾ)–3. **ಟ್ರಿಪಲ್ ಜಂಪ್:** ಅಬ್ದುಲ್ಲಾ ಅಬೂಬಕ್ಕರ್ (ಕೇರಳ)–1; ಎಲ್ದೋಸ್ ಪಾಲ್ (ಕೇರಳ)–2; ಸೆಲ್ವ ಪ್ರಭು (ತಮಿಳುನಾಡು)–3. **ಲಾಂಗ್ ಜಂಪ್:** ಮೊಹಮ್ಮದ್ ಅನೀಸ್ ಯಾಹಿಯಾ (ಕೇರಳ)–1; ಆದಿತ್ಯ ಕುಮಾರ್ ಸಿಂಗ್ (ಮಧ್ಯಪ್ರದೇಶ)–2; ವಿಷ್ಣು ಶಿವಶಂಕರ್ (ದೆಹಲಿ)–3. **ಪೋಲ್ ವಾಲ್ಟ್:** ಎಂ. ಗೌತಮ್ (ತಮಿಳುನಾಡು)–1; ರೀಗನ್ ಜಿ. (ತಮಿಳುನಾಡು)–2; ಶೇಖರ್ ಕುಮಾರ್ ಪಾಂಡೆ (ಉತ್ತರಪ್ರದೇಶ)–3.

**ಮಹಿಳೆಯರ ವಿಭಾಗ: ಲಾಂಗ್ ಜಂಪ್:** ನಯನಾ ಜೇಮ್ಸ್ (ಕೇರಳ)–1; ಶೈಲಿ ಸಿಂಗ್ (ಉತ್ತರಪ್ರದೇಶ)–2; ಸುಶ್ಮಿತಾ (ರಾಜಸ್ಥಾನ)–3. **ಹೈಜಂಪ್:** ಅತಿರಾ ಸೋಮರಾಜ್ (ಕೇರಳ)–1; ಕೆವಿನಾ ಅಶ್ವಿನಿ (ತಮಿಳುನಾಡು)– 2; ಖುಷಿ (ಹರಿಯಾಣ)–3. **ಟ್ರಿಪಲ್ ಜಂಪ್:** ಪೂರ್ವಾ ಹಿತೇಶ್ ಸಾವಂತ್ (ಮಹಾರಾಷ್ಟ್ರ) –1; ಶಾರ್ವರಿ ಅವಿನಾಶ್ (ಮಹಾರಾಷ್ಟ್ರ)–2; ಶೀನಾ ಎನ್.ವಿ. (ಕೇರಳ)–3. **ಪೋಲ್ ವಾಲ್ಟ್:** ಪವಿತ್ರಾ ವೆಂಕಟೇಶ್ (ತಮಿಳುನಾಡು)–1; ಮರಿಯಾ ಜೈಸನ್ (ಕೇರಳ)–2; ಸಿಂಧುಶ್ರೀ ಜಿ. (ಕರ್ನಾಟಕ)– 3.

ಕರ್ನಾಟಕದ ಜೆಸ್ಸಿ ಸಂದೇಶ್

### ರಾಷ್ಟ್ರೀಯ ಫೆಡರೇಷನ್‌ಗಳಿಗೆ ಐಒಸಿ ಎಚ್ಚರಿಕೆ

# 2028ರ ಕ್ರೀಡೆಗಳಿಂದ ಬಾಕ್ಸಿಂಗ್‌ಗೆ ಕೊಕ್

**ಲುಸಾನ್ (ಪಿಟಿಐ):** ಅಮಾನತುಗೊಂಡಿರುವ ಅಂತರರಾಷ್ಟ್ರೀಯ ಬಾಕ್ಸಿಂಗ್ ಸಂಸ್ಥೆ (ಐಬಿಎ) ಜೊತೆ ರಾಷ್ಟ್ರೀಯ ಫೆಡರೇಷನ್‌ಗಳು ಗುರುತಿಸಿಕೊಳ್ಳುವುದನ್ನು ಮುಂದುವರಿಸಿದರೆ, 2028ರ ಲಾಸ್ ಏಂಜಲೀಸ್ ಒಲಿಂಪಿಕ್ಸ್‌ನಿಂದ ಬಾಕ್ಸಿಂಗ್ ಹೊರಗಿಡುವುದಾಗಿ ಐಒಸಿ ಎಚ್ಚರಿಸಿದೆ. ಹೀಗಾಗಿ ಒಲಿಂಪಿಕ್ಸ್‌ನಲ್ಲಿ ಬಾಕ್ಸಿಂಗ್ ಬಿಕ್ಕಟ್ಟು ಸದ್ಯಕ್ಕೆ ಅಂತ್ಯವಾಗುವಂತೆ ಕಾಣುತ್ತಿಲ್ಲ.

ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ (ಐಒಸಿ), 2019ರಲ್ಲಿ ಐಬಿಎ ಮಾನ್ಯತೆ ರದ್ದುಗೊಳಿಸಿದೆ. ಸಂಸ್ಥೆಯಲ್ಲಿ ಹಣಕಾಸು ಅವ್ಯವಹಾರ, ಆಡಳಿತದಲ್ಲಿ ಸಮಸ್ಯೆ, ವಿಶ್ವಾಸಾರ್ಹತೆ ಕೊರತೆಯ ಕಾರಣಗಳನ್ನು ನೀಡಿ ಈ ಕ್ರಮ ಕೈಗೊಂಡಿದೆ.

ಈ ವರ್ಷದ ಒಲಿಂಪಿಕ್ಸ್‌ನಲ್ಲಿ ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿಯೇ, ಬಾಕ್ಸಿಂಗ್ ಅರ್ಹತಾ ಟೂರ್ನಿಗಳ ಉಸ್ತುವಾರಿ ನೋಡಿಕೊಳ್ಳುತ್ತಿದೆ. ಟೋಕಿಯೊ ಒಲಿಂಪಿಕ್ಸ್ ಸಂದರ್ಭದಲ್ಲೂ ಬಾಕ್ಸಿಂಗ್ ಅರ್ಹತಾ ಟೂರ್ನಿಗಳನ್ನು ನಡೆಸುವಾಗ ಐಬಿಎಯನ್ನು ದೂರವಿಡಲಾಗಿತ್ತು. 2028ರ ಒಲಿಂಪಿಕ್ಸ್‌ಗೆ ಬಾಕ್ಸಿಂಗ್ ಸೇರ್ಪಡೆಯನ್ನು ಸದ್ಯ ತಡೆಹಿಡಿಯಲಾಗಿದೆ ಎಂದು ಮಂಗಳವಾರ ನಡೆದ ಐಒಸಿ ಕಾರ್ಯನಿರ್ವಾಹಕ ಮಂಡಳಿ ಸಭೆಯ ನಂತರ ಐಒಸಿ ಕ್ರೀಡಾ ನಿರ್ದೇಶಕ ಕಿಟ್ ಮೆಕ್ಕಾನೆಲ್ ತಿಳಿಸಿದರು.

ರಾಷ್ಟ್ರೀಯ ಫೆಡರೇಷನ್‌ಗಳ ಬೆಂಬಲ ಪಡೆದು ಹೊಸ ಅಂತರರಾಷ್ಟ್ರೀಯ ಸಂಸ್ಥೆ ರೂಪುಗೊಳ್ಳದಿದ್ದಲ್ಲಿ ನಾವು ಒಲಿಂಪಿಕ್ಸ್‌ನಲ್ಲಿ ಬಾಕ್ಸಿಂಗ್ ಸೇರ್ಪಡೆಗೊಳಿಸುವ ಸ್ಥಿತಿಯಲ್ಲಿರುವುದಿಲ್ಲ ಎಂದರು. ಇದೇ ವೇಳೆ, ತನ್ನ ವಿರುದ್ಧ ಮಾನ್ಯತೆ ಹಿಂಪಡೆದಿರುವ ಐಒಸಿಯ ಕ್ರಮದ ವಿರುದ್ಧ ಅಂತರರಾಷ್ಟ್ರೀಯ ಬಾಕ್ಸಿಂಗ್ ಸಂಸ್ಥೆ, ಅಂತರರಾಷ್ಟ್ರೀಯ ಕ್ರೀಡಾ ನ್ಯಾಯ ಮಂಡಳಿಯ ಮೊರೆ ಹೋಗಿದೆ. ಈ ನ್ಯಾಯಮಂಡಳಿ ಇನ್ನೂ ಯಾವುದೇ ನಿರ್ಧಾರಕ್ಕೆ ಬಂದಿಲ್ಲ.



ಕಿಟ್ ಮೆಕ್ಕಾನೆಲ್

## ಜವಾಹರ್ ಎಫ್‌ಸಿ ತಂಡ ಜಯಭೇರಿ

**ಬೆಂಗಳೂರು:** ಜವಾಹರ್ ಯೂನಿಯನ್ ಎಫ್‌ಸಿ ತಂಡವು ಬಿಡಿಎಫ್‌ಎ ‘ಎ’ ಡಿವಿಷನ್ ಲೀಗ್‌ನಲ್ಲಿ 3–2 ರಿಂದ ಪರಿಕ್ರಮ ಎಫ್‌ಸಿ ತಂಡವನ್ನು ಮಣಿಸಿತು.

ಬುಧವಾರ ನಡೆದ ಪಂದ್ಯದಲ್ಲಿ ಜವಾಹರ್ ತಂಡದ ಪರವಾಗಿ ತ್ಯಾಂಗೋ ಸ್ಟೀಫನ್, ಕಾರ್ತಿಕ್ ಕೆ.ಕೆ, ಆಲೆನ್ ಸಂಜಯ್ ಕ್ಸೇವಿಯರ್ ತಲಾ ಒಂದು ಗೋಲು ಗಳಿಸಿದರು.

ಬೆಂಗಳೂರು ಈಗಲ್ಸ್ ಎಫ್‌ಸಿ 1–0 ಯಿಂದ ಆರ್‌ಡಬ್ಲ್ಯುಎಫ್ ಎಫ್‌ಸಿ ತಂಡವನ್ನು ಸೋಲಿಸಿತು. ಈಗಲ್ಸ್ ಪರ ಯೋಕ್ಷಿಂ ಆವುಂಗ್ಷಿ ಗೋಲು ಗಳಿಸಿದರು. ಎಡಿಇ ಎಫ್‌ಸಿ 1–0ಯಿಂದ ಬಿಟಿಎಂ ಎಫ್‌ಸಿ ತಂಡವನ್ನು ಮಣಿಸಿತು. ಎಡಿಇ ಪರ ಸ್ಟಾಲಿನ್ ಗೋಲು ತಂದಿತ್ತರು.

### ಫೀಫಾ ವಿಶ್ವಕಪ್ ಕ್ವಾಲಿಫೈರ್ಸ್: ಸುನಿಲ್ ಚೆಟ್ರಿ ಮೇಲೆ ನಿರೀಕ್ಷೆ

# ಅಫ್ಗನ್ ವಿರುದ್ಧ ಭಾರತಕ್ಕೆ ಗೆಲುವಿನ ವಿಶ್ವಾಸ

**ಅಭಾ (ಸೌದಿ ಅರೇಬಿಯಾ), (ಪಿಟಿಐ):** ಫೀಫಾ ವಿಶ್ವಕಪ್ ಕ್ವಾಲಿಫೈರ್ಸ್‌ನ ಮೂರನೇ ಸುತ್ತಿಗೆ ಪ್ರವೇಶ ಪಡೆಯುವ ಪ್ರಯತ್ನದಲ್ಲಿರುವ ಭಾರತ ಫುಟ್‌ಬಾಲ್ ತಂಡ ಗುರುವಾರ ರಾತ್ರಿ ಇಲ್ಲಿ ನಡೆಯುವ ಎರಡನೇ ಸುತ್ತಿನ ಅರ್ಹತಾ ಪಂದ್ಯದಲ್ಲಿ ದುರ್ಬಲ ಅಫ್ಘಾನಿಸ್ತಾನ ತಂಡವನ್ನು ಎದುರಿಸಲಿದೆ.

ಮಿಡ್‌ಫೀಲ್ಡ್‌ನಲ್ಲಿ ಆಡುವ ಜೀಕ್ಸನ್ ಸಿಂಗ್ ಮತ್ತು ಸೆಂಟರ್ ಬ್ಯಾಕ್ ಅನ್ವರ್ ಅಲಿ ಅವರು ಮರಳಿರುವುದು ‘ಬ್ಲೂ ಟೈಗರ್ಸ್’ ತಂಡಕ್ಕೆ ಬಲತುಂಬಿದೆ. ಆದರೆ ಮಿಡ್‌ಫೀಲ್ಡರ್ ಸಹಲ್ ಅಬ್ದುಲ್ ಸಮದ್ ಅವರು ಮಂಗಳವಾರ ತರಬೇತಿ ವೇಳೆ ಗಾಯಗೊಂಡಿದ್ದು ಕೊಂಚ ಹಿನ್ನಡೆ.

ಎರಡು ಪಂದ್ಯಗಳಲ್ಲಿ ಒಂದು ಗೆಲುವಿನೊಡನೆ ಭಾರತ ‘ಎ’ ಗುಂಪಿನಲ್ಲಿ ಮೂರು ಪಾಯಿಂಟ್ಸ್ ಹೊಂದಿದ್ದು, ಸದ್ಯ ಎರಡನೇ ಸ್ಥಾನದಲ್ಲಿದೆ. ಹಾಲಿ ಏಷ್ಯನ್ ಚಾಂಪಿಯನ್ ಕತಾರ್ ಎರಡು ಗೆಲುವಿನೊಡನೆ ಆರು ಪಾಯಿಂಟ್ಸ್ ಶೇಖರಿಸಿ ಅಗ್ರಸ್ಥಾನದಲ್ಲಿದೆ. ಕುವೈತ್ ಕೂಡ ಎರಡನೇ ಸ್ಥಾನದಲ್ಲಿದೆ. ಎರಡೂ ಪಂದ್ಯ ಸೋತಿರುವ ಅಫ್ಘಾನಿಸ್ತಾನ ನಾಲ್ಕು ತಂಡಗಳ ಗುಂಪಿನಲ್ಲಿ ಕೊನೆಯ ಸ್ಥಾನದಲ್ಲಿದೆ.

ಕುವೈತ್ ವಿರುದ್ಧದ ಗೆಲುವು, ವಿಶ್ವ ಕ್ರಮಾಂಕದಲ್ಲಿ 117ನೇ ಸ್ಥಾನದಲ್ಲಿರುವ ಭಾರತಕ್ಕೆ ವಿಶ್ವಾಸ ತುಂಬಿದ್ದು, ಇಲ್ಲಿ ಪೂರ್ಣ ಮೂರು ಪಾಯಿಂಟ್ ಪಡೆದು ಅರ್ಹತಾ ಸುತ್ತಿನಿಂದ ಮೇಲೆರುವ ಸಾಧ್ಯತೆ ಬಲಗೊಳಿಸಿದೆ. ಅಫ್ಘಾನಿಸ್ತಾನ 158ನೇ ಕ್ರಮಾಂಕ ಪಡೆದಿದೆ.

ಭಾರತ ಕುವೈತ್ ಸಿಟಿಯಲ್ಲಿ ನಡೆದ ಪಂದ್ಯದಲ್ಲಿ ಕುವೈತ್ ಮೇಲೆ 1–0 ಜಯ ಪಡೆದಿತ್ತು. ಭುವನೇಶ್ವರದಲ್ಲಿ ನಡೆದ ಎರಡನೇ ಪಂದ್ಯದಲ್ಲಿ ಕತಾರ್ ಎದುರು 0–3ರಿಂದ ಸೋತಿತ್ತು.

ಆದರೆ ಕ್ರಮಾಂಕಪಟ್ಟಿಯಲ್ಲಿ ಕೆಳಗಿದ್ದರೂ ಅಫ್ಘಾನಿಸ್ತಾನವು ಕೊನೆಯವರೆಗೂ ಹೋರಾಟ ನೀಡಬಲ್ಲ ತಂಡ. ಅನುಭವಿ ಸುನಿಲ್ ಚೆಟ್ರಿ ಅವರು ಮನ್ವಿರ್ ಸಿಂಗ್ ಅವರೊಡನೆ ದಾಳಿಯ ನೇತೃತ್ವ ವಹಿಸಲಿದ್ದಾರೆ.

ಅಫ್ಘಾನಿಸ್ತಾನ ತಂಡ ಕೆಲವು ಪ್ರಮುಖ ಆಟಗಾರರನ್ನು ಕಳೆದುಕೊಂಡಿದೆ. ಅಲ್ಲಿನ ಫೆಡರೇಷನ್ ಜೊತೆ ಸಂಘರ್ಷದಿಂದ ತಂಡ ದುರ್ಬಲಗೊಂಡಿದೆ. ಕುವೈತ್ ಮತ್ತು ಕತಾರ್ ವಿರುದ್ಧ ಕ್ವಾಲಿಫೈರ್ ಪಂದ್ಯಗಳಿಗೆ 18 ಆಟಗಾರರು ಬಹಿಷ್ಕಾರ ಹಾಕಿದ್ದರು. ಆದರೂ ಝೊಹಿಬ್ ಇಸ್ಲಾಂ ಅಮಿರಿ, ಒಮಿಡ್ ಮುಸಾವಿ, ಬಲಾಲ್ ಅರೆಝೌ ಅವರು ತಂಡದಲ್ಲಿ ಪ್ರಮುಖ ಆಟಗಾರರಾಗಿದ್ದು ತಮ್ಮ ಆಟದಿಂದ ಎದುರಾಳಿಗಳಿಗೆ ಸಮಸ್ಯೆ ತಂದಿಡಬಲ್ಲರು.

**ಪಂದ್ಯದ ಆರಂಭ: ಗುರುವಾರ ರಾತ್ರಿ 12.30 (ಭಾರತೀಯ ಕಾಲಮಾನ)**



ತಾಲೀಮು ನಡೆಸಿದ ಭಾರತ ತಂಡದ ನಾಯಕ ಸುನಿಲ್ ಚೆಟ್ರಿ –ಎಕ್ಸ್ ಚಿತ್ರ